372	ಶ್ರೀ ರಾಮಪ್ಪ ರಾಯಪ್ಪ ಜೀವನಿ ಮಂಟೂರ ಗ್ರಾಮ & ಅಂಚೆ, ರಾಯಭಾಗ ತಾಲೂಕು, ಬೆಳಗಾವಿ ಜಿಲ್ಲೆ	ಜಾನಪದ
373	ಶ್ರೀ ಮಲ್ಲಪ್ಪ ಘೂಳಪ್ಪ ಶಿರಿಗಿರಿ ಅಡಳಹಟ್ಟಿ ಗ್ರಾಮ, ಅಡಹಳ್ಳಿ ಅಂಚೆ, ಅಥಣಿ ತಾಲೂಕು, ಬೆಳಗಾವಿ ಜಿಲ್ಲೆ	ಜಾನಪದ
374	ಶ್ರೀ ಆನಂದ ಸಿದಗಿರಿ ಮಗದುಮ್ಮ ಪಾಮಲದಿನ್ನಿ ಗ್ರಾಮ & ಅಂಚೆ, ಗೋಕಾಕ ತಾಲೂಕು, ಬೆಳಗಾವಿ ಜಿಲ್ಲೆ	ಜಾನಪದ
375	ಶ್ರೀ ತುಕಾರಾಮ ರಾಮಪ್ಪ ಜೀವಣಿ ಮಂಟೂರ ಗ್ರಾಮ & ಅಂಚೆ, ರಾಯಭಾಗ ತಾಲೂಕು, ಬೆಳಗಾವಿ ಜಿಲ್ಲೆ	ಜಾನಪದ
376	ಶ್ರೀ ಬಸಪ್ಪ ದುರಗಪ್ಪ ಭಜಂತ್ರಿ ಕೆ. ಜುನಿಪೇಟೆ ಗ್ರಾಮ, ಕಿಲ್ಲಾ ತೊರಗಲ್ ಅಂಚೆ, ರಾಮದುರ್ಗ ತಾಲೂಕು, ಬೆಳಗಾವಿ ಜಿಲ್ಲೆ	ಜಾನಪದ
377	ಶ್ರೀ ಶಿವಮುತ್ರ ಈರಪ್ಪಾ ಕಾಲತಿಪ್ಪಿ ಮಂಟೂರ ಗ್ರಾಮ & ಅಂಚೆ, ರಾಯಭಾಗ ತಾಲೂಕು, ಬೆಳಗಾವಿ ಜಿಲ್ಲೆ	ಜಾನಪದ
	ಬೀದರ್ ಜಿಲ್ಲೆ	
378	ಶ್ರೀಮತಿ ಸಂಗಮ್ಮ ಕೋಂ ಲಮ್ಮಣಾ ತೇಲಿ, ಬೋಜನಾ ಗ್ರಾಮ & ಅಂಚೆ ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
379	ಶ್ರೀ ಅಮ್ರುತ ಬಿನ್ ಗಂಗಾರಾಮ ಚೆಟನ್ನಾಳ ಗ್ರಾಮ, ಸಂತಪುರ ಅಂಚೆ ಔರಾದಾ ತಾಲೂಕು, ಬೀದರ್ ಜಿಲ್ಲೆ	ಜಾನಪದ
380	ಶ್ರೀ ಗಣಪತಿ ಬಿನ್ ಸಾಯಿಬಣ್ಣಾ ತುಳಜಾಪುರ ಗ್ರಾಮ & ಅಂಚೆ, ಎಕಲಾರ ಹೋಬಳಿ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
381	ಶ್ರೀ ಗುಂಡಪ್ಪಾ ಬಿನ್ ತಮ್ಮಣ್ಣಶೆಟ್ಟಿ, ಜೋನ್ನೆಕ್ಕೇರಿ ಗ್ರಾಮ & ಅಂಚೆ, ಕೋಳ್ಳೂರು ಹೋಬಳಿ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
382	ಶ್ರೀಮತಿ ಸಿದ್ದಮ್ಮಾ ಕೋಂ ವಿಠಲರಾಯ ಕೌಟಗೆ, ಬೋಜನಾ ಗ್ರಾಮ & ಅಂಚೆ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
383	ಶ್ರೀ ಜಗನ್ನಾಥ್ ಬಿನ್ ಹುಸೇನಪ್ಪಾ, ಜೊನೇಕೇರಿ ಗ್ರಾಮ, ಕೋಳ್ಳೂರ ಅಂಚೆ, ಚಿಂತಾರೆ ಹೋಬಳಿ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
384	ಶ್ರೀ ಗಣಪತರಾವ ಬಿನ್ ವೀರಶೆಟ್ಟಿ ಮೊಕ್ಕೆ, ತೆಗಂಪುರ ಗ್ರಾಮ, ಮಮದಾಪುರ ಅಂಚೆ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
385	ಶ್ರೀಮತಿ ರತ್ನಮ್ಮ ಕೋಂ ತುಕಾರಾಮ, ಜನತಾ ಕಾಲೋನಿ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
386	ಶ್ರೀಮತಿ ಮಾಣಿಕಮ್ಮ ಕೋಂ ಶಂಕರ, ಬೇಮಳಖೇಡ ಗ್ರಾಮ & ಅಂಚೆ, ಹುಮನಾಬಾದ್ ತಾಲೂಕು, ಬೀದರ್ ಜಿಲ್ಲೆ	ಜಾನಪದ
387	ಶ್ರೀಮತಿ ಲಕ್ಷ್ಮಿಬಾಯಿ ಕೋಂ. ರಾಚಪ್ಪಾ ಜೋಜನಾ ಗ್ರಾಮ & ಅಂಚೆ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
388	ಶ್ರೀ ಗಳಂಗಳೆಪ್ಪಾ ಬಿನ್ ಗುರಪ್ಪಾ ತಳವಾಡ ಗ್ರಾಮ & ಅಂಚೆ, ಭಾಲ್ಕಿ ತಾಲೂಕು, ಬೀದರ್ ಜಿಲ್ಲೆ	ಜಾನಪದ
389	ಶ್ರೀ ಶಿವಾಜಿ ಬಿನ್ ಯಾದವರಾವ ಕಾಳೆ, ಹೊಳಸಮುದ್ರ ಗ್ರಾಮ & ಅಂಚೆ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
390	ಶ್ರೀ ಅಮೃತ್ ಬಿನ್ ಅಪ್ಪಾರಾವ್ ಚಟ್ನಾಳ ಗ್ರಾಮ, ಸಂತಪೂರ ಅಂಚೆ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
391	ಶ್ರೀಮತಿ ಲಕ್ಷ್ಮಿಬಾಯಿ ಕೋಂ ಅಡೆಪ್ಪಾ ಸಿದ್ದಸುರೆ, ಜೋಜನಾ ಗ್ರಾಂ & ಅಂಚೆ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
392	ಶ್ರೀ ಜಯವಂತ ಬಿನ್ ಪೀರಪ್ಪಾ ಚೌಂಬೋಳ ಗ್ರಾಮ & ಅಂಚೆ, ಬೀದರ್ ತಾಲೂಕು & ಜಿಲ್ಲೆ	ಜಾನಪದ
393	ಶ್ರೀ ಡೆವಿಡ್ ಬಿನ್ ಬಾಲಪ್ಪಾ, ಚೌಂಬೋಳ ಗ್ರಾಮ & ಅಂಚೆ, ಬೀದರ್ ತಾಲೂಕು & ಜಿಲ್ಲೆ	ಜಾನಪದ
394	ಶ್ರೀ ಶರಣಪ್ಪಾ ಬಿನ್ ತಿಪ್ಪಣ್ಣ, ಚೌಂಬೋಳ ಗ್ರಾಮ & ಅಂಚೆ, ಬೀದರ್ ತಾಲೂಕು & ಜಿಲ್ಲೆ	ಜಾನಪದ
395	ಶ್ರೀ ರಾಮಶೆಟ್ಟಿ ಹಣಶೆಟ್ಟಿ ಬಿನ್ ಗುರಪ್ಪಾ ಜೋಜನಾ ಗ್ರಾಮ & ಅಂಚೆ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ

396	ಶ್ರೀ ಕಾಶಪ್ಪಾ ಅಣ್ಣಾರಾವ, ಔರಾದ ಗ್ರಾಮ, ಅಂಚೆ & ತಾಲೂಕು, ಬೀದರ್ ಜಿಲ್ಲೆ	ಜಾನಪದ
397	ಶ್ರೀ ಕಲ್ಲಪ್ಪಾ ಬಿನ್ ಪೀರಪ್ಪ, ಚೌಂಬೋಳ ಗ್ರಾಮ & ಅಂಚೆ, ಬೀದರ್ ತಾಲೂಕು & ಜಿಲ್ಲೆ	ಜಾನಪದ
398	ಶ್ರೀ ಶರಣಯ್ಯ ಬಿನ್ ಸಿದ್ರಾಮಯ್ಯ ಎಕಲಾರ ಗ್ರಾಮ & ಅಂಚೆ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ
399	ಶ್ರೀಮತಿ ಪಾರಮ್ಮ ಕೋಂ ಘಾಳೇಪ್ಪ ಬೇಮಳಖೇಡ ಗ್ರಾಮ & ಅಂಚೆ, ಹುಮನಾಬಾದ್ ತಾಲೂಕು & ಬೀದರ್	ಜಾನಪದ
400	ಶ್ರೀಮತಿ ಲಕ್ಷ್ಮೀಬಾಯಿ ಕೋಂ ಜಗನ್ನಾಥ ಜೋಜನಾ ಗ್ರಾಮ & ಅಂಚೆ, ಔರಾದ ತಾಲೂಕು, ಬೀದರ್ ಜಿಲ್ಲೆ	ಜಾನಪದ

(ಹೆಚ್. ವಿ. ರಾಮಚಂದ್ರರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ಪಿ.ಆರ್. ನಂ. 1822

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ: ಮುನೇನಕೊಪ್ಪ, ಎಂ.ಬಿ. ಜಿಲ್ಲಾ ಕ್ಷಯರೋಗ ನಿಯಂತ್ರಣ ಅಧಿಕಾರಿ, ಹುಬ್ಬಳ್ಳಿ, ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು, ಇವರ ಪತ್ರ ಸಂಖ್ಯೆ: ಜೆಆರ್‌ಒ(3)/176/2009–10 ದಿನಾಂಕ 14–05–2010.

ಪ್ರಸ್ತಾವನೆ :

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಇವರು ಮೇಲೆ ಓದಲಾದ ಪತ್ರದಲ್ಲಿ ಡಾ: ಮುನೇನಕೊಪ್ಪ, ಎಂ.ಬಿ. ಜಿಲ್ಲಾ ಕ್ಷಯರೋಗ ನಿಯಂತ್ರಣ ಅಧಿಕಾರಿ, ಹುಬ್ಬಳ್ಳಿ, ಇವರು ದಿನಾಂಕ 15–10–2009 ರಿಂದ ಒಪ್ಪಿಕೊಳ್ಳುವಂತೆ ಕೋರಿ ರಾಜೀನಾಮೆಯನ್ನು ಸಲ್ಲಿಸಿದ್ದು, ಇವರ ವಿರುದ್ಧ ಇಲಾಖಾ ವಿಚಾರಣೆ ಇರುವುದಿಲ್ಲ ಹಾಗೂ ಬಾಂಡ್ ಅವಧಿಯಲ್ಲಿ ಇರುವುದಿಲ್ಲವೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಧಾರವಾಡ ಇವರು ತಿಳಿಸಿರುವುದರಿಂದ ದಿನಾಂಕ 15–10–2009 ರಿಂದ ಜಾರಿಗೆ ಬರುವಂತೆ ವೈದ್ಯರ ರಾಜೀನಾಮೆಯನ್ನು ಅಂಗೀಕರಿಸಲು ಕೋರಿರುತ್ತಾರೆ.

ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಆಕುಕ 277 ಹೆಚ್‌ಎಸ್‌ಹೆಚ್ 2010, ಬೆಂಗಳೂರು, ದಿನಾಂಕ : 22–07–2010

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 252(ಎ) ರನ್ವಯ ಡಾ: ಮುನೇನಕೊಪ್ಪ, ಎಂ.ಬಿ. ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ಜಿಲ್ಲಾ ಕ್ಷಯರೋಗ ನಿಯಂತ್ರಣ ಅಧಿಕಾರಿ, ಹುಬ್ಬಳ್ಳಿ, ಇವರು ನೀಡಿರುವ ರಾಜೀನಾಮೆಯನ್ನು ದಿನಾಂಕ 15–10–2009 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಅಂಗೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಐ. ಹೇಮನಾಥ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು–1)

ಪಿ. ಆರ್. 1913

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಮೈಸೂರು ಸಕ್ಕರೆ ಕಾರ್ಖಾನೆ (ನಿ)., ಮಂಡ್ಯ – ಸಹ ವಿದ್ಯುತ್ ಘಟಕ ಸ್ಥಾಪನೆಗಾಗಿ ಹುಡ್ಕೋ ಸಂಸ್ಥೆಯಿಂದ ಪಡೆದಿದ್ದ ಸಾಲದ ಮರುಪಾವತಿಗಾಗಿ (ದಿನಾಂಕ 30–06–2010ರ ಅಂತ್ಯಕ್ಕೆ) ಸರ್ಕಾರದಿಂದ ಅಸಲು ಮತ್ತು ಬಡ್ಡಿ ಪಾವತಿ ಮಾಡಲು ಹಣ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಸಿಐ 184 ಎಸ್‌ಜಿಎಫ್ 2007 ದಿನಾಂಕ 26–03–2010.
2) ರೀಜನಲ್ ಚೀಫ್, ಹುಡ್ಕೋರವರ ಪತ್ರ ಸಂಖ್ಯೆ: HUDCO/BRO/KAR/MSCL/16757 & 16989/2010/390 ದಿನಾಂಕ 14–06–2010.
3) Manager Finance and Accounts, ಮೈಸೂರು ಸಕ್ಕರೆ ಕಾರ್ಖಾನೆ ರವರ ಪತ್ರ ಸಂಖ್ಯೆ: AC:MF:327:10-11 ದಿನಾಂಕ 25–06–2010.

ಪ್ರಸ್ತಾವನೆ :

ಮೈಸೂರು ಸಕ್ಕರೆ ಕಾರ್ಖಾನೆ (ನಿ) ಮಂಡ್ಯ ಈ ಕಾರ್ಖಾನೆಯಲ್ಲಿ ಸಹ ವಿದ್ಯುತ್ ಘಟಕ ಸ್ಥಾಪನೆಗಾಗಿ ಹುಡ್ಕೋ ಹಣಕಾಸು ಸಂಸ್ಥೆಯಿಂದ 5726.16 ಲಕ್ಷ ರೂ.ಗಳ ಸಾಲ ಪಡೆಯಲು ದಿನಾಂಕ 30–07–2001 ರಂದು ಕಾರ್ಖಾನೆಯು ಹುಡ್ಕೋನೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ರಾಜ್ಯ ಸರ್ಕಾರವು ಸದರಿ ಸಾಲಕ್ಕೆ ಗ್ಯಾರಂಟಿ ನೀಡಿದ್ದು, ಮೇಲೆ ಓದಲಾದ (1) ರಲ್ಲಿರುವ ಆದೇಶದಲ್ಲಿ ಹುಡ್ಕೋ ಸಂಸ್ಥೆಯು ಮಾಡಿದ OTS offer ನಂತೆ ಸಾಲದ ಮೇಲಿನ ಕ್ರೋಢೀಕೃತ ಬಡ್ಡಿ ಪಾವತಿಗಾಗಿ 3703.64 ಲಕ್ಷ ರೂ.ಗಳನ್ನು ಹುಡ್ಕೋ ಸಂಸ್ಥೆಗೆ ಪಾವತಿಸುವ ಸಲುವಾಗಿ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (2) ರಲ್ಲಿರುವ ರೀಜನಲ್ ಚೀಫ್, ಹುಡ್ಕೋ ರವರ ಪತ್ರದಲ್ಲಿ OTS offer ನಂತೆ ಮಾರ್ಚ್ 2010ರ ಅಂತ್ಯಕ್ಕೆ ಅಸಲು ಮತ್ತು ಬಡ್ಡಿ ಸೇರಿ 529.46 ಲಕ್ಷ ರೂ.ಗಳು ಮತ್ತು ಜೂನ್ 2010ರ ಅಂತ್ಯಕ್ಕೆ ಅಸಲು ಮತ್ತು ಬಡ್ಡಿ ಸೇರಿ 372.76 ಲಕ್ಷ ರೂ.ಗಳು ಸೇರಿ ಒಟ್ಟು 902.22

ಲಕ್ಷ ರೂ.ಗಳನ್ನು ಕಾರ್ಖಾನೆಯು ಹುಡ್ಕೋ ಸಂಸ್ಥೆಗೆ ಪಾವತಿಸಬೇಕಾಗಿದೆ ಎಂದು ಸದರಿ ಹಣದ ಪಾವತಿ ಮಾಡುವಂತೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಬೇಡಿಕೆ ಸಲ್ಲಿಸಿದ್ದಾರೆ.

ಮೇಲೆ ಓದಲಾದ (3) ರಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯ ಮ್ಯಾನೇಜರ್ ಫೈನಾನ್ಸ್ ಅಂಡ್ ಅಕೌಂಟ್ಸ್ ರವರ ಪತ್ರದಲ್ಲಿ OTS offer ನಂತೆ ದಿನಾಂಕ 30-06-2010ರ ಅಂತ್ಯಕ್ಕೆ ಅಸಲು ಮತ್ತು ಬಡ್ಡಿ ಸೇರಿ 902.22 ಲಕ್ಷ ರೂ.ಗಳನ್ನು ಹುಡ್ಕೋಗೆ ಪಾವತಿಸಬೇಕಾಗಿದ್ದು, ಹುಡ್ಕೋ ಸಂಸ್ಥೆಗೆ ಪಾವತಿಸಲು ಕಾರ್ಖಾನೆಯ ಬಳಿ ಹಣ ಇಲ್ಲದಿರುವುದರಿಂದ ಸರ್ಕಾರದಿಂದ ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದಾರೆ.

ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಹುಡ್ಕೋ ಸಂಸ್ಥೆಯ ಜೊತೆಗೆ ಮಾಡಿಕೊಳ್ಳಲಾಗಿರುವ OTS offer ನಂತೆ ದಿನಾಂಕ 30-06-2010ರ ಅಂತ್ಯಕ್ಕೆ ಸಂಸ್ಥೆಗೆ ಪಾವತಿಸಬೇಕಾದ ಅಸಲು ಮತ್ತು ಬಡ್ಡಿ ಸೇರಿ 902.22 ಲಕ್ಷ ರೂ.ಗಳನ್ನು ಸರ್ಕಾರದಿಂದ ಪಾವತಿಸಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಸಿಐ 184 ಎಸ್‌ಜಿಎಫ್ 2007 ಬೆಂಗಳೂರು, ದಿನಾಂಕ : 23-07-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಮೈಸೂರು ಸಕ್ಕರೆ ಕಾರ್ಖಾನೆ (ನಿ), ಮಂಡ್ಯ ಈ ಕಾರ್ಖಾನೆಯ ಸಹವಿದ್ಯುತ್ ಘಟಕ ಸ್ಥಾಪನೆಗಾಗಿ ಮತ್ತು ಶುಗರ್ಸ್ ಗೋಡೌನ್ ಕಟ್ಟಲು ಹುಡ್ಕೋ ಹಣಕಾಸು ಸಂಸ್ಥೆಯಿಂದ ಪಡೆಯಲಾಗಿದ್ದ 5726.16 ಲಕ್ಷ ರೂ.ಗಳ ಸಾಲದ ಮರುಪಾವತಿ ಸಂಬಂಧ ಹುಡ್ಕೋ ಸಂಸ್ಥೆಯು ಮಾಡಿರುವ OTS offer ನಂತೆ ಮಾರ್ಚ್ 2010ರ ಅಂತ್ಯಕ್ಕೆ ಪಾವತಿಸಬೇಕಾದ ಅಸಲು ಮತ್ತು ಬಡ್ಡಿ 529.46 ಲಕ್ಷ ರೂ. ಮತ್ತು ಜೂನ್ 2010ರ ಅಂತ್ಯಕ್ಕೆ ಪಾವತಿಸಬೇಕಾದ ಅಸಲು ಮತ್ತು ಬಡ್ಡಿ 372.76 ಲಕ್ಷ ರೂ. ಸೇರಿ ಒಟ್ಟು 902.22 ಲಕ್ಷ ರೂ.ಗಳನ್ನು (ಒಂಬೈನೂರ ಎರಡು ಲಕ್ಷ ಮತ್ತು ಇಪ್ಪತ್ತೆರಡು ಸಾವಿರ ರೂ.ಗಳು ಮಾತ್ರ) ಹುಡ್ಕೋ ಸಂಸ್ಥೆಗೆ ಪಾವತಿಸುವ ಸಲುವಾಗಿ ಬಿಡುಗಡೆ ಮಾಡಲಾಗಿದೆ.

OTS offer ನಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳಂತೆ ಬಾಕಿ ಇರುವ ಹಣವನ್ನು ಕಾಲಕಾಲಕ್ಕೆ ಕಾರ್ಖಾನೆಯು ಬಡ್ಡಿಯೊಂದಿಗೆ ಹುಡ್ಕೋ ಸಂಸ್ಥೆಗೆ ಮರುಪಾವತಿಸಲು ಕ್ರಮ ತೆಗೆದುಕೊಳ್ಳುವುದು.

2010-11ನೇ ಸಾಲಿನ ಅನುದಾನದಲ್ಲಿ ಈ ಉದ್ದೇಶಕ್ಕಾಗಿ ಯಾವುದೇ ಹಣವನ್ನು ಒದಗಿಸಿರುವುದಿಲ್ಲ. 2010-11ನೇ ಸಾಲಿನ ಆಯವ್ಯಯದಲ್ಲಿ ಕಾರ್ಖಾನೆಯ ಯಂತ್ರಸ್ಥಾವರಗಳ ನವೀಕರಣ ಸಂಬಂಧ ಲೆಕ್ಕ ಶೀರ್ಷಿಕೆ "4860-04-190-1-00-211" ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ Equity ಎಂದು ಈ ಹಣವನ್ನು ಬಿಡುಗಡೆ ಮಾಡಲಾಗಿದೆ.

ಹಣ ಸೆಳೆಯುವ ಅಧಿಕಾರಿಯು ಸಹಾಯಕ ನಿರ್ದೇಶಕರು (ಹೆಚ್.ಆರ್.ಡಿ) (ಆಡಳಿತ ಮತ್ತು ಇಎಂ) ಜಿಲ್ಲಾ ಕೈಗಾರಿಕಾ ಕೇಂದ್ರ ಮಂಡ್ಯ ಆಗಿದ್ದು ಸದರಿಯವರು ಹಣ ಸೆಳೆಯುವ ಬಿಲ್ಲನ್ನು ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಇವರ ಮೇಲು ಸಹಿಯೊಂದಿಗೆ ಖಜಾನೆಗೆ ಸಲ್ಲಿಸಬೇಕು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 1203 ವೆಚ್ಚ-1/2010 ದಿನಾಂಕ 13-07-2010 ರಲ್ಲಿ ನೀಡಲಾದ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಪಿ. ಆನಂದಕುಮಾರ್
ಪೀಠಾಧಿಕಾರಿ (ಸಕ್ಕರೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ. ಆರ್. 1914

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀ ಹೆಚ್.ಎಸ್. ರಾಮಕೃಷ್ಣ, ಕೆಎಎಸ್ (ಕಿರಿಯ ಶ್ರೇಣಿ), ಹಿಂದಿನ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಶಿವಮೊಗ್ಗ ಇವರ ವಿರುದ್ಧ ಇಲಾಖಾ ವಿಚಾರಣೆ – ಅಂತಿಮ ಆದೇಶದ ಬಗ್ಗೆ ಮೇಲ್ಮನವಿ-ಆದೇಶ.

ಓದಲಾಗಿದೆ :
1) ದಿನಾಂಕ 23-07-2009ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 020 ಕೆಇವಿ 07.
2) ಶ್ರೀ ಹೆಚ್.ಎಸ್. ರಾಮಕೃಷ್ಣ, ಕೆಎಎಸ್ (ಕಿರಿಯ ಶ್ರೇಣಿ), ಇವರ ದಿನಾಂಕ: 14-10-2009 ರ ಮೇಲ್ಮನವಿ.
3) ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಿದ ಮೇಲ್ಮನವಿಯ ಕುರಿತಂತೆ ಕಂಡಿಕೆವಾರು ಷರಾವನ್ನೊಳಗೊಂಡ ನಿವೇದನಾ ಟಿಪ್ಪಣಿ.
4) ಘನತೆವೆತ್ತ ರಾಜ್ಯಪಾಲರ ಆದೇಶ ದಿನಾಂಕ 22-06-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶ್ರೀ ಹೆಚ್.ಎಸ್. ರಾಮಕೃಷ್ಣ, ಕೆಎಎಸ್ (ಕಿರಿಯ ಶ್ರೇಣಿ), ಇವರು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಶಿವಮೊಗ್ಗ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಆರು ಅನುದಾನಿತ ವಸತಿ ನಿಲಯಗಳಿಗೆ ಸಂಬಂಧಿಸಿದಂತೆ ಆಹಾರ ವೆಚ್ಚದ ಬಿಲ್ಲುಗಳನ್ನು ಹೆಚ್ಚಿಗೆ ಡ್ರಾ ಮಾಡಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟುಮಾಡಿರುವ ಆರೋಪವು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರಂತೆ ನಡೆದ ಇಲಾಖಾ ವಿಚಾರಣೆಯಿಂದ ಸಾಬೀತಾಗಿದ್ದು, ಇವರಿಗೆ ಸದರಿ ನಿಯಮಾವಳಿಯ ನಿಯಮ 8 (iii) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಇವರಿಗೆ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಬೀರದಂತೆ (without cumulative effect) ತಡೆಹಿಡಿಯುವ ದಂಡನೆ ವಿಧಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ದಿನಾಂಕ 23-07-2009ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 020 ಕೆಇವಿ 07 ಅನ್ನು ವಜಾಗೊಳಿಸುವಂತೆ ಮತ್ತು ತತ್ಸಂಬಂಧದ ಸೌಲಭ್ಯಗಳನ್ನು ಮಂಜೂರು ಮಾಡುವಂತೆ ಕೋರಿ ಶ್ರೀ ಹೆಚ್.ಎಸ್. ರಾಮಕೃಷ್ಣ, ಕೆಎಎಸ್ (ಕಿರಿಯ ಶ್ರೇಣಿ) ರವರು ಘನತೆವೆತ್ತ ರಾಜ್ಯಪಾಲರು, ಕರ್ನಾಟಕ ಸರ್ಕಾರ ಇವರಿಗೆ ಸದರಿ ನಿಯಮಾವಳಿಗಳಡಿ ಮೇಲ್ಮನವಿ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಅಧಿಕಾರಿಯು ಸಲ್ಲಿಸಿರುವ ಮೇಲ್ಮನವಿಗೆ ಕಂಡಿಕೆವಾರು ಷರಾ ಒಳಗೊಂಡಂತೆ ನಿವೇದನಾ ಟಿಪ್ಪಣಿಯನ್ನು ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಲಾಗಿತ್ತು.

ಅಧಿಕಾರಿಯ ಮೇಲ್ಮನವಿ ಮತ್ತು ಸರ್ಕಾರದ ನಿವೇದನಾ ಟಿಪ್ಪಣಿಯನ್ನು ಘನತೆವೆತ್ತ ರಾಜ್ಯಪಾಲರು ಕರ್ನಾಟಕ ಸರ್ಕಾರ ಇವರು ಪ್ರಕರಣಕ್ಕೆ ಸಂಬಂಧಿಸಿದ ಕಡತದೊಂದಿಗೆ ಕೂಲಂಕಷವಾಗಿ ಅವಲೋಕಿಸಿದ ನಂತರ ಕೆಳಕಂಡಂತೆ ಆದೇಶಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 020 ಕೆಇವಿ 2007, ಬೆಂಗಳೂರು, ದಿನಾಂಕ : 21ನೇ ಜುಲೈ, 2010

ORDER

(This the 22nd day of June 2010)

This is an appeal filed by Sri H.S. Ramakrishna, KAS (Junior Scale), Special Land Acquisition Officer, Karnataka Industrial Area Development Board, Bangalore, under rule 18 of KCS (CC&A) Rules 1957 against the orders of the Government imposing a penalty of withholding one increment without cumulative effect in the disciplinary proceedings initiated against him for the charges of causing pecuniary losses to Government by not properly scrutinizing proposals for sanction of grant-in-aid to the hostels in the year 2000 while working as District Social Welfare Officer, Shimoga district.

The enquiry report along with the records of the Government imposing the penalty have been received. I have carefully perused the grounds of appeal. The enquiry has been conducted properly. The appellant has been given opportunity to cross examine the withnesses as well as to file his statement. The appellant has not made out as to how the enquiry was defective. Similarly, the enquiry officer in his report has clearly discussed the evidence and given his findings based on the facts. Therefore, there is no legal infirmity in the procedure followed by the enquiry officer. I have also perused the respondents file on behalf of the Government of Karnataka. Both on facts and law, there is no merit in this appeal. I decline to interfere in the impugned order. Appeal dismissed.

Sd/-
(HANSRAJ BHARDWAJ)
Governor of Karnataka

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ. ವಾಸುದೇವಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)

ಪಿ. ಆರ್. 1915

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಬೆಂಗಳೂರು ನಗರ ಜಿಲ್ಲೆಯ ಕೆಂಗೇರಿಯಲ್ಲಿ ಮಹಾತ್ಮ ಗಾಂಧೀಜಿಯವರ ಸ್ಮಾರಕ ನಿರ್ಮಿಸುವ ಕುರಿತು.

ಓದಲಾಗಿದೆ : ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಇವರ ಪತ್ರ ಸಂಖ್ಯೆ ಕೆಮವಿ/ಗಾಸ್ಮಾಭ/ಸಭೆ:1:2010–11 ದಿನಾಂಕ 17–05–2010.

ಪ್ರಸ್ತಾವನೆ :

2010–11ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಮಹಾತ್ಮ ಗಾಂಧೀಜಿಯವರ ಹೆಸರಿನಲ್ಲಿ ಬೆಂಗಳೂರುನಗರ ಜಿಲ್ಲೆ ಕೆಂಗೇರಿಯಲ್ಲಿ ಮಹಾತ್ಮ ಗಾಂಧೀಜಿಯವರು ಭೇಟಿ ನೀಡಿದ ಸ್ಥಳದಲ್ಲಿ ಸ್ಮಾರಕ ಭವನ ನಿರ್ಮಿಸಲು ರೂ. 1.00 ಕೋಟಿಗಳನ್ನು ನೀಡುವುದಾಗಿ ಘೋಷಣೆ ಮಾಡಿರುತ್ತಾರೆ.

ಮೇಲೆ ಓದಲಾದ ದಿನಾಂಕ 17–05–2010ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರಜಿಲ್ಲೆ ಇವರು ಮಹಾತ್ಮ ಗಾಂಧೀಜಿಯವರು ಭೇಟಿ ನೀಡಿದ ಸ್ಥಳ ಕೆಂಗೇರಿಯಲ್ಲಿ ಗಾಂಧೀಜಿ ಸ್ಮಾರಕ ಭವನ ನಿರ್ಮಾಣ ಮಾಡುವ ಸಂಬಂಧ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದ್ದು ಸದರಿ ಸ್ಥಳದಲ್ಲಿ ಈಗಾಗಲೇ ಗಾಂಧಿ ಪ್ರತಿಮೆ ಇರುತ್ತದೆ. ಮತ್ತು ಸ್ಮಾರಕ ಭವನದ ಹಳೆ ಕಟ್ಟಡವಿರುತ್ತದೆ, ಸದರಿ ಕಟ್ಟಡ ಶಿಥಿಲವಾಗಿದ್ದು, ಶಿಥಿಲವಾದ ಕಟ್ಟಡವನ್ನು ಕೆಡವಿ ಅದೇ ಸ್ಥಳದಲ್ಲಿ ಸ್ಮಾರಕ ಭವನ ನಿರ್ಮಿಸಬೇಕಾಗಿರುತ್ತದೆ, ಈ ಕಟ್ಟಡದಲ್ಲಿ ಲೋಕ ಶಿಕ್ಷಣ ಇಲಾಖೆ, ಅಲ್ಪಾವಧಿ ತರಬೇತಿ
ಶಾಲೆ ಇರುತ್ತದೆ. ವಯಸ್ಕರ ಶಿಕ್ಷಣ ಇಲಾಖೆಯ ವಿದ್ಯಾಪೀಠದ ಜಮೀನು ಸುಮಾರು 14 ಎಕರೆ ಇದ್ದು ಇದರಲ್ಲಿ ಹಾಲಿ ಇರುವ ಗಾಂಧೀಜಿ ಪ್ರತಿಮೆ ಮತ್ತು ಸ್ಮಾರಕ ಭವನವಿರುವ ಸುಮಾರು 5 ಎಕರೆ ಭೂಮಿಯನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಗಾಂಧಿ ಸ್ಮಾರಕ ನಿರ್ಮಿಸಲು ಹಸ್ತಾಂತರಿಸಬೇಕಿರುತ್ತದೆ. ಈ ಸಂಬಂಧದ ರೂ. 1.00 ಕೋಟಿಗಳ ಅಂದಾಜು ವೆಚ್ಚ ಹಾಗೂ ನೀಲಿ ನಕ್ಷೆಯನ್ನು ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಇವರಿಂದ ತಯಾರಿಸಿ ಸಲ್ಲಿಸಲಾಗುವುದೆಂದು ತಿಳಿಸಿರುತ್ತಾರೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 30 ಸ್ಮಾಪ್ರನಿ 2010, ಬೆಂಗಳೂರು, ದಿನಾಂಕ : 20ನೇ ಜುಲೈ, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ನಗರಜಿಲ್ಲೆ ಕೆಂಗೇರಿಯಲ್ಲಿ ಮಹಾತ್ಮ ಗಾಂಧೀಜಿಯವರ ಸ್ಮಾರಕ ಭವನ ನಿರ್ಮಾಣಕ್ಕೆ ರೂ. 1.00 ಕೋಟಿ ಮೊತ್ತದ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಜಿಲ್ಲಾಧಿಕಾರಿಗಳು ಬೆಂಗಳೂರು ನಗರಜಿಲ್ಲೆ ಇವರಿಗೆ ಬಿಡುಗಡೆ ಮಾಡಿದೆ. ಹಾಗೂ ಈ ಕಾಮಗಾರಿಯನ್ನು ರೂ. 1.00 ಕೋಟಿಗಳ ಮಿತಿಯೊಳಗೆ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಷರತ್ತುಗಳು:

1) ಕಾಮಗಾರಿಯ ಅಂದಾಜು ಪಟ್ಟಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ಪಡೆದುಕೊಳ್ಳುವುದು.

2) ಕಾಮಗಾರಿಯ ನಿರ್ವಹಣೆಗಾಗಿ ಟೆಂಡರ್ ಕರೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000 ರಂತೆ ಕ್ರಮ ಕೈಗೊಳ್ಳತಕ್ಕದ್ದು.

3) ಕಾಮಗಾರಿಯನ್ನು ಪೂರ್ಣಗೊಳಿಸಲು ಸಮಯ ನಿಗಧಿ ಪಡಿಸಿಕೊಂಡು ಆ ಸಮಯದೊಳಗೆ ಪೂರ್ಣಗೊಳಿಸುವುದು.

4) ಕಾಮಗಾರಿಯನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರಜಿಲ್ಲೆ ಇವರ ಮೇಲುಸ್ತುವಾರಿಯಲ್ಲಿ ಕೈಗೊಳ್ಳುವುದು.

5) ಇದು ಒಂದು ಬಾರಿಯ ಅನುದಾನವಾಗಿರುವುದರಿಂದ ಮುಂದಿನ ನಿರ್ವಹಣಾ ವೆಚ್ಚವನ್ನು ಸೂಕ್ತ ಪ್ರಾಧಿಕಾರವು ಭರಿಸತಕ್ಕದ್ದು.

6) ಕಾಮಗಾರಿಗೆ ಅನುದಾನ ಉಪಯೋಗಿಸಿದ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರ ಸಲ್ಲಿಸುವುದು.

ಈ ಅನುದಾನವನ್ನು 2010-11ನೇ ಸಾಲಿನ ಲೆಕ್ಕ ಶೀರ್ಷಿಕೆ 2205-00-800-0-10-059 (ಯೋಜನೆ) ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ ಅಭಿವೃದ್ಧಿ ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ದಿನಾಂಕ 25-06-2010ರ ಟಿಪ್ಪಣಿ ಸಂಖ್ಯೆ: ಆಇ 425 ವೆಚ್ಚ-7/2010ರಲ್ಲಿ ಆರ್ಥಿಕ ಇಲಾಖೆಯ ಸಹಮತಿಯನ್ನು ಹಾಗೂ ದಿನಾಂಕ 14-06-2010ರ ಟಿಪ್ಪಣಿ ಸಂಖ್ಯೆ: ಯೋಇ/66/ಜಶ 2010ರಲ್ಲಿ ಯೋಜನಾ ಇಲಾಖೆಯ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಪಿ. ಆರ್. 1916

ಜಲಸಂಪನ್ಮೂಲ ಸಚಿವಾಲಯ

ವಿಷಯ : ರಾಜ್ಯ ಮಟ್ಟದ ಅಣೆಕಟ್ಟು ಸುರಕ್ಷತಾ ಸಮಿತಿ (SLDSC)ಯ ಅಧಿಕಾರೇತರ ಸದಸ್ಯರುಗಳ ಪ್ರಯಾಣಕ್ಕೆ ವಿಮಾನ ಯಾನದ ಸೌಲಭ್ಯ ಒದಗಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಜಸಂಇ 03 ಅಭಯೋ 2008 ಬೆಂಗಳೂರು, ದಿನಾಂಕ 07-01-2009.
2) ಸರ್ಕಾರಿ ಆದೇಶ ಸಂಖ್ಯೆ: ಜಸಂಇ 03 ಅಭಯೋ 2008 ಬೆಂಗಳೂರು, ದಿನಾಂಕ 01-09-2009.
3) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 02 ಎಸ್‌ಆರ್‌ಎ 99 ದಿನಾಂಕ 22-04-1999.
4) ಸರ್ಕಾರಿ ಆದೇಶ ಸಂಖ್ಯೆ: ಜಸಂಇ 03 ಇಂಸಂಕೇ 2001 ಬೆಂಗಳೂರು, ದಿನಾಂಕ 04-11-2003.
5) ನಿರ್ದೇಶಕರು, ಕ.ಇಂ.ಸಂ.ಕೇ., ಕೆ.ಆರ್. ಸಾಗರ ಇವರ ಪತ್ರ ಸಂಖ್ಯೆ: ಕೆಇಆರ್‌ಎಸ್/ಇಎಸ್‌ಟಿ-3/ಅಸಪ್ರಭ/589/10-11 ದಿನಾಂಕ 15-05-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2)ರ ಸರ್ಕಾರಿ ಆದೇಶದಲ್ಲಿ ರಾಜ್ಯ ಮಟ್ಟದ ಆಣೆಕಟ್ಟು ಸುರಕ್ಷತಾ ಸಮಿತಿಯನ್ನು (SLDSC) ಪುನರ್ ರಚಿಸಲಾಗಿದ್ದು, ಈ ಸಮಿತಿಯು ಹಾಲಿ ಜಾಲ್ತಿಯಲ್ಲಿರುತ್ತದೆ. ಸದರಿ ಸಮಿತಿಗೆ ಶ್ರೀ ಬಿ.ಎಂ. ರಾಮೇಗೌಡ (ನಿ) ಜಂಟಿ ನಿರ್ದೇಶಕರು CWPRS, ಪುಣೆ ರವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿಕೊಳ್ಳಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಸರ್ಕಾರಿ ಆದೇಶದಂತೆ SLDSC ಯ ಅಧಿಕಾರೇತರ ಸದಸ್ಯರು ಸಭೆಗಳಿಗೆ ಹಾಜರಾಗಲು ರೈಲಿನಲ್ಲಿ ಪ್ರಯಾಣಿಸಲು ಅರ್ಹರಿರುತ್ತಾರೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಸರ್ಕಾರಿ ಆದೇಶದಲ್ಲಿ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿಯ (DSRP) ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಈಗಾಗಲೇ ವಿಮಾನ ಯಾನದ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ ಎಂದು ಕ್ರಮ ಸಂಖ್ಯೆ (5)ರ ಪತ್ರದಲ್ಲಿ ನಿರ್ದೇಶಕರು, ಕ.ಇಂ.ಸಂ.ಕೇ., ಹಾಗೂ ಸದಸ್ಯ ಕಾರ್ಯದರ್ಶಿ, SLDSC ರವರು ತಿಳಿಸಿರುತ್ತಾರೆ. ಅಂತೆಯೇ ಹೊರ ರಾಜ್ಯದಲ್ಲಿ ವಾಸಿಸುತ್ತಿರುವ SLDSC ಯ ಅಧಿಕಾರೇತರ ಸದಸ್ಯರುಗಳು ಬೆಂಗಳೂರಿನಲ್ಲಿ ನಡೆಯುವ SLDSC ಸಭೆಗಳಿಗೆ ಹಾಜರಾಗಲು ಅನುಕೂಲವಾಗುವಂತೆ ವಿಮಾನದ ಮೂಲಕ ಪ್ರಯಾಣ ಮಾಡಲು ಅನುಮತಿಯನ್ನು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

3. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಹೊರ ರಾಜ್ಯದಲ್ಲಿ ವಾಸಿಸುತ್ತಿರುವ SLDSC ಯ ಅಧಿಕಾರೇತರ ಸದಸ್ಯರುಗಳು ಬೆಂಗಳೂರಿನಲ್ಲಿ ನಡೆಯುವ SLDSC ಸಭೆಗಳಿಗೆ ಹಾಜರಾಗುವ ಸಮಯದಲ್ಲಿ ವಿಮಾನ ಪ್ರಯಾಣಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಜಸಂಇ 06 ಅಭಯೋ 2010, ಬೆಂಗಳೂರು, ದಿನಾಂಕ : 12ನೇ ಜುಲೈ, 2010

1. ಹೊರ ರಾಜ್ಯದಲ್ಲಿ ವಾಸಿಸುತ್ತಿರುವ ರಾಜ್ಯ ಮಟ್ಟದ ಅಣೆಕಟ್ಟು ಸುರಕ್ಷತಾ ಸಮಿತಿ (SLDSC) ಯ ಅಧಿಕಾರೇತರ ಸದಸ್ಯರಾದ ಶ್ರೀಯುತ ಬಿ.ಎಂ. ರಾಮೇಗೌಡ, ನಿವೃತ್ತ ಜಂಟಿ ನಿರ್ದೇಶಕರು, ಪುಣೆ ಇವರು ಬೆಂಗಳೂರಿನಲ್ಲಿ ನಡೆಯುವ ಸಮಿತಿ ಸಭೆಗಳಿಗೆ ಹಾಜರಾಗುವ ಸಂದರ್ಭಗಳಲ್ಲಿ ವಿಮಾನದಲ್ಲಿ (Economy Class) ಪ್ರಯಾಣಿಸುವ ಸೌಲಭ್ಯವನ್ನು ಒದಗಿಸಲು ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ. ಈ ಸಂಬಂಧದ ಬಿಲ್ಲುಗಳನ್ನು ನಿರ್ದೇಶಕರು, ಕರ್ನಾಟಕ ಇಂಜನಿಯರಿಂಗ್ ಸಂಶೋಧನಾ ಕೇಂದ್ರ ಕೃ.ರಾ. ಸಾಗರ ರವರು ಪಾವತಿಸಲು ಕ್ರಮ ಕೈಗೊಳ್ಳತಕ್ಕದ್ದು.

2. ಈ ಮೇಲಿನ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಜಸಂಇ 03 ಅಭಯೋ 2008 ಬೆಂಗಳೂರು, ದಿನಾಂಕ 07-01-2009 ಹಾಗೂ ದಿನಾಂಕ 01-09-2009 ರೊಡನೆ ಓದಿಕೊಳ್ಳುವುದು.

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಲೋಇ/445/ಆಕೋ-2/10 ದಿನಾಂಕ 08-07-2010 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್. ಪರಶುರಾಮ್
ಸರ್ಕಾರದ ಉಪ ಕಾರ್ಯದರ್ಶಿ (ಕೆ.ಬಿ.ಜೆ.ಎನ್)
ಜಲಸಂಪನ್ಮೂಲ ಇಲಾಖೆ

ಪಿ. ಆರ್. 1917

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಲೇಖನ ಸಾಮಗ್ರಿಗಳ ಸರಬರಾಜು ಮಾಡಿರುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 4 ಡಿಎಸ್‌ವೈ 2010 ದಿನಾಂಕ 13.05.2010.
2. ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಶಾಖೆಗಳ ಮನವಿ.
3. ದಿನಾಂಕ 06-07-2010ರ ಸರ್ಕಾರದ ಪತ್ರ ಕಸಂವಾಪ್ರ 115 ಸ್ವೀಮರ 2010.
4. ದಿನಾಂಕ 13-07-2010ರ ರವಿ ಏಜೆನ್ಸೀಸ್‌ರವರ ಪತ್ರ ಸಂಖ್ಯೆ: ಆರ್.ಎ. 137/ಕ್ಯೂ1/10.

ಪ್ರಸ್ತಾವನೆ :

ಮೇಲೆ ಓದಲಾದ (2)ರ ಮನವಿಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಹಾಗೂ ಪ್ರವಾಸೋದ್ಯಮ ಇಲಾಖೆಯ ವಿವಿಧ ಶಾಖೆಗಳು ಲೇಖನ ಸಾಮಗ್ರಿಗಳಿಗಾಗಿ ಮನವಿ ಸಲ್ಲಿಸಿದ್ದವು.

ಮೇಲೆ ಓದಲಾದ (3)ರ ಪತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಬೇಕಾಗಿರುವ ಲೇಖನ ಸಾಮಗ್ರಿಗಳನ್ನು ಖರೀದಿಸಲು 03 ಕಂಪನಿಗಳಿಂದ ದರಪಟ್ಟಿ ನೀಡುವಂತೆ ಕೋರಲಾಗಿತ್ತು. ಹಾಗೂ ಅದರಂತೆ 03 ಕಂಪನಿಗಳಿಂದ ಸ್ವೀಕೃತವಾದ ದರಪಟ್ಟಿಯನ್ವಯ ಇಲಾಖೆಗೆ ಅಗತ್ಯವಾಗಿ ಬೇಕಾಗುವ ಸಾಮಗ್ರಿಗಳ ಒಟ್ಟು ದರಪಟ್ಟಿಯು ಈ ಕೆಳಗಿನಂತಿರುತ್ತದೆ. ಹಾಗೂ 3 ಕಂಪನಿಗಳ ಲೇಖನ ಸಾಮಗ್ರಿಗಳ ದರ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಕ್ರ.ಸಂ.	ಕಂಪನಿಯ ಹೆಸರು	ವಿವರ	ಪ್ರಮಾಣ	ಬೆಲೆ ರೂ.ಗಳಲ್ಲಿ	ಒಟ್ಟು ರೂ.ಗಳಲ್ಲಿ
1	ರವಿ ಏಜೆನ್ಸೀಸ್	ಲೇಖನ ಸಾಮಗ್ರಿಗಳು	ಅನುಬಂಧದಲ್ಲಿ ಲಗತ್ತಿಸಲಾಗಿದೆ		24045-00
2	ಶಂಕರ್ ಪಿ. ಮಾರ್ಟ್	ಲೇಖನ ಸಾಮಗ್ರಿಗಳು			25065-00
3	ಜನತಾ ಬಜಾರ್	ಲೇಖನ ಸಾಮಗ್ರಿಗಳು			26493-48

ಈ ಮೇಲ್ಕಂಡ 03 ಕಂಪನಿಗಳಿಂದ ಪಡೆದ ದರಗಳನ್ನು ಅವಲೋಕಿಸಿ ಅತಿ ಕಡಿಮೆ ದರ ನೀಡಿರುವ ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿರುವ ರವಿ ಏಜೆನ್ಸೀಸ್, # 448, ಬೆಂಗಳೂರು-560001 ರವರಿಗೆ ರೂ.24045-00 ಗಳ (ಇಪ್ಪತ್ತನಾಲ್ಕು ಸಾವಿರದ ನಲವತ್ತೈದು ರೂ.ಗಳು ಮಾತ್ರ) ವೆಚ್ಚದಲ್ಲಿ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ಈ ಕೆಳಕಂಡಂತೆ ಆದೇಶಿಸಿದೆ. ದರಪಟ್ಟಿಯು ವ್ಯಾಟ್ ತೆರಿಗೆ ಹಾಗೂ ಸಾಗಾಣೆ ವೆಚ್ಚಗಳನ್ನು ಒಳಗೊಂಡಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 115 ಸ್ವೀಮರ 2010, ಬೆಂಗಳೂರು, ದಿನಾಂಕ : 19ನೇ ಜುಲೈ, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿರುವ ಶಾಖೆಗಳಿಗೆ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು 03 ಕಂಪನಿಗಳಿಂದ ದರಪಟ್ಟಿಗಳನ್ನು ಕರೆದಿದ್ದು ಅನುಬಂಧದಲ್ಲಿರುವ ಲೇಖನ ಸಾಮಗ್ರಿಗಳಿಗೆ ಅತಿ ಕಡಿಮೆ ದರ ರೂ 24045-00 ಗಳ (ಇಪ್ಪತ್ತನಾಲ್ಕು ಸಾವಿರದ ನಲವತ್ತೈದು ರೂ. ಗಳು ಮಾತ್ರ) ಗಳನ್ನು ಸೂಚಿಸಿರುವ ಬೆಂಗಳೂರಿನ ಅವೆನ್ಯೂ ರಸ್ತೆಯ # 448, ರವಿ ಏಜೆನ್ಸೀಸ್ ರವರಿಗೆ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ಆದೇಶ ನೀಡಿದೆ.

ಈ ವೆಚ್ಚವನ್ನು ಸರ್ಕಾರ ಆದೇಶ ಸಂಖ್ಯೆ: ಸಿಆಸುಇ 4 ಡಿಎಸ್‌ವೈ 2010, ದಿನಾಂಕ 13-05-2010ರಲ್ಲಿ ನೀಡಿರುವ ಆದೇಶದನ್ವಯ ಲೆಕ್ಕ ಶೀರ್ಷಿಕೆ 2052-00-090-0-01-051 (ಸಾಮಾನ್ಯ ವೆಚ್ಚಗಳು) (ಯೋಜನೇತರ ಅಡಿಯಲ್ಲಿ ಭರಿಸಲು ರವಿ ಏಜೆನ್ಸೀಸ್ ಕಂಪನಿಗೆ ರೂ. 24045-00 ಗಳ (ಇಪ್ಪತ್ತನಾಲ್ಕು ಸಾವಿರದ ನಲವತ್ತೈದು ರೂ.ಗಳು ಮಾತ್ರ) ಮೊತ್ತವನ್ನು ಸಿಆಸುಇ ಲೆಕ್ಕ ಪತ್ರ ಶಾಖೆಯು ಡಿ.ಸಿ.ಬಿಲ್ ಮೂಲಕ ಬಿಡುಗಡೆ ಮಾಡುವುದು.

ರವಿ ಏಜೆನ್ಸೀಸ್ ಕಂಪನಿಯು ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿರುವ ಶಾಖೆಗಳಿಗೆ ಕೂಡಲೇ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವುದು ಹಾಗೂ ಸಿಆಸು ಇಲಾಖೆಯಿಂದ ನೀಡುವ ಮೊತ್ತಕ್ಕೆ ಸ್ವೀಕೃತಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ANNEXURE

Comparative Statement

S No.	Particulars	Qty	Ravi Agencies	Shankar Agencies	Janatha Bajar
1	ಪ್ರಿಂಟರ್ ಕಾಟ್ರಿಜ್ (Phaser - 3124)	02	10546–20	10605–00	11281–00
2	ಜೆರಾಕ್ಸ್ ಪೇಪರ್ (A-4)	10	1554–00	1617–00	1764–00
3	L Shape Plastic Folders	30	323–00	340–50	480–60
4	ಫ್ಯಾಕ್ಸ್ ರೋಲ್	50	4095–00	4725–00	4880–50
5	ಜೆರಾಕ್ಸ್ ಮಿಷಿನ್ ಟೋನರ್ (Work center 5020)	01	2213–00	2267–30	2470–00
6	ಬಾಕ್ಸ್ ಫೈಲ್ (Lever file)	05	272–40	295–10	329–00
7	ಜೆರಾಕ್ಸ್ ಮಿಷಿನ್ ಟೋನರ್ (Richo FT 4621)	01	3002–00	3064–50	3607–00
8	TVS 355 Printer Ribbon	02	346–50	385–90	236–00
9	ಜೆಲ್ ಪೆನ್	05	147–00	152–25	152–00
10	ಸ್ಕೆಚ್ ಪೆನ್	02	37–75	39–90	39–90
11	Writing Pad	03	493–72	527–77	59–85
12	ಪೆನ್ ಸ್ಟ್ಯಾಂಡ್	02	186–14	110–30	**401–79**
13	ಸೆಲೋಪಿನ್ ಟೇಪ್	02	12–60	13–65	13–44
14	ಸ್ಟ್ಯಾಪ್ಲರ್ ಪಿನ್ (ದೊಡ್ಡದು)	06	306–45	344–50	354–00
15	ಸ್ಟ್ಯಾಪ್ಲರ್ ಪಿನ್ (ಚಿಕ್ಕದು)	08	45–40	49–94	49–00
16	ರೆಡ್ ಇಂಕ್ ಪೆನ್	02	94–50	100–80	12–20
17	Calling bell (wire less)	01	368–87	425–62	363–20
	ಒಟ್ಟು		**24045–00**	**25065–03**	**26493–48**

Ravi Agencies - 24045-00
Shankar Agencies - 25065-03
Janatha Bajar - 26493-48

ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ಪಿ. ಆರ್. 1918

COMMERCE AND INDUSTRIES SECRETARIAT

Sub : Approval to the Project Proposal of M/s. Global Eco Hotels, to establish a "Eco Hotel with Wellness Spa and Tourism Services" in Kannur Village and Harekal Village (Katti Kudru Island), Mangalore Taluk, Dakshina Kannada District.

Read : Proceedings of the 23rd State High Level Clearance Committee (SHLCC) Meeting held on 19-06-2010.

PREAMBLE :

M/s. Global Eco Hotels, proposes to establish a "Eco Hotel with Wellness Spa and Tourism Services' in Kannur Village and Harekal Village (Katti Kudru Island), Mangalore Taluk, Dakshina Kannada District, with an investment of Rs. 90 crores, generating employment to about 300 persons.

In the 23rd State High Level Clearance Committee (SHLCC) Meeting held on 19-06-2010, the proposal of the Company was discussed and approved.

Government has examined the recommendations made by the State High Level clearance Committee in its 23rd Meeting held on 19-06-2010, in all aspects.

Hence the following Order.

GOVERNMENT ORDER NO. CI 367 SPI 2010, BANGALORE DATED: 15TH JULY 2010.

Government is pleased to accord in principle approval to the Project Proposal of M/s. Global Eco Hotels, to establish a "Eco Hotel with Wellness Spa and Tourism Services" in Kannur Village and Harekal Village (Katti Kudru Island). Mangalore Taluk, Dakshina Kannada District, with an investment of Rs. 90 crores, generating employment to about 300 persons and extend the following infrastructure facilities, incentives and concessions.

INFRASTRUCTURE FACILITIES:

1. **Land:** 170 acres at Kannur village and Harekal Village (Katti Kudru Island), Mangalore taluk, Dakshina Kannada District excluding the Government land to be purchased U/s 109 of KLR Act and conversion of the same for industrial use.
2. **Water:** 100 KLPD from own source.
3. **Power:** 1000 KVA to be serviced by MESCOM.
4. **Incentives & Concessions:** As per prevailing Tourism Policy of the State.

GENERAL TERMS AND CONDITIONS:

1. **Environment:** The promoters to obtain CFE and CFO from KSPCB and environmental clearance from MOEF, GOI.
2. **Employment:** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Government of Karnataka. A copy of Human Resources Development plan shall be sent to the Commissioner for I.D. and Director of Industries and Commerce for monitoring.
3. **Vendor Development:** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. and Director of Industries and Commerce for monitoring.
4. **Social Infrastructure Development:** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. and Director of Industries and Commerce for monitoring.
5. **Others:**
   a) The project proponents shall provide employment to at least one member of the family of each land looser as the land is being acquired through KIADB.
   b) The project proponents shall adopt rainwater harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka,

APARNA PAVATE

Desk Officer (Technical Cell)

P.R.1919 Commerce and Industries Department

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಕೆ. ಪ್ರಭಾಕರ, ಸೇವಾನಿರತ ಪಿ.ಎಸ್.ಐ. ರವರ ಖಾಯಂಪೂರ್ವ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ : ಡಿಜಿ ಮತ್ತು ಐಜಿಪಿ ರವರ ಪತ್ರ ಸಂಖ್ಯೆ 10/ಸಿಬ್ಬಂದಿ-1/2008-09 ದಿನಾಂಕ 12-11-2008, 04-06-2009 ಮತ್ತು 22-04-2010.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ ಶ್ರೀ ಕೆ. ಪ್ರಭಾಕರ, ಸೇವಾನಿರತ ಪಿ.ಎಸ್.ಐ. ರವರು ದಿನಾಂಕ 15-12-2003ರಂದು ಪಿ.ಎಸ್.ಐ. ಆಗಿ ನೇಮಕಗೊಂಡು 2 1/2 ವರ್ಷಗಳ ಪ್ರೊಬೇಷನರಿ ಅವಧಿಯನ್ನು ದಿನಾಂಕ 14-06-2006ಕ್ಕೆ ಪೂರೈಸಿರುತ್ತಾರೆ. ಸದರಿ ಹುದ್ದೆಗೆ ನಿಗಧಿಪಡಿಸಿರುವ ಎಲ್ಲಾ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುತ್ತಾರೆ. ಆದರೆ ಇವರ ವಿರುದ್ಧ ಚಾಲ್ತಿ ಶಿಕ್ಷೆಗಳಿದ್ದುದರಿಂದ ಸದರಿಯವರ ಖಾಯಂ ಪೂರ್ವ ಅವಧಿಯನ್ನು ಒಂದು ವರ್ಷ ಮೂರು ತಿಂಗಳವರೆಗೆ ಅಂದರೆ ದಿನಾಂಕ 15-06-2006 ರಿಂದ 14-09-2007ರ ವರೆಗೆ ಐ.ಜಿ.ಪಿ. ದಕ್ಷಿಣ ವಲಯ, ಮೈಸೂರು ರವರು ವಿಸ್ತರಿಸಿರುತ್ತಾರೆ.

ಸದರಿ ಅಧಿಕಾರಿಯವರು ಕರ್ನಾಟಕ ನಾಗರೀಕ ಸೇವಾ (ಪರಿವೀಕ್ಷಣಾ) ನಿಯಮಗಳು, 1977ರ ನಿಯಮ 4 ಮತ್ತು 5(1) ರನ್ವಯ ಹೊಂದಿರುವ ಪಿ.ಎಸ್.ಐ. ಹುದ್ದೆಯಲ್ಲಿ ಕಾರ್ಯಭಾರವನ್ನು ನಿರ್ವಹಿಸಲು ಸಮರ್ಥರಾಗಿರುತ್ತಾರೆ ಎಂದು ತಿಳಿಸಲಾಗಿರುತ್ತದೆ. ಇವರ ವಿರುದ್ಧದ ಶಿಕ್ಷೆಯು

ದಿನಾಂಕ 31-03-2008ಕ್ಕೆ ಕೊನೆಗೊಳ್ಳುವುದರಿಂದ, ಇವರ ಖಾಯಂ ಪೂರ್ವ ಅವಧಿಯನ್ನು ದಿನಾಂಕ 15-09-2007 ರಿಂದ 31-03-2008ರ ವರೆಗೆ ವಿಸ್ತರಿಸುವಂತೆ ಡಿಜಿ ಮತ್ತು ಐಜಿಪಿ ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 23 ಪೊಸಇ 2009, ಬೆಂಗಳೂರು, ದಿನಾಂಕ : 29ನೇ ಜುಲೈ, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಪರಿಶೀಲಿಸಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನರಿ) ನಿಯಮಾವಳಿಗಳು, 1977ರ ನಿಯಮ 4(1) (i) ರನ್ವಯ ಶ್ರೀ ಕೆ. ಪ್ರಭಾಕರ, ಸೇವಾನಿರತ ಪಿ.ಎಸ್.ಐ. ಇವರ ಖಾಯಂ ಪೂರ್ವ ಅವಧಿಯನ್ನು ದಿನಾಂಕ 15-09-2007 ರಿಂದ 31-03-2008ರ ವರೆಗೆ ವಿಸ್ತರಿಸಿ ಸರ್ಕಾರವು ಆದೇಶಿಸಿದೆ.

ವಿಸ್ತರಿಸಿದ ಪರಿವೀಕ್ಷಣಾ ಅವಧಿಗೆ ಕ.ನಾ.ಸೇ. (ಪರಿವೀಕ್ಷಣೆ) ನಿಯಮಗಳು 1977ರ ನಿಯಮ 10ರ ಪ್ರಕಾರ ವಾರ್ಷಿಕ ವೇತನ ಬಡ್ತಿಗಳನ್ನು ನೀಡುವಂತಿಲ್ಲ. ಕಾಲ್ಪನಿಕವಾಗಿ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆ ಮಾಡಿ ವೇತನವನ್ನು ನಿಗಧಿಪಡಿಸುವುದು. ಹೀಗೆ ನಿಗಧಿಪಡಿಸಿದ ವೇತನದ ಬಾಕಿಯನ್ನು ನೀಡಲು ಅವಕಾಶವಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1920

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬಳ್ಳಾರಿ ಜಿಲ್ಲೆ, ಹೆಚ್.ಬಿ. ಹಳ್ಳಿ, ತಾಲ್ಲೂಕು ಬೆಣಕಲ್ ಸಣ್ಣ ನೀರಾವರಿ ಕೆರೆ ನೀರಾವರಿ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 02-02-2010 ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2009-10/896.

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜನಿಯರ್ ರವರ ಪತ್ರದಲ್ಲಿ ಬಳ್ಳಾರಿ ಜಿಲ್ಲೆ, ಹೆಚ್.ಬಿ.ಹಳ್ಳಿ ತಾಲ್ಲೂಕು ಬೆಣಕಲ್ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೆಣಕಲ್ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ :

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 05-12-1996.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 01.07.1998.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1) ರಡಿ ಹೊಸಪೇಟೆ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯು ಪತ್ರ ಸಂಖ್ಯೆ : ಆರ್‌ಡಿ 179 ಎಲ್‌ಸಿಜಿ 2008, ದಿನಾಂಕ 29-07-2008 ರಲ್ಲಿ ಅಭಿಪ್ರಾಯ ನೀಡಿದೆ. ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ :

ಕ್ರ. ಸಂ.	ಎಲ್‌ಎಸಿ ಸಂಖ್ಯೆ	ಬೆಣಕಲ್ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಸೆಂಟ್ಸ್	ಪರಿಹಾರ ಮೊತ್ತ ರೂ.ಗಳಲ್ಲಿ.
1	13/2000	669/2ಪಿ	3.30	11,32,354-00
2	24/2000	669/2ಪಿ	1.70	
3	25/2000	464/4	1.24	
4	26/2000	447/2	2.00	
		475/2	3.57	
		466/1	2.00	
		455/2ಪಿ	0.55	
	ಒಟ್ಟು			**11,32,354-00**

* ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂ : ಸನೀಇ 45 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 28-07-2010

ಬಳ್ಳಾರಿ ಜಿಲ್ಲೆ, ಹೆಚ್.ಬಿ. ಹಳ್ಳಿ, ತಾಲ್ಲೂಕು ಬೆಣಕಲ್ ಸಣ್ಣ ನೀರಾವರಿ ಕೆರೆ ನೀರಾವರಿ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೆಣಕಲ್ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ.11,32,354-00 ಗಳನ್ನು (ಹನ್ನೊಂದು ಲಕ್ಷದ ಮೂವತ್ತೆರಡು ಸಾವಿರದ ಮುನ್ನೂರ ಐವತ್ನಾಲ್ಕು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16-05-2008 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಹೆಚ್.ಎಸ್. ಉದಯಕುಮಾರ್),
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್. 2035

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ಬೋರಗಲ್ಲ ಸಣ್ಣ ನೀರಾವರಿ ಜಿನುಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 04-01-2010 ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2009-10/44.

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ಬೋರಗಲ್ಲ ಸಣ್ಣ ನೀರಾವರಿ ಜಿನಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೋರಗಲ್ಲ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ರೂ. 16,76,467-00ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ :

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 29-05-1997.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 01.04.2000.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1) ರಡಿ ಹುಕ್ಕೇರಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪತ್ರ ಸಂಖ್ಯೆ : ಲಾ 1477 ಎಲ್‌ಬಿಎಸ್ 2007, ದಿನಾಂಕ 27-08-2007 ರಲ್ಲಿ ಅಭಿಪ್ರಾಯ ನೀಡಿದೆ. ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ :

ಕ್ರ. ಸಂ.	ಎಲ್‌ಎಸಿ ಸಂಖ್ಯೆ	ಬೋರಗಲ್ಲ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ ರೂ.ಗಳಲ್ಲಿ.
1	166/03	292/6+7+8ಸಿ	2.-06	16,76,467-00
		292/4	0-06	
		292/9	2-01	
		ಒಟ್ಟು		**16,76,467-00**

* ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂ : ಸನೀಇ 25 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 28-07-2010

ಬೆಳಗಾಂ ಜಿಲ್ಲೆ, ಹುಕ್ಕೇರಿ ತಾಲ್ಲೂಕು ಬೋರಗಲ್ಲ ಸಣ್ಣ ನೀರಾವರಿ ಜಿನುಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೋರಗಲ್ಲ ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ

ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 16,76,467–00 ಗಳನ್ನು (ಹದಿನಾರು ಲಕ್ಷದ ಎಪ್ಪತ್ತಾರು ಸಾವಿರದ ನಾನೂರ ಅರವತ್ತೇಳು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ಸ್ಪಷ್ಟೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16–05–2008 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಹೆಚ್.ಎಸ್. ಉದಯಕುಮಾರ್),
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್. 2036

HOME SECRETARIAT

Sub :- Attestation of original documents – delegation of powers to the Deputy Commissioner & District Magistrate, Dakshina Kannada District and Deputy Commissioner & District Magistrate, Udupi District – reg.

Read :- 1. Government Order No. HD : 325 : PMS : 2010, dated 02-07-2010.

2. Letter No. MAG (2) /CR.168/10-11/26346/C4, dated 24-7-2010, from the Deputy Commissioner & District Magistrate, Dakshina Kannada District.

Preamble:

In Government Order read at (1) above, the State Government has delegated the powers of attestation of original documents only relating to the claims/benefits abroad in respect of the victims of the Air crash on 22-05-2010 in Mangalore, pertaining to Dakshina Kannada District and Udupi District, to the Deputy Commissioner & District Magistrate, Dakshina Kannada District and Deputy Commissioner & District Magistrate, Udupi District respectively for a temporary period of one month with effect from 5th July 2010 to 4th August 2010.

Now, the Deputy Commissioner & District Magistrate, Dakshina Kannada District has in his letter read at (2) above, has stated that out of the 158 victims only in few such cases, documents relating to the claims of the said victims have been received so far and some of the families/relatives of the victims are residing in foreign countries/other States in India. Therefore, he has requested to extend the period of powers delegated to the Deputy Commissioners of Dakshina Kannada District and Udupi District for this purpose, by one more month i.e., from 05-08-2010 to 04-09-2010 so as to facilitate the families/relatives of the victims under reference to get their aforesaid documents attested. Further, he has also stated that due to his official tours and in order to avoid delay in attestion of documents, he has requested to delegate these powers of attestation of the aforesaid documents to the Additional Deputy Commissioner & Additional District Magistrate, Dakshina Kannada District. The proposal of the Deputy Commissioner & District Magistrate, Dakshina Kannada District, has been examined in detail as per the guidelines of Government of India issued in letter No. 18-4/2004-NS-II, dated 14-09-2005, regarding attestation of original documents. According to these instructions, the powers of attestation of original documents cannot be delegated to the Additional Deputy Commissioner and Additional District Magistrate, Dakshina Kannada District. However, the State Government has decided to extend the period of powers delegated in Government Order No. HD 325 PMS 2010, dated 02-07-2010 to the Deputy Commissioner & District Magistrates of Dakshina Kannada District and Udupi District, which expires on 04-08-2010, by one more month, i.e. upto 04-09-2010, in order to clear the pending cases of attestation of original documents relating to victims of the Air crash on 22-05-2010 in Mangalore pertaining to Dakshina Kannada District and Udupi District. Hence, this Order.

Government Order No. HD : 325 : PMS : 2010, Bangalore, dated : 2-08-2010

In the circumstances explained in the preamble and in continuation of the Government Order No. HD 325 PMS 2010, dated 02-07-2010, wherein powers were delegated for a temporary period upto 04-08-2010 for attestation of original documents relating to the claims / benefits abroad in respect of the victims of the Air crash on 22-05-2010 in Mangalore pertaining to Dakshina Kannada District and Udupi District to the Deputy Commissioner & District Magistrate, Dakshina Kannada District and Deputy Commissioner & District Magistrate, Udupi District respectively, the State Government is pleased to extend the period of delegated powers to these officers for a further period from 05-08-2010 to 04-09-2010 only.

By Order and in the name of the Governor of Karnataka,
(ALICE GONSALVES)
Under Secretary to Government,
Home Department (Passport and Foreigners).

PR. 2037

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಕಾರಾಗೃಹ ಇಲಾಖೆ, ಇವರ ಮೇಲಿನ ಟ್ರ್ಯಾಪ್ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ :
1) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ : ವಿಚಾರಣೆ : ಸಿಆರ್-41/2009-10, ದಿನಾಂಕ 20-11-2009.
2) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ : ವಿಚಾರಣೆ : ಸಿಆರ್-41/2009-10, ದಿನಾಂಕ 04-12-2009.
3) ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 25 ಪಿಆರ್‌ಇ 2010, ದಿನಾಂಕ 19-4-2010.
4) ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು ಮತ್ತು ಕರ್ನಾಟಕದ ಕಾರಾಗೃಹಗಳ ಮಹಾನಿರೀಕ್ಷಕರು, ಬೆಂಗಳೂರು ಇವರ ಪತ್ರ ಸಂಖ್ಯೆ : ವಿಚಾರಣೆ : ಸಿಆರ್-41/2009-10, ದಿನಾಂಕ 20-05-2010.

* * *

ಪ್ರಸ್ತಾವನೆ :

ಕರ್ನಾಟಕ ಕಾರಾಗೃಹಗಳ ಇಲಾಖೆಯ ಅಧಿಕಾರಿಯಾದ ಶ್ರೀ ಶಿವಣ್ಣ ರವರು ಶಿವಮೊಗ್ಗ ಜಿಲ್ಲಾ ಕಾರಾಗೃಹದಲ್ಲಿ ಸಹಾಯಕ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು. ದಿನಾಂಕ : 17-11-2009 ರಂದು ಫಿರ್ಯಾದುದಾರರಾದ ಶ್ರೀಮತಿ ಸುಶೀಲಮ್ಮ ಕೋಂ ಲೇಟ್ ಯಲ್ಲಪ್ಪ, ಶಿವಮೊಗ್ಗ ಇವರು ಶಿವಮೊಗ್ಗ ಠಾಣೆಗೆ ಹಾಜರಾಗಿ, ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಶಿವಮೊಗ್ಗ ಜಿಲ್ಲಾ ಕಾರಾಗೃಹ, ಇವರ ವಿರುದ್ಧ ದೂರು ನೀಡಿರುತ್ತಾರೆ. ಇವರು ನೀಡಿದ ದೂರಿನ ಸಾರಾಂಶವೇನೆಂದರೆ, ಫಿರ್ಯಾದುದಾರರಾದ ಶ್ರೀಮತಿ ಸುಶೀಲಮ್ಮರವರ ಇಬ್ಬರು ಮಕ್ಕಳು ವಿವಿಧ ಕೇಸುಗಳಲ್ಲಿ ಜೈಲಿನಲ್ಲಿದ್ದಾರೆ. ಅದರಲ್ಲಿ ಒಬ್ಬ ಮಗ ಆನಂದ್ ಎಂಬುವವರನ್ನು ಈಗ್ಗೆ ಎರಡು ವರ್ಷಗಳ ಹಿಂದೆ ಧಾರವಾಡ ಜೈಲಿಗೆ ವರ್ಗಾಯಿಸಲಾಗಿದ್ದು, ಇನ್ನೊಬ್ಬ ಮಗ ಶ್ಯಾಮ ಗಾಂಜಾ ಕೇಸಿನಲ್ಲಿ ಅರೆಸ್ಟ್ ಆಗಿದ್ದಾರೆ. ಈ ಬಗ್ಗೆ ಅಧೀಕ್ಷಕರಾದ ಶ್ರೀ ಶಿವಣ್ಣ ಇವರು ಶ್ರೀ ಶ್ಯಾಮನನ್ನು ಸಹ ಬೇರೆ ಜೈಲಿಗೆ ಕಳುಹಿಸುತ್ತೇನೆಂದು ಇಲ್ಲದಿದ್ದರೆ ರೂ.2000-00ಗಳ ಲಂಚಕ್ಕಾಗಿ ಒತ್ತಾಯಿಸಿದ್ದು, ಫಿರ್ಯಾದಿಯು ಅವರ ಮಗನನ್ನು ಬೇರೆ ಜೈಲಿಗೆ ಕಳುಹಿಸಬೇಡಿ ಎಂದು ಅವರಲ್ಲಿದ್ದ ರೂ.1,000-00 ಗಳನ್ನು ಕೊಟ್ಟಿರುತ್ತಾರೆ. ಶ್ರೀ ಶಿವಣ್ಣನವರು ಇನ್ನೂ ರೂ.1,000-00 ಕ್ಕೆ ಒತ್ತಾಯಿಸಿದ್ದರಿಂದ ಫಿರ್ಯಾದಿಗೆ ಲಂಚ ಕೊಡಲು ಇಷ್ಟವಿಲ್ಲದ ಕಾರಣ ಸದರಿ ಅಧಿಕಾರಿಯ ಮೇಲೆ ಸೂಕ್ತ ಕ್ರಮ ಜರುಗಿಸಲು ಕೋರಿರುತ್ತಾರೆ. ಸದರಿಯವರು ನೀಡಿದ ದೂರಿನ ಆಧಾರದ ಮೇರೆಗೆ ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ, 1988ರ ಕಲಂ 7.13(1)(ಡಿ) ಸಹವಾಚ 13(2)ರ ಅಡಿಯಲ್ಲಿ ಮೊಕದ್ದಮೆ ಸಂಖ್ಯೆ : 4/2007 ನ್ನು ದಿನಾಂಕ 17-11-2009 ರಂದು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡು ಪಂಚಸಾಕ್ಷಿಗಳೊಡನೆ ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿ ವರ್ಗದವರು ಬೀಸಿದ ಟ್ರ್ಯಾಪ್ ಬಲೆಯಲ್ಲಿ ಆರೋಪಿತ ಅಧಿಕಾರಿ ಶ್ರೀ ಶಿವಣ್ಣ ಇವರು ರೂ. 1,000-00 ಲಂಚದ ಹಣವನ್ನು ಫಿರ್ಯಾದುದಾರರಾದ ಶ್ರೀಮತಿ ಸುಶೀಲಮ್ಮ ಇವರಿಂದ ನೆರಳು ಸಾಕ್ಷಿದಾರರ ಸಮಕ್ಷಮ ಕೇಳಿ ಸ್ವೀಕರಿಸಿ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಹಾಕಿಕೊಂಡಿರುತ್ತಾರೆ. ಆರೋಪಿತ ಅಧಿಕಾರಿಯಾದ ಶ್ರೀ ಶಿವಣ್ಣರವರ ಎರಡು ಹಸ್ತದ ಕೈಬೆರಳುಗಳನ್ನು ತಯಾರಿಸಿಟ್ಟಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ, ದ್ರಾವಣ ಬಣ್ಣ ಬದಲಾಗಿ ಆಪಾದಿತ ಅಧಿಕಾರಿಯು ಲಂಚದ ಹಣವನ್ನು ಸ್ವೀಕರಿಸಿರುವುದು ದೃಢಪಟ್ಟಿರುತ್ತದೆ. ಲಂಚದ ಹಣವನ್ನು ಯಥಾವತ್ತಾಗಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ. ಸಾಕ್ಷಿದಾರರು ಫಿರ್ಯಾದುದಾರರಿಂದ ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಜಿಲ್ಲಾ ಕಾರಾಗೃಹ, ಶಿವಮೊಗ್ಗ ಇವರು ಲಂಚದ ಹಣವನ್ನು ಕೇಳಿ ಸ್ವೀಕರಿಸಿದ ಅಂಶದ ಬಗ್ಗೆ ಸ್ಪಷ್ಟವಾಗಿ ಹೇಳಿರುತ್ತಾರೆ. ಈ ಎಲ್ಲಾ ಅಂಶಗಳಿಂದ ಆಪಾದಿತ ಸರ್ಕಾರಿ ಅಧಿಕಾರಿಯವರು ಲಂಚದ ಹಣವನ್ನು ಸ್ವೀಕರಿಸಿರುವುದು ರುಜುವಾತಾಗಿದ್ದು, ಅವರ ಮೇಲೆ ಭ್ರಷ್ಟಾಚಾರದ ಆಪಾದನೆಯು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಲೋಕಾಯುಕ್ತ ಪೊಲೀಸರು ಆಪಾದಿತ ಸರ್ಕಾರಿ ಅಧಿಕಾರಿಯಾದ ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಜಿಲ್ಲಾ ಕಾರಾಗೃಹ, ಶಿವಮೊಗ್ಗ ಇವರನ್ನು ದಸ್ತಗಿರಿ ಮಾಡಿ ಗೌ. ನ್ಯಾಯಾಲಯಕ್ಕೆ ಹಾಜರುಪಡಿಸಿ ಅವರ ವಿರುದ್ಧ ಎಸ್.ಪಿ.ಎಲ್.(ಪಿಸಿ) ಸಿಆರ್-13/2009, ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆಯ ಅಡಿಯಲ್ಲಿ ಅಧಿಪತ್ರ ಜಾರಿ ಮಾಡಿ ನ್ಯಾಯಾಂಗ ಬಂಧನಕ್ಕೆ ನೀಡಿದ್ದರು.

ಮೇಲೆ ಓದಲಾದ (1)ರ ಆದೇಶದಲ್ಲಿ, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರು, ಶ್ರೀ ಶಿವಣ್ಣ ಇವರ ವಿರುದ್ಧ ಮುಂದೆ ಜರುಗತಕ್ಕ ಕ್ರಿಮಿನಲ್ ಮೊಕದ್ದಮೆಯ ವಿಚಾರಣೆಯನ್ನು ಕಾಯ್ದಿರಿಸಿ, 1957ರ ಕರ್ನಾಟಕ ಸವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 10(8) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಶಿವಣ್ಣರವರನ್ನು ದಸ್ತಗಿರಿ ಮಾಡಿದ ದಿನಾಂಕ 17-11-2009 ರಿಂದಲೇ ಪೂರ್ವಾನ್ವಯವಾಗುವಂತೆ ಅಮಾನತ್ತಿನಲ್ಲಿರಿಸಿ ಆದೇಶಿಸಿದ್ದರು.

ಮೇಲೆ ಓದಲಾದ (2)ರ ಆದೇಶದಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರು, ತನಿಖೆಯ ವೇಳೆಯಲ್ಲಿ ಸದರಿ ಆಪಾದಿತ ಅಧಿಕಾರಿಯು ಹಸ್ತಕ್ಷೇಪ ಮಾಡುವ ಅಥವಾ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ ಸದರಿಯವರ ಹುದ್ದೆಯ ಹಕ್ಕನ್ನು ಚಿತ್ರದುರ್ಗ ಜಿಲ್ಲಾ ಕಾರಾಗೃಹಕ್ಕೆ ವರ್ಗಾಯಿಸಿ ಆದೇಶಿಸಿದ್ದರು.

ಅನಂತರ, ಮೇಲೆ ಓದಲಾದ (3) ರ ಆದೇಶದಲ್ಲಿ ಸರ್ಕಾರವು, ಅಮಾನತ್ತಿನಲ್ಲಿದ್ದ ಶ್ರೀ ಶಿವಣ್ಣ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957ರ ನಿಯಮ 10(5)(ಸಿ) ರಲ್ಲಿ ಸರ್ಕಾರಕ್ಕೆ ಇರುವ ಅಧಿಕಾರವನ್ನು ಚಲಾಯಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕೆಲವು ಷರತ್ತುಗಳಿಗೆ ಒಳಪಟ್ಟು ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಚಾಮರಾಜನಗರ ಜಿಲ್ಲಾ ಕಾರಾಗೃಹದಲ್ಲಿ ಖಾಲಿ ಇರುವ ಸಹಾಯಕ ಅಧೀಕ್ಷಕ ಹುದ್ದೆಗೆ ನೇಮಿಸಲಾಗಿರುತ್ತದೆ.

ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಇವರು ದಿನಾಂಕ 22-4-2010 ರಂದು ಚಾಮರಾಜನಗರ ಜಿಲ್ಲಾ ಕಾರಾಗೃಹದಲ್ಲಿ ಕರ್ತವ್ಯಕ್ಕೆ ಹಾಜರಾಗಿ ಸೇವೆ ಸಲ್ಲಿಸುತ್ತಿದ್ದರು.

ತರುವಾಯ, ಸರ್ಕಾರವು ಅಧಿಸೂಚನೆ ಸಂಖ್ಯೆ : ಹೆಚ್‌ಡಿ 47 ಪಿಆರ್‌ಇ 2010 ದಿನಾಂಕ 15-07-2010 ರಲ್ಲಿ ಸದರಿ ಅಧಿಕಾರಿಯನ್ನು ಚಾಮರಾಜನಗರ ಜಿಲ್ಲಾ ಕಾರಾಗೃಹದಿಂದ ತುಮಕೂರು ಜಿಲ್ಲಾ ಕಾರಾಗೃಹಕ್ಕೆ ವರ್ಗಾಯಿಸಿತು. ಅದರನ್ವಯ ಅವರು ತುಮಕೂರು ಜಿಲ್ಲಾ ಕಾರಾಗೃಹದ ಸಹಾಯಕ ಅಧೀಕ್ಷಕ ಹುದ್ದೆಯಲ್ಲಿ ದಿನಾಂಕ 21-07-2010 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರು, ಮಾ. ಕರ್ನಾಟಕ ಲೋಕಾಯುಕ್ತವು ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕ, ಕಾರಾಗೃಹ ಇಲಾಖೆ, ಇವರ ವಿರುದ್ಧದ ಪ್ರಕರಣದಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ, 1988ರ ಕಲಂ 7, 13(1)(ಡ) ಸಹವಾಚ 13(2)ರ ಅಡಿಯಲ್ಲಿನ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಆದ್ದರಿಂದ ಸದರಿ ಆರೋಪಿತರು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಅರ್ಹರಿರುತ್ತಾರೆ. ಹಾಗಾಗಿ, ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ, 1988ರ ಕಲಂ 19(1)ರ ಅನ್ವಯ ಮಂಜೂರಾತಿಯನ್ನು ನೀಡಬೇಕೆಂದು ಕೋರಿರುತ್ತಾರೆಂದೂ, ಸಂಬಂಧಪಟ್ಟ ತನಿಖಾ ವರದಿಯನ್ನು, ದಾಖಲಾತಿ ಪತ್ರಗಳನ್ನು ಮತ್ತು ದಸ್ತಾವೇಜುಗಳನ್ನು ಸರ್ಕಾರಕ್ಕೆ ಸಲ್ಲಿಸುತ್ತಾ, ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕ, ಇವರು ಗ್ರೂಪ್-'ಬಿ' ವೃಂದಕ್ಕೆ ಸೇರಿದ ಅಧಿಕಾರಿಯಾಗಿದ್ದು, ಸದರಿಯವರಿಗೆ ಸರ್ಕಾರವು ನೇಮಕಾತಿ ಪ್ರಾಧಿಕಾರವಾಗಿರುವುದರಿಂದ ಅಭಿಯೋಜನಾ ಮಂಜೂರಾತಿಯನ್ನು ಸರ್ಕಾರವೇ ನೀಡಬೇಕೆಂದು ಕೋರಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕರ್ನಾಟಕ ಕಾರಾಗೃಹಗಳ ಮಹಾನಿರೀಕ್ಷಕರವರಾದ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಆರೋಪಿತ ಸರ್ಕಾರಿ ಅಧಿಕಾರಿ ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕ, ಇವರ ನೇಮಕಾತಿ ಪ್ರಾಧಿಕಾರ ಮತ್ತು ಶಿಸ್ತು ಪ್ರಾಧಿಕಾರವು ಸರ್ಕಾರವಾಗಿರುತ್ತದೆ. ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ಶಿವಣ್ಣರವರು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ, 1988ರ ಕಲಂ 7 13(1)(ಡ) ಸಹವಾಚ 13(2)ರ ಅಡಿಯಲ್ಲಿ ಅಪರಾಧ ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಈ ಆದುದರಿಂದ, ಸದರಿಯವರನ್ನು ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯವೆಂದು ಸರ್ಕಾರವು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 62 ಪಿಆರ್‌ಇ 2010, ಬೆಂಗಳೂರು, ದಿನಾಂಕ : 02ನೇ ಆಗಸ್ಟ್ 2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಪಾದಿತ ಸರ್ಕಾರಿ ಅಧಿಕಾರಿಯಾದ ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ತುಮಕೂರು ಜಿಲ್ಲಾ ಕಾರಾಗೃಹ, ತುಮಕೂರು, ಇವರ ಸಕ್ಷಮ ಪ್ರಾಧಿಕಾರವಾದ ಸರ್ಕಾರವು, ಸದರಿಯವರು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ, 1988ರ ಕಲಂ 7, 13 (1)(ಡಿ) ಸಹವಾಚ 13(2)ರ ಅಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ, ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ, 1988ರ ಕಲಂ 19(1) ರ ಅನ್ವಯ ಸರ್ಕಾರವು ಮಂಜೂರಾತಿ ನೀಡಿದೆ.

ಆದ್ದರಿಂದ, ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಾವಳಿಗಳು, 1977ರ ನಿಯಮ 19(1)ರ ಅನ್ವಯ ಮೇಲ್ಕಂಡ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿಯ ಅಡಿಯಲ್ಲಿ ದಿನಾಂಕ 02-08-2010 ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಟಿ. ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಪಿ.ಆರ್. 2038

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಹೆಚ್.ಎಸ್. ಸತೀಶ್‌ಕುಮಾರ್, ಸಿ.ಪಿ.ಸಿ. ಕೆಸ್ತೂರು ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1) ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರ ಆದೇಶ ಸಂಖ್ಯೆ : ಸಿಬ್ಬಂದಿ (2) ಡಿಇ/16/2008-09 ಓ.ಬಿ. 94/09-10, ದಿನಾಂಕ 27-6-2009.
2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ : ಅಪೀಲು/44/2009-10 ಓ.ಬಿ. 43/2009-10, ದಿನಾಂಕ 10-11-2009.
3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 11-3-2010.
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2)2/2010-11, ದಿನಾಂಕ 03-06-2010.

* * *

ಪ್ರಸ್ತಾವನೆ :

ಶ್ರೀ ಹೆಚ್.ಎಸ್. ಸತೀಶ್‌ಕುಮಾರ್, ಸಿ.ಪಿ.ಸಿ. ಇವರು ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಇನ್ನಿಬ್ಬರು ಸಿಬ್ಬಂದಿಗಳೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6 ರಡಿ 8 ರೊಂದಿಗೆ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ :

"ಶ್ರೀ ರಾಮೇಗೌಡ, ಎ.ಹೆಚ್.ಸಿ.-48, ಡಿ.ಎ.ಆರ್. ಮಂಡ್ಯ, ಶ್ರೀ ಎಂ.ಎನ್. ಸಂಪತ್, ಸಿಪಿಸಿ-511 ಶ್ರೀರಂಗಪಟ್ಟಣ ಪೊಲೀಸ್ ಠಾಣೆ ಮತ್ತು ಶ್ರೀ ಹೆಚ್.ಎಸ್. ಸತೀಶ್‌ಕುಮಾರ್, ಸಿಪಿಸಿ-82, ರವರುಗಳನ್ನು ದಿನಾಂಕ 13-8-2008 ರಂದು ಆರೋಪಿ ನಿಂಗಶೆಟ್ಟಿ ಬಿನ್ ಸಿದ್ದಶೆಟ್ಟಿ ಎಂಬ ಆರೋಪಿಯನ್ನು ಮಾನ್ಯ ಸಿಜೆ (ಜೆ.ಡಿ.) ಜೆ.ಎಂ.ಎಫ್.ಸಿ. ಮಳವಳ್ಳಿ ನ್ಯಾಯಾಲಯಕ್ಕೆ ಹಾಜರುಪಡಿಸಲು ಆರ್.ಪಿ.ಐ., ಡಿ.ಎ.ಆರ್. ಮಂಡ್ಯರವರು ಬೆಂಗಾವಲು ಕರ್ತವ್ಯಕ್ಕೆ ನಿಯೋಜಿಸಿದ್ದು, ನೀವುಗಳು ಆರೋಪಿ ನಿಂಗಶೆಟ್ಟಿ ಬಿನ್ ಸಿದ್ದಶೆಟ್ಟರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನಂತರ ಆರೋಪಿ ನಿಂಗಶೆಟ್ಟಿ ಬಿನ್ ಸಿದ್ದಶೆಟ್ಟಿ ಎಂಬ

ಆರೋಪಿಯನ್ನು ಮೂತ್ರ ವಿಸರ್ಜನೆಗೆ ಕರೆದುಕೊಂಡು ಹೋಗಿ ಮರದ ಮರೆಯಲ್ಲಿ ವಿಸರ್ಜನೆ ಮಾಡುವ ಸಮಯದಲ್ಲಿ ಆರೋಪಿಯು ಕೈಕೋಳ ಬಿಚ್ಚಿಕೊಂಡು ಬೆಂಗಾವಲು ಸಿಬ್ಬಂದಿಯವರ ವಶದಿಂದ ತಪ್ಪಿಸಿಕೊಂಡು ಪರಾರಿಯಾಗಲು ಕಾರಣರಾಗಿದ್ದು, ಈ ಸಂಬಂಧ ಮಳವಳ್ಳಿ ಪುರ ಪೊಲೀಸ್ ಠಾಣೆ ಅಪರಾಧ ಸಂ: 94/2008 ಕಲಂ 224 ಐಪಿಸಿ ರೀತ್ಯಾ ಪ್ರಕರಣ ದಾಖಲಾಗಿದ್ದು ಇದಕ್ಕೆ ನೀವುಗಳು ಅಧೀನ ಖೈದಿಗಳ ಬೆಂಗಾವಲು ಕರ್ತವ್ಯ ನಿರ್ವಹಿಸುವಲ್ಲಿ ತೋರಿದ ಅತೀವ ಕರ್ತವ್ಯ ನಿರ್ಲಕ್ಷ್ಯತೆ ಮತ್ತು ಬೇಜವಾಬ್ದಾರಿತನವೇ ಕಾರಣವಾಗಿರುತ್ತದೆ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಮಂಡ್ಯ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ 27-6-2009ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಎರಡು ವರ್ಷಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಮುಂದೂಡಿದ್ದಾರೆ. ದಿನಾಂಕ 17-8-08 ರಿಂದ 05-9-2008ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಿ, ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಮುಂದೂಡಿ, ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 10-11-2009 ರಲ್ಲಿ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸಬಹುದಾದಂತಹ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 49 ಪೊಸಿಅ 2010, ಬೆಂಗಳೂರು, ದಿನಾಂಕ : 30-7-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಹೆಚ್.ಎಸ್. ಸತೀಶ್‌ಕುಮಾರ್, ಸಿ.ಪಿ.ಸಿ. ಕೆಸ್ತೂರು ಪೊಲೀಸ್ ಠಾಣೆ, ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಟಿ.ಎನ್. ರವಿಪ್ರಕಾಶ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 2039

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಜಿ. ದೇವರಾಜ್, ಪಿ.ಎಸ್.ಐ., ಸಂಚಾರಿ ಪೊಲೀಸ್ ಠಾಣೆ, ಶಿವಮೊಗ್ಗ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
1) ಶಿಸ್ತು ಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರ ಆದೇಶ ಸಂಖ್ಯೆ : ಅಪೀಲು (1) 28/2006-07 ಓ.ಬಿ. 53/2009-10, ದಿನಾಂಕ 30-01-2010.
2) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 19-3-2010.
4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2)4/2010-11, ದಿನಾಂಕ 22-05-2010.

* * *

ಪ್ರಸ್ತಾವನೆ :

ಶ್ರೀ ಜಿ. ದೇವರಾಜ್, ಪಿ.ಎಸ್.ಐ., ಸಂಚಾರಿ ಪೊಲೀಸ್ ಠಾಣೆ, ಶಿವಮೊಗ್ಗ, ಇವರು ಚಿಕ್ಕನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಮೇಲ್ಮನವಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಹಾಗೂ ಕರ್ತವ್ಯಲೋಪ ವೆಸಗಿದ ಕಾರಣದ ಮೇಲೆ ಇತರೆ ಇಬ್ಬರು ಸಿಬ್ಬಂದಿಗಳೊಂದಿಗೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6ರಡಿ 8 ರೊಂದಿಗೆ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ :

ಶ್ರೀ ಜಿ. ದೇವರಾಜ್, ಪಿ.ಎಸ್.ಐ. ಹಿಂದೆ ಚಿಕ್ಕನಾಯಕನಹಳ್ಳಿ ಠಾಣೆ ಹಾಲಿ ದೊಡ್ಡಪೇಟೆ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ

"ದಿನಾಂಕ 08-12-04 ರಂದು ಚಿ.ನಾ.ಹಳ್ಳಿ ಠಾಣೆ, ಯು.ಡಿ.ಆರ್. ನಂ. 20/04 ಕಲಂ 174 ಸಿ.ಆರ್.ಪಿ.ಸಿ. ಪ್ರಕರಣಗಳಲ್ಲಿ ಪಿರ್ಯಾದುದಾರರಾದ ಶಿವಣ್ಣ ಮತ್ತು ಆತನ ತಂದೆ ಜ್ವಾಲಬೋರಯ್ಯರವರು ಶವ ತನಿಖಾ ಕಾಲದಲ್ಲಿ ಅವರ ಮಗಳ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ, ಶ್ವಾನದಳವನ್ನು ಕರೆಸುವಂತೆ ಕೇಳಿಕೊಂಡರೂ ಸಹ ಪೊಲೀಸ್ ನಾಯಿ ಬಂದು ಏನು ಮಾಡುತ್ತದೆ, ಎಂದು ಅವರನ್ನು ಹೆದರಿಸಿ, ಶ್ವಾನ ದಳವನ್ನು ಸ್ಥಳಕ್ಕೆ ಕರೆಸದೆ ಹಾಗೂ ಮೃತ ರಾಗಿಣಿಯ ಕಲರ್ ಭಾವಚಿತ್ರಗಳನ್ನು ತೆಗೆಸದೆ ಕಪ್ಪು ಬಿಳುಪು ಭಾವಚಿತ್ರಗಳನ್ನು ತೆಗೆಸಿ ಕರ್ತವ್ಯದಲ್ಲಿ ಅತೀವ ಲೋಪ ಹಾಗೂ ನಿರ್ಲಕ್ಷತೆಯನ್ನು ತೋರಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪವು ಭಾಗಶಃ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಡಿ.ಜಿ. ಮತ್ತು ಐ.ಜಿ.ಪಿ., ಬೆಂಗಳೂರು, ಇವರು ಮೇಲೆ ಕ್ರಮಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 30-01-10ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು 6 ತಿಂಗಳ ಕಾಲ ಅವರ ಮುಂದಿನ ವೇತನ ಬಡ್ತಿಗೆ ದಕ್ಕೆಯಾಗದಂತೆ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಮೇಲ್ಮನವಿಯಲ್ಲಿ ಪರಿಗಣಿಸುವ ಸಮರ್ಥನೀಯ ಅಂಶಗಳು ಇರುವುದಿಲ್ಲ. ಮೇಲ್ಮನವಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡುಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಒಇ 50 ಪೊಸಿಅ 2010, ಬೆಂಗಳೂರು, ದಿನಾಂಕ : 30-7-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಜಿ. ದೇವರಾಜ್, ಪಿ.ಎಸ್.ಐ., ಸಂಚಾರಿ ಪೊಲೀಸ್ ಠಾಣೆ, ಶಿವಮೊಗ್ಗ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಟಿ.ಎನ್. ರವಿಪ್ರಕಾಶ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 2040

ವಸತಿ ಸಚಿವಾಲಯ

ವಿಷಯ : ನೆರೆಹಾವಳಿ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ : ವಇ 16 ಹೆಚ್‌ಎಹೆಚ್ 2010, ದಿನಾಂಕ : 12-03-2010 ಹಾಗೂ ತಿದ್ದುಪಡಿ ದಿನಾಂಕ : 23-03-2010

2) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಮಕಾ/4482/2010, ದಿನಾಂಕ : 22-07-2010

* * *

ಪ್ರಸ್ತಾವನೆ :

ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಹಾಗೂ ಕರ್ನಾಟಕ ಗೃಹ ಮಂಡಳಿ ಮುಖಾಂತರ ಮನೆಗಳ ನಿರ್ಮಾಣವನ್ನು ಕೈಗೊಳ್ಳಲಾಗಿದ್ದು, ಇನ್ನೂ ಹೆಚ್ಚುವರಿ ಮನೆಗಳನ್ನು ನಿರ್ಮಿಸಲು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ವಇ 16 ಹೆಚ್‌ಎಹೆಚ್ 2010, ಬೆಂಗಳೂರು, ದಿನಾಂಕ : 28ನೇ ಜುಲೈ, 2010

ಬಾಗಲಕೋಟೆ ಜಿಲ್ಲೆಯಲ್ಲಿ ಮೆ. ಗೋವಿಂದ್ ಜಿ ಹ್ಯುಮ್ಯಾನಿಟೇರಿಯನ್ ಫೌಂಡೇಶನ್ನಿಗೆ ವಹಿಸಿಕೊಡಲಾದ ಒಟ್ಟು 700 ಮನೆಗಳ ನಿರ್ಮಾಣ ಕಾರ್ಯವನ್ನು ಆ ಸಂಸ್ಥೆಯು ಕೈಗೊಳ್ಳದಿರುವುದರಿಂದ, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿ., ಹಾಗೂ ಕರ್ನಾಟಕ ಗೃಹ ಮಂಡಳಿಗೆ ಈ ಕೆಳಗಿನಂತೆ ಆಸರೆ ಮನೆಗಳ ನಿರ್ಮಾಣದ ಷರತ್ತು ಮತ್ತು ನಿಬಂಧನೆಗಳ ಮೇರೆಗೆ, ಆ ಮನೆಗಳ ನಿರ್ಮಾಣ ಕಾರ್ಯವನ್ನು ಕೂಡಲೇ ಪ್ರಾರಂಭಿಸಲು ಆದೇಶಿಸಲಾಗಿದೆ.

1) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ವಹಿಸಿಕೊಡಲಾದ ಮನೆಗಳು

ಜಿಲ್ಲೆ	ತಾಲ್ಲೂಕು	ಗ್ರಾಮಗಳು	ಮನೆಗಳ ಸಂಖ್ಯೆ
ಬಾಗಲಕೋಟೆ	ಮುಧೋಳ	ಮಲ್ಲಾಪುರ	200

2) ಕರ್ನಾಟಕ ಗೃಹ ಮಂಡಳಿಗೆ ವಹಿಸಿಕೊಡಲಾದ ಮನೆಗಳು

ಜಿಲ್ಲೆ	ತಾಲ್ಲೂಕು	ಗ್ರಾಮಗಳು	ಮನೆಗಳ ಸಂಖ್ಯೆ
ಬಾಗಲಕೋಟೆ	ಹುನಗುಂದ	ಗಂಜಿಹಾಳ	500

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಆರ್. ವಲ್ಲೂರ
ಪೀಠಾಧಿಕಾರಿ-2, ವಸತಿ ಇಲಾಖೆ

ಪಿ.ಆರ್. 2046

ಜಲಸಂಪನ್ಮೂಲ ಸಚಿವಾಲಯ

ವಿಷಯ : ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು ರಂಗಯ್ಯನದುರ್ಗ ಜಲಾಶಯದ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕಾಟನಾಯ್ಕನಹಳ್ಳಿ ಗ್ರಾಮದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರ ಐತೀರ್ಪಿನಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರ ದಿನಾಂಕ : 05-03-2010ರ ಪತ್ರ ಸಂಖ್ಯೆ : ಮುಸನೀ (ದ) ಲೆಶಾ ಲೆಸ/1-3/ಭೂಸ್ವಾಧೀನ/09-10/606.

* * *

ಪ್ರಸ್ತಾವನೆ :

ಮೇಲೆ ಓದಲಾದ ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ದಿನಾಂಕ : 5-3-2010ರ ಪತ್ರದಲ್ಲಿ ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು ರಂಗಯ್ಯನದುರ್ಗ ಜಲಾಶಯದ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕಾಟನಾಯ್ಕನಹಳ್ಳಿ ಗ್ರಾಮದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಉಪ ವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ಚಿತ್ರದುರ್ಗ ಇವರು ಹೊರಡಿಸಿದ ಐತೀರ್ಪಿನಂತೆ ಪರಿಹಾರ ಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಈ ಕೆರೆಯ ಮೂಲ ಭೂಸ್ವಾಧೀನ ಪ್ರಕ್ರಿಯೆಯ ವಿವರಗಳ ಕೆಳಕಂಡಂತಿದೆ :

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 03-07-1987
- ಉಪ ವಿಭಾಗಾಧಿಕಾರಿಗಳ ಐತೀರ್ಪಿನ ದಿನಾಂಕ : 31-01-1989

ಭೂಸ್ವಾಧೀನಕ್ಕೊಳಪಟ್ಟ ಕಾಟನಾಯ್ಕನಹಳ್ಳಿ ಗ್ರಾಮದ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳು ರಚಿಸಿದ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು ಇನ್ನೂ ಹೆಚ್ಚಿನ ಪರಿಹಾರ ನೀಡುವಂತೆ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಚಳ್ಳಕೆರೆ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಪ್ರಕರಣ ಸಂಖ್ಯೆ : 75/02ನ್ನು ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಈ ತೀರ್ಪನ್ನು ಉಲ್ಲೇಖಿಸಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಸೇರಿದ್ದ ಈ ಕೆಳಕಂಡ ಸ.ನಂ.ನ ಭೂಮಾಲೀಕರು ತಮಗೂ ಸದರಿ ತೀರ್ಪಿನನುಸಾರ ಹೆಚ್ಚುವರಿ ಪರಿಹಾರ ಧನ ನೀಡುವಂತೆ ಅರ್ಜಿ ಸಲ್ಲಿಸಿದ ಮೇರೆಗೆ ಭೂಸ್ವಾಧೀನಾಧಿಕಾರಿಗಳು ಭೂಸ್ವಾಧೀನ ಕಾಯ್ದೆ ಕಲಂ 28(ಎ)ರಡಿ ಹೆಚ್ಚಿನ ಪರಿಹಾರಕ್ಕಾಗಿ ಐತೀರ್ಪು ರಚಿಸಿರುತ್ತಾರೆ. ಐತೀರ್ಪಿನಂತೆ ಪಾವತಿಸಬೇಕಾದ ಪರಿಹಾರ ಧನದ ಮೊತ್ತದ ವಿವರ ಕೆಳಕಂಡಂತಿದೆ.

ಕ್ರ. ಸಂ.	ಪಡುಕೋಟೆ ಕಾವಲ್ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ.	ಭೂ.ಸ್ವಾ. ಕಲಂ 28(ಎ)ರಡಿ ಐತೀರ್ಪಿನ ಸಂಖ್ಯೆ ಮತ್ತು ದಿನಾಂಕ	ಪರಿಹಾರ ಮೊತ್ತ ರೂ.ಗಳಲ್ಲಿ
1	35/2ಬಿ	3-20	ಎಲ್.ಎಕ್ಯೂ ಕೊರೆ ಸಿಆರ್ 21/09-10, ದಿನಾಂಕ 09/08/09	3,57,279-00

ವಿಷಯವನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 56 ಭೂಸ್ವಾಪ್ರ 2010 ಬೆಂಗಳೂರು, ದಿನಾಂಕ : 31 ನೇ ಜುಲೈ 2010

ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು ರಂಗಯ್ಯನದುರ್ಗ ಜಲಾಶಯದ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕಾಟನಾಯ್ಕನಹಳ್ಳಿ ಗ್ರಾಮದ ಸ.ನಂ. 35/2ಬಿ 3-20 ಎಕರೆ ಜಮೀನಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ)ರ ಪ್ರಕಾರ ಉಪ ವಿಭಾಗಾಧಿಕಾರಿ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳು, ಹುಣಸೂರು ಇವರು ಹೊರಡಿಸಿರುವ ದಿನಾಂಕ : 03-10-88ರ ಐತೀರ್ಪಿನಂತೆ ರೂ. 3,57,279-00ಗಳನ್ನು (ಮೂರು ಲಕ್ಷದ ಐವತ್ತೇಳು ಸಾವಿರದ ಇನ್ನೂರ ಎಪ್ಪತ್ತೊಂಭತ್ತು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ : 16-05-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಎಸ್. ಉದಯಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2047

ಜಲಸಂಪನ್ಮೂಲ ಸಚಿವಾಲಯ

ವಿಷಯ: ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು ಅಂಗಾರಗಟ್ಟಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ : 02-06-10 ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/ 2010-11-3261.

* * *

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರ ಪತ್ರದಲ್ಲಿ ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು ಅಂಗಾರಗಟ್ಟಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮಾಸಣಗಿ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 04-03-1993
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ : 26-12-1994

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ರಾಣೆಬೆನ್ನೂರಿನ (ಹಿರಿಯ ಶ್ರೇಣಿ)ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣ ದಾಖಲಿಸಿದ್ದು, ಈ ಪ್ರಕರಣ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪತ್ರ ಸಂಖ್ಯೆ : ಆರ್‌ಡಿ 730 ಎಲ್‌ಸಿಬಿ 2009, ದಿನಾಂಕ : 27-02-09 ರಲ್ಲಿ ಅಭಿಪ್ರಾಯ ನೀಡಿದೆ. ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣದ ವಿವರ ಕೆಳಕಂಡಂತಿದೆ.

ಕ್ರ. ಸಂ.	ಎಲ್‌ಎಸಿ ಪ್ರಕರಣ ಸಂ.	ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ ರೂ.ಗಳಲ್ಲಿ
1	2/99	156/2	0-29	2,65,859-00
ಒಟ್ಟು				2,65,859-00

*ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 77 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 30ನೇ ಜುಲೈ, 2010

ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು ಅಂಗಾರಗಟ್ಟಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮಾಸಣಗಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 2,65,859-00-00ಗಳನ್ನು (ಎರಡು ಲಕ್ಷದ ಅರವತ್ತೈದು ಸಾವಿರದ ಎಂಟುನೂರ ಐವತ್ತೊಂಭತ್ತು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16-05-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಎಸ್. ಉದಯಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2048

ಜಲಸಂಪನ್ಮೂಲ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು ಅಂಗಾರಗಟ್ಟಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮಾಸಣಗಿ ಮತ್ತು ಹಿರೆನಂದಿಹಳ್ಳಿ ಗ್ರಾಮಗಳ ಜಮೀನುಗಳಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಭೂ ಬಾಡಿಗೆ ಅಥವಾ ಬೆಳೆ ನಷ್ಟ ಪರಿಹಾರ ಸಂದಾಯ ಮಾಡುವ ಬಗ್ಗೆ

ಓದಲಾಗಿದೆ : 1) ದಿನಾಂಕ : 24-12-2008ರ ಸರ್ಕಾರದ ಆದೇಶ ಸಂಖ್ಯೆ : ಸನೀಇ 130 ಭೂಸ್ವಾಪ್ರ 2008.

2) ದಿನಾಂಕ : 07-07-2010ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/10-11/3321.

* * *

ಪ್ರಸ್ತಾವನೆ :

ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕು ಅಂಗಾರಗಟ್ಟಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮಾಸಣಗಿ ಮತ್ತು ಹಿರೇನಂದಿಹಳ್ಳಿ ಗ್ರಾಮಗಳ ಭೂಮಾಲೀಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಲಾಗಿದ್ದ ರಿಟ್ ಅರ್ಜಿ ಸಂಖ್ಯೆ : 3361/07ರಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ : 03-04-2007ರಲ್ಲಿ ನೀಡಿದ ತೀರ್ಪಿನಂತೆ ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯ ಪಾರ್ವಾವಧಿಗೆ ಸದರಿ ಗ್ರಾಮಗಳ ಸ.ನಂ.ಗಳಿಗೆ ಸೇರಿದ 14-17 ಎಕರೆ ಜಮೀನುಗಳಿಗೆ ನಷ್ಟ ಪರಿಹಾರಕ್ಕೆ ಹಾವೇರಿ ಉಪ ವಿಭಾಗಾಧಿಕಾರಿಗಳು ರಚಿಸಿದ್ದ ಐತೀರ್ಪಿನ ಮೊತ್ತ ರೂ. 38,36,381-00 ಗಳನ್ನು ಪಾವತಿಸಲು ಮೇಲೆ (1) ರಲ್ಲಿ ಓದಲಾದ ದಿನಾಂಕ : 24-12-08ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ.

ಸದರಿ ಭೂಸ್ವಾಧೀನ ಪ್ರಕರಣದಲ್ಲಿ ಸೇರಿದ್ದು, ಆದರೆ, ನಷ್ಟ ಪರಿಹಾರದ ಐತೀರ್ಪಿನಲ್ಲಿ ಬಿಟ್ಟು ಹೋಗಿದ್ದ ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕಿನ ಮಾಸಣಗಿ ಗ್ರಾಮದ ಸ.ನಂ. 155ರ 4-03 ಎಕರೆ ಹಾಗೂ 150/1ರ 1-00 ಎಕರೆ ಜಮೀನಿಗೆ ರೂ. 18,07,506-00ಗಳ ಮೊತ್ತದ ನಷ್ಟ ಪರಿಹಾರ ಪಾವತಿಸಲು ಹಾವೇರಿ ಉಪ ವಿಭಾಗಾಧಿಕಾರಿಗಳು ದಿನಾಂಕ : 26-12-2009ರ ಆದೇಶ ಸಂಖ್ಯೆ : ಭೂಸ್ವಾ/ ವಹಿ/8/1999-2000ರಲ್ಲಿ ಐತೀರ್ಪು ರಚಿಸಿರುತ್ತಾರೆ. ಈ ಮೊತ್ತವನ್ನು ಬಿಡುಗಡೆ ಮಾಡುವಂತೆ ಕೋರಿ ಮೇಲೆ (2)ರಲ್ಲಿ ಓದಲಾದ ದಿನಾಂಕ : 07-07-2010ರ ಪತ್ರದಲ್ಲಿ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 81 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 30ನೇ ಜುಲೈ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಜಾರಿಗಾಗಿ ಹಾವೇರಿ ಜಿಲ್ಲೆ, ಬ್ಯಾಡಗಿ ತಾಲ್ಲೂಕಿನ ಅಂಗಾರಗಟ್ಟಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮಾಸಣಗಿ ಗ್ರಾಮದ ಸ.ನಂ. 155ರ 4-03 ಎಕರೆ ಹಾಗೂ 150/1ರ 1-00ಎಕರೆ ಜಮೀನುಗಳಿಗೆ ಭೂಬಾಡಿಗೆ ಅಥವಾ ನಷ್ಟ ಪರಿಹಾರ ಧನದ ಬಗ್ಗೆ ಹಾವೇರಿ ಉಪ ವಿಭಾಗಾಧಿಕಾರಿಗಳು ದಿನಾಂಕ : 26-12-2009 ರಂದು ಹೊರಡಿಸಿದ ಐತೀರ್ಪಿನಂತೆ ರೂ. 18,07,506-00 ಗಳನ್ನು (ಹದಿನೆಂಟು ಲಕ್ಷದ ಏಳು ಸಾವಿರದ ಐನೂರ ಆರು ರೂ.ಗಳು ಮಾತ್ರ) ಭೂಮಾಲೀಕರಿಗೆ ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16-05-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಎಸ್. ಉದಯಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)

ಪಿ.ಆರ್. 2049

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ದಿನಾಂಕ : 14-11-2009 ರಂದು ನಡೆದ ವಿಶ್ವ ಮಕ್ಕಳ ದಿನಾಚರಣೆಯ ಅಂಗವಾಗಿ ಪತ್ರಿಕಾ ಜಾಹೀರಾತು ನೀಡಿದ ಬಾಬ್ತು ರೂ. 4,87,562/-ಗಳನ್ನು ಪಾವತಿಸಲು ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ : 1) ಸರ್ಕಾರ ಆದೇಶ ಸಂಖ್ಯೆ ಮಮಇ/148/ಮಮಅ/2010, ದಿನಾಂಕ : 24-05-2010

2) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಪ್ರಸ್ತಾವನೆ ಸಂಖ್ಯೆ ಮಮಅಇ/ಮಕ/ಮದಿ/2009-10, (ಭಾಗ-3) ದಿನಾಂಕ : 14-06-2010.

* * *

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ 2010-11ನೇ ಸಾಲಿನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ 14 ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ವಿವಿಧ ಲೆಕ್ಕ ಶೀರ್ಷಿಕೆಗಳಡಿ ಮೊದಲನೇ ತ್ರೈಮಾಸಿಕ ಕಂತಿನಲ್ಲಿ ಒಟ್ಟು ರೂ. 937.83 ಲಕ್ಷಗಳ ಮೊತ್ತವನ್ನು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಪ್ರದತ್ತವಾದ ಅಧಿಕಾರದನ್ವಯ ಹಾಗೂ ನಿಯಮಾನುಸಾರ ಭರಿಸಲು ಬಿಡುಗಡೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ .(2)ರಲ್ಲಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ದಿನಾಂಕ : 14-11-2009 ರಂದು ಜವಾಹರ ಬಾಲಭವನ, ಕಬ್ಬನ್ ಉದ್ಯಾನವನ, ಬೆಂಗಳೂರು ಇಲ್ಲಿ ಆಚರಿಸಲಾದ ವಿಶ್ವ ಮಕ್ಕಳ ದಿನಾಚರಣೆಯ ಸಮಾರಂಭದ ಅಂಗವಾಗಿ ಪತ್ರಿಕೆಗಳಲ್ಲಿ ಜಾಹೀರಾತು ನೀಡುವ ಬಗ್ಗೆ ದಿನಾಂಕ : 10-11-2009 ರಂದು ಪೂರ್ವಭಾವಿ ಸಭೆಯಲ್ಲಿ ಚರ್ಚಿಸಿ ಜಾಹೀರಾತಿಗೆ ತಗಲುವ ವೆಚ್ಚವನ್ನು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ಭರಿಸಲು ನಿರ್ಣಯಿಸಲಾಗಿತ್ತು. ಅದರಂತೆ ಮೆ. ಮಾರ್ಕೆಟಿಂಗ್ ಕನ್ಸಲ್‌ಟೆಂಟ್ಸ್ ಅಂಡ್ ಏಜೆನ್ಸಿಸ್ ಲಿಮಿಟೆಡ್ ಇವರಿಗೆ ಪತ್ರಿಕೆಗಳಲ್ಲಿ ಜಾಹೀರಾತು ನೀಡಲು ಕಾರ್ಯಾದೇಶ ನೀಡಲಾಗಿರುತ್ತದೆ. ಜಾಹೀರಾತು ಪ್ರಕಟಿಸಿದ ಸಂಬಂಧ ರೂ. 4,95,095/- ಬಿಲ್‌ನ್ನು ದ್ವಿಪ್ರತಿಯಲ್ಲಿ ಸಲ್ಲಿಸಿ ಸದರಿ ಮೊತ್ತವನ್ನು ಪಾವತಿಸಲು ಎಂ.ಸಿ.ಎ.ಎಲ್.ನವರು ಕೋರಿರುತ್ತಾರೆ. ನಂತರ ಬಿಲ್‌ನ್ನು ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಇವರಿಗೆ ದಿನಾಂಕ : 17-12-2009ರ ಪತ್ರದ ಮೂಲಕ ಕಳುಹಿಸಿಕೊಡಲಾಗಿತ್ತು. ಆದರೆ ದಿನಾಂಕ : 03-03-2010ರಂದು ನಡೆದ ಅಧ್ಯಕ್ಷರು ಮತ್ತು ಸದಸ್ಯರ ಸಭೆಯಲ್ಲಿ ಕಾರ್ಯಕ್ರಮದ ಬಗ್ಗೆ ಆಯೋಗದ ಮುಂದೆ ಪ್ರಸ್ತಾಪಿಸದೇ ಇರುವುದರಿಂದ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗುವುದಿಲ್ಲವೆಂದು ನಿರ್ಣಯಿಸಿ ವಾಪಸ್ ಮಾಡಿರುತ್ತಾರೆ.

ಆದ್ದರಿಂದ 2010-11ನೇ ಸಾಲಿನಲ್ಲಿ ಮಕ್ಕಳ ದಿನಾಚರಣೆ ಪ್ರಯುಕ್ತ ಬಿಡುಗಡೆಯಾಗುವ ಆಯವ್ಯಯದಲ್ಲಿ ಈ ವೆಚ್ಚವನ್ನು ಭರಿಸಲು ನಿರ್ಧರಿಸಲಾಗಿದ್ದು ಪ್ರಸ್ತುತ ಸರ್ಕಾರಿ ಆದೇಶ ಸಂಖ್ಯೆ. ಮಮಇ 148 ಮಮಅ 2010, ದಿನಾಂಕ : 24-05-2010ರಲ್ಲಿ ಮಕ್ಕಳ ದಿನಾಚರಣೆ ಲೆಕ್ಕ ಶೀರ್ಷಿಕೆ 2235-02-102-0-99-100 (ಯೋಜನೆ) ಅಡಿಯಲ್ಲಿ ಮೊದಲನೇ ಕಂತಿನಲ್ಲಿ ರೂ. 6.25 ಲಕ್ಷ ಆಯವ್ಯಯ ಬಿಡುಗಡೆ ಮಾಡಲಾಗಿದ್ದು ಜಾಹೀರಾತು ಸಂಬಂಧ ಪಾವತಿಗೆ ಬಾಕಿ ಇರುವ ರೂ. 4,95, 095/- ಗಳನ್ನು ಮೆ. ಮಾರ್ಕೆಟಿಂಗ್ ಕನ್ಸಲ್‌ಟೆಂಟ್ಸ್ ಅಂಡ್ ಏಜೆನ್ಸಿಸ್ ಲಿಮಿಟೆಡ್ ಇವರಿಗೆ ಪಾವತಿಸಲು ಮಂಜೂರಾತಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ್ದು ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಮಮಇ 02ಮಭಾಬ 2010, ಬೆಂಗಳೂರು, ದಿನಾಂಕ : 31ನೇ ಜುಲೈ 2010

ಮೇಲಿನ ಪ್ರಸ್ತಾವನೆಯ ಹಿನ್ನಲೆಯಲ್ಲಿ ಈಗಾಗಲೇ 2010-11ನೇ ಸಾಲಿನಲ್ಲಿ ಮಕ್ಕಳ ದಿನಾಚರಣೆ ಹಾಗೂ ಮಹಿಳಾ ದಿನಾಚರಣೆ ಮತ್ತು ಶೌರ್ಯ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ಕಾರ್ಯಕ್ರಮಕ್ಕೆ ಲೆಕ್ಕಶೀರ್ಷಿಕೆ 2235-02-102-0-99-100 ರಡಿ ಬಿಡುಗಡೆ ಮಾಡಿರುವ ಮೊದಲನೆ ಕಂತಿನ ಅನುದಾನ ರೂ. 6.25 ಲಕ್ಷಗಳಿಂದ ಪ್ರಸ್ತಾಪಿತ ಪತ್ರಿಕಾ ಪ್ರಕಟಣೆ ಬಿಲ್ಲಿನ ಮೊತ್ತ ರೂ. 4,87,562/- (ರೂಪಾಯಿ ನಾಲ್ಕು ಲಕ್ಷ ಎಂಭತ್ತೇಳು ಸಾವಿರದ ಐದುನೂರ ಅರವತ್ತೆರಡು ಮಾತ್ರ)ಗಳನ್ನು ಶೇಕಡ 1 ರಷ್ಟು ಆದಾಯ ತೆರಿಗೆಯನ್ನು ಟಿ.ಡಿ.ಎಸ್. ಮುಖೇನ ಕಡಿತಗೊಳಿಸಿ ಆದಾಯ ತೆರಿಗೆ ಇಲಾಖೆಗೆ ಜಮೆಗೊಳಿಸುವ ಷರತ್ತಿನೊಂದಿಗೆ ಮೆ: ಮಾರ್ಕೆಟಿಂಗ್ ಕನ್ಸಲ್ಟೆಂಟ್ಸ್ ಅಂಡ್ ಏಜೆನ್ಸಿಸ್ ಲಿಮಿಟೆಡ್ ಇವರಿಗೆ ಪಾವತಿಸಲು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ : ಸಕಕಾ 77 ಆಂಆಸ 2010, ದಿನಾಂಕ : 25-06-2010 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ವಿ. ಶಿವಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ-1.
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪಿ.ಆರ್. 2050

ಕಂದಾಯ ಸಚಿವಾಲಯ

ವಿಷಯ : ಶ್ರೀ ಗಣಪತಿ ಎಸ್. ಭಟ್, ನಿವೃತ್ತ ತಹಶೀಲ್ದಾರ್ ಇವರಿಗೆ ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
1) ಪ್ರಾದೇಶಿಕ ಆಯುಕ್ತರು, ಬೆಂಗಳೂರು ಇವರ ಪತ್ರ ಸಂ: ಸಿಬ್ಬಂದಿ (4): ಸಿಆರ್ 2/09-10, ದಿನಾಂಕ 27-03-2010.
2) ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಇವರ ಪತ್ರದ ದಿನಾಂಕ : ಇಎಸ್‌ಟಿ (1) ಸಿಆರ್/63/2007-08, ದಿನಾಂಕ 15-10-2009 ಮತ್ತು 25-09-2009.
3) ತಹಶೀಲ್ದಾರ್, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರ ಪತ್ರ ಸಂ : ಸಿಬ್ಬಂದಿ-1. ವಿವ. 24/2009-10, ದಿನಾಂಕ 01-09-2009.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಸಂ.(1) ದಿನಾಂಕ : 27-03-2010 ರ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ಇವರು ಶ್ರೀ ಗಣಪತಿ ಎಸ್. ಭಟ್, ನಿವೃತ್ತ ತಹಶೀಲ್ದಾರ್ ಇವರು ವೇತನ ಶ್ರೇಣಿ ರೂ.6,000-11,200 ರಲ್ಲಿ ದಿನಾಂಕ 01-04-2004 ರಂದು ಗರಿಷ್ಠ ವೇತನ ಮಿತಿ ತಲುಪಿರುತ್ತಾರೆಂದು, ಸದರಿಯವರು ದಿನಾಂಕ 01-04-2005 ರಿಂದ ಮೊದಲನೇ ಸ್ಥಗಿತ ವೇತನ ಬಡ್ತಿಗೆ ದಿನಾಂಕ 01-04-2006 ರಿಂದ ಎರಡನೇ ಸ್ಥಗಿತ ವೇತನ ಬಡ್ತಿಗೆ ಅರ್ಹರಿರುವುದರಿಂದ ದಿನಾಂಕ 01-04-2005 ರಿಂದ ಜಾರಿಗೆ ಬರುವಂತೆ ಒಟ್ಟು 2 ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ : ಆರ್‌ಡಿ 293 ಎಎಸ್‌ಡಿ 2010, ಬೆಂಗಳೂರು, ದಿನಾಂಕ : 19-07-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಗಣಪತಿ ಎಸ್. ಭಟ್, ನಿವೃತ್ತ ತಹಶೀಲ್ದಾರ್ ಇವರಿಗೆ ದಿನಾಂಕ 01.04.2005 ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಒಟ್ಟು 2 ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡಿ ಆದೇಶಿಸಿದೆ.

1) ದಿನಾಂಕ 01-04-2005 – ಮೊದಲನೇ ಸ್ಥಗಿತ ವೇತನ ಬಡ್ತಿ
(ವೇತನ ಶ್ರೇಣಿ ರೂ. 6,000-11,200)
2) ದಿನಾಂಕ 01-04-2006 – ಎರಡನೇ ಸ್ಥಗಿತ ವೇತನ ಬಡ್ತಿ
(ವೇತನ ಶ್ರೇಣಿ ರೂ. 11,400-21,600)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಿ. ಸಸಾಲಟ್ಟಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್. 2064

ಕಂದಾಯ ಸಚಿವಾಲಯ

ವಿಷಯ : ಶ್ರೀ ಚಿಂತಾಮಣಿ ಮೇಂಗಜಿ, ತಹಶೀಲ್ದಾರ್, ಗ್ರೇಡ್-II, ಪ್ರಸ್ತುತ ನಿಯೋಜನೆ ಮೇಲೆ ಉಪ ಪ್ರಾಚಾರ್ಯರು, ಡಿ.ಟಿ.ಐ. ಗುಲ್ಬರ್ಗ ಜಿಲ್ಲೆ ಇವರಿಗೆ 01-02-2010 ಕ್ಕೆ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ : 1) ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇವರ ಪತ್ರ ಸಂ. ಸಿಬ್ಬಂದಿ/2/ವಿವ/30/2009-10, ದಿನಾಂಕ 04-03-2010.
2) ಮಹಾಲೇಖಪಾಲರ ಪತ್ರ ಸಂ. ಜಿಇ1/ಆರ್1/ಪಿಎಫ್-179/(ಜೆ)/ಸಿ-422-08/236, ದಿನಾಂಕ 13.05.10.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇವರು ಪ್ರಸ್ತಾವನೆಯಲ್ಲಿ ಶ್ರೀ ಚಿಂತಾಮಣಿ ಮೇಂಗಜಿ, ತಹಶೀಲ್ದಾರ್, ಪ್ರಸ್ತುತ ನಿಯೋಜನೆ ಮೇಲೆ ಉಪ ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಗುಲ್ಬರ್ಗಾ, ಗ್ರೇಡ್-II, ಇವರು ವೇತನ ಶ್ರೇಣಿ ರೂ.11,400-00-21,600-00 ರಲ್ಲಿ ಗರಿಷ್ಠ ಹಂತ ತಲುಪಿದ್ದು, ದಿನಾಂಕ 01.02.2010 ರಂದು ಎರಡನೇ ಸ್ಥಗಿತ ವೇತನ ಬಡ್ತಿಯನ್ನು ಪಡೆಯಲು ಅರ್ಹರಿರುವುದರಿಂದ, 2ನೇ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಸರ್ಕಾರವು, ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು ಮತ್ತು ಉಲ್ಲೇಖ (2)ರ ಮಹಾಲೇಖಪಾಲರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಶ್ರೀ ಚಿಂತಾಮಣಿ ಮೇಂಗಜಿ, ಉಪ ಪ್ರಾಚಾರ್ಯರು, (ತಹಶೀಲ್ದಾರ್, ಗ್ರೇಡ್-II) ಇವರಿಗೆ ವೇತನ ಶ್ರೇಣಿ ರೂ.11,400-00-21,600-00 ಗಳಲ್ಲಿ ದಿನಾಂಕ 01-02-2010 ರಂದು ಎರಡನೇ ಸ್ಥಗಿತ ವೇತನ ಬಡ್ತಿಗೆ ಅರ್ಹರಾಗಿರುವುದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂ : 215 ಎಎಸ್‌ಡಿ 2010, ಬೆಂಗಳೂರು, ದಿನಾಂಕ : 27-07-2010

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಚಿಂತಾಮಣಿ ಮೇಂಗಜಿ, ತಹಶೀಲ್ದಾರ್, ಪ್ರಸ್ತುತ ನಿಯೋಜನೆ ಮೇಲೆ ಉಪ ಪ್ರಾಚಾರ್ಯರು, ಜಿಲ್ಲಾ ತರಬೇತಿ ಸಂಸ್ಥೆ, ಗುಲ್ಬರ್ಗಾ, (ತಹಶೀಲ್ದಾರ್, ಗ್ರೇಡ್-II) ಇವರಿಗೆ ವೇತನ ಶ್ರೇಣಿ ರೂ.11,400-00-21,600-00 ರಲ್ಲಿ ದಿನಾಂಕ 01-02-2010 ರಿಂದ ಜಾರಿಗೆ ಬರುವಂತೆ ಎರಡನೇ ಸ್ಥಗಿತ ವೇತನ ಬಡ್ತಿ ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಿ. ಸಸಾಲಟ್ಟಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3).

ಪಿ.ಆರ್. 2065

WATER RESOURCES SECRETARIAT

SUB :- According to Administrative Approval to the Minor Irrigation Projects under Accelerated Irrigation Benefit Programme-Regarding.

READ :- 1. Letter No. CE/MI (N) Zone/BJP/AE-1/2010-11/4300, dated 28-07-2010 from the Chief Engineer, Minor Irrigation North Zone, Bijapur.
2. Letter No. CE/MI (N) Zone/BJP/PB-3-1/2010-11/3875, dated 07-07-2010 from the Chief Engineer, Minor Irrigation North Zone, Bijapur.
3. Government Order No. SANEEYEE 236 MASAVI 2009(2) Dated : 9-07-2010.

***

PREAMBLE:

As per the modified guidelines issued by the Government of India, Minor Irrigation schemes with potential more than 50 hectares which serve tribal areas and Drought Prone Areas in the non-special category states are eligible for inclusion under Accelerated Irrigation Benefit Programme (AIBP) effective from December 2006. Karnataka state is classified as one of the non-special category States. 81 taluks in the State are approved under Drought Prone Area Programme (DPAP). Hence Minor Irrigation Schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of central grant that will be 90% of the project cost. The balance cost of the project will have to be borne by the State as State's share.

Administrative approval was accrded for the following two Minor Irrigation schemes vide Government Order No. SANEEYEE 236 MASAVI 2009 (2) Dated : 09-07-2010.

(Rs. In lakhs)

Sl. No.	Name of Project	District	Taluk	Estimated cost	Potential planned (in Ha.)	Cost/Ha (Rs. In lakhs)
1	2	3	4	5	6	7
1.	Construction of Barrage across Markhandeya river near Yalebail-Sonoli Village	Belgaum	Belgaum	70.00	50.00	1.40

But, due to the technical reasons cost of the above estimates is modifies and the modified Administrative Approval is sought for as follows :

Head of Account 4702-00-101-1-10-139 AIBP Major Works

(Rs. In lakhs)

Sl. No.	Name of Project	District	Taluk	Estimated cost	Potential planned (in Ha.)	Cost/Ha (Rs. In lakhs)
1	2	3	4	5	6	7
1.	Construction of Barrage across Markhandeya river near Yalebail-Sonoli Village	Belgaum	Belgaum	90.00	50.00	1.40
Total				**90.00**		

After examining the proposal, the above two projects are being considered for according Modified Administrative approval as below :

Government Order No. SANEEYEE 236, MASAVI 2009 (5) Bangalore, dated 16-07-2010

In view of the above, Modified Administrative approval is hereby accorded for taking up the above work with an estimated cost totaling to Rs. 90.00 lakhs (Rupees ninty lakhs only) subject to the following conditions.

1. This order is issued superseeding the Administrative Approval accorded in Government Order No. Sanjeeyi 236 Masavi 2009(2), dated 03-04-2010, for the above work.
2. Implementation of these projects should be taken up only after receipt of necessary approval from the GOI
3. The funding of the scheme is in the ratio of 90:10 between the Central Govt. and State Govt.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This Order is issued with the concurrence of Finance Department in note No. PWD-890-FC-1/2009, dated 09-12-2009.

By Order and in the name of the Governor of Karnataka
RUDRAMURTHY,
Ex Officio Under secretary to Government
Water Resources Department (Minor Irrigation).

P.R. 2066

WATER RESOURCES SECRETARIAT

SUB :- According to Administrative Approval to the Minor Irrigation Projects under Accelerated Irrigation Benefit Programme-Regarding.

READ:- Letter No. 1 CE/MI (N) Zone/BJP/AE-3/2010-11/camp Bangalore, Dated 24.07.2010.

***

PREAMBLE:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category States. 81 taluks in the State are approved under Drought Prone Area Programme (DPAP). Hence Minor Irrigation

schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of central grant that will be 90% of the project cost. The balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation North Zone, Bijapur in the letter read above has requested for according administrative approval to the estimates of the works proposed under AIBP. Accordingly the following scheme in DPAP taluk is being considered for according administrative approval.

Head of Account 4702-00-101-1-10-139 AIBP Major Works

(Rs. In lakhs)

Sl. No.	Name of Project	District	Taluka	Estimated cost	Potential planned (in Ha.)	Cost/Ha (Rs. In lakhs)
1	2	3	4	5	6	7
1.	Construction of Bridge cum Barrage across Kagina river near Sangavi Village	Gulbarga	Sedam	1250.00	630	1.98
	Total			1250.00		

Government Order No. SANEEYEE 236, MASAVI 2009 (4) Bangalore, dated 30-07-2010

In view of the above, Administrative approval is hereby accorded for taking up the above works with an estimated cost totaling to Rs. 1250.00 lakhs (Rupees One thousand two hundred and fifty lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt. and State Govt.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This Order is issued with the concurrence of Finance Department in note No. PWD-890-FC-1/2009, dated 09-12-2009.

By Order and in the name of the Governor of Karnataka

(RUDRAMURTHY)

Ex Officio Under secretary to Government

Water Resources Department (Minor Irrigation).

P.R. 2067

WATER RESOURCES SECRETARIAT

SUB :- According to Administrative Approval to the Minor Irrigation Projects under Accelerated Irrigation Benefit Programme-Regarding.

READ:- 1. Letter No. CE/MI (N) Zone/BJP/AE-3/2010-11 camp Bangalore, Dated 24.07.2010.

2. Letter No. CE/MI (N) Zone/BJP/AE-1/2010-11/4299, Dt. 28.07.2010

***

PREAMBLE:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category States. 81 taluks in the state are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit Programme (AIBP). Central Assistance will be in the form of central grant that will be 90% of the project cost. The balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation North Zone, Bijapur in the letter read above has requested for according administrative approval to the estimates of the works proposed under AIBP. Accordingly the following scheme in DPAP taluk is being considered for according administrative approval.

Head of Account 4702-00-101-1-10-139 AIBP Major Works

(Rs. In lakhs)

Sl. No.	Name of Project	District	Taluka	Estimated cost	Potential planned (in Ha.)	Cost/Ha (Rs. In lakhs)
1	2	3	4	5	6	7
1.	Construction of Bridge cum Barrage across Pattihal halla near Savatagi Village	Belgaum	Bailhongal	80	50	1.60
2.	Construction of Barrage across Dhomala near Rajpur.	Gulbarga	Chittapur	150.00	100	1.50
3.	Construction of Barrage across halla near Lingayyanawadi Village	Gulbarga	Aland	200	133	1.50
	Total			430.00		

Government Order No. SANEEYEE 236, MASAVI 2009 (3) Bangalore, dated 30-07-2010

In view of the above, Administrative approval is hereby accorded for taking up the above works with an estimated cost totaling to Rs. 430.00 lakhs (Rupees Four hundred and thirty lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt. and State Govt.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This Order is issued with the concurrence of Finance Department in note No. PWD-890-FC-1/2009, dated 09-12-2009.

By Order and in the name of the Governor of Karnataka
RUDRAMURTHY,
Ex Officio Under secretary to Government
Water Resources Department (Minor Irrigation).

P.R. 2068

WATER RESOURCES SECRETARIAT

SUB :- According Administrative Approval to the Minor Irrigation Projects under Accelerated Irrigation Benefit Programme-Regarding.

READ:- Letter No. 1 CE/MI (N) Zone/BJP/AE-3/2010-11/camp Bangalore, Dated : 24.07.2010.

***

PREAMBLE:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category States. 81 taluks in the State are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit

Programme (AIBP). Central Assistance will be in the form of central grant that will be 90% of the project cost. The balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation North Zone, Bijapur in the letter read above has requested for according administrative approval to the estimates of the works proposed under AIBP. Accordingly the following scheme in DPAP taluk is being considered for according administrative approval.

Head of Account 4702-00-101-1-10-139 AIBP Major Works

(Rs. In lakhs)

Sl. No.	Name of Project	District	Taluka	Estimated cost	Potential planned (in Ha.)	Cost/Ha (Rs. In lakhs)
1	2	3	4	5	6	7
1.	Construction of Bridge cum Barrage across Malaprabha river near Basaragi Village	Belgaum	Savadatti	170.00	110	1.55
2.	Construction of Bridge cum Barrage across hirehalla near Hunshyal p.g. Village	Belgaum	Gokak	95	52	1.83
3.	Construction of Bridge cum Barrage across Sangolli nala near Belawadi Village	Belgaum	Bailhongal	100	55	1.82
	Total			365.00		

Government Order No. SANEEYEE 236, MASAVI 2009 (2), Bangalore, dated 30-07-2010

In view of the above, Administrative approval is hereby accorded for taking up the above works with an estimated cost totaling to Rs. 365.00 lakhs (Rupees Three hundred and sixty five lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt. and State Govt.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This Order is issued with the concurrence of Finance Department in note No. PWD-890-FC-1/2009, dated 09-12-2009.

By Order and in the name of the Governor of Karnataka
RUDRAMURTHY,
Ex Officio Under secretary to Government
Water Resources Department (Minor Irrigation).

P.R. 2069

WATER RESOURCES SECRETARIAT

SUB :- According to Administrative Approval to the Minor Irrigation Projects under Accelerated Irrigation Benefit Programme-Regarding.

READ:- Letter No. 1 CE/MI (N) Zone/BJP/AE-3/2010-11/camp Bangalore, Dated 24.07.2010.

***

PREAMBLE:

As per the modified guidelines issued by the Government of India, Minor Irrigation schemes with potential more than 50 hectares which serve tribal areas and drought prone areas in the non-special category States are eligible for inclusion under Accelerated Irrigation Benefit Programme (AIBP) effective from December 2006. Karnataka State is classified as one of the non-special category States. 81 taluks in the State are approved under Drought prone Area Programme (DPAP). Hence Minor Irrigation schemes with potential more than 50 hectares in these 81 taluks are eligible for inclusion under Accelerated Irrigation Benefit

Programme (AIBP). Central Assistance will be in the form of central grant that will be 90% of the project cost. The balance cost of the project will have to be borne by the State as State's share.

Government of Karnataka has identified the new Minor Irrigation Schemes in these taluks to seek approval of Government of India under AIBP. Finance Department, Government of Karnataka has also approved the proposal of the Water Resources Department (Minor Irrigation) for according approval to such schemes. The Chief Engineer, Minor Irrigation North Zone, Bijapur in the letter read above has requested for according administrative approval to the estimates of the works proposed under AIBP. Accordingly the following scheme in DPAP taluk is being considered for according administrative approval.

Head of Account 4702-00-101-1-10-139 AIBP Major Works

(Rs. In lakhs)

Sl. No.	Name of Project	District	Taluka	Estimated cost	Potential planned (in Ha.)	Cost/Ha (Rs. In lakhs)
1	2	3	4	5	6	7
1.	Construction of Barrage across halla near Tegginbavanur.	Gadag	Shirahatti	50.00	53	0.94
2.	Construction of Barrage across halla near Bellhatti Village	Gadag	Shirahatti	50.00	53	0.94
3.	Construction of Barrage across halla near Mallikarjunapur Village	Gadag	Mundargi	50.00	53	0.94
4.	Construction of Barrage across halla near Hadagalli Village	Gadag	Shirahatti	50.00	53	0.94
5.	Construction of Barrage across halla near Shirahatti Village	Gadag	Shirahatti	45.00	51	0.88
6.	Construction of Barrage across halla near Hosalli Village	Gadag	Shirahatti	45.00	51	0.88
7.	Construction of Barrage in between Nabapur & Dindur Village	Gadag	Gadag	50.00	54	0.93
8.	Construction of Barrage in between Nabapur Village	Gadag	Gadag	50.00	53	0.94
9.	Construction of Bridge cum Barrage across Kanvi halla near Hirenandi	Belgaum	Gokak	90.00	50	1.80
	Total			480.00		

Government Order No. SANEEYEE 236, MASAVI 2009 (1), Bangalore, dated 30-07-2010

In view of the above, Administrative approval is hereby accorded for taking up the above works with an estimated cost totaling to Rs. 480.00 lakhs (Rupees Four hundred and eighty lakhs only) subject to the following conditions.

1. Implementation of these projects should be taken up only after receipt of necessary approval from the GOI.
2. The projects are to be completed with in a period of 2 years after receipt of approval of Government of India to these schemes.
3. The funding of the scheme is in the ratio of 90:10 between the Central Govt. and State Govt.
4. The Central share is in the form of grant to the State.
5. The projects will be implemented by the Water Resources Department (Minor Irrigation) as per the KTPP act.
6. The implementation of the project shall adhere to the terms and conditions of the guidelines issued by the GOI.
7. The implementation of the project shall be as per the required technical specifications and financial specifications as per the approved DPRs.
8. Water users association shall be formed for post construction maintenance and the scheme shall be handed over to the same after its construction for the O & M.

This Order is issued with the concurrence of Finance Department in note No. PWD-890-FC-1/2009, dated 09-12-2009.

By Order and in the name of the Governor of Karnataka

(RUDRAMURTHY)

Ex Officio Under secretary to Government

Water Resources Department (Minor Irrigation).

P.R. 2070

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯ ದಂತ ಆರೋಗ್ಯಾಧಿಕಾರಿಗಳ ಸೇವೆಯನ್ನು ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿ ವಿಲೀನಗೊಳಿಸುವ ಬಗ್ಗೆ.

ಓದಲಾಗಿದೆ :
1) ಪತ್ರ ಸಂಖ್ಯೆ : ಸದಂಕಾಸಂಸಂ/ಸಿ(1)/20/2008-09, ದಿನಾಂಕ 07-07-2009.
2) ಪತ್ರ ಸಂಖ್ಯೆ : ಸದಂಕಾಸಂಸಂ/ಸಿ(1)/32/2009-10, ದಿನಾಂಕ 10-10-2009.
3) ಪತ್ರ ಸಂಖ್ಯೆ : ಸದಂಕಾಸಂಸಂ/ಸಿ(1)/20/2008-09, ದಿನಾಂಕ 04-05-2010.
4) ಪತ್ರ ಸಂಖ್ಯೆ : ಸದಂಕಾಸಂಸಂ/ಸಿ(1)/32/2008-09, ದಿನಾಂಕ 11-06-2010.
5) ಪತ್ರ ಸಂಖ್ಯೆ : ಸದಂಕಾಸಂಸಂ/ಸಿ(1)/32/2008-09, ದಿನಾಂಕ 30-06-2010.

ಪ್ರಸ್ತಾವನೆ :

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯ 15 ದಂತ ವೈದ್ಯಾಧಿಕಾರಿಗಳು ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿ ಬೋಧಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರೆಲ್ಲರೂ ಅವರವರ ಬೋಧನಾ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿದ್ದು, ಬೋಧಕರಾಗಿ ಮುಂದುವರಿಯಲು ಅರ್ಹರಿದ್ದಾರೆಂದು, ಪ್ರಯುಕ್ತ ಇವರ ಸೇವೆಯನ್ನು ಸಂಸ್ಥೆಯಲ್ಲಿ ವಿಲೀನಗೊಳಿಸುವಂತೆ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ನಿರ್ದೇಶಕರವರು ಮೇಲೆ (1) ರಿಂದ (4) ರವರೆಗೆ ಓದಲಾದ ತಮ್ಮ ಪತ್ರಗಳಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ನಿರ್ದೇಶಕರು, ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರುರವರು ಮೇಲೆ (5) ರಲ್ಲಿ ಓದಲಾದ ತಮ್ಮ ಪತ್ರದೊಂದಿಗೆ ಸ್ವಾಯತ್ತ ಸಂಸ್ಥೆಯಾದ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿ ಬೋಧಕರಾಗಿ ನಿಯೋಜನೆಯ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹದಿನಾಲ್ಕು (14) ದಂತ ಆರೋಗ್ಯಾಧಿಕಾರಿಗಳು ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರಗಳನ್ನು ಸರ್ಕಾರಕ್ಕೆ ಕಳುಹಿಸುತ್ತಾ ಒಬ್ಬ ಬೋಧಕರು ಸಂಸ್ಥೆಯ ಸೇವೆಯಲ್ಲಿ ವಿಲೀನಗೊಳ್ಳಲು ಇಚ್ಛಿಸದಿದ್ದರಿಂದ, ಅವರನ್ನು ಸಂಸ್ಥೆಯಿಂದ ಬಿಡುಗಡೆಗೊಳಿಸಲಾಗಿದೆಯೆಂದು ವರದಿ ಮಾಡಿದ್ದಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ಸ್ವಾಯತ್ತ ಸಂಸ್ಥೆಯಾದ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿ ನಿಯೋಜನೆಯ ಮೇಲೆ ಬೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 14 ದಂತ ವೈದ್ಯಾಧಿಕಾರಿಗಳ ಸೇವೆಯನ್ನು ಸ್ವಾಯತ್ತ ಸಂಸ್ಥೆಯಾದ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿ ವಿಲೀನಗೊಳಿಸಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂ : ಆಕುಕ 182 ಎಂಎಂಸಿ 2009, ಬೆಂಗಳೂರು, ದಿನಾಂಕ : 27-07-2010

ಸರ್ಕಾರಿ ಸ್ವಾಯತ್ತ ಸಂಸ್ಥೆಯಾದ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿ ನಿಯೋಜನೆ ಮೇಲೆ ಬೋಧಕರಾಗಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯ ಈ ಕೆಳಗಿನ 14 ದಂತ ವೈದ್ಯಾಧಿಕಾರಿಗಳ ಸೇವೆಯನ್ನು ಈ ಕೂಡಲೇ ಜಾರಿಗೆ ಬರುವಂತೆ ಸ್ವಾಯತ್ತ ಸಂಸ್ಥೆಯಾದ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ಸೇವೆಯಲ್ಲಿ ಈ ಕೆಳಗಿನ ಷರತ್ತುಗಳಿಗೊಳಪಟ್ಟು ಶಾಶ್ವತವಾಗಿ ವಿಲೀನಗೊಳಿಸಲಾಗಿದೆ.

ಕ್ರ ಸಂ.	ವೈದ್ಯರುಗಳ ಹೆಸರು	ಆಕುಕ ಇಲಾಖೆಯಲ್ಲಿನ ಮೂಲ ಹುದ್ದೆ	ಸ್ನಾತಕೋತ್ತರ ಪದವಿ ಮತ್ತು ಪಡೆದ ದಿನಾಂಕ	ಜನ್ಮ ದಿನಾಂಕ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಯಾವ ದಿನಾಂಕದಿಂದ ಸದರಿ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ
01	ಡಾ॥ ಬಿ. ಸುಮನ್	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಓರಲ್ ಮೆಡಿಸನ್ ಅಕ್ಟೋಬರ್ 2006	08.09.1974	11.09.2000	19.05.2007
02	ಡಾ॥ ಹೇಮಾ ಮೈಥಿಲಿ ಪಿ.	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಓರಲ್ ಸರ್ಜರಿ ಮಾರ್ಚ್ 2001	24.07.1972	04.02.2005	26.09.2005
03	ಡಾ॥ ಕೆ.ಆರ್. ಸೌಮ್ಯ	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಕಮ್ಯುನಿಟಿ ಡೆಂಟಿಸ್ಟ್ರೆ ಅಕ್ಟೋಬರ್ 2006	04.04.1975	09.09.2000	21.05.2007
04	ಡಾ॥ ಎಸ್.ಆರ್. ಉಮಾ	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಕಮ್ಯುನಿಟಿ ಡೆಂಟಿಸ್ಟ್ರೆ ಜೂನ್ 2007	12.07.1974	11.09.2000	12.10.2007

05	ಡಾ॥ ಸಿ. ಎಸ್. ಗುರುಪ್ರಸಾದ್	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಪಿರಿಯೋ ಡಾಂಟಿಕ್ಸ್ ಸೆಪ್ಟೆಂಬರ್ 2006	24.05.1975	07.09.2000	19.05.2007
06	ಡಾ॥ ಪೂರ್ಣಿಮಾ ಭಂಡಾರಿ	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಪಿರಿಯೋ ಡಾಂಟಿಕ್ಸ್ ಮೇ 2008	01.06.1974	07.09.2000	12.10.2007
07	ಡಾ॥ ಎಂ. ಕಲಾವತಿ	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಪ್ರಾಸ್ಥೋ ಡಾಂಟಿಕ್ಸ್ ಸೆಪ್ಟೆಂಬರ್ 2007	30.11.1970	11.09.2000	24.05.2007
08	ಡಾ॥ ಟಿ. ಸುರೇಶ್	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಓರಲ್ ಪೆಥಾಲಜಿ ಸೆಪ್ಟೆಂಬರ್ 2006	12.04.1969	11.09.2000	23.05.2007
09	ಡಾ॥ ಜೆ. ಚಂದ್ರಕಲಾ	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಓರಲ್ ಪೆಥಾಲಜಿ ಏಪ್ರಿಲ್ 2006	05.05.1975	07.09.2000	09.08.2007
10	ಡಾ॥ ಕಿರಣ್ ಕುಮಾರ್	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಕನ್ಸರ್ ವೇಟಿವ್ ಡೆಂಟಿಸ್ಟ್ರಿ ಸೆಪ್ಟೆಂಬರ್ 2006	15.08.1974	14.09.2000	01.06.2007
11	ಡಾ॥ ಸೀಮಾ ಮೆರವಾಡೆ	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಕನ್ಸರ್ ವೇಟಿವ್ ಡೆಂಟಿಸ್ಟ್ರಿ ಏಪ್ರಿಲ್ 2007	10.09.1975	05.09.2000	11.10.2007
12	ಡಾ॥ ಸವಿತಾ ಬಿ. ನಾಯಕ್	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಕನ್ಸರ್‌ವೇಟಿವ್ ಡೆಂಟಿಸ್ಟ್ರಿ ಏಪ್ರಿಲ್ 2008	26.04.1976	05.09.2000	10.06.2008
13	ಡಾ॥ ಮಲ್ಲಯ್ಯ ಸಿ. ಹಿರೇಮಠ್	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಪೀಡೋ ಡಾಂಟಿಕ್ಸ್ ಸೆಪ್ಟೆಂಬರ್ 2006	01.07.1974	11.09.2000	21.05.2007
14	ಡಾ॥ ಜೆ. ನಾಗರತ್ನ	ದಂತ ಆರೋಗ್ಯಾಧಿಕಾರಿ	ಎಂಡಿಎಸ್ ಪೀಡೋ ಡಾಂಟಿಕ್ಸ್ ಮೇ 2008	08.07.1975	05.09.2000	03.07.2008

ಷರತ್ತುಗಳು :

1) ಪ್ರಸ್ತಾಪಿತ ದಂತ ಆರೋಗ್ಯಾಧಿಕಾರಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಸಕ್ರಮವಾಗಿ ನೇಮಕಾತಿ ಹೊಂದಿರತಕ್ಕದ್ದು.
2) ದಂತ ಆರೋಗ್ಯಾಧಿಕಾರಿಗಳು ಭಾರತೀಯ ದಂತ ಪರಿಷತ್ತಿನ ಬೋಧಕ ಸಿಬ್ಬಂದಿಗೆ ವಿದ್ಯಾರ್ಹತೆ ನಿಯಂತ್ರಣಗಳ ಪ್ರಕಾರ, ಸ್ನಾತಕೋತ್ತರ ಪದವಿಯನ್ನು ಹೊಂದಿ ಅರ್ಹರಾಗಿರತಕ್ಕದ್ದು.
3) ದಂತ ಆರೋಗ್ಯಾಧಿಕಾರಿಗಳು ಪರಿವೀಕ್ಷಣಾ ಅವಧಿ/ಸ್ಥಾನಪನ್ನ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರತಕ್ಕದ್ದು.
4) ಇವರ ವಿರುದ್ಧ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಬಾಕಿ ಇರತಕ್ಕದ್ದಲ್ಲ.
5) ದಂತ ಆರೋಗ್ಯಾಧಿಕಾರಿಗಳು ಸ್ವಾಯತ್ತ ಸಂಸ್ಥೆಗಳ ಸೇವೆಯಲ್ಲಿ ವಿಲೀನಗೊಂಡ ನಂತರ ಮುಂದೆ ಅವರು ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ವಾಪಸ್ ಬರಲು ಆಸ್ಪದ ಇರತಕ್ಕದ್ದಲ್ಲ.
6) ಸರ್ಕಾರಿ ಇಲಾಖೆಯಿಂದ ಸ್ವಾಯತ್ತ ಸಂಸ್ಥೆಗೆ ವಿಲೀನಗೊಳ್ಳಲು ಸಂಬಂಧಿಸಿದ ನೌಕರರುಗಳು ಒಪ್ಪಿಗೆಯನ್ನು ಬರವಣಿಗೆ ಮೂಲಕ ಸಲ್ಲಿಸಿರತಕ್ಕದ್ದು.

7) ಸದರಿ ನೌಕರರು ಸಲ್ಲಿಸಿದ ಸೇವೆಗೆ ಸಂಬಂಧಿಸಿದಂತೆ, ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 70 ಎಸ್‌ಆರ್‌ಎಸ್ 77, ದಿನಾಂಕ 27–10–1977ರ ಪ್ರಕಾರ ಪ್ರೊರೇಟಾ (Prorate) ಪಿಂಚಣಿ ಬಗ್ಗೆ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಸಿಆಸುಇ 200 ಸೇನಿಎ 2010, ದಿನಾಂಕ 14–5–2010 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ. ಶ್ರೀರಾಮರೆಡ್ಡಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. (ವೈದ್ಯಕೀಯ ಶಿಕ್ಷಣ)

ಪಿ.ಆರ್. 2071

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸುತ್ತೋಲೆ

ಸಂಖ್ಯೆ : ಸಿಆಸುಇ 4 ಇಆಇ 2010, ಬೆಂಗಳೂರು, ದಿನಾಂಕ 31ನೇ ಜುಲೈ, 2010

ವಿಷಯ : ಕಾಗದ ರಹಿತ ಕಛೇರಿ ತಂತ್ರಾಂಶ (Paperless Office Software) ವನ್ನು ಅಳವಡಿಸುವ ಸರ್ಕಾರಿ ಕಛೇರಿಗಳಲ್ಲಿ ಡಿಜಿಟಲ್ ಸಹಿಗಳನ್ನು ಬಳಸುವ ಬಗ್ಗೆ.

ಉಲ್ಲೇಖ : 1) ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರು, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ–ಆಡಳಿತ) ಇವರಿಗೆ ಉದ್ದೇಶಿಸಿದ ದಿನಾಂಕ 26–12–2009ರ ಅ.ಸ. ಪತ್ರ ಸಂಖ್ಯೆ : ೦ಆಬ (3) ಅಖ46/2009–10.
2) ದಿನಾಂಕ 07–01–2005ರ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 39 ಇಜಿವಿ 2004
3) ದಿನಾಂಕ 15–02–2010ರ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 147 ಇಆಇ 2009

***

1. ಎನ್.ಐ.ಸಿ.ಯ ವತಿಯಿಂದ ಅಭಿವೃದ್ಧಿಗೊಳಿಸಲಾದ ಕಾಗದ ರಹಿತ ಕಛೇರಿ ತಂತ್ರಾಂಶ (Paperless Office Software)ವನ್ನು ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ಕಛೇರಿಯಲ್ಲಿ ಈಗಾಗಲೇ ಅಳವಡಿಸಲಾಗಿದೆಯೆಂದು ಜಿಲ್ಲಾಧಿಕಾರಿಯವರು ತಿಳಿಸುತ್ತಾ, ಅದಕ್ಕಾಗಿ ಡಿಜಿಟಲ್ ಸಹಿಗಳನ್ನು ಬಳಸಲು ಸರ್ಕಾರದ ಅನುಮೋದನೆಯನ್ನು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಈ ಮೂಲಕ ಸರ್ಕಾರ ಸ್ಪಷ್ಟೀಕರಿಸಿದೆ.

2. ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಅಧಿನಿಯಮ 2000 (ಕೇಂದ್ರದ 2000ದ 21ನೇ ಅಧಿನಿಯಮ) (The Information Technology Act, 2000 (Central Act No. 21 of 2000) ರ ಕಲಂ 3, 4, 5 ಮತ್ತು 6ಗಳಲ್ಲಿ ಇ–ದಾಖಲೆಗಳಿಗೆ ಹಾಗೂ ಡಿಜಿಟಲ್ ಸಹಿಗಳಿಗೆ ಕಾನೂನಿನ ಮಾನ್ಯತೆಯಿರುವ ಬಗ್ಗೆ ಮತ್ತು ಸರ್ಕಾರ ಮತ್ತು ಅದರ ಸಂಘ ಸಂಸ್ಥೆಗಳಲ್ಲಿ ಇ–ದಾಖಲೆಗಳನ್ನು ಹಾಗೂ ಡಿಜಿಟಲ್ ಸಹಿಗಳನ್ನು ಬಳಸುವ ಕುರಿತು ಸ್ಪಷ್ಟವಾಗಿ ಆಸ್ಪದವನ್ನು ಕಲ್ಪಿಸಲಾಗಿದೆ. ಮುಂದುವರೆದು, ಡಿಜಿಟಲ್ ಸಹಿಗಳಿಗೆ ಸಂಬಂಧಿಸಿದಂತೆ, ಇತರೆ ವಿಷಯಗಳ ಕುರಿತು ಸದರಿ ಅಧಿನಿಯಮದ ಕಲಂ 10, 15 ರಿಂದ 42 ಇತ್ಯಾದಿಗಳಲ್ಲಿ ಉಪಬಂಧಗಳನ್ನು ಕಲ್ಪಿಸಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರ Information Technology (Certifying Authorities) Rules, 2000 ಎಂಬ ನಿಯಮಗಳನ್ನು ಸಹ ರಚಿಸಿದೆ.

3. ಈ ಹಿನ್ನೆಲೆಯಲ್ಲಿ ಮೇಲೆ (2)ರಲ್ಲಿ ಉಲ್ಲೇಖ ದಿನಾಂಕ 07–01–2005ರ ಆದೇಶವನ್ನು (3)ರಲ್ಲಿ ಉಲ್ಲೇಖಿಸಿದ ದಿನಾಂಕ 15–02–2010ರ ಆದೇಶದೊಂದಿಗೆ ಓದಿಕೊಂಡಂತೆ, ಇವುಗಳನ್ವಯ ವಾರ್ಷಿಕ ಇ–ಆಡಳಿತ ಕ್ರಿಯಾ ಯೋಜನೆಗಳ ಮಂಜೂರಾತಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ ಕಾಗದ ರಹಿತ ಕಛೇರಿ ತಂತ್ರಾಂಶ (Paperless Office Software) ವನ್ನು ಅಳವಡಿಸುವ ಕರ್ನಾಟಕ ಸರ್ಕಾರದ ಕಛೇರಿಗಳಲ್ಲಿ ಡಿಜಿಟಲ್ ಸಹಿಗಳನ್ನು ಬಳಸಲು ಹಾಗೂ ಮೇಲೆ ಉಲ್ಲೇಖಿಸಿದ ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಅಧಿನಿಯಮ 2000 (ಕೇಂದ್ರದ 2000ದ 21ನೇ ಅಧಿನಿಯಮ) (The Information Technology act, 2000 (Central Act No. 21 of 2000)] ರ ಉಪಬಂಧಗಳನ್ನು ಹಾಗೂ ಅದರಡಿ ಕೇಂದ್ರ ಸರ್ಕಾರ ರಚಿಸಿರುವ Information Technology (Certifying Authorities) Rules, 2000 ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕರ್ನಾಟಕ ಸರ್ಕಾರದ ಕಛೇರಿಗಳಿಗೆ ಸಂಬಂಧಿಸಿದಂತೆ ಡಿಜಿಟಲ್ ಸಹಿಯ ದೃಢೀಕರಣ ಪತ್ರ (Digital Signature Certificate) ಇತ್ಯಾದಿಗಳನ್ನು ಸಂಬಂಧಿಸಿದ ಇಲಾಖಾ ಮುಖ್ಯಸ್ಥರು ಪಡೆಯಬಹುದಾಗಿದೆಯೆಂದು ಈ ಮೂಲಕ ಸ್ಪಷ್ಟೀಕರಿಸಿದೆ.

(ಲಲಿತಾ ಹಾ ಹಂದಿಗೋಳ)
ಪೀಠಾಧಿಕಾರಿ–1 (ಇ–ಆಡಳಿತ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

ಪಿ.ಆರ್. 2089

ಯುವಜನ ಸೇವಾ ಸಚಿವಾಲಯ

ವಿಷಯ : ಶ್ರೀ ವಿ. ಕೆ. ಗುಡೋಡಗಿ, ನಿವೃತ್ತ ಜಂಟಿ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಅವರ ವಿರುದ್ಧ ಇಲಾಖಾ ವಿಚಾರಣೆ–ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸಿ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ : 1) ನೋಟೀಸ್ ಸಂಖ್ಯೆ : ಯುಸೇಇ 98 ಯುಇಸೇ 2005, ದಿನಾಂಕ 01–07–2006
2) ಶ್ರೀ ವಿ. ಕೆ. ಗುಡೋಡಗಿ, ನಿವೃತ್ತ ಜಂಟಿ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ರವರ ಉತ್ತರ ದಿನಾಂಕ 16–06–2007.

ಪ್ರಸ್ತಾವನೆ :

ಶ್ರೀ ವಿ. ಕೆ. ಗುಡೋಡಗಿ, ಜಂಟಿ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಅವರು ಇಲಾಖೆಯ ಪ್ರಭಾರಿ ಜಂಟಿ ನಿರ್ದೇಶಕರಾದ ಶ್ರೀಮತಿ ಎಂ. ಎಸ್. ಲಲಿತ ಅವರಿಗೆ ವಿಶೇಷ ಸ್ವಯಂ ನಿವೃತ್ತಿ ನೀಡಬಾರದೆಂದು ಅನಗತ್ಯವಾಗಿ ಟಿಪ್ಪಣಿ ಸಲ್ಲಿಸಿ ಸದರಿ ಪ್ರಸ್ತಾವನೆಯನ್ನು

ವಿಳಂಬ ಮಾಡಿದ; ಉಪ ನಿರ್ದೇಶಕರ ಹುದ್ದೆಯಲ್ಲಿ ಹೆಚ್ಚುವರಿ ಎಂದು ಗುರುತಿಸಲಾದ ಆರ್. ಮಲ್ಲಿಕಾರ್ಜುನಯ್ಯ, ಎಚ್. ಬಿ. ನಂಜೇಗೌಡ ಹಾಗೂ ರಜಿಯುದ್ದೀನ್ ಅವರುಗಳಿಗೆ ನೀಡಲಾದ ವಿಶೇಷ ಸ್ವಯಂ ನಿವೃತ್ತಿ ಸೌಲಭ್ಯದ ಆದೇಶದ ವಿರುದ್ಧ ಅಕ್ರಮವಾಗಿ ಸರ್ಕಾರದ ವಿರುದ್ಧವೇ ಮಹಾಲೇಖಪಾಲರಿಗೆ ನೇರವಾಗಿ ಪತ್ರ ಬರೆದ/ 2004-05ನೇ ಸಾಲಿನ ಜಿಲ್ಲಾ ಪಂಚಾಯತ್ ಯೋಜನೆ ಅಡಿಯಲ್ಲಿ ನಿರ್ವಹಿಸಲಾದ ಯೋಜನೆಗಳ ಲೆಕ್ಕಪತ್ರ ತಪಾಸಣೆ ನಡೆಸಬೇಕೆಂಬ ಮೇಲಾಧಿಕಾರಿ ಆದೇಶವನ್ನು ಧಿಕ್ಕರಿಸಿದ; 12ನೇ ಹಣಕಾಸು ಯೋಜನೆಯಲ್ಲಿ ತಾಲ್ಲೂಕು ಕ್ರೀಡಾಂಗಣಗಳ ಅಭಿವೃದ್ಧಿಗೆ ಅಂದಾಜು ಪಟ್ಟಿ ತಯಾರಿಸಬೇಕೆಂಬ ಮೇಲಾಧಿಕಾರಿಗಳ ನಿರ್ದೇಶನಗಳನ್ನು ನಿರ್ಲಕ್ಷಿಸಿದ; ತನ್ನ ಮೇಲಾಧಿಕಾರಿಗಳ ವಿರುದ್ಧವೇ ದೂರು ನೀಡಿದ; ಡ್ರಾ ಮಾಡಿದ ಲಕ್ಷಾಂತರ ರೂ.ಗಳ ಹಣವನ್ನು ಸರಿಯಾದ ಖಾತೆಗೆ ಜಮಾ ಮಾಡದೇ, ಲೆಕ್ಕಪತ್ರ ನಗದು ಪುಸ್ತಕಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಆಡಿಟ್ ಆಕ್ಷೇಪಣೆಗಳಿಗೆ ಕಾರಣವಾದ; ಬೆಳಗಾವಿ ವಿಭಾಗದಲ್ಲಿ ಇಲಾಖೆಯ ಯೋಜನಾ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಹಣವನ್ನು ವೆಚ್ಚ ಮಾಡದೇ ಬ್ಯಾಂಕ್ ಖಾತೆಗೆ ಜಮಾ ಮಾಡಿ ದುರ್ನಡತೆ ಎಸಗಿದ ಆರೋಪಗಳಿಗಾಗಿ ಅವರಿಗೆ ಸಿ.ಸಿ.ಎ. ನಿಯಮಗಳನ್ವಯ ಮೇಲೆ (1)ರಲ್ಲಿ ಓದಲಾದ ದಿನಾಂಕ 01-07-2006ರ ನೋಟೀಸ್ ನೀಡುವ ಮೂಲಕ ಇಲಾಖಾ ವಿಚಾರಣೆ ಪ್ರಾರಂಭಿಸಲಾಯಿತು. ವಿಚಾರಣೆ ಜಾರಿಯಲ್ಲಿದ್ದಾಗ ದಿನಾಂಕ 30-04-2007ರಂದು ಅಧಿಕಾರಿಯು ವಯೋ ನಿವೃತ್ತಿ ಹೊಂದಿದರು. ಆ ತರುವಾಯ ಮೇಲೆ (2)ರಲ್ಲಿ ಓದಲಾದ ದಿನಾಂಕ 16-06-2007ರ ಉತ್ತರವನ್ನು ನೀಡಿ ಆರೋಪಗಳನ್ನು ನಿರಾಕರಿಸಿದ್ದಾರೆ. ಅವರ ಉತ್ತರವನ್ನು ಪರಿಶೀಲಿಸಿದ ಸರ್ಕಾರವು ಅವು ಸಮರ್ಪಕವಾಗಿಲ್ಲದ ಕಾರಣ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯುವ ದೃಷ್ಟಿಯಿಂದ ವಿಚಾರಣೆಯನ್ನು ಮುಂದುವರೆಸಲು ತೀರ್ಮಾನಿಸಿ ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 98 ಯುಇಸೇ 2005, ಬೆಂಗಳೂರು, ದಿನಾಂಕ 04-08-2010

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 11(5)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ವಿ. ಕೆ. ಗುಡೋಡಗಿ ನಿವೃತ್ತ ಜಂಟಿ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ರವರ ವಿರುದ್ಧ ಮೇಲೆ ಹೇಳಿದ ಆರೋಪಗಳ ಕುರಿತು ವಿಚಾರಣೆ ನಡೆಸುವ ಸಲುವಾಗಿ ಶ್ರೀ ಎಂ. ಜಿ. ಹಿರೇಮಠ್, ನಿವೃತ್ತ ನ್ಯಾಯಾಧೀಶರವರನ್ನು ವಿಚಾರಣಾಧಿಕಾರಿಯನ್ನಾಗಿ ಈ ಮೂಲಕ ನೇಮಿಸುತ್ತದೆ.

ಶಿಸ್ತು ಪ್ರಾಧಿಕಾರದ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಗಳ ಮುಂದೆ ಮಂಡಿಸಲು ಶ್ರೀ ಆರ್. ಎಲ್. ಪಾಟೀಲ್, ಜಂಟಿ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು, ಅವರನ್ನು ಮಂಡನಾಧಿಕಾರಿಯನ್ನಾಗಿ ಈ ಮೂಲಕ ನೇಮಿಸುತ್ತದೆ.

ಈ ವಿಚಾರಣೆಗಾಗಿ ಶ್ರೀ ಎಂ. ಜಿ. ಹಿರೇಮಠ್ ಅವರು ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 22 ಸೇಇವಿ 2007, ದಿನಾಂಕ 11-04-2008ರಲ್ಲಿ ನಿಗದಿಪಡಿಸಿರುವ ರೂ. 8,000/- (ಎಂಟು ಸಾವಿರ ರೂಪಾಯಿಗಳು) ಗೌರವಧನವನ್ನು ಹಾಗೂ 1,500/- (ಒಂದು ಸಾವಿರದ ಐದುನೂರು ರೂಪಾಯಿಗಳು) ವಾಹನ ಭತ್ಯೆಯನ್ನು ಪಡೆಯುತ್ತಾರೆ.

ವಿಚಾರಣಾಧಿಕಾರಿಗಳಿಗೆ ಸ್ಥಳಾವಕಾಶ ಶೀಘ್ರಲಿಪಿಗಾರರ ಸೇವೆ ಲೇಖನ ಸಾಮಗ್ರಿ ಇತ್ಯಾದಿಗಳನ್ನು ಒದಗಿಸಲು ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ರವರು ಕ್ರಮ ಕೈಗೊಳ್ಳುತ್ತಾರೆ. ವಿಚಾರಣೆಯನ್ನು ಆರು ತಿಂಗಳೊಳಗಾಗಿ ಮುಕ್ತಾಯಗೊಳಿಸಿ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಂ. ಎಸ್. ಶಿವರಾಮ್)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2090 ಯುವಜನ ಸೇವಾ ಇಲಾಖೆ

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ, ರಾಣೇಬೆನ್ನೂರ ತಾಲ್ಲೂಕು ಯಕಲಾಸಪೂರ ಏತ ನೀರಾವರಿ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನ್ಯಾಯಾಲಯದ ಆದೇಶಾನುಸಾರ ಹೆಚ್ಚುವರಿ ಪರಿಹಾರಧನ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ/ರವರ ದಿನಾಂಕ 09-06-2010ರ ಪತ್ರ ಸಂಖ್ಯೆ ಮುಇಂ/ಸನೀ/(ಉ)ವ/ಬಿಜಾ/ಭೂಸ್ವಾಪ್ರ/2010-11/3378.

***

ಪ್ರಸ್ತಾವನೆ :

ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಹಾವೇರಿ ಜಿಲ್ಲೆ, ರಾಣಿಬೆನ್ನೂರು ತಾಲ್ಲೂಕು, ಯಕಲಾಸಪೂರ ಏತ ನೀರಾವರಿ ಯೋಜನೆಗಾಗಿ ಸ್ವಾಧೀನ ಪಡಿಸಿಕೊಂಡ ಯಲ್ಲಾಪುರ ತರ್ಫ್ ಮೇಡ್ಲೇರಿ ಗ್ರಾಮದ ಜಮೀನುಗಳಿಗೆ ನ್ಯಾಯಾಲಯವು ನೀಡಿರುವ ತೀರ್ಪಿನನುಸಾರ ಹೆಚ್ಚುವರಿ ಪರಿಹಾರ ಧನ ಪಾವತಿಸಲು ರೂ. 6,81,661-00 ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಹೆಚ್ಚುವರಿ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 11-06-1998.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ ೫೫(ಎ) ರಡಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ರಚಿಸಿದ ದಿನಾಂಕ 30-05-2001.

ಭೂಸ್ವಾಧೀನಕ್ಕೊಳಪಟ್ಟ ಯಲ್ಲಾಪೂರ ತರ್ಫ್ ಮೇಡ್ಲೇರಿ ಗ್ರಾಮದ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳು ರಚಿಸಿದ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಇನ್ನೂ ಹೆಚ್ಚಿನ ಪರಿಹಾರ ನೀಡುವಂತೆ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ರಾಣಿಬೆನ್ನೂರು (ಹಿರಿಯ ಶ್ರೇಣಿ) ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣವನ್ನು ದಾಖಲಿಸಿದ್ದು, ಈ ಪ್ರಕರಣಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಗತ್ಯ ಇಲ್ಲವೆಂದು ಕಂದಾಯ ಇಲಾಖೆಯು ಪತ್ರ ಸಂಖ್ಯೆ ಆರ್‌ಡಿ 1230 ಎಲ್‌ಸಿಬಿ 2008 ದಿನಾಂಕ 23-05-2009ರಲ್ಲಿ ಅಭಿಪ್ರಾಯ ನೀಡಿರುತ್ತದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣದ ವಿವರ ಕೆಳಕಂಡಂತಿದೆ.

ಕ್ರಸಂ.	ಎಲ್‌ಎಸಿ ಸಂಖ್ಯೆ	ಯಲ್ಲಾಪೂರ ತರ್ಪಿ ಮೇಡ್ಲೇರಿ ಗ್ರಾಮದ ಸ.ನಂ.	ವಿಸ್ತೀರ್ಣ ಎ.ಗುಂ.	ಪರಿಹಾರ ಮೊತ್ತ ಲಕ್ಷ ರೂ.ಗಳಲ್ಲಿ
1	29/2003	42/1, 42/2	1-11	6,81,661-00

ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 86 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ 05ನೇ ಆಗಸ್ಟ್, 2010

ಹಾವೇರಿ ಜಿಲ್ಲೆ, ರಾಣಿಬೆನ್ನೂರು ತಾಲ್ಲೂಕು ಯಕಲಾಸಪೂರ ಏತ ನೀರಾವರಿ ಯೋಜನೆಗಾಗಿ ಸ್ವಾಧೀನ ಪಡಿಸಿಕೊಂಡ ಯಲ್ಲಾಪೂರ ತರ್ಪಿ ಮೇಡ್ಲೇರಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಹಾಕಿದ ಪರಿಹಾರ ಧನದ ಮೊತ್ತ ರೂ. 6,81,661-00 ಗಳನ್ನು (ಆರು ಲಕ್ಷ ಎಂಭತ್ತೊಂದು ಸಾವಿರದ ಆರುನೂರು ಅರವತ್ತೊಂದು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ 16-05-2008 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಹೆಚ್. ಎಸ್. ಉದಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2091

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು ರಂಗಯ್ಯನದುರ್ಗ ಜಲಾಶಯದ ನಿರ್ಮಾಣ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನ್ಯಾಯಾಲಯದ ಆದೇಶಾನುಸಾರ ಹೆಚ್ಚುವರಿ ಪರಿಹಾರಧನ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರುರವರ ದಿನಾಂಕ 21/06/2010ರ ಪತ್ರ ಸಂಖ್ಯೆ : ಮುಸದ:ಲೆಶಾಕೆ:ಲೆಸ-1:ಭೂಸ್ವಾಧೀನ 10-11/1424.

***

ಪ್ರಸ್ತಾವನೆ :

ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು, ರಂಗಯ್ಯನದುರ್ಗ ಜಲಾಶಯದ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಮಠದ ಜೋಗಿಹಳ್ಳಿ ಗ್ರಾಮದ ಜಮೀನುಗಳಿಗೆ ನ್ಯಾಯಾಲಯವು ನೀಡಿರುವ ತೀರ್ಪಿನನುಸಾರ ಹೆಚ್ಚುವರಿ ಪರಿಹಾರ ಧನ ಪಾವತಿಸಲು ರೂ. 5,52,070-00 ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಹೆಚ್ಚುವರಿ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 02-09-2004
- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 11(ಎ) ರಡಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ರಚಿಸಿದ ದಿನಾಂಕ 07-04-2006.

ಭೂಸ್ವಾಧೀನಕ್ಕೊಳಪಟ್ಟ ಮಠದ ಜೋಗಿಹಳ್ಳಿ ಗ್ರಾಮದ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳು ರಚಿಸಿದ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಇನ್ನೂ ಹೆಚ್ಚಿನ ಪರಿಹಾರ ನೀಡುವಂತೆ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಚಳ್ಳಕೆರೆ (ಹಿರಿಯ ಶ್ರೇಣಿ) ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣವನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಗತ್ಯ ಇಲ್ಲವೆಂದು ಕಂದಾಯ ಇಲಾಖೆಯು ಪತ್ರ ಸಂಖ್ಯೆ ಆರ್‌ಡಿ 18 ಎಲ್‌ಎಸಿ 2009 ದಿನಾಂಕ 05-01-2009ರಲ್ಲಿ ಅಭಿಪ್ರಾಯ ನೀಡಿರುತ್ತದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣದ ವಿವರ ಕೆಳಕಂಡಂತಿದೆ.

ಕ್ರಸಂ.	ಎಲ್‌ಎಸಿ ಸಂಖ್ಯೆ	ಮಠದ ಜೋಗಿಹಳ್ಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ.ಗುಂ.	ಪರಿಹಾರ ಮೊತ್ತ ಲಕ್ಷ ರೂ.ಗಳಲ್ಲಿ
1	2/2008	8/2 (ಖುಷ್ಕಿ)	1-10	1,68,147-00
2	3/2008	10/2(ನೀರಾವರಿ)	1-39	3,83,923-00
			ಒಟ್ಟು	5,52,070-00

ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 89 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ 05ನೇ ಆಗಸ್ಟ್, 2010

ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು, ರಂಗಯ್ಯನದುರ್ಗ ಜಲಾಶಯದ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಮಠದ ಜೋಗಿಹಳ್ಳಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಹಾಕಿದ ಪರಿಹಾರ ಧನದ ಮೊತ್ತ ರೂ. 5,52,070-00 ಗಳನ್ನು (ಐದು ಲಕ್ಷ ಐವತ್ತೆರಡು ಸಾವಿರದ ಎಪ್ಪತ್ತು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು" ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ 16-05-2008 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಹೆಚ್. ಎಸ್. ಉದಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2092

REVENUE SECRETARIAT

CIRCULAR

RD 220 ASD 2010, Bengaluru, dated 31-07-2010

Sub :- Issuing of Bogus Certificates of Scheduled Castes and Scheduled Tribes to ineligible persons.

Ref :- NHRC's D.O. No. 10-01-2010-PRP & P, dated 19-01-2010

***

The Joint Secretary NHRC, New Delhi in the letter dt. 19-01-2010 has stated that, The National Human Rights Commission is deeply concerned about the protection of the rights of disadvantaged sections of the society like Scheduled Castes and Scheduled Tribes. In the meeting of the Statutory Full Commission held on 20-11-2009, the Commission noted that the issue of bogus caste certificate is becoming a serious issue and adequate remedial measures are not being taken in this regard by the concerned authorities. Use of bogus certificate by ineligible persons is depriving genuine candidates belonging to SCs and STs from the opportunities in Government jobs and educational institutions. It is a serious matter of concern that such incidents are on increase day by day.

The Commission desire that a fool-proof mechanism may be put in place by the concerned authorities to ensure that no bogus caste certificate is issued to non-eligible persons and the persons resorting to such practices and using such bogus certificate are brought to book in an efficient and effective manner and requested to take necessary action in this regard immediately.

The issue of bogus certificates to ineligible persons is a serious matter. The ineligible persons having obtained bogus certificates are depriving the eligible persons belonging to SCs and STs from opportunities in Government jobs and Educational Institutions.

Therefore, all Regional Commissioners, Deputy Commissioners, Assistant Commissioners and Tahsildars are hereby strictly instructed to take appropriate legal actions against those who secure and using such bogus certificates.

(S. B. Sasalatti)
Under Secretary to Governent
Revenue Department (Services-3)

P.R. 2093

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕು ಉಳಿಮೇಶ್ವರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಧನ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 09/06/2010ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾಭೂಸ್ವಾಪ್ರ/2009-10/3379.

***

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜನಿಯರ್ ರವರ ಪತ್ರದಲ್ಲಿ ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕು ಉಳಿಮೇಶ್ವರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ

ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 18-09-2003
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 07-02-2005.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಕುಷ್ಟಗಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಿಂದ ತೃಪ್ತರಾಗದ ಭೂಮಾಲೀಕರು ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಲಿಂಗಸೂಗೂರು ಸಿವಿಲ್ ನ್ಯಾಯಾಲಯದಲ್ಲಿ ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ಪಡೆದುಕೊಂಡಿದ್ದಾರೆ. ಈ ತೀರ್ಪಿನಲ್ಲಿ ಸಿವಿಲ್ ನ್ಯಾಯಾಲಯವು ಪ್ರತಿ ಎಕರೆಗೆ ರೂ. 70,000/-ಗಳನ್ನು ನಿಗದಿಪಡಿಸಿತ್ತು. ಈ ದರವನ್ನು ಸಹ ಒಪ್ಪದೇ ಕೆಲವು ಪ್ರಕರಣಗಳಲ್ಲಿ ಜಿಲ್ಲಾ ನ್ಯಾಯಾಲಯದಲ್ಲಿ ಎಂ.ಎ. ಹಾಗೂ ಕೆಲವು ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯದಲ್ಲಿ ಎಂ.ಎಫ್.ಎ. ಪ್ರಕರಣಗಳನ್ನು ದಾಖಲಿಸಿದ್ದು ಈ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ಪ್ರತಿ ಎಕರೆಗೆ ರೂ. 81,600/-ಗಳನ್ನು ನಿಗದಿಪಡಿಸಿದೆ.

ಉಚ್ಚ ನ್ಯಾಯಾಲಯದ ಎಂಎಫ್ಎ ಪ್ರಕರಣಗಳ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ಪತ್ರ ಸಂಖ್ಯೆ: ಲಾ 1192 ಎಲ್ಎಸ್‌ಪಿ 2008, ದಿನಾಂಕ 02-08-2008ರಂದು ಅಭಿಪ್ರಾಯ ನೀಡಿದೆ. ಜಿಲ್ಲಾ ನ್ಯಾಯಾಲಯದಲ್ಲಿ ಪ್ರಕರಣಗಳ ತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ : ಆರ್‌ಡಿ 696 ಎಲ್‌ಸಿಜಿ 2009, ದಿನಾಂಕ 15-05-09ರಲ್ಲಿ ಅಭಿಪ್ರಾಯ ನೀಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ.

ಕ್ರ.ಸಂ.	ಎಲ್ಎಸಿ ಸಂಖ್ಯೆ	ಎಂಎಫ್ಎ	ಎಂಎ	ಸ.ನಂ.	ವಿಸ್ತೀರ್ಣ ಎ-ಗುಂ	ಗ್ರಾಮ	ಪರಿಹಾರ ಮೊತ್ತ (ರೂ.ಗಳಲ್ಲಿ)
1	240/06	–	20/07	87/5	1-00	ಬನ್ನಿಗೋಳ	51407
2	241/06	–	26/07	89	0-32	ಬನ್ನಿಗೋಳ	40982
3	242/06	–	21/07	95/1	0-30	ಬನ್ನಿಗೋಳ	38376
4	243/06	–	25/07	96/1/1	0-22	ಬನ್ನಿಗೋಳ	28101
5	244/06	–	22/07	102/3	0-06	ಬನ್ನಿಗೋಳ	9900
6	245/06	7514/07	–	102/4	2-24	ಬನ್ನಿಗೋಳ	129594
7	246/06	7515/07	–	102/5	1-00	ಉಳಿಮೇಶ್ವರ	112054
8	247/06	7618/07	–	103/3	1-20	ಬನ್ನಿಗೋಳ	74471
9	248/06	–	27/07	104	0-20	ಬನ್ನಿಗೋಳ	25340
10	249/06	7617/07	–	141/2	2-00	ಬನ್ನಿಗೋಳ	133704
11	250/06	–	23/07	147/1	1-00	ಬನ್ನಿಗೋಳ	51408
12	251/06	7693/07	–	142/2	4-10	ಬನ್ನಿಗೋಳ	212279
13	252/06	7692/07	–	142/3	4-00	ಬನ್ನಿಗೋಳ	199749
14	253/06	–	24/07	60.1	1-00	ಉಳಿಮೇಶ್ವರ	51408
						ಒಟ್ಟು	1158773

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 85 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ 04ನೇ ಆಗಸ್ಟ್, 2010

ರಾಯಚೂರು ಜಿಲ್ಲೆ, ಲಿಂಗಸೂಗೂರು ತಾಲ್ಲೂಕು ಉಳಿಮೇಶ್ವರ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬನ್ನಿಗೋಳ ಮತ್ತು ಉಳಿಮೇಶ್ವರ ಗ್ರಾಮಗಳ ಮೇಲ್ಕಂಡ ಸರ್ವೆ ನಂಬರ್‌ಗಳಿಗೆ ಸೇರಿದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ., ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕ ಹಾಕಿದ ಪರಿಹಾರ ಧನ ಮೊತ್ತ ರೂ. 11,58,773-00 ಗಳನ್ನು (ಹನ್ನೊಂದು ಲಕ್ಷದ ಐವತ್ತೆಂಟು ಸಾವಿರದ ಏಳುನೂರ ಎಪ್ಪತ್ಮೂರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16-05-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಹೆಚ್. ಎಸ್. ಉದಯಕುಮಾರ್)

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2094

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಹಾವೇರಿ ಜಿಲ್ಲೆ, ರಾಣಿಬೆನ್ನೂರು ತಾಲ್ಲೂಕು ಅಸುಂಡಿ ನಾಲಾ ಯೋಜನೆಗಾಗಿ ಸ್ವಾಧೀನಪಡಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಧನ ಪಾವತಿಸುವ ಕುರಿತು

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 26/05/2010ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2010-11/3168.

***

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಹಾವೇರಿ ಜಿಲ್ಲೆ, ರಾಣಿಬೆನ್ನೂರು ತಾಲ್ಲೂಕು ಅಸುಂಡಿ ನಾಲಾ ಯೋಜನೆಯ ಕುದ್ರಿಹಾಳ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕುದ್ರಿಹಾಳ ಗ್ರಾಮದ ಜಮೀನುಗಳಿಗೆ ರಾಣಿಬೆನ್ನೂರು ಸಿವಿಲ್ ನ್ಯಾಯಾಲಯವು (ಹಿರಿಯ ಶ್ರೇಣಿ) ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 29-12-1983
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ 23-05-1990.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ರಾಣಿಬೆನ್ನೂರು ಸಿವಿಲ್ ನ್ಯಾಯಾಲಯ (ಹಿರಿಯ ಶ್ರೇಣಿ)ದಲ್ಲಿ ಭೂಸಾಧೀನ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ : ಆರ್‌ಡಿ 601 ಎಲ್‌ಎಸಿ(ಎಲ್‌ಸಿ) 2007, ದಿನಾಂಕ 31-01-2008ರಲ್ಲಿ ಅಭಿಪ್ರಾಯ ನೀಡಿದೆ. ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕಣಗಳ ವಿವರ ಕೆಳಕಂಡಂತಿದೆ :

ಕ್ರಸಂ.	ಎಲ್‌ಎಸಿ ಸಂಖ್ಯೆ	ಬೇವಿನಹಳ್ಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ ರೂ.ಗಳಲ್ಲಿ
1	2/95	132/1	0-09	73065
2	6/95	132/2	0-36	292080
			ಒಟ್ಟು	**365145**

*ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 76 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ 06ನೇ ಆಗಸ್ಟ್, 2010

ಹಾವೇರಿ ಜಿಲ್ಲೆ, ರಾಣಿಬೆನ್ನೂರು ತಾಲ್ಲೂಕು ಅಸುಂಡಿ ನಾಲಾ ಯೋಜನೆಯ ಕುದ್ರಿಹಾಳ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಕುದ್ರಿಹಾಳ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸ.ನಂ.ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಹಾಕಿದ ಪರಿಹಾರ ಧನ ಮೊತ್ತ ರೂ. 3,65,145-00 ಗಳನ್ನು (ಮೂರು ಲಕ್ಷದ ಅರವತ್ತೈದು ಸಾವಿರದ ನೂರ ನಲವತ್ತೈದು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16-05-2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಹೆಚ್. ಎಸ್. ಉದಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2095

ಜಲ ಸಂಪನ್ಮೂಲ ಸಚಿವಾಲಯ

ವಿಷಯ : ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು ಸೋಮನಕೊಪ್ಪ ಸಣ್ಣ ನೀರಾವರಿ ಕೆರೆ ಕೋಡಿ ನಿರ್ಮಾಣ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನ್ಯಾಯಾಲಯದ ಆದೇಶಾನುಸಾರ ಹೆಚ್ಚುವರಿ ಪರಿಹಾರಧನ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 03/06/2010ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2009–10/3273.

***

ಪ್ರಸ್ತಾವನೆ :

ಮುಖ್ಯ ಇಂಜನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ಪತ್ರದಲ್ಲಿ ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು ಸೋಮನಕೊಪ್ಪ ಸಣ್ಣ ನೀರಾವರಿ ಕೆರೆ ಕೋಡಿ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಸೋಮನಕೊಪ್ಪ ಗ್ರಾಮದ ಜಮೀನುಗಳಿಗೆ ನ್ಯಾಯಾಲಯವು ನೀಡಿರುವ ತೀರ್ಪಿನನುಸಾರ ಹೆಚ್ಚುವರಿ ಪರಿಹಾರ ಧನ ಪಾವತಿಸಲು ರೂ. 2,34,833–00 ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಹೆಚ್ಚುವರಿ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ 12–05–2005
- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ ೩೩(ಎ) ರಡಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ರಚಿಸಿದ ದಿನಾಂಕ 07–03–2006.

ಭೂಸ್ವಾಧೀನಕ್ಕೊಳಪಟ್ಟ ಸೋಮನಕೊಪ್ಪ ಗ್ರಾಮದ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳು ರಚಿಸಿದ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಇನ್ನೂ ಹೆಚ್ಚಿನ ಪರಿಹಾರ ನೀಡುವಂತೆ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಧಾರವಾಡ (ಹಿರಿಯ ಶ್ರೇಣಿ) ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣವನ್ನು ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಗತ್ಯ ಇಲ್ಲವೆಂದು ಕಂದಾಯ ಇಲಾಖೆಯು ಪತ್ರ ಸಂಖ್ಯೆ ಆರ್‌ಡಿ 743 ಎಲ್‌ಸಿಬಿ 2009 ದಿನಾಂಕ 17–03–2009ರಲ್ಲಿ ಅಭಿಪ್ರಾಯ ನೀಡಿರುತ್ತದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣದ ವಿವರ ಕೆಳಕಂಡಂತಿದೆ.

ಕ್ರಸಂ.	ಎಲ್‌ಎಸಿ ಸಂಖ್ಯೆ	ಸೋಮನಕೊಪ್ಪ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ ಲಕ್ಷ ರೂ.ಗಳಲ್ಲಿ
1	118/2006	72/1	0–28	2,34,833–00

ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 78 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ 05ನೇ ಆಗಸ್ಟ್, 2010

ಧಾರವಾಡ ಜಿಲ್ಲೆ, ಕಲಘಟಗಿ ತಾಲ್ಲೂಕು ಸೋಮನಕೊಪ್ಪ ಸಣ್ಣ ನೀರಾವರಿ ಕೆರೆ ಕೋಡಿ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಸೋಮನಕೊಪ್ಪ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಹಾಕಿದ ಪರಿಹಾರ ಧನದ ಮೊತ್ತ ರೂ. 2,34,833–00 ಗಳನ್ನು (ಎರಡು ಲಕ್ಷದ ಮುವತ್ತಾಲ್ಕು ಸಾವಿರದ ಎಂಟುನೂರ ಮೂವತ್ಮೂರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಹೆಚ್. ಎಸ್. ಉದಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2096

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯದ ವಿವಿಧ ಪ್ರಮುಖ ಪ್ರವಾಸಿ ಕೇಂದ್ರಗಳಲ್ಲಿ ಸಿಮೆಂಟ್ ಕಾಂಕ್ರೀಟ್ ಹೆಲಿಪ್ಯಾಡ್‌ಗಳನ್ನು ನಿರ್ಮಿಸುವ ಬಗ್ಗೆ.

ಓದಲಾಗಿದೆ : 1) ಆದೇಶ ಸಂಖ್ಯೆ ಮೂಅಇ 110 ರಾಅವಿ 2006 ದಿನಾಂಕ : 22-02-2007

2) ಅಪರ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ಇವರ ಪತ್ರ ಸಂಖ್ಯೆ : ಕಂದಾಯ/ಎಂಎಸ್‌ಸಿ/124/2006-07/823. ದಿನಾಂಕ : 13-05-2010

* * *

ಪ್ರಸ್ತಾವನೆ :

ಮೇಲೆ ಕ್ರ.ಸಂ. 1 ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ : 22-02-2007ರಲ್ಲಿ ರಾಜ್ಯದ ಪ್ರಮುಖ 20 ಸ್ಥಳಗಳಲ್ಲಿ ಶಾಶ್ವತ (ಸಿಮೆಂಟ್ ಕಾಂಕ್ರೀಟ್) ಹೆಲಿಪ್ಯಾಡ್‌ಗಳನ್ನು ನಿರ್ಮಿಸಲು ಅನುಮೋದನೆ ನೀಡಿ ಪ್ರತಿ ಹೆಲಿಪ್ಯಾಡ್‌ಗೆ ಗರಿಷ್ಠ ರೂ. 10.00 ಲಕ್ಷಗಳ ಬಿಡುಗಡೆಗೆ ಮಂಜೂರಾತಿ ನೀಡಿರುತ್ತದೆ. ಈ ಆದೇಶದಂತೆ ಸಂಬಂಧಿಸಿದ ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಸ್ಥಳಗಳಲ್ಲಿ ಹೆಲಿಪ್ಯಾಡ್ ನಿರ್ಮಿಸಲು ಪ್ರತಿ ಹೆಲಿಪ್ಯಾಡ್‌ಗೆ ರೂ. 10.00 ಲಕ್ಷದಂತೆ ಹಣವನ್ನು ಪೇಯಿಸ್ ರಸೀತಿಯ ಮೂಲಕ ಪಡೆದುಕೊಂಡಿರುತ್ತಾರೆ. ಆದರೆ ಜಿಲ್ಲಾಧಿಕಾರಿಗಳು, ರಾಯಚೂರು ಇವರು ಹೆಲಿಪ್ಯಾಡ್ ನಿರ್ಮಾಣಕ್ಕೆ ಮಂಜೂರಾಗಿರುವ ರೂ. 10.00 ಲಕ್ಷಗಳನ್ನು ಇದುವರೆಗೂ ಪಡೆಯದೆ ಇರುವುದರಿಂದ ಈ ವಿಷಯವನ್ನು ಪುನರ್ ಪರಿಶೀಲಿಸಿದೆ. ವಿಮಾನ ಇಳಿದಾಣ ನಿರ್ಮಿಸಲು ಕ್ರಮ ಕೈಗೊಳ್ಳುತ್ತಿರುವುದರಿಂದ ಇಲ್ಲಿ ಹೆಲಿಪ್ಯಾಡ್ ನಿರ್ಮಿಸುವ ಪ್ರಸ್ತಾವನೆಯನ್ನು ಕೈಬಿಡಲು ಸರ್ಕಾರ ನಿರ್ಧರಿಸಿರುವುದರಿಂದ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಮೂಅಇ 110 ರಾಅವಿ 2006, ಬೆಂಗಳೂರು, ದಿನಾಂಕ : 6ನೇ ಜುಲೈ, 2010

ರಾಯಚೂರು ಜಿಲ್ಲೆಯಲ್ಲಿ ವಿಮಾನ ಇಳಿದಾಣ ನಿರ್ಮಿಸಲು ಸರ್ಕಾರ ನಿರ್ಧರಿಸಿರುವುದರಿಂದ ರಾಯಚೂರಿನಲ್ಲಿ ಹೆಲಿಪ್ಯಾಡ್ ನಿರ್ಮಿಸಲು ಈ ಹಿಂದೆ ನೀಡಿದ್ದ ಮಂಜೂರಾತಿಯನ್ನು ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಎಸ್. ವೇಣುಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),

ಪಿ.ಆರ್. 2106 ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆಯ ಅಧೀನದಲ್ಲಿ ಬರುವ ಕ್ಷೇತ್ರ ಇಲಾಖೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ಕಾರ್ಯ ನಿರ್ವಹಣಾ ವರದಿಗಳು) ನಿಯಮಗಳು 2000 ರನ್ವಯ ಗ್ರೂಪ್ ಎ ಮತ್ತು ಬಿ ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಪರಿಶೀಲನೆ ಮಾಡಲು ವರದಿ ಪ್ರಾಧಿಕಾರ/ಪರಿಶೀಲನಾ ಪ್ರಾ./ಅಂಗೀಕಾರ ಪ್ರಾ.ಗಳನ್ನು ಗುರುತಿಸುವ ಬಗ್ಗೆ.

ಪ್ರಸ್ತಾವನೆ :

ಕರ್ನಾಟಕ ನಾಗರೀಕ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು 2000ರಲ್ಲಿನ ನಿಯಮಗಳು ದಿ : 1-4-2000ದಿಂದ ಜಾರಿಗೆ ಬಂದಿದ್ದು, ಅದರನ್ವಯ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಕ್ಷೇತ್ರೀಯ ಇಲಾಖೆಗಳಲ್ಲಿ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಅಧಿಕಾರಿಗಳ ವರ್ಷದ ಏಪ್ರಿಲ್ 1ನೇ ದಿನಾಂಕದಿಂದ ಮುಂದಿನ ವರ್ಷದ ಮಾರ್ಚ್ 31ನೇ ದಿನಾಂಕದವರೆಗೆ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಯಾರು ನಮೂದಿಸಬೇಕೆಂಬ ಬಗ್ಗೆ ನಿರ್ಧಿಷ್ಟವಾಗಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ನಿಯಮ 11ರನ್ವಯ ಕಾರ್ಯನಿರ್ವಹಣಾ ವರದಿಯ ಬಗ್ಗೆ ವರದಿ ಮಾಡುವ ಪ್ರಾಧಿಕಾರ/ಪರಿಶೀಲನಾ ಪ್ರಾಧಿಕಾರ ಮತ್ತು ಅಂಗೀಕಾರ ಪ್ರಾಧಿಕಾರಗಳನ್ನು ನಿಗದಿಪಡಿಸುವುದು ಸದರಿ ನಿಯಮಗಳ ನಿಯಮ 3(3)ರ ಪ್ರಕಾರ ಕಾರ್ಯನಿರ್ವಹಣಾ ವರದಿಗಳ ಸಂರಕ್ಷಣಾ ಪ್ರಾಧಿಕಾರ ಮತ್ತು ನಿಯಮ 9ರನ್ವಯ ಸೂಕ್ತ ಪ್ರಾಧಿಕಾರ ನಿಗದಿಪಡಿಸುವುದು ಅವಶ್ಯಕವಾಗಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 150 ಸ್ಥೀಮರ 2010, ಬೆಂಗಳೂರು, ದಿನಾಂಕ : 3ನೇ ಆಗಸ್ಟ್ 2010

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು 2000ದ ನಿಯಮ 11ರನ್ವಯ ಕನ್ನಡ ಮತ್ತು ಸಂಸ್ಕೃತಿ ಮತ್ತು ವಾರ್ತಾ ಇಲಾಖೆಯ ಕ್ಷೇತ್ರೀಯ ಇಲಾಖೆಗಳ ಗ್ರೂಪ್-ಎ ಮತ್ತು ಗ್ರೂಪ್-ಬಿ ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿ ಬಗ್ಗೆ ವರದಿ ಮಾಡುವ ಪ್ರಾಧಿಕಾರ/ಪರಿಶೀಲನಾ ಪ್ರಾಧಿಕಾರ ಮತ್ತು ಅಂಗೀಕಾರ ಪ್ರಾಧಿಕಾರಗಳನ್ನು ಅನುಬಂಧದಲ್ಲಿ ಸೂಚಿಸಿರುವಂತೆ ನಿಗದಿಪಡಿಸಿದೆ.

ಕರ್ನಾಟಕ ನಾಗರೀಕ ಸೇವಾ (ಕಾರ್ಯನಿರ್ವಹಣಾ ವರದಿಗಳು) 2000ದ ನಿಯಮ 9ರನ್ವಯ ಗ್ರೂಪ್-ಎ ವೃಂದ ಅಧಿಕಾರಿಗಳ ಕಾರ್ಯನಿರ್ವಹಣಾ ವರದಿಯಲ್ಲಿ ಪ್ರತಿಕೂಲ ಷರಾವಿದ್ದಲ್ಲಿ, ಸರ್ಕಾರದ ಉಪ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ, ಇವರು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸುವ ಅಧಿಕಾರ ಹೊಂದಿರುತ್ತಾರೆ. ಗ್ರೂಪ್ ಬಿ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಇಲಾಖಾ ಮುಖ್ಯಸ್ಥರು ಅಧಿಕಾರ ಹೊಂದಿರುತ್ತಾರೆ. ಸದರಿ ನಿಯಮಗಳ ನಿಯಮ 3(3) ರನ್ವಯ ಇಲಾಖಾ ಮುಖ್ಯಸ್ಥರು ಹಾಗೂ ಕೆ.ಎ.ಎಸ್. ಗ್ರೂಪ್-ಎ ಹಿರಿಯ ಶ್ರೇಣಿ ಅಧಿಕಾರಿಗಳು ಕಾರ್ಯನಿರ್ವಹಣಾ ವರದಿಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿ ಸಂರಕ್ಷಿಸಲು ಹಾಗೂ ಇನ್ನಿತರ ಗ್ರೂಪ್-ಎ ವೃಂದದ ಅಧಿಕಾರಿಗಳ ಕಾರ್ಯನಿರ್ವಹಣಾ ವರದಿಗಳನ್ನು ಇಲಾಖೆಯ ಕಾರ್ಯದರ್ಶಿಯವರ ಆಪ್ತ ಶಾಖೆಯಲ್ಲಿ ಸಂರಕ್ಷಿಸಿಡತಕ್ಕದ್ದು. ಗ್ರೂಪ್-ಬಿ ವೃಂದದ ಅಧಿಕಾರಿಗಳ ಕಾರ್ಯನಿರ್ವಹಣಾ ವರದಿಯನ್ನು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಸಂರಕ್ಷಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ಕೆ. ಧರ್ಮರಾಜಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ,

ಅನುಬಂಧ

ದಿನಾಂಕ : 3–8–2010ರ ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 150 ಸ್ವೀಮರ 2010ಕ್ಕೆ

ಗ್ರೂಪ್ – ಎ

ಇಲಾಖೆ	ಪದನಾಮ	ವರದಿ ಪ್ರಾಧಿಕಾರ	ಪರಿಶೀಲನಾ ಪ್ರಾಧಿಕಾರ	ಅಂಗೀಕರಿಸುವ ಪ್ರಾಧಿಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ	ನಿರ್ದೇಶಕರು	ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ/ಸಂಬಂಧಿಸಿದ ಇಲಾಖಾ ಮಂತ್ರಿಗಳು
	ಜಂಟಿ ನಿರ್ದೇಶಕರು	ನಿರ್ದೇಶಕರು	ಕಾರ್ಯದರ್ಶಿಗಳು	ಕಾರ್ಯದರ್ಶಿ/ಸಂಬಂಧಿಸಿದ ಇಲಾಖಾ ಮಂತ್ರಿಗಳು
	ಉಪ ನಿರ್ದೇಶಕರು	ಜಂಟಿ ನಿರ್ದೇಶಕರು	ನಿರ್ದೇಶಕರು	ಕಾರ್ಯದರ್ಶಿಗಳು
ವಾರ್ತಾ ಇಲಾಖೆ	ನಿರ್ದೇಶಕರು	ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ/ಸಂಬಂಧಿಸಿದ ಇಲಾಖಾ ಮಂತ್ರಿಗಳು
	ಜಂಟಿ ನಿರ್ದೇಶಕರು	ನಿರ್ದೇಶಕರು	ಕಾರ್ಯದರ್ಶಿ	ಕಾರ್ಯದರ್ಶಿ/ಸಂಬಂಧಿಸಿದ ಇಲಾಖಾ ಮಂತ್ರಿಗಳು
	ಉಪ ನಿರ್ದೇಶಕರು ಅಥವಾ ತತ್ಸಮಾನ ಹುದ್ದೆ	ಜಂಟಿ ನಿರ್ದೇಶಕರು	ನಿರ್ದೇಶಕರು	ಕಾರ್ಯದರ್ಶಿ
ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ಇಲಾಖೆ	ನಿರ್ದೇಶಕರು	ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ/ಸಂಬಂಧಿಸಿದ ಇಲಾಖಾ ಮಂತ್ರಿಗಳು
	ಉಪ ನಿರ್ದೇಶಕರು ಅಥವಾ ತತ್ಸಮಾನ ಯಾವುದೇ ಗ್ರೂಪ್–ಎ ಅಧಿಕಾರಿ	ಜಂಟಿ ನಿರ್ದೇಶಕರು ಇಲ್ಲದಿದ್ದ ಪಕ್ಷದಲ್ಲಿ ನಿರ್ದೇಶಕರು	ಕಾರ್ಯದರ್ಶಿ	ಕಾರ್ಯದರ್ಶಿ
ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ	ಆಯುಕ್ತರು	ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ/ಸಂಬಂಧಿಸಿದ ಇಲಾಖಾ ಮಂತ್ರಿಗಳು
	ಉಪ ನಿರ್ದೇಶಕರು	ಆಯುಕ್ತರು	ಕಾರ್ಯದರ್ಶಿಗಳು	ಕಾರ್ಯದರ್ಶಿಗಳು
ಪತ್ರಾಗಾರ ಇಲಾಖೆ	ನಿರ್ದೇಶಕರು	ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ/ಸಂಬಂಧಿಸಿದ ಇಲಾಖಾ ಮಂತ್ರಿಗಳು
	ಉಪ ನಿರ್ದೇಶಕರು ಅಥವಾ ತತ್ಸಮಾನ ಹುದ್ದೆ ಪತ್ರಪಾಲಕರು	ಉಪ ನಿರ್ದೇಶಕರು	ನಿರ್ದೇಶಕರು	ಕಾರ್ಯದರ್ಶಿ
ಗೆಜೆಟಿಯರ್ ಇಲಾಖೆ	ಮುಖ್ಯ ಸಂಪಾದಕರು	ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ	ಮುಖ್ಯ ಕಾರ್ಯದರ್ಶಿ/ಸಂಬಂಧಿಸಿದ ಇಲಾಖಾ ಮಂತ್ರಿಗಳು
ಕನ್ನಡ ಅಭಿವೃದ್ಧಿ ಪ್ರಾಧಿಕಾರ	ಕಾರ್ಯದರ್ಶಿ	ಅಧ್ಯಕ್ಷರು	ಅಧ್ಯಕ್ಷರು	ಅಧ್ಯಕ್ಷರು
ಕಾವಾ	ಡೀನ್	ಕಾರ್ಯದರ್ಶಿ	ಕಾರ್ಯದರ್ಶಿ	ಕಾರ್ಯದರ್ಶಿ
ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ	ಆಯುಕ್ತರು	ಜಿಲ್ಲಾಧಿಕಾರಿಗಳು	ಕಾರ್ಯದರ್ಶಿ	ಕಾರ್ಯದರ್ಶಿ

ಗ್ರೂಪ್ – ಬಿ

ಇಲಾಖೆ	ಪದನಾಮ	ವರದಿ ಪ್ರಾಧಿಕಾರ	ಪರಿಶೀಲನಾ ಪ್ರಾಧಿಕಾರ	ಅಂಗೀಕರಿಸುವ ಪ್ರಾಧಿಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ	ಸಹಾಯಕ ನಿರ್ದೇಶಕರು	ಉಪ ನಿರ್ದೇಶಕರು ಇಲ್ಲದಿದ್ದಲ್ಲಿ ಜಂಟಿ ನಿರ್ದೇಶಕರು	ನಿರ್ದೇಶಕರು	ನಿರ್ದೇಶಕರು
ವಾರ್ತಾ ಇಲಾಖೆ	ಸಹಾಯಕ ನಿರ್ದೇಶಕರು ಅಥವಾ ತತ್ಸಮಾನ ಹುದ್ದೆ	ಉಪ ನಿರ್ದೇಶಕರು	ಜಂಟಿ ನಿರ್ದೇಶಕರು	ನಿರ್ದೇಶಕರು

ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ಇಲಾಖೆ	ಸಹಾಯಕ ನಿರ್ದೇಶಕರು	ಉಪ ನಿರ್ದೇಶಕರು	ಜಂಟಿ ನಿರ್ದೇಶಕರಿಲ್ಲದಿದ್ದಲ್ಲಿ ನಿರ್ದೇಶಕರು	ನಿರ್ದೇಶಕರು
ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ	ಸಹಾಯಕ ನಿರ್ದೇಶಕರು	ಉಪ ನಿರ್ದೇಶಕರು	ಜಂಟಿ ನಿರ್ದೇಶಕರಿಲ್ಲದಿದ್ದಲ್ಲಿ ನಿರ್ದೇಶಕರು	ನಿರ್ದೇಶಕರು
	ತಾಂತ್ರಿಕ ಸಹಾಯಕರು	ಉಪ ನಿರ್ದೇಶಕರಿಲ್ಲದಿದ್ದಲ್ಲಿ ಜಂಟಿ ನಿರ್ದೇಶಕರು	ಆಯುಕ್ತರು	ಆಯುಕ್ತರು
ಪತ್ರಾಗಾರ ಇಲಾಖೆ	ಸಹ ಪತ್ರಪಾಲಕರು ಅಥವಾ ತತ್ಸಮಾನ ಹುದ್ದೆ	ಪತ್ರಪಾಲಕರು	ಉಪ ನಿರ್ದೇಶಕರು	ನಿರ್ದೇಶಕರು
ಗೆಜೆಟಿಯರ್ ಇಲಾಖೆ	ಹಿರಿಯ ಸಂಪಾದಕರು / ಸಂಪಾದಕರು	ಮುಖ್ಯ ಸಂಪಾದಕರು	ಕಾರ್ಯದರ್ಶಿ	ಕಾರ್ಯದರ್ಶಿ

ಎಂ. ಕೆ. ಧರ್ಮರಾಜಪ್ಪ

ಪಿ.ಆರ್. 2107

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ,

ಸಹಕಾರ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು ಇದರ ಆಡಳಿತಗಾರರ ಅವಧಿ ವಿಸ್ತರಿಸುವ ಕುರಿತು.

ಓದಲಾಗಿದೆ : 1. ಸಹಕಾರ ಸಂಘಗಳ ನಿಬಂಧಕರ ಆದೇಶ ಸಂಖ್ಯೆ : ಎಲ್‌ಡಿಬಿ 2/84/ ಚುನಾವಣೆ/2009-10 ದಿನಾಂಕ : 28-04-2010

2. ಸಹಕಾರ ಸಂಘಗಳ ನಿಬಂಧಕರ ಪತ್ರಸಂಖ್ಯೆ : ಎಲ್‌ಡಿಬಿ. 2/84/ಚುನಾವಣೆ/2009-10 ದಿನಾಂಕ : 14-07-2010

* * *

ಪ್ರಸ್ತಾವನೆ :

ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರ 2010-11 ರಿಂದ 2014-15 ರ ಅವಧಿಗೆ ಬ್ಯಾಂಕಿನ ಆಡಳಿತ ಮಂಡಳಿಯನ್ನು ರಚಿಸಲು ಅಗತ್ಯವಾದ ಕೋರಂ ಆಗಲು ಸಾಧ್ಯವಿಲ್ಲವೆಂದು ಪರಿಗಣಿಸಿ ಬ್ಯಾಂಕಿಗೆ ಮೇಲೆ ಓದಲಾದ (1)ರ ಸಹಕಾರ ಸಂಘಗಳ ನಿಬಂಧಕರ ಆದೇಶದಲ್ಲಿ ಆಡಳಿತಗಾರರನ್ನು 3 ತಿಂಗಳ ಅವಧಿಗೆ ನೇಮಿಸಲಾಗಿದೆ. ಈ ಆದೇಶದಂತೆ ಸದರಿ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರ ಚುನಾವಣೆಯನ್ನು ದಿನಾಂಕ : 28-07-2010ರೊಳಗೆ ನಡೆಸಬೇಕಾಗಿತ್ತು.

ಆದರೆ ಬ್ಯಾಂಕಿನ ಉಪ ನಿಯಮ ಸಂಖ್ಯೆ : 24(1) ರಂತೆ 27 ಜನ ಚುನಾಯಿತ ಪ್ರತಿನಿಧಿಗಳು ಇರಲು ಅವಕಾಶ ಇದ್ದು, ಕರ್ನಾಟಕ ಸಹಕಾರ ಸಂಘಗಳ ನಿಯಮ 14 (ಇ) ರನ್ವಯ ಬ್ಯಾಂಕಿನ ಆಡಳಿತ ಮಂಡಳಿಯನ್ನು ರಚಿಸಲು ಅಗತ್ಯವಾದ ಕೋರಂ ಆಗಲು ಈಗ ಸಹಿತ ಸಾಧ್ಯವಿಲ್ಲವೆಂದು ತೀರ್ಮಾನಿಸಿ ಈ ಕುರಿತು ಸಹಕಾರ ಸಂಘಗಳ ನಿಬಂಧಕರಿಗೆ ಕಸ್ಕಾರ್ಡ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಈ ಕುರಿತು ವರದಿ ನೀಡಿರುತ್ತಾರೆ. ಬ್ಯಾಂಕಿನ ಉಪನಿಯಮ ಸಂಖ್ಯೆ : 24(1) ರನ್ವಯ ಆಡಳಿತ ಮಂಡಳಿ ರಚಿಸಲು ಸಾಕಷ್ಟು ಕೋರಂ ಇಲ್ಲದಿರುವುದರಿಂದ ಕಸ್ಕಾರ್ಡ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರು ಸಲ್ಲಿಸಿರುವ ಪ್ರಸ್ತಾವನೆಯನ್ನು ಬ್ಯಾಂಕಿನ ಆಡಳಿತಾವಧಿಯನ್ನು ವಿಸ್ತರಿಸಲು ಬ್ಯಾಂಕಿನಿಂದ ಬಂದ ಪ್ರಸ್ತಾವನೆಯನ್ನು ಪರಿಗಣಿಸಬಹುದಾಗಿದೆ. ಈಗಿನ ಆಡಳಿತಗಾರರಾದ ಶ್ರೀ ಸುಭಾಷ್ ಚಂದ್ರ, ಸಹಕಾರ ಸಂಘಗಳ ಅಪರ ನಿಬಂಧಕರು ಇವರು ದಿನಾಂಕ : 31-07-2010ಕ್ಕೆ ನಿವೃತ್ತರಾಗುವುದರಿಂದ ಅವರ ನಂತರ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರನ್ನು ಆಡಳಿತಗಾರರಾಗಿ ನೇಮಕಾತಿ ಮಾಡಬೇಕೆಂದು ಮೇಲೆ ಓದಲಾದ (2)ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು ಸರ್ಕಾರವನ್ನು ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈಗ ಆಡಳಿತಗಾರರ ಅವಧಿಯನ್ನು 3 ತಿಂಗಳಿಗಿಂತ ಹೆಚ್ಚಿನ ಅವಧಿಗೆ ವಿಸ್ತರಿಸುವುದು ಅನಿವಾರ್ಯವಾಗಿರುತ್ತದೆ. ಏಕೆಂದರೆ ಕನಿಷ್ಠ ಕೋರಂಗೆ ಬೇಕಾದಷ್ಟು ಸದಸ್ಯರು ಚುನಾಯಿತರಾಗಬೇಕಾದಷ್ಟು ಪಿಕಾರ್ಡ್ ಬ್ಯಾಂಕುಗಳು ಅರ್ಹತೆ ಹೊಂದಿರುವುದಿಲ್ಲ. ಆದ್ದರಿಂದ ಈ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರವು 6 ತಿಂಗಳಿಗೆ ಚುನಾವಣೆ ಜರುಗಿಸಲು ಅನುಮತಿಸಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 98ಕ್ಯೂನಲ್ಲಿ ಅಧಿಕಾರ ಹೊಂದಿರುತ್ತದೆ.

ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಒ 144 ಸಿಎಲ್‌ಎಂ 2010, ಬೆಂಗಳೂರು, ದಿನಾಂಕ : 30ನೇ ಜುಲೈ, 2010

ಪ್ರಸ್ತಾವನೆಯಲ್ಲಿ ವಿವರಿಸಿದ ಸಂಗತಿಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 98ಕ್ಕೂ (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ, ಬೆಂಗಳೂರು ಇದರ ಆಡಳಿತಗಾರರ ಅವಧಿಯನ್ನು ದಿನಾಂಕ : 28-07-2010 ರಿಂದ 28-01-2011 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಸಹಕಾರ ಸಂಘಗಳ ನಿಬಂಧಕರು, ಇವರನ್ನು ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತ, ಬೆಂಗಳೂರು ಇದರ ಆಡಳಿತಗಾರರನ್ನಾಗಿ ದಿನಾಂಕ : 31-07-2010ರಿಂದ ನೇಮಿಸಲಾಗಿದೆ. ಆಡಳಿತಗಾರರು ದಿನಾಂಕ : 28-01-2011 ರೊಳಗೆ ಮೇಲ್ಕಂಡ ಸಂಘಕ್ಕೆ ಚುನಾವಣೆ ನಡೆಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

ಪಿ.ಆರ್. 2108

ಸಹಕಾರ ಸಚಿವಾಲಯ

ವಿಷಯ : ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಕಕಮರಿ ತಾ : ಅಥಣಿ, ಬೆಳಗಾವಿ ಜಿಲ್ಲೆ ಇದರ ಆಡಳಿತಗಾರರ ಅವಧಿ ವಿಸ್ತರಣೆ ಕುರಿತು.

ಓದಲಾಗಿದೆ : 1. ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚಿಕ್ಕೋಡಿ ಇವರ ಆದೇಶ ಸಂಖ್ಯೆ : ಎಆರ್-1/ಆರ್‌ಎಸ್‌ಆರ್/416/2010-11 ದಿನಾಂಕ : 23-03-2010 ಹಾಗೂ 25-05-2010

2. ಆಡಳಿತಗಾರರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಕಕಮರಿ ತಾ: ಅಥಣಿ ಬೆಳಗಾವಿ ಜಿಲ್ಲೆ ಇವರ ಪತ್ರ ದಿನಾಂಕ : 10-06-2010.

* * *

ಪ್ರಸ್ತಾವನೆ :

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೇಲೆ ಓದಲಾದ 1ರ ಆದೇಶದಲ್ಲಿ ಮೇಲ್ಕಂಡ ಸಂಘಕ್ಕೆ ಆಡಳಿತಗಾರರನ್ನು ನೇಮಿಸಿ ತದನಂತರ ಆಡಳಿತಗಾರರ ಅವಧಿಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28ಎ(5)ರಡಿಯಲ್ಲಿ ದಿನಾಂಕ : 23-07-2010ರವರೆಗೆ ವಿಸ್ತರಿಸಿ ಆದೇಶ ಮಾಡಿರುತ್ತಾರೆ. ತದನಂತರ ದಿನಾಂಕ : 15-07-2010ರಂದು ಚುನಾವಣೆ ದಿನಾಂಕವನ್ನು ನಿಗದಿಪಡಿಸಲಾಗಿದ್ದರೂ ಸಹ ಆಡಳಿತ ಮಂಡಳಿಯ ಸ್ಥಾನಕ್ಕೆ ಯಾವುದೇ ನೋಟೀಸ್ ಅಥವಾ ಪ್ರಮಾಣಪತ್ರ ಸ್ವೀಕೃತವಾಗಿಲ್ಲವೆಂದು ವರದಿ ಸಲ್ಲಿಸಿ ಈ ಕಾರಣದಿಂದಾಗಿ ಆಡಳಿತಗಾರರ ಅವಧಿಯನ್ನು ಮೂರು ತಿಂಗಳು ಅವಧಿಗೆ ವಿಸ್ತರಿಸಲು ವಿನಂತಿಸಿರುತ್ತಾರೆ. ಮೇಲೆ ಓದಲಾದ 2ರ ಪತ್ರದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ, ಕಕಮರಿ ತಾ; ಅಥಣಿ ಬೆಳಗಾವಿ ಜಿಲ್ಲೆ ಇದರ ಆಡಳಿತಗಾರರು ಜೂನ್ ತಿಂಗಳವರೆಗೆ ಸಾಲ ವಸೂಲಿ ಹಾಗೂ ಮುಂಗಾರು ಹಂಗಾಮಿನ ಮಳೆ ಪ್ರಾರಂಭವಾಗಿರುವುದರಿಂದ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರ ಚುನಾವಣೆ ಜರುಗಿಸಲು ಆಡಳಿತಾತ್ಮಕವಾಗಿ ಅಡಚಣೆ ಉಂಟಾಗುತ್ತಿದೆ. ಬಹಳಷ್ಟು ರೈತ ಸದಸ್ಯರು ಮುಂಗಾರು ಬಿತ್ತನೆ ಕಾರ್ಯದಲ್ಲಿ ನಿರತರಾಗಿದ್ದು ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಸಂಭವ ಕಡಿಮೆ ಇರುವುದರಿಂದ ಬ್ಯಾಂಕಿನ ಹಾಗೂ ಸದಸ್ಯರ ಹಿತದೃಷ್ಟಿಯಿಂದ ಆಡಳಿತಗಾರರ ಅವಧಿಯನ್ನು ವಿಸ್ತರಿಸಬೇಕೆಂದು ಪತ್ರದಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 98ಕ್ಕೂ ಪ್ರಕಾರ ಅನಿವಾರ್ಯ ಪ್ರಸಂಗಗಳಲ್ಲಿ ಚುನಾವಣೆಗಳನ್ನು ಮುಂದೂಡಲು/ ಅನುಮತಿ ನೀಡಲು ಸರ್ಕಾರಕ್ಕೆ ಅಧಿಕಾರವಿರುತ್ತದೆ. ಆದುದರಿಂದ ಸದರಿ ಸಂಘದ ಚುನಾವಣೆಯನ್ನು ಆರು ತಿಂಗಳ ಅವಧಿಗೆ ಮಂದೂಡಲು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಒ 121 ಸಿಎಲ್‌ಎಂ 2010, ಬೆಂಗಳೂರು, ದಿನಾಂಕ : 30ನೇ ಜುಲೈ, 2010

ಪ್ರಸ್ತಾವನೆಯಲ್ಲಿ ವಿವರಿಸಿದ ಸಂಗತಿಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 98ಕ್ಕೂ (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕಕಮರಿ ತಾ : ಅಥಣಿ ಬೆಳಗಾವಿ ಜಿಲ್ಲೆ ಇದರ ಆಡಳಿತಗಾರರ ಅವಧಿಯನ್ನು ದಿನಾಂಕ : 24-07-2010 ರಿಂದ 23-01-2011ರವರೆಗೆ ವಿಸ್ತರಿಸಿ ಆದೇಶಿಸಿದೆ ಹಾಗೂ ಬ್ಯಾಂಕ್ ನಿರೀಕ್ಷಕರು, ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ಅಥಣಿ ಶಾಖೆ ಇವರನ್ನು ಆಡಳಿತಗಾರರನ್ನಾಗಿ ಮುಂದುವರಿಸಲಾಗಿದೆ. ಆಡಳಿತಗಾರರು ದಿನಾಂಕ : 23-01-2011ರೊಳಗೆ ಮೇಲ್ಕಂಡ ಸಂಘಕ್ಕೆ ಚುನಾವಣೆ ನಡೆಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್.ಎಸ್. ನೂಲಿ

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

ಪಿ.ಆರ್. 2109

ಸಹಕಾರ ಸಚಿವಾಲಯ

ವಿಷಯ : ಸಮಗ್ರ ಗ್ರಾಮ ಸೇವಾ ಸಮಿತಿ, ಚಿಂಚಖಂಡಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ.

ಓದಲಾಗಿದೆ :
1. ಸಹಕಾರ ಸಂಘಗಳ ನಿಬಂಧಕರವರ ಪತ್ರ ಸಂಖ್ಯೆ : ಆರ್‌ಸಿಎಸ್/ಎಡಿಎಂ/63/ಎಸ್‌ಒಆರ್/ 2008-09, ದಿನಾಂಕ : 30-12-2009
2. ಸರ್ಕಾರದ ಸಮ ಸಂಖ್ಯೆಯ ಕಾರಣ ಕೇಳುವ ಸೂಚನಾ ಪತ್ರ ದಿನಾಂಕ : 28-01-2010.
3. ಅಧ್ಯಕ್ಷರು ಮತ್ತು ಕಾರ್ಯದರ್ಶಿ, ಸಮಗ್ರ ಗ್ರಾಮ ಸೇವಾ ಸಮಿತಿ, ಚಿಂಚಖಂಡಿ, ಮುಧೋಳ ಇವರು ಕಾರಣ ಕೇಳುವ ಸೂಚನಾ ಪತ್ರಕ್ಕೆ ನೀಡಿರುವ ಉತ್ತರ ದಿನಾಂಕ : 13-02-2010.
4. ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರ ಪತ್ರ ಸಂಖ್ಯೆ : ಆರ್‌ಸಿಎಸ್/ಎಡಿಎಂ/63/ಎಸ್‌ಒಆರ್/2008-09 ದಿನಾಂಕ : 19-06-2010.

* * *

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ : 30-12-2009ರ ಪತ್ರದಲ್ಲಿ ಸಮಗ್ರ ಗ್ರಾಮ ಸೇವಾ ಸಮಿತಿ, ಚಿಂಚಖಂಡಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ, ಈ ಸಂಘದಲ್ಲಿ ಮೋಟ ನಿಯಮದ ವಿರುದ್ಧವಾದ ಕಾರ್ಯಚಟುವಟಿಕೆಗಳು ಜರುಗುತ್ತಿವೆ ಎಂಬ ಬಗ್ಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 25ರ ರೀತ್ಯಾ ವಿಚಾರಣೆ ನಡೆಸಿ ಸಹಕಾರ ಸಂಘಗಳ ಉಪನಿಬಂಧಕರು, ಬಾಗಲಕೋಟೆರವರು ಸಂಘದ ವ್ಯವಹಾರದ ಬಗ್ಗೆ ನಡೆಸಲಾದ ವಿಚಾರಣಾ ವರದಿಯಲ್ಲಿ ಕರ್ನಾಟಕ ಸಂಘಗಳ ನೊಂದಣಿ ಕಾಯ್ದೆ 1960ರ ನಿಯಮಗಳನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಸದರಿ ಕಾಯ್ದೆಯ ಕಲಂ 27-ಎ ರನ್ವಯ ಆಡಳಿತಾಧಿಕಾರಿಯನ್ನು ನೇಮಕಾತಿ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಅಧ್ಯಕ್ಷರು/ಕಾರ್ಯದರ್ಶಿಗಳು, ಸಮಗ್ರ ಗ್ರಾಮ ಸೇವಾ ಸಮಿತಿ, ಚಿಂಚಖಂಡಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ರವರಿಗೆ ಕಾರಣ ಕೇಳುವ ಸೂಚನಾ ಪತ್ರವನ್ನು ಕಳುಹಿಸಿ ಸಂಸ್ಥೆಯ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು ನಿಯಮಾನುಸಾರ ಪ್ರತಿ ವರ್ಷ ನಡೆಸದೆಯಿರುವುದು, 2004-05 ರಿಂದ 2006-07 ರವರೆಗೆ ಸಭೆ ಜರುಗಿಸದೆ ಇರುವುದು, ಸಭೆ ಜರುಗಿಸಿದ ಅವಧಿಯಲ್ಲಿ ಲೆಕ್ಕಪರಿಶೋಧನೆಯಾದ ಹಣಕಾಸು ತಃಖ್ತೆಗಳನ್ನು ನೋಂದಣಾಧಿಕಾರಿಗಳ ಕಛೇರಿಗೆ ಸಲ್ಲಿಸದೇ ಇರುವುದು, ಸಂಘದ 2002-03 ರಿಂದ 2007-08 ನೇ ಸಾಲಿನ ಸರ್ವ ಸದಸ್ಯರ ದಾಖಲೆಗಳನ್ನು ಪರಿಶೀಲಿಸಲಾಗಿ ಕಲಂ 11ನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದು ಹಾಗೂ ಕಲಂ 11 (1) ರ ಸ್ಪಷ್ಟ ಉಲ್ಲಂಘನೆಯಾಗಿರುವುದು, ಸಂಘದ ಬೈಲಾ ನಿಯಮ 4 ರಂತೆ ಆಡಳಿತ ಮಂಡಳಿಯನ್ನು ಸರಿಯಾದ ಸಮಯಕ್ಕೆ ನಡೆಸದೆ ಕರ್ನಾಟಕ ಸಂಘಗಳ ನೋಂದಣಿ ನಿಯಮ 7ರ ಉಲ್ಲಂಘನೆ, ಸಂಘದ ಹಣಕಾಸಿನ ಅವ್ಯವಹಾರ ಜರುಗಿರುವುದು, ಲೆಕ್ಕಪತ್ರ ಹಾಗೂ ಇತರೆ ದಾಖಲಾತಿ ನಿರ್ವಹಣೆಯಲ್ಲಿ ಲೋಪದೋಷಗಳು ಕಂಡು ಬಂದಿದ್ದು, ಹಿಂದಿನ ಆಡಳಿತ ಮಂಡಳಿಯ ಅವ್ಯವಹಾರಗಳನ್ನು ಸರಿಪಡಿಸಲು ಈಗಿನ ಆಡಳಿತ ಮಂಡಳಿಯು ಸೂಕ್ತ ಕ್ರಮ ಕೈಕೊಳ್ಳುವಲ್ಲಿ ವಿಫಲತೆ ಈ ಎಲ್ಲಾ ಲೋಪದೋಷಗಳನ್ನು ಸರಿಪಡಿಸಲು ಸದರಿ ಸಂಸ್ಥೆಯ ಹಿತದೃಷ್ಟಿಯಿಂದ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 25(1) ರನ್ವಯ ವಿಚಾರಣೆ ನಡೆಸಿ ಸಂಘದಲ್ಲಿ ಇರುವ ಲೋಪಗಳು ಆಗಿರುವುದರಿಂದ ಹಾಲಿ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಸಂಘವನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ಅನುವಾಗುವಂತೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27(ಎ)ರ ಪ್ರಕಾರ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬಾರದು ಎಂಬ ಬಗ್ಗೆ ಲಿಖಿತ ಹೇಳಿಕೆಯನ್ನು ಸೂಚನಾ ಪತ್ರ ತಲುಪಿದ 15 ದಿವಸಗಳೊಳಗಾಗಿ ಸರ್ಕಾರಕ್ಕೆ ತಿಳಿಸಿ ಸೂಚನಾ ಪತ್ರವನ್ನು ಹೊರಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ : (3) ರಲ್ಲಿ ಅಧ್ಯಕ್ಷರು/ ಕಾರ್ಯದರ್ಶಿಗಳು, ಸಮಗ್ರ ಗ್ರಾಮ ಸೇವಾ ಸಮಿತಿ, ಚಿಂಚಖಂಡಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ರವರು ಸರ್ಕಾರದ ಕಾರಣ ಕೇಳುವ ಸೂಚನಾ ಪತ್ರಕ್ಕೆ ಉತ್ತರ ನೀಡುತ್ತಾ ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಬಾರದೆಂದು ಕೇಳಿಕೊಂಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (4) ರಲ್ಲಿ ಸಹಕಾರ ಸಂಘಗಳ ಉಪ ನಿಬಂಧಕರು, ಬಾಗಲಕೋಟೆ ರವರು ಸದರಿ ಸಂಘದವರು ಸಲ್ಲಿಸಿದ ಉತ್ತರಗಳನ್ನು ಗಮನಿಸಲಾಗಿ ವಿಚಾರಣಾ ಅವಧಿಯಲ್ಲಿ ಕಂಡು ಬಂದ ಲೋಪದೋಷಗಳಿಗೆ ಸಮಾಧಾನಕರ ಉತ್ತರಗಳನ್ನು ಸಲ್ಲಿಸಿರುವುದಿಲ್ಲ. ವಿಚಾರಣಾಧಿಕಾರಿಗಳು ಆಡಳಿತಾಧಿಕಾರಿಯನ್ನು ನೇಮಿಸಲು ವಿಚಾರಣಾ ವರದಿಯಲ್ಲಿ ನೀಡಿದ ಅಭಿಪ್ರಾಯವು ಸರಿ ಇರುತ್ತದೆ. ಆದುದರಿಂದ ಸಮಗ್ರ ಗ್ರಾಮ ಸೇವಾ ಸಮಿತಿ ಚಿಂಚಖಂಡಿ, ಮುಧೋಳ ತಾಲ್ಲೂಕು ಇದಕ್ಕೆ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ಸಹಕಾರ ಸಂಘಗಳ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಸಂಬಂಧಿಸಿದ ದಾಖಲೆ ಹಾಗೂ ಸಹಕಾರ ಸಂಘಗಳ ನಿಬಂಧಕರು ಸಲ್ಲಿಸಿರುವ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಸಂಸ್ಥೆಗೆ ಸಂಘಗಳ ನೋಂದಣಿ ಕಾಯ್ದೆಯ 1960 ರ ಕಲಂ 27-ಎ ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವುದು ಸೂಕ್ತವೆಂದು ಪರಿಗಣಿಸಿ ಆಡಳಿತಾಧಿಕಾರಿಯನ್ನು ನೇಮಿಸಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಇ 05 ಸಸಂನೋ 2010, ಬೆಂಗಳೂರು, ದಿನಾಂಕ : 28ನೇ ಜುಲೈ, 2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಸಮಗ್ರ ಗ್ರಾಮ ಸೇವಾ ಸಮಿತಿ, ಚಿಂಚಖಂಡಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ ಈ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಈ ಕೆಳಕಂಡ ಲೋಪದೋಷಗಳು ಮೇಲ್ನೋಟಕ್ಕೆ ಕಂಡು ಬಂದಿವೆ.

(1) ವಾರ್ಷಿಕ ಮಹಾಸಭೆ 2004-05 ರಿಂದ 2006-07ರವರೆಗೆ ಜರುಗಿಸದೇ ಇರುವುದು.

(2) ಲೆಕ್ಕ ಪರಿಶೋಧನೆಯಾದ ಹಣಕಾಸು ತಃಖ್ತೆಗಳನ್ನು ನೋಂದಣಾಧಿಕಾರಿಗೆ ಸಲ್ಲಿಸದೇ ಇರುವುದು.

(3) ಹಣಕಾಸಿನ ಅವ್ಯವಹಾರ, ದಾಖಲೆಗಳ ನಿರ್ವಹಣೆಯಲ್ಲಿ ಲೋಪದೋಷ.

(4) ನೋಂದಣಿ ಕಾಯ್ದೆ ಕಲಂ 7, 11 ಸಂಘದ ಬೈಲಾ ಉಲ್ಲಂಘನೆ.

ಸದರಿ ಸಂಸ್ಥೆಯ ಹಿತದೃಷ್ಟಿಯಿಂದ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 27(ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬಾಗಲಕೋಟೆ ಇವರನ್ನು ಆಡಳಿತಾಧಿಕಾರಿಯನ್ನಾಗಿ ಆರು (6) ತಿಂಗಳ ಅವಧಿಗೆ ಅಥವಾ ಸದರಿ ಸಂಸ್ಥೆಗೆ ಚುನಾವಣೆ ನಡೆಸಿ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿಧೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಘದಲ್ಲಿ ಹಾಲಿ ನೋಂದಾಯಿತವಾಗಿರುವ ಸದಸ್ಯರುಗಳಿಂದ ಚುನಾವಣೆ ನಡೆಸಿ ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ನಂಜುಂಡಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಸಹಕಾರ ಇಲಾಖೆ.

ಪಿ.ಆರ್. 2110

ಶಿಕ್ಷಣ ಸಚಿವಾಲಯ

ಸುತ್ತೋಲೆ

ಸಂಖ್ಯೆ ಇಡಿ 153 ಯೋಸಕ 2010 ಬೆಂಗಳೂರು, ದಿನಾಂಕ : 06-08-2010

ವಿಷಯ : ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕಾಂಪೌಂಡ್ ಹಾಗೂ ದುರಸ್ತಿ ಮಾಡುವ ಬಗ್ಗೆ.

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಕಾಂಪೌಂಡ್ ನಿರ್ಮಾಣ ಹಾಗೂ ದುರಸ್ತಿಗೊಳಿಸಲು ಅನೇಕ ಪ್ರಸ್ತಾವನೆಗಳು ಬರುತ್ತಿದ್ದು, ರಾಜ್ಯ ವಲಯದಡಿ ಒದಗಿಸಿರುವ ಅನುದಾನದಿಂದ ಅವುಗಳಿಗೆ ಅನುದಾನ ನೀಡಲು ಅಸಾಧ್ಯವಾಗಿರುತ್ತದೆ. ಆದರೆ, ಶಾಲೆಗಳಿಗೆ ಕಾಂಪೌಂಡ್ ನಿರ್ಮಾಣ ಮತ್ತು ದುರಸ್ತಿ ಮಾಡಿಸುವುದು ಅತ್ಯಾವಶ್ಯಕವಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರುಗಳು ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಕಾಂಪೌಂಡ್ ಹಾಗೂ ದುರಸಿÛUÁV "National Rural Employment Guarantee Scheme"(ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ) ಅಡಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿ ಕಾರ್ಯ ಪ್ರವೃತ್ತರಾಗುವಂತೆ ಕೋರಲಾಗಿದೆ.

ಐ.ಎಫ್. ಮಾಗಿ
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ. (ಯೋಜನೆ)

ಪಿ.ಆರ್. ನಂ. 2124

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ದಿ. ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆಯು ಎನ್.ಸಿ.ಡಿ.ಸಿ. ಯಿಂದ ಪಡೆದಿರುವ ಸಾಲವನ್ನು ಮೃದು ಸಾಲವನ್ನಾಗಿ ಪರಿವರ್ತಿಸುವ ಬಗ್ಗೆ.

ಓದಲಾಗಿದೆ :
1. ದಿನಾಂಕ 22-07-2002ರ ಸಿಐಂಡಬ್ಲ್ಯೂ 111 ಸಸಕಾ 2000ನೇ ಸಂಖ್ಯೆಯ ಸರ್ಕಾರದ ಆದೇಶ.
2. ದಿನಾಂಕ 26-10-2002ರ ಸಿಐಂಡಬ್ಲ್ಯೂ 111 ಸಸಕಾ 2000ನೇ ಸಂಖ್ಯೆಯ ಸರ್ಕಾರದ ಆದೇಶ.
3. ದಿನಾಂಕ 18-11-2003ರ ಸಿಐಂಡಬ್ಲ್ಯೂ 34 ಸಸಕಾ 2003ನೇ ಸಂಖ್ಯೆಯ ಸರ್ಕಾರದ ಆದೇಶ.
4. ದಿನಾಂಕ 04-10-2005ರ ಸಿಐಂಡಬ್ಲ್ಯೂ 111 ಸಸಕಾ 2000ನೇ ಸಂಖ್ಯೆಯ ಸರ್ಕಾರದ ಆದೇಶ.
5. ದಿನಾಂಕ 22-02-2007ರ ಸಇ 233 ಸಸಕಾ 2006ನೇ ಸಂಖ್ಯೆಯ ಸರ್ಕಾರದ ಆದೇಶ.
6. ದಿ. ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ದಿನಾಂಕ 08-07-2008ರಂದು ಸಲ್ಲಿಸಿರುವ ಮನವಿ.
7. ದಿನಾಂಕ 04-09-2008 ಮತ್ತು 20-12-2008ರ ಡಿಎಸ್‌ಕೆ/ಎಫ್‌ಐಎನ್/65/2005-06ನೇ ಸಂಖ್ಯೆಯ ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರ ಪತ್ರಗಳು.

ಪ್ರಸ್ತಾವನೆ:

ಬೀದರ್ ಜಿಲ್ಲೆ ಭಾಲ್ಕಿಯ ದಿ. ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತದ ಸ್ಥಾಪನೆಗಾಗಿ ಎನ್.ಸಿ.ಡಿ.ಸಿ.ಯು. ರಾಜ್ಯ ಸರ್ಕಾರದ ಮೂಲಕ ಅವಧಿ ಸಾಲವನ್ನು ಮಂಜೂರು ಮಾಡಿದ್ದು, ಈ ಮೊತ್ತವನ್ನು ಕಾರ್ಖಾನೆಗೆ ಕೆಳಕಂಡಂತೆ ಬಿಡುಗಡೆ ಮಾಡಲಾಗಿರುತ್ತದೆ.

(ರೂ. ಲಕ್ಷಗಳಲ್ಲಿ)

ಕ್ರ.ಸಂ.	ಸರ್ಕಾರದ ಆದೇಶ ಮತ್ತು ದಿನಾಂಕ	ಮೊತ್ತ
1.	ಸಿಐಂಡಬ್ಲ್ಯೂ 111 ಸಸಕಾ 2000 ದಿನಾಂಕ 22-07-2002	1610.00
2.	ಸಿಐಂಡಬ್ಲ್ಯೂ 111 ಸಸಕಾ 2000 ದಿನಾಂಕ 26-10-2002	920.73
3.	ಸಿಐಂಡಬ್ಲ್ಯೂ 34 ಸಸಕಾ 2003 ದಿನಾಂಕ 18-11-2003	125.47

4.	ಸಿಎಂಡಬ್ಲ್ಯೂ 111 ಸಸಕಾ 2000 ದಿನಾಂಕ 04-10-2005	27.80
5.	ಸಇ 233 ಸಸಕಾ 2006 ದಿನಾಂಕ 22-02-2007	240.00
	ಒಟ್ಟು	2924.00

ದಿ. ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ದಿನಾಂಕ 08-07-2008ರಂದು ಮನವಿ ಸಲ್ಲಿಸಿ, ಕಾರ್ಖಾನೆಯು ಮರುಪಾವತಿಸಲು ಬಾಕಿಯಿರುವ ಮೇಲ್ಕಂಡ ಎನ್.ಸಿ.ಡಿ.ಸಿ. ಸಾಲ ಮತ್ತು ಅದರ ಮೇಲಿನ ಬಡ್ಡಿ ಸೇರಿ ಒಟ್ಟು ರೂ. 4822.47 ಲಕ್ಷಗಳನ್ನು ಷೇರು ಬಂಡವಾಳವನ್ನಾಗಿ ಅಥವಾ ಬಡ್ಡಿ ರಹಿತ ಸಾಲವನ್ನಾಗಿ ಪರಿವರ್ತಿಸಲು ಕೋರಿರುತ್ತಾರೆ.

ಕಾರ್ಖಾನೆಯ ಕೋರಿಕೆ ಬಗ್ಗೆ ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರು ದಿನಾಂಕ 04-09-2008ರ ಪತ್ರದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಕಾರ್ಖಾನೆಯು ತನ್ನ ಸಾಮರ್ಥ್ಯಕ್ಕನುಗುಣವಾಗಿ ಕಬ್ಬು ನುರಿಸದ ಕಾರಣ ಇದು ಪ್ರಾರಂಭವಾದಾಗಿನಿಂದ ಈವರೆವಿಗೂ ನಷ್ಟವನ್ನು ಅನುಭವಿಸುತ್ತಿದೆಯೆಂದೂ, ಕಾರ್ಖಾನೆ ಪಡೆದಿರುವ ಸಾಲವನ್ನು ಸರ್ಕಾರವು ಎನ್.ಸಿ.ಡಿ.ಸಿ.ಗೆ ಕಾಲಕಾಲಕ್ಕೆ ಮರುಪಾವತಿಸುತ್ತಿದೆಯೆಂದೂ, ಕಾರ್ಖಾನೆ ಅನುಭವಿಸುತ್ತಿರುವ ನಷ್ಟವನ್ನು ಕಡಿಮೆ ಮಾಡುವ ಸಲುವಾಗಿ ಕಾರ್ಖಾನೆಯಲ್ಲಿ ಸಹ ವಿದ್ಯುತ್ ಘಟಕ ಸ್ಥಾಪಿಸುವುದರಿಂದ ಕಾರ್ಖಾನೆಯ ಆದಾಯ ಹೆಚ್ಚಾಗಿ ಕಾರ್ಮಿಕರಿಗೆ ಮತ್ತು ರೈತಾಪಿ ವರ್ಗಕ್ಕೆ ಅನುಕೂಲವಾಗುತ್ತದೆಂದು ಮತ್ತು ಕಾರ್ಖಾನೆಯ ಕ್ರೋಢೀಕೃತ ನಷ್ಟದ ನಿಮಿತ್ತ ಹಣಕಾಸು ಸಂಸ್ಥೆಗಳು ಕಾರ್ಖಾನೆಗೆ ಉಪ ಘಟಕಗಳನ್ನು ಸ್ಥಾಪಿಸಲು ಆರ್ಥಿಕ ನೆರವು ನೀಡಲು ಮುಂದೆ ಬರುತ್ತಿಲ್ಲವಾದ್ದರಿಂದ ಕಾರ್ಖಾನೆಯ ನೆಟ್‌ವರ್ತನ್ನು ಸುಧಾರಿಸುವುದು ಅವಶ್ಯಕವಾಗಿದೆಯೆಂದೂ ತಿಳಿಸುತ್ತಾ, ಈ ಕಾರಣಗಳಿಂದಾಗಿ ಕಾರ್ಖಾನೆಯು ಎನ್.ಸಿ.ಡಿ.ಸಿ. ಯಿಂದ ಪಡೆದಿರುವ ಅವಧಿ ಸಾಲ ರೂ. 2924.00 ಲಕ್ಷ ಮತ್ತು ದಿನಾಂಕ 31-03-2008 ರವರೆಗೆ ಕ್ರೋಢೀಕೃತವಾಗಿರುವ ಬಡ್ಡಿ ರೂ. 1898.47 ಲಕ್ಷಗಳು ಸೇರಿ ಒಟ್ಟು ರೂ. 4822.47 ಲಕ್ಷಗಳನ್ನು ಸರ್ಕಾರದ ಷೇರು ಬಂಡವಾಳವನ್ನಾಗಿ ಪರಿವರ್ತಿಸಲು ಅಥವಾ ಬಡ್ಡಿ ರಹಿತ ಸಾಲವನ್ನಾಗಿ ಪರಿವರ್ತಿಸಲು ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದ ನಂತರ ಮೇಲ್ಕಂಡ ಅವಧಿ ಸಾಲ ರೂ. 2924.00 ಲಕ್ಷ ಮತ್ತು ದಿನಾಂಕ 31-03-2009 ರವರೆಗೆ ಕ್ರೋಢೀಕೃತವಾಗಿರುವ ಬಡ್ಡಿ ರೂ. 2201.00 ಲಕ್ಷಗಳನ್ನು ಸಹ ಪರಿಗಣಿಸಿ ಒಟ್ಟು ರೂ. 5125.00 ಲಕ್ಷಗಳನ್ನು ಮೃದು ಸಾಲವನ್ನಾಗಿ ಪರಿವರ್ತಿಸಲು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ವಾಕೈ 11 ಸಸಕಾ 2008, ಬೆಂಗಳೂರು, ದಿನಾಂಕ: 06.08.2010

ಬೀದರ್ ಜಿಲ್ಲೆ ಭಾಲ್ಕಿಯ ದಿ. ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತವು ಸರ್ಕಾರಕ್ಕೆ ಮರುಪಾವತಿಸಲು ಬಾಕಿ ಇರುವ ಎನ್.ಸಿ.ಡಿ.ಸಿ. ಸಾಲ ರೂ. 2924.00 ಲಕ್ಷಗಳು (ರೂ. 29.24 ಕೋಟಿ) ಮತ್ತು ದಿನಾಂಕ 31-03-2009 ರವರೆಗೆ ಕ್ರೋಢೀಕೃತವಾಗಿರುವ ಬಡ್ಡಿ ರೂ. 2201.00 ಲಕ್ಷಗಳು (ರೂ. 22.01 ಕೋಟಿ) ಸೇರಿ **ಒಟ್ಟು ರೂ. 5125.00 ಲಕ್ಷಗಳನ್ನು (ರೂ. 51.25 ಕೋಟಿಗಳನ್ನು) ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಮೃದು ಸಾಲವಾಗಿ (Soft Loan) ಪರಿವರ್ತಿಸಲು** ಸರ್ಕಾರದ ಅನುಮೋದನೆಯನ್ನು ನೀಡಲಾಗಿದೆ :-

(1) KERC ಅನುಮೋದಿಸಿರುವ ಸಾಮಾನ್ಯ ಲಾಭಾಂಶವನ್ನು ಒಳಗೊಂಡಂತೆ ವಿದ್ಯುತ್ತನ್ನು ಮೂಲ ಬೆಲೆಯಲ್ಲಿ ಮಾರಾಟ ಮಾಡುವ ಬಗ್ಗೆ ಕಾರ್ಖಾನೆಯು ರಾಜ್ಯದಲ್ಲಿ ತೀವ್ರ ವಿದ್ಯುತ್ ಕೊರತೆಯಿಂದಾಗಿ KERC costing ಸೂತ್ರಗಳಂತೆ GESCOM ಗೆ ವಿದ್ಯುತ್ ಸರಬರಾಜು ಮಾಡಲು ದೀರ್ಘಾವಧಿಯ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳತಕ್ಕದ್ದು. ಕಾರ್ಖಾನೆಗೆ ಸುಮಾರು ಶೇ. 80 ರಷ್ಟು ದೀರ್ಘಾವಧಿ ಆರ್ಥಿಕ ನೆರವನ್ನು ಸರ್ಕಾರವು ಈಗಾಗಲೇ ಒದಗಿಸಿದೆ ;

(2) ಸರ್ಕಾರದ ಸಾಲ ಮತ್ತು ಕ್ರೋಢೀಕೃತ ಬಡ್ಡಿಯನ್ನು ಸೇರಿ ಒಟ್ಟು ರೂ. 51.25 ಕೋಟಿಗಳು (ರೂ. 5125.00 ಲಕ್ಷಗಳು) **ಪ್ರತಿ ಅರ್ಧ ವಾರ್ಷಿಕ ಅವಧಿಯಲ್ಲಿ ರೂ. 2.5625 ಕೋಟಿಗಳನ್ನು (ರೂ. 256.25 ಲಕ್ಷಗಳು) 20 ಕಂತುಗಳಲ್ಲಿ** ಪಾವತಿಸುವಂತೆ ಸಾಲ ಮರುಪಾವತಿ ವಿಧಾನವನ್ನು ಮರು ವಿನ್ಯಾಸಗೊಳಿಸಬಹುದಾಗಿದೆ.

(3) ಮೇಲ್ಕಂಡಂತೆ ಮರುವಿನ್ಯಾಸಗೊಳಿಸಿದ ಸರ್ಕಾರದ ಸಾಲದ ಮರುಪಾವತಿಯನ್ನು ನಿರ್ವಹಿಸಲು ಅನುಕೂಲವಾಗುವಂತೆ ಕಾರ್ಖಾನೆಯು ಜಿಥಿಡಿಿಂತಿ ಚಿಥಿಥಿಿಂಣಟಿಣ ನ್ನು ತೆರೆಯುವುದು ;

(4) ಮರುವಿನ್ಯಾಸಗೊಳಿಸಿದ ಸಾಲದ ಮೇಲೆ ವಾರ್ಷಿಕ ಶೇ. 10ರ ಬಡ್ಡಿದರವನ್ನು ಕಾರ್ಖಾನೆಯು ಸಂದಾಯ ಮಾಡತಕ್ಕದ್ದು, ಕಾರ್ಖಾನೆಯು ಮರುವಿನ್ಯಾಸಗೊಳಿಸಿದ ಸಾಲವನ್ನು ಕ್ರಮಬದ್ಧವಾಗಿ ಮೇಲೆ ತಿಳಿಸಿದ (2)ರ ಪ್ರಕಾರ ಮರುಪಾವತಿಸಿದ್ದಲ್ಲಿ, ಬಡ್ಡಿಯನ್ನು ಈಕ್ವಿಟಿಯಾಗಿ ಪರಿವರ್ತಿಸಲು ಪರಿಶೀಲಿಸಲಾಗುವುದು ;

(5) ಕಾರ್ಖಾನೆಯು ಕೇಂದ್ರ ಸರ್ಕಾರ ಘೋಷಿಸಿರುವ ಕಬ್ಬಿನ ಕನಿಷ್ಠ ಬೆಂಬಲ ಬೆಲೆಗೆ ಸೀಮಿತಗೊಳಿಸಿ ರೈತರುಗಳಿಗೆ ಕಬ್ಬಿನ ಬೆಲೆಯನ್ನು ಪಾವತಿಸುವುದು. ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚುವರಿಯಾಗಿ ಪಾವತಿ ಮಾಡಬೇಕಾದಲ್ಲಿ, ವ್ಯತ್ಯಾಸದ ಮೊತ್ತವನ್ನು ಸದಸ್ಯರ ಈಕ್ವಿಟಿ ವಂತಿಕೆಯಾಗಿ ಕಾರ್ಖಾನೆಯಲ್ಲೇ ಉಳಿಸಿಕೊಳ್ಳಲು ಕ್ರಮ ಕೈಗೊಳ್ಳುವುದು. ಈ ಪದ್ದತಿಯನ್ನು ಕನಿಷ್ಠ 5 ವರ್ಷಗಳ ಅವಧಿಯವರೆಗೆ ಅಥವಾ ಕಾರ್ಖಾನೆಯು 3 ವರ್ಷಗಳು ನಿರಂತರವಾಗಿ ಲಾಭವನ್ನು ಹೊಂದುವವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರೆಸುವುದು ; ಮತ್ತು

(6) ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯವನ್ನು 5000 ಟಿ.ಸಿ.ಡಿ. ಗೆ ವಿಸ್ತರಿಸುವ ಯೋಜನೆಯನ್ನು ಕಾರ್ಖಾನೆಯು ಲಾಭ ಪಡೆಯುವ ಸಾಮರ್ಥ್ಯವನ್ನು ಹೊಂದುವವರೆಗೆ ತಡೆಹಿಡಿಯತಕ್ಕದ್ದು, ಪ್ರಸ್ತುತ ವಿದ್ಯುತ್ ಸಹ ಘಟಕವನ್ನು (cogen plant) ಸ್ಥಾಪಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳತಕ್ಕದ್ದು.

ಈ ಆದೇಶವನ್ನು ದಿನಾಂಕ 07-12-2009ರ ಎಫ್‌ಡಿ 78 ಆರ್‌ಎಲ್‌ಜಿ 08ರ ಮತ್ತು ದಿನಾಂಕ 02-02-2010ರ ಎಫ್‌ಡಿ 02 ಆರ್‌ಎಲ್‌ಜಿ 10ನೇ ಸಂಖ್ಯೆಯ ಅನಧಿಕೃತ ಟಿಪ್ಪಣಿಗಳಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2125

ಸಿ. ಶ್ರೀನಿವಾಸ್
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ(ಸಹಕಾರಿ ಸಕ್ಕರೆ)

FOREST, ECOLOGY AND ENVIRONMENT SECRETARIAT

Sub: Grant of quarry leases in respect of buildings materials such as sand, jelly, stones, boulders and laterite stones in forest areas of the Western Ghats region-relaxation given to Public Works Department and Ports and Inland Water Transport Department, Shimoga.

Read: 1. Government Order No. FEE 115 FFM 2001, dated : 26-02-2004.

2. Letter No. A5(6) GFL CR.. 35/09-10, dated : 30-07-2010 of the Principal Chief Conservator of Forests, Bangalore.

Preamble:

In Government Order read at (1) above, guidelines in the Annexure were issued by the State Government for grant of quarry lease in respect of building materials such as sand, jelly, stones, boulders and laterite stones in forest areas of the Western Ghats region of Karnataka.

The Principal Chief Conservator of Forests has sent additional information to Government in his letter dated : 30-07-2010 read at (2) above for Diversion of 18.00 ha. of forest land for quarrying of stones in Erekatte (Ft.Sy. No. 15), Harogoppa (Ft.Sy.No. 12) and Sidaginahal (Ft.Sy. No.1) villages in Shikaripura Taluka in favour of Executive Engineer, Public Works Department and Ports and Inland Water Transport Department, Shimoga.

He has further stated that since the material is required for development activities and the user agency is the Government Department, area was proposed for diversion. Further, this would help in controlling the entry of large number of private user agencies to the forest for quarrying purpose. Therefore, the condition Nos. 2,3,7,12,13 and 14 of G.O. No. FEE 115 FFM 2001, dated : 26-02-2004 may kindly be relaxed at Government level.

The proposal has been examined in detail and the following orders are issued.

Government Order No.: FEE 181 FFM 2009, Bangalore Dated: 03-08-2010

After considering the additional information of Principal Chief Conservator of Forests, Government are pleased to accord relaxation of Sl.No. 2,3,7,12,13 and 14 of the guidelines of the Annexure to the G.O. No. FEE 115 FFM 2001, dated : 26-02-2004 specifically for diversion of 18.00 ha. of forest land for quarrying of stones in Erekatte (Ft.Sy.No. 15), Harogoppa (Ft.Sy.No. 12) and Sidaginahal (Ft.Sy.No. 1) villages in Shikaripura Taluk in favour of Executive Engineer, Public Works Department and Ports and Inland Water Transport Department, Shimoga District.

This order issued with immediate effect and until further orders.

By Order and in the name of the Governor of Karnataka

H.M. MALLIKARJUNA SWAMY

P.R. No. 2127

Under Secretary to Government,

Forest, Ecology and Environment Department

ಕಂದಾಯ ಸಚಿವಾಲಯ

ವಿಷಯ : ಶ್ರೀ ಹೆಚ್. ನಂಜಯ್ಯ, ವಿಶೇಷ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ, ಬೆಂಗಳೂರು ಇವರನ್ನು ಸೇವೆಯಿಂದ ಅಮಾನತ್ತು ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ಇವರ ಪತ್ರ ಸಂಖ್ಯೆ : ಸಿಸಿಎ(2)ಸಿಆರ್/27/2010-11 ದಿನಾಂಕ : 4-8-2010.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ : 04-08-2010ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ರವರು ಶ್ರೀ ಹೆಚ್. ನಂಜಯ್ಯ, ವಿಶೇಷ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ, ಬೆಂಗಳೂರು ರವರು ದಿನಾಂಕ : 30-07-2010ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ರೂ. 10,000/- ಗಳ ಲಂಚ ಹಣ ಸ್ವೀಕರಿಸುತ್ತಿದ್ದ ಸಮಯದಲ್ಲಿ ಮಾನ್ಯ ಲೋಕಾಯುಕ್ತರವರ ಬಲೆಗೆ ಸಿಕ್ಕಿ ಬಿದ್ದಿದ್ದು, ಇವರನ್ನು ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ ನಗರ ವಿಭಾಗ, ಬೆಂಗಳೂರು ರವರ ಬಂಧನ ತಿಳುವಳಿಕೆ ಪತ್ರ ದಿನಾಂಕ : 30-07-2010 ರಂತೆ ದಸ್ತಗಿರಿ ಮಾಡಿದ್ದು, ದಿನಾಂಕ : 30-07-2010 ರಿಂದ 7-8-2010ರವರೆಗೆ ನ್ಯಾಯಾಂಗ ಬಂಧನದಲ್ಲಿರುತ್ತಾರೆ. ಈ ಹಿನ್ನೆಲೆಯಲ್ಲಿ, ಶ್ರೀ ಹೆಚ್. ನಂಜಯ್ಯ, ವಿಶೇಷ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ, ಬೆಂಗಳೂರು ಇವರನ್ನು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 10(2)(ಎ) ರಡಿಯಲ್ಲಿ ಅಮಾನತ್ತುಗೊಳಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಹೆಚ್. ನಂಜಯ್ಯ, ವಿಶೇಷ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ, ಬೆಂಗಳೂರು ರವರು ದಿನಾಂಕ : 30-07-2010 ರಂದು ರೂ. 10,000/-ಗಳ ಲಂಚ ಹಣ ಸ್ವೀಕರಿಸುತ್ತಿದ್ದ ಆರೋಪದ ಮೇಲೆ ಇವರನ್ನು ದಿನಾಂಕ : 30-07-2010 ರಿಂದ 07-08-2010 ರವರೆಗೆ ನ್ಯಾಯಾಂಗ ಬಂಧನದಲ್ಲಿ ಇರಿಸಿರುವುದರಿಂದ ಇವರನ್ನು ದಿನಾಂಕ : 30-07-2010 ರಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತಿನಲ್ಲಿಡಲು ತೀರ್ಮಾನಿಸಿದೆ. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ ಕಂಇ 43 ಎಡಿಇ 2010, ಬೆಂಗಳೂರು, ದಿನಾಂಕ: 09.08.2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 10(2) (ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಹೆಚ್. ನಂಜಯ್ಯ, ವಿಶೇಷ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ, ಬೆಂಗಳೂರು ಇವರನ್ನು ದಿನಾಂಕ : 30-07-2010 ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 98 ರನ್ವಯ ಜೀವನಾಧಾರ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಅನುಮತಿ ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2128

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಶ್ರೀ ಇಸ್ಲಾಉದ್ದೀನ್ ವಿಶೇಷ ತಹಶೀಲ್ದಾರರು ಚಡಚಣ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ, ಇವರನ್ನು ಸೇವೆಯಿಂದ ಬಿಡುಗಡೆಗೊಳಿಸುವ ಕುರಿತು.

ಓದಲಾಗಿದೆ :
1. ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 51 ಎಎಸ್‌ಡಿ 2008, ದಿನಾಂಕ : 23-05-2008.
2. ಸರ್ಕಾರದ ಅಧಿಸೂಚನೆ ಸಂಖ್ಯೆ : ಆರ್‌ಡಿ 515 ಎಎಸ್‌ಡಿ 2009, ದಿನಾಂಕ : 16-11-2009.
3. ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 83 ಆಸೇವ 2010, ದಿನಾಂಕ : 29-07-2010.
4. ಶ್ರೀ ಇಸ್ಲಾಉದ್ದೀನ್ ವಿಶೇಷ ತಹಶೀಲ್ದಾರರು ಚಡಚಣ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ, ಇವರ ಮನವಿ ದಿನಾಂಕ : 02-08-2010.

ಪ್ರಸ್ತಾವನೆ:

ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು 1977ರ ಅಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ಸಂಖ್ಯೆ : ಇ(1)872/2007-08/PSC, Dt. 10-01-2008 ರನ್ವಯ ಆಯ್ಕೆಗೊಂಡ 2006 ನೇ ಸಾಲಿನ 40 ಅಭ್ಯರ್ಥಿಗಳನ್ನು ಮೇಲೆ ಓದಲಾದ ಕ್ರ.ಸಂ.(1)ರ ದಿನಾಂಕ : 23-05-2008ರ ಸರ್ಕಾರದ ಅಧಿಸೂಚನೆಯಲ್ಲಿ ತಹಶೀಲ್ದಾರ್, ಗ್ರೂಪ್-ಬಿ ಹುದ್ದೆಗೆ ಪರಿವೀಕ್ಷಣೆಯ ಮೇಲೆ ನೇಮಿಸಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಪರೀಕ್ಷಾರ್ಥ ತಹಶೀಲ್ದಾರರಾಗಿ ನೇಮಕಗೊಂಡ (ಕ್ರ.ಸಂ.04) ಶ್ರೀ ಇಸ್ಲಾಉದ್ದೀನ್ ಇವರು ದಿನಾಂಕ : 09-06-2008 ರಂದು ಕಂದಾಯ ಇಲಾಖೆಯಲ್ಲಿ ಪರೀಕ್ಷಾರ್ಥ ತಹಶೀಲ್ದಾರ್ ಹುದ್ದೆಗೆ ಹಾಜರಾಗಿದ್ದು, ಪ್ರಸ್ತುತ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ : 16-11-2009 ರ ಅಧಿಸೂಚನೆಯನ್ವಯ ವಿಶೇಷ ತಹಶೀಲ್ದಾರ್, ಚಡಚಣ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮೇಲೆ ಓದಲಾದ ಕ್ರ.ಸಂ. (3)ರ ದಿನಾಂಕ : 29-07-2010 ರ ಅಧಿಸೂಚನೆಯನ್ವಯ ಕೆ.ಎ.ಎಸ್. ಗ್ರೂಪ್ 'ಎ' (ಕಿರಿಯ ಶ್ರೇಣಿ) ಹುದ್ದೆಗೆ ಶ್ರೀ ಇಸ್ಲಾಉದ್ದೀನ್ ವಿಶೇಷ ತಹಶೀಲ್ದಾರರು ಚಡಚಣ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ, ಇವರು ಆಯ್ಕೆಯಾಗಿರುವುದರಿಂದ ಮೇಲೆ ಓದಲಾದ ಕ್ರಮ ಸಂ : (04)ರ ದಿನಾಂಕ : 02-08-2010 ರ ತಮ್ಮ ಮನವಿಯಲ್ಲಿ ಕೆ.ಸಿ.ಎಸ್.ಆರ್. ನಿಯಮ 252(ಬಿ) ರನ್ವಯ ಸೇವೆಯಿಂದ ಬಿಡುಗಡೆಗೊಳಿಸಲು ಕೋರಿರುತ್ತಾರೆ. ಸದರಿಯವರ ಮನವಿಯನ್ನು ಪರಿಶೀಲಿಸಲಾಗಿ ಸದರಿಯವರು ಕೆ.ಎ.ಎಸ್. ಗ್ರೂಪ್-ಎ ಹುದ್ದೆಗೆ ಅರ್ಜಿಯನ್ನು ಸೂಕ್ತ ಮಾರ್ಗದಲ್ಲಿ ಸಲ್ಲಿಸಿರುವುದರಿಂದ ಕೆ.ಸಿ.ಎಸ್.ಆರ್. ನಿಯಮ 252(ಬಿ) ರನ್ವಯ ಸೇವೆಯಿಂದ ಬಿಡುಗಡೆಗೊಳಿಸಲು ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 497 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 06.08.2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಇಸ್ಲಾಉದ್ದೀನ್ ವಿಶೇಷ ತಹಶೀಲ್ದಾರರು ಚಡಚಣ, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ, ಇವರು ಕೆ.ಎ.ಎಸ್. ಗ್ರೂಪ್- 'ಎ' (ಕಿರಿಯ ಶ್ರೇಣಿ) ಹುದ್ದೆಗೆ ಸಿಆಸುಇ 83 ಆಸೇವ 2010, ದಿನಾಂಕ : 29-07-2010ರ ಅಧಿಸೂಚನೆಯಲ್ಲಿ ಆಯ್ಕೆಯಾಗಿರುವುದರಿಂದ, ತಹಶೀಲ್ದಾರ್ ಗುಂಪು-ಬಿ ಹುದ್ದೆಯ ಸೇವೆಯಿಂದ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 252(ಬಿ) ರನ್ವಯ ಈ ಕೂಡಲೇ ಜಾರಿಗೆ ಬರುವಂತೆ ಸರ್ಕಾರವು ತಹಶೀಲ್ದಾರ್ ಹುದ್ದೆಯ ಸೇವೆಯಿಂದ ಇವರನ್ನು ಬಿಡುಗಡೆಗೊಳಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2129

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಶಿವಮೊಗ್ಗ ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿ ಆವರಣದಲ್ಲಿರುವ ಹೆಚ್ಚುವರಿ ಜಮೀನು ಮತ್ತು ಕಟ್ಟಡವನ್ನು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ಇವರಿಗೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ :
1. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ : ರೇಬಿರೇ ಕ್ಷೇ/ಶಿವಮೊಗ್ಗ/ಕಟ್ಟಡ/24/08-09, ದಿನಾಂಕ : 12-07-2010.
2. ಜಂಟಿ ನಿರ್ದೇಶಕರು(ತ), ಉದ್ಯೋಗ ಮತ್ತು ತರಬೇತಿ ಇಲಾಖೆ ಇವರು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರಿಗೆ ಬರೆದ ಪತ್ರ ಸಂಖ್ಯೆ : ಉತಇ/ತ/ಕ-1/ ವಿವ-11/07-08, ದಿನಾಂಕ : 23-06-2010.

ಪ್ರಸ್ತಾವನೆ:

ಜಂಟಿ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ ರವರ ಮೇಲೆ ಓದಲಾದ ಕ್ರಮಸಂಖ್ಯೆ (2)ರ ಪತ್ರದಂತೆ ರೇಷ್ಮೆ ಇಲಾಖೆಯು ಶಿವಮೊಗ್ಗ ತಾಲ್ಲೂಕು, ನಿಧಿಗೆ ಹೋಬಳಿ, ವೀರಾಪುರ-11 ಗ್ರಾಮದ ಸರ್ವೆ ನಂ. 52, ಗಾಜನೂರಿನಲ್ಲಿ ಹೊಂದಿರುವ 10.27 ಎಕರೆ ಜಮೀನಿನಲ್ಲಿರುವ

ಒಂದು ರೇಷ್ಮೆ ರೀಲಿಂಗ್ ಕಾಂಪ್ಲೆಕ್ಸ್ ಕಟ್ಟಡ ಮತ್ತು ಒಂದು ಚಾಕಿ ಸಾಕಾಣಿಕಾ ಕೇಂದ್ರ ಕಟ್ಟಡವನ್ನು ಒಳಗೊಂಡಂತೆ ಖಾಲಿ ಇರುವ ಅಂದಾಜು 6 ಎಕರೆ ಜಮೀನನ್ನು ಕಂದಾಯ ಇಲಾಖೆ, ಶಿವಮೊಗ್ಗ ಇವರ ಮುಖಾಂತರ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ಶಿವಮೊಗ್ಗ ಇವರಿಗೆ ಹಸ್ತಾಂತರಿಸುವಂತೆ ರೇಷ್ಮೆ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರನ್ನು ಕೋರಿರುವ ಬಗ್ಗೆ ಹಾಗೂ ರೇಷ್ಮೆ ಉಪ ನಿರ್ದೇಶಕರು, ಜಿಲ್ಲಾ ಪಂಚಾಯತ್, ಶಿವಮೊಗ್ಗರವರು ಇದನ್ನು ಶಿಫಾರಸ್ಸು ಮಾಡಿರುವ ಬಗ್ಗೆ ತಿಳಿಸಿ ಅವರು ಶಿಫಾರಸ್ಸು ಮಾಡಿರುವಂತೆ ರೇಷ್ಮೆ ರೀಲಿಂಗ್ ಕಾಂಪ್ಲೆಕ್ಸ್ ಕಟ್ಟಡ ಮತ್ತು ಒಂದು ಚಾಕಿ ಸಾಕಾಣಿಕಾ ಕೇಂದ್ರ ಕಟ್ಟಡವನ್ನು ಖಾಲಿ ಇರುವ ಅಂದಾಜು 6 ಇಕರೆ ಜಮೀನನ್ನು ಕಂದಾಯ ಇಲಾಖೆ, ಶಿವಮೊಗ್ಗರವರ ಮುಖಾಂತರ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ಪತ್ರ ಸಂಖ್ಯೆ : ವಾಕೈ 27 ರೇಯೋವಿ 2007, ದಿನಾಂಕ : 24-5-2008ರ ಷರತ್ತು ಹಾಗೂ ನಿಬಂಧನೆಗಳನ್ವಯ ಹಸ್ತಾಂತರಿಸಬಹುದಾಗಿದ್ದು, ಈ ಬಗ್ಗೆ ರೇಷ್ಮೆ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರದಲ್ಲಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ರೇಷ್ಮೆ ಆಯುಕ್ತರು ಶಿಫಾರಸ್ಸು ಮಾಡಿರುವಂತೆ ಕಟ್ಟಡ ಹಾಗೂ ಜಮೀನು ನೀಡಲು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ವಾಕೈ 18 ರೇಯೋವಿ 2010, ಬೆಂಗಳೂರು, ದಿನಾಂಕ: 06.08.2010

ರೇಷ್ಮೆ ಇಲಾಖೆಯ ಶಿವಮೊಗ್ಗ ತಾಲ್ಲೂಕು, ನಿಧಿಗೆ ಹೋಬಳಿ, ವೀರಾಪುರ-11 ಗ್ರಾಮದ ಸರ್ವೆ ನಂ. 52, ಗಾಜನೂರಿನಲ್ಲಿ ಹೊಂದಿರುವ ಒಂದು ರೇಷ್ಮೆ ರೀಲಿಂಗ್ ಕಾಂಪ್ಲೆಕ್ಸ್ ಕಟ್ಟಡ ಮತ್ತು ಒಂದು ಚಾಕಿ ಸಾಕಾಣಿಕಾ ಕೇಂದ್ರ ಕಟ್ಟಡವನ್ನು ಒಳಗೊಂಡಂತೆ ಖಾಲಿ ಇರುವ ಅಂದಾಜು 6 ಎಕರೆ ಜಮೀನನ್ನು ಕಂದಾಯ ಇಲಾಖೆ, ಶಿವಮೊಗ್ಗ ಇವರ ಮುಖಾಂತರ ಪತ್ರ ಸಂಖ್ಯೆ : ವಾಕೈ 27 ರೇಯೋವಿ 2007, ದಿನಾಂಕ : 24-5-2008ರ ಷರತ್ತು ಹಾಗೂ ನಿಬಂಧನೆಗಳನ್ವಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ (ಮಹಿಳಾ) ಶಿವಮೊಗ್ಗ ಇವರಿಗೆ ಹಸ್ತಾಂತರಿಸಲು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2130

ಬಿ. ದೇವಿಕ

ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಶ್ರೀ ಟಿ.ಹಾಲಸ್ವಾಮಿ, ಜಂಟಿ ನಿರ್ದೇಶಕರು, ನಿಯೋಜನೆ ಮೇರೆಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ (ನಿ) ರವರು ಈ ಹಿಂದೆ ಕಾರ್ಯನಿರ್ವಾಹಕಾಧಿಕಾರಿ, (ಖಾಗ್ರಾ) ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ, ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಅವಧಿಯಲ್ಲಿ ಎಸಗಿರುವ ಆರೋಪಗಳ ಸಂಬಂಧ ಇಲಾಖಾ ವಿಚಾರಣೆ ಕೈಬಿಡುವ ಬಗ್ಗೆ.

ಓದಲಾಗಿದೆ :

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಗಳೂರು, ಇವರ ಪತ್ರ ಸಂಖ್ಯೆ : ದಕಜಿಪ/ಉಪ/ಖಾಗ್ರಾ/ಟೂಲ್ ಕಿಟ್ಸ್/1994-95, ದಿ : 27-05-2009 (ಪುಟ 21).
2. ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ : ಕೈವಾಇ/ನಿರೀಕ್ಷಣೆ-2/ದೂರು/163/2009-10, ದಿ : 12-10-2009 (ಪುಟ 28).
3. ಕಾರಣ ಕೇಳುವ ನೋಟೀಸ್ ದಿ : 12-11-2009. (ಪುಟ 30).
4. ಕಾರಣ ಕೇಳುವ ನೋಟೀಸ್‌ಗೆ ಅಧಿಕಾರಿಯ ಹೇಳಿಕೆ ದಿನಾಂಕ: 20-01-2010 (ಪುಟ 136).
5. ಸರ್ಕಾರದ ಪತ್ರ ಸಂಖ್ಯೆ: ವಾಕೈ 161 ಕೈಸೇವಿ 2009, ದಿನಾಂಕ: 11-02-2010 (ಪುಟ 140).
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮಂಗಳೂರು, ಇವರ ಪತ್ರ ಸಂಖ್ಯೆ: ದಕಜಿಪ/ಉಪ/ಖಾಗ್ರಾ/ಟೂಲ್ ಕಿಟ್ಸ್/1994-95, ದಿನಾಂಕ:20-07-2010 (ಪುಟ 142).

ಪ್ರಸ್ತಾವನೆ:

ಮೇಲೆ ಓದಲಾದ (1)ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ರವರು 1994-95ನೇ ಸಾಲಿನ ಗಿರಿಜನ ಉಪ ಯೋಜನೆಯಡಿ ಕೊರಗರಿಗೆ ಬುಟ್ಟಿ ಹೆಣೆಯುವ ಕೆಲಸಕ್ಕೆ ಅವಶ್ಯವುಳ್ಳ ಟೂಲ್ ಕಿಟ್‌ಗಳನ್ನು ಮೆ: ಗೌರಿ ಎಂಟರ್‌ಪ್ರೈಸಸ್, ಬೆಂಗಳೂರು, ಇವರು ಸರಬರಾಜು ಮಾಡಿರುವ ಬಾಬ್ತು ಪಾವತಿಗೆ ಬಾಕಿಯಿರುವ ಮೊತ್ತ ರೂ. 6,97,854.00 (ರೂಪಾಯಿ ಆರು ಲಕ್ಷದ ತೊಂಬತ್ತೇಳು ಸಾವಿರದ ಎಂಟು ನೂರ ಐವತ್ತ ನಾಲ್ಕು ಮಾತ್ರ) ಸದರಿ ಸಂಸ್ಥೆಗೆ ಪಾವತಿಸಲು ದಿ : 13-06-2008 ರಂದು ನ್ಯಾಯಾಲಯದ ಆದೇಶವಾಗಿರುವುದರತ್ತ ಗಮನ ಸೆಳೆದು ಈ ನಷ್ಟಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ನ್ಯಾಯಾಲಯದ ಆದೇಶಾನುಸಾರ ಬಾಕಿಯನ್ನು ಮೆ : ಗೌರಿ ಎಂಟರ್‌ಪ್ರೈಸಸ್, ಬೆಂಗಳೂರು, ಇವರಿಗೆ ಜಿಲ್ಲಾ ಪಂಚಾಯತಿಯಿಂದ ಪಾವತಿಸಲು ಜಿಲ್ಲಾ ಪಂಚಾಯತ್ ಕ್ರಮ ಕೈಗೊಂಡಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿದಂತೆ, ಈ ನಷ್ಟಕ್ಕೆ ಕಾರಣರಾದ ತಪ್ಪಿತಸ್ಥ ಅಧಿಕಾರಿಗಳ ಮಾಹಿತಿಯನ್ನು ಸಂಗ್ರಹಿಸಿ ಅವರುಗಳ ಮೇಲೆ ಆರೋಪಗಳ ಪಟ್ಟಿಯನ್ನು (ಅನುಬಂಧ 1 ರಿಂದ 4) ಸಿದ್ದಪಡಿಸಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು, ಶ್ರೀ ಟಿ. ಹಾಲಸ್ವಾಮಿ ಕಾರ್ಯ ನಿರ್ವಾಹಕ ವ್ಯವಸ್ಥಾಪಕರು, ಖಾದಿ ಮತ್ತು ಗ್ರಾಮೋದ್ಯೋಗ ಇಲಾಖೆ, ಜಿಲ್ಲಾ ಪಂಚಾಯತ್, ಮಂಗಳೂರು, ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಟೂಲ್ ಕಿಟ್ ಸರಬರಾಜಿನಲ್ಲಿ ಅವ್ಯವಹಾರ ಎಸಗಿರುವ ಬಗ್ಗೆ ಪರಿಶೀಲಿಸಿ ಸದರಿಯವರ ಮೇಲೆ ಇಲಾಖಾ ವಿಚಾರಣೆ ನಡೆಸಲು ಶಿಫಾರಸ್ಸು ಮಾಡಲಾಗಿರುತ್ತದೆ.

ಮೇಲೆ ಓದಲಾದ (3)ರ ಕಾರಣ ಕೇಳುವ ನೋಟೀಸ್‌ನಲ್ಲಿ ಶ್ರೀ ಟಿ ಹಾಲಸ್ವಾಮಿ, ಜಂಟಿ ನಿರ್ದೇಶಕರು, ನಿಯೋಜನೆ ಮೇರೆಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ (ನಿ), ಬೆಂಗಳೂರು, ಇವರು ಈ ಹಿಂದೆ ಕಾರ್ಯನಿರ್ವಾಹಕ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ 1994-95 ಟೂಲ್ ಕಿಟ್‌ನ ಸರಬರಾಜು ಮಾಡುವ ಕಾರ್ಯಕ್ರಮದಲ್ಲಿ ಸರ್ಕಾರದ ನೀತಿ ನಿಯಮಗಳನ್ನು ಉಲ್ಲಂಘಿಸಿರುವುದು ; ಕಾರ್ಯಕ್ರಮಗಳನ್ನು ನಿರ್ವಹಿಸುವಲ್ಲಿ ನಿಯಮಗಳನ್ನು ಪಾಲಿಸದೇ ಅಧಿಕಾರದ ದುರುಪಯೋಗ ; ಕರ್ತವ್ಯದ ನಿರ್ಲಕ್ಷ್ಯತನ ಮತ್ತು ಕೆಲವು ನ್ಯೂನತೆಗಳು, ಕರ್ತವ್ಯ ಲೋಪಗಳನ್ನು ಎಸಗಿರುವುದು ಹಾಗೂ ಕಳಪೆ ಗುಣಮಟ್ಟದ ಉಪಕರಣಗಳ ಸರಬರಾಜು, ಖರೀದಿ ನಿಯಮಗಳನ್ನು ಪಾಲಿಸದೆ ಇರುವುದು ಟೂಲ್‌ಕಿಟ್‌ಗಳ ಹಣ ಪಾವತಿಗೆ ಕಾರಣರಾಗಿರುವುದು ಸರ್ಕಾರದ ಆರ್ಥಿಕ ನಷ್ಟಕ್ಕೆ ಹೊಣೆಗಾರರಾಗಿರುವುದು ; ಅವ್ಯವಹಾರ ಎಸಗಿರುವ ಆರೋಪಗಳಿಗೆ ಸಂಬಂಧಿಸಿದಂತೆ ದೋಷಾರೋಪಣಾ ಪಟ್ಟಿ ಅನುಬಂಧ 1 ರಿಂದ 4ನ್ನು ಕಳುಹಿಸಿ, ಈ ಆರೋಪಗಳಿಗೆ ಸಂಬಂಧಿಸಿದಂತೆ, ನೋಟೀಸ್ ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (4)ರಲ್ಲಿ ಶ್ರೀ ಟಿ. ಹಾಲಸ್ವಾಮಿ, ಜಂಟಿ ನಿರ್ದೇಶಕರು, ನಿಯೋಜನೆ ಮೇರೆಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ (ನಿ), ಬೆಂಗಳೂರು, ರವರು ಸರ್ಕಾರದ ಕಾರಣ ಕೇಳುವ ನೋಟೀಸ್‌ಗೆ ಪರಿಪೂರ್ಣವಾದ ವಿವರಗಳೊಂದಿಗೆ ಅಗತ್ಯ ಮಾಹಿತಿ ದಾಖಲಾತಿಗಳೊಂದಿಗೆ ಲಿಖಿತ ರಕ್ಷಣಾ ಹೇಳಿಕೆಯನ್ನು ನೀಡಿ ಸರ್ಕಾರದ ಹಂತದಲ್ಲಿ ರಕ್ಷಣಾ ಹೇಳಿಕೆಯನ್ನು ಅಂಗೀಕರಿಸಿ ಯಾವುದೇ ಇಲಾಖಾ ವಿಚಾರಣೆಯನ್ನು ನಡೆಸದೆ ಮುಂದಿನ ಎಲ್ಲಾ ನಡವಳಿಗಳನ್ನು ಕೈಬಿಟ್ಟು ಸಕಲ ದೋಷಗಳಿಂದ ದೋಷಮುಕ್ತಗೊಳಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (5)ರ ಪತ್ರದಲ್ಲಿ ಶ್ರೀ ಟಿ. ಹಾಲಸ್ವಾಮಿ, ಜಂಟಿ ನಿರ್ದೇಶಕರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ರಕ್ಷಣಾ ಹೇಳಿಕೆಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು, ಇವರಿಗೆ ಕಳುಹಿಸಿ ನಿಯಮಾನುಸಾರ ಹಾಗೂ ಕಾನೂನು ರೀತ್ಯಾ ಪರಿಶೀಲಿಸಿ, ಪರಿಗಣಿತ ಅಭಿಪ್ರಾಯದೊಂದಿಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕೋರಲಾಗಿತ್ತು.

ಮೇಲೆ ಓದಲಾದ (6) ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದಕ್ಷಿಣ ಕನ್ನಡ, ಜಿಲ್ಲಾ ಪಂಚಾಯತ್, ಮಂಗಳೂರು, ರವರು ಕಳಪೆ ಗುಣಮಟ್ಟದ ಟೂಲ್‌ಕಿಟ್‌ಗಳನ್ನು ಸರಬರಾಜು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ವಿಷಯವನ್ನು ಮರು ಪರಿಶೀಲಿಸಿ ಕಳಪೆ ಸಾಮಗ್ರಿಗಳು ಉತ್ತಮ ಗುಣಮಟ್ಟದ ಸಾಮಗ್ರಿಗಳಾಗುತ್ತವೆ ಎಂಬುವುದಾಗಿ ದೃಢೀಕರಣ ಪತ್ರ ನೀಡಿ ಸಾಮಾಗ್ರಿಗಳನ್ನು ಸ್ವೀಕರಿಸಿರುವ ಬಂಟ್ವಾಳ, ಮಂಗಳೂರು, ಕಾರ್ಕಳ, ಕುಂದಾಪುರ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳ ಪಾತ್ರವನ್ನು ಪರಿಶೀಲಿಸಿ ಸಂಬಂಧಿತರ ಹೇಳಿಕೆಯನ್ನು ಪಡೆದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಣೆಗಾರರು ಯಾರು ಎಂಬುದನ್ನು ಆಧರಿಸಿ ಪಟ್ಟಿಯನ್ನು ಅವರ ವಿರುದ್ಧ ರಚನೆ ಮಾಡಬೇಕಾಗುತ್ತದೆ ಎಂದು ಷರಾ ಮಾಡಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ ವಾಕೈ 161 ಕೈಸೇವಿ 2009, ಬೆಂಗಳೂರು, ದಿನಾಂಕ: 04.08.2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ಇವರ ವರದಿಯ ಆಧಾರದ ಮೇಲೆ ಶ್ರೀ ಟಿ. ಹಾಲಸ್ವಾಮಿ, ಜಂಟಿ ನಿರ್ದೇಶಕರು, ರವರು ಸರ್ಕಾರದ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ವಿವರಗಳನ್ನು ಒಪ್ಪಿ ಟೂಲ್‌ಕಿಟ್ ಸರಬರಾಜಿಗೆ ಸಂಬಂಧಿಸಿದಂತೆ, ಅವರ ಮೇಲೆ ಇಲಾಖಾ ವಿಚಾರಣೆ ನಡೆಸುವುದನ್ನು ಕೈಬಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. ನಂ. 2131

ಬಿ.ಸಿ. ಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ಲೋಇ 169 ಇಎಪಿ 2009 ದಿನಾಂಕ: 30-07-2010.

ವಿಷಯ : **ಸೆಪ್ಟೆಂಬರ್ 2009ರ ಮಾಹೆಯಲ್ಲಿ ಮಳೆಯ ಪ್ರವಾಹಕ್ಕೆ ತುಂಗಭದ್ರ (ಮಂತ್ರಾಲಯ) ನದಿಗೆ ಅಡ್ಡಲಾಗಿ ನಿರ್ಮಿಸಿದ್ದ ಸೇತುವೆ ಹಾನಿಗೊಂಡಿದ್ದು, ಸಾರ್ವಜನಿಕರ ಸಂಚಾರಕ್ಕೆ ಪುನರ್‌ನಿರ್ಮಾಣ ಮಾಡುವ ಬಗ್ಗೆ.**

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ: ಲೋಇ 169 ಇಎಪಿ 2009 ಬೆಂಗಳೂರು ದಿನಾಂಕ: 11-05-2010.
2. ನಬಾರ್ಡ್ ಪತ್ರ ಸಂಖ್ಯೆ: NB/SPD/1008/RIDF-XVI (Karnataka RO)/110 PSC/2010-2011 ದಿನಾಂಕ: 28-06-2010.

ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ ರಾಯಚೂರು ಜಿಲ್ಲೆಯ ದೇವಸುಗೂರು-ಕಟ್ಟಿಗೋಡ ರಾಜ್ಯ ಹೆದ್ದಾರಿ-13ರ ಮೇಲೆ ತುಂಗಭದ್ರಾ ನದಿಗೆ (ಮಂತ್ರಾಲಯ) ಅಡ್ಡಲಾಗಿ ಸೇತುವೆ ಪುನರ್ ನಿರ್ಮಾಣ ಕಾಮಗಾರಿಯ 40.00 ಕೋಟಿ ರೂ.ಗಳ (ನಲವತ್ತು ಕೋಟಿ ರೂಪಾಯಿಗಳು ಮಾತ್ರ) ಅಂದಾಜು ಮೊತ್ತಕ್ಕೆ ಲೆಕ್ಕಶೀರ್ಷಿಕೆ '5054 ರಸ್ತೆ ಮತ್ತು ಸೇತುವೆಗಳು" ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು.

ಆದರೆ ಸದರಿ ಕಾಮಗಾರಿಯ ಅಂದಾಜಿಗೆ ಮೇಲೆ ಓದಲಾದ (2) ರಂತೆ ನಬಾರ್ಡ್‌ನ ಆರ್‌ಐಡಿಎಫ್ 16ರ ಯೋಜನೆಯಡಿ ಅನುಮೋದನೆ ದೊರೆತಿರುವ ಹಿನ್ನೆಲೆಯಲ್ಲಿ ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿನ ಆದೇಶ ಭಾಗದ ಕಂಡಿಕೆ (೧) ಅನ್ನು ಕೆಳಗೆ ಮಾರ್ಪಡಿಸಿದಂತೆ ಓದಿಕೊಳ್ಳತಕ್ಕದ್ದು.

ರಾಯಚೂರು ಜಿಲ್ಲೆಯ ದೇವಸುಗೂರು-ಕಟ್ಟಿಗೋಡು ರಾಜ್ಯ ಹೆದ್ದಾರಿ-13ರ ಮೇಲೆ ತುಂಗಭದ್ರಾ ನದಿಗೆ (ಮಂತ್ರಾಲಯ) ಅಡ್ಡಲಾಗಿ ಸೇತುವೆ ಪುನರ್ ನಿರ್ಮಾಣ ಕಾಮಗಾರಿಯ 39.50 ಕೋಟಿ ರೂ.ಗಳ (ಮೂವತ್ತೊಂಬತ್ತು ಕೋಟಿ ಐವತ್ತು ಲಕ್ಷ ರೂಪಾಯಿಗಳು ಮಾತ್ರ) ಅಂದಾಜು ಮೊತ್ತಕ್ಕೆ ಲೆಕ್ಕಶೀರ್ಷಿಕೆ "5054-Capital outlay on roads and bridges-04-800-3-01-436 NABARD assisted works" ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಹಾಗೂ ಕಾಮಗಾರಿಯನ್ನು ಕೈಗೊಂಡು ದಿನಾಂಕ 31-03-2012ರೊಳಗೆ ಪೂರ್ಣಗೊಳಿಸಲು ಮತ್ತು ಈ ಕಾಮಗಾರಿಗೆ

ಮಾಡಲಾಗುವ ವೆಚ್ಚಕ್ಕೆ ಮರುಪಾವತಿ ಪ್ರಸ್ತಾವನೆಯನ್ನು ಕಾಲಕಾಲಕ್ಕೆ ಸರ್ಕಾರಕ್ಕೆ ಸಲ್ಲಿಸುವಂತೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ದೇವಿಪ್ರಸಾದ್
ಸರ್ಕಾರದ ಅಧೀನ ಕಾರ್ಯದರ್ಶಿ
ಲೋಕೋಪಯೋಗಿ, ಬಂದರು ಹಾಗೂ
ಒಳನಾಡು ಜಲಸಾರಿಗೆ ಇಲಾಖೆ (ಇಎಪಿ)

ಪಿ.ಆರ್. 2146

COMMERCE AND INDUSTRIES SECRETARIAT

CORRIGENDUM

No. CI/43/SPI/2010, Bangalore, dated: 16-07-2010.

Sub: Approval to the proposal of M/s. Surya Vijayanagar Steel & Power Ltd., - Additional Water Allocation.

Read:
1. Govt. Order No. CI 43 SPI 2010, dated: 25-02-2010.
2. Govt. Order No. CI 43 SPI 2010, dated: 10-05-2010.
3. Proceedings of the 22nd State High Level Clearance Committee (SHLCC) Meeting held on 24-05-2010.
4. Govt. Order No. CI 43 SPI 2010, dated: 11-06-2010.
5. Proceedings of the 23rd State High Level Clearance Committee (SHLCC) Meeting held on 19-06-2010.

In the order portion of the Govt. Order No. CI 43 SPI 2010, dated: 11-06-2010, with regard to water allocation, please be read as **"allocation of 45 MGD of water from the nearest water source subject to the approval of the Water Resource Departmnet"** in place of "30 MGD from nearest source" and recommended KIADB to acquire and allot 500 acres of land for housing project at the proposed site in Bagalkot District.

By Order and in the name of the Governor of Karnataka

(Aparna Pavate)
Desk Officer (Technical Cell)
Commerce & Industries Department

PR No. 2147

COMMERCE AND INDUSTRIES SECRETARIAT

CORRIGENDUM

No. CI/273/SPI/2009, Bangalore, dated: 21-07-2010.

Sub: Approval to the proposal of M/s. TATA Metaliks Ltd., to establish a "3 MTPA Integrated Steel Plant, in Boodagatti and Agadi Village, Haveri Taluk & District - Additional Investment, Employment and Villages.

Read:
1. Govt. Order No. CI 273 SPI 2009, dated: 07-05-2010.
2. Proceedings of the 23rd State High Level Clearance Committee (SHLCC) meeting held on 19-06-2010.

In the Govt. Order No. CI 273 SPI 2009, dated: 07-05-2010, in the order portion please read as **"3 Million TPA Integrated Steel Plant with an enhanced investment of Rs. 15000 crores, to provide total employment to 25000 persons in Boodagatti and Agadi village limits of Haveri Taluk with addition of Devagiri and Yellapura Villages for housing purpose"** in place of **"3 Million MTPA with an investment of Rs. 6101.41 crores in Boodagatti and Agadi Village limits in Haveri Taluk".**

Infrastructure facilities, incentives, concessions and other terms and conditions remain the same as in the G.O. read at (1) above.

By Order and in the name of the Governor of Karnataka

(Aparna Pavate)
Desk Officer (Technical Cell)
Commerce & Industries Department

PR No. 2148

COMMERCE AND INDUSTRIES SECRETARIAT

CORRIGENDUM

No. CI/31/SPI/2010, Bangalore, dated: 21-07-2010.

Sub: Approval to the Project proposal of M/s. Shree Cement Ltd., to establish "3MTPA Cement Plant" at Sedam Taluk, Gulbarga District.

Read: 1. Govt. Order No. CI 31 SPI 2010, dated: 15-02-2010.

2. Govt. Order No. CI 31 SPI 2010, dated: 14-06-2010.

3. Proceedings of the 23rd State High Level Clearance Committee (SHLCC) meeting held on 19-06-2010.

In the Govt. Order No. CI 31 SPI 2010, Dated: 14-06-2010 please read as **"3 Million Metric Tons Per Annum Cement Plant with 150 MW Power Plant"** in place of "3 Million Metric Tons Per Annum Cement Plant with 35 MW Captive Power Plant" The investment may please be read as **"Rs. 1450 Crores"** in place of "Rs. 1000 Crores".

Infrastructure facilities, incentives, concessions and other terms and conditions remain the same as in the G.O. read at (1) above.

By Order and in the name of the Governor of Karnataka

PR No. 2149

(Aparna Pavate)
Desk Officer (Technical Cell)
Commerce & Industries Department

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಹೊಸ ಕೈಗಾರಿಕಾ ನೀತಿ 2009-14 – ಮೂರನೇ ತಿದ್ದುಪಡಿ ಆದೇಶ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ: ಸಿಐ.233.ಎಸ್.ಪಿ.ಐ. 2008 ದಿನಾಂಕ: 28-02-2009.

2. ಸರ್ಕಾರಿ ತಿದ್ದುಪಡಿ ಆದೇಶ ಸಂಖ್ಯೆ: ಸಿಐ. 233, ಎಸ್.ಪಿ.ಐ. 2008, ದಿನಾಂಕ: 06-08-2009.

3. ಸರ್ಕಾರಿ ತಿದ್ದುಪಡಿ ಆದೇಶ ಸಂಖ್ಯೆ: ಸಿಐ. 233 ಎಸ್.ಪಿ.ಐ. 2008, ದಿನಾಂಕ: 25-02-2010.

4. ದಿನಾಂಕ: 24-4-2010ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆರವರ ಅಧ್ಯಕ್ಷತೆಯಲ್ಲಿ ನಡೆದ 100ನೇ ರಾಜ್ಯ ಮಟ್ಟದ ಸಮನ್ವಯ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಕರ್ನಾಟಕ ಸರ್ಕಾರವು ದಿನಾಂಕ: 1-4-2009 ರಿಂದ ಜಾರಿಗೆ ಬರುವಂತೆ ನೂತನ ಕೈಗಾರಿಕಾ ನೀತಿ 2009-14ನ್ನು ಉಲ್ಲೇಖ (3)ರ ಸರ್ಕಾರಿ ಆದೇಶದಂತೆ ಜಾರಿಗೊಳಿಸಿರುತ್ತದೆ. ಈ ಆದೇಶವು ಕರ್ನಾಟಕ ರಾಜ್ಯಪತ್ರ, ವಿಶೇಷ ಪತ್ರಿಕೆ ಭಾಗ (1)ರಲ್ಲಿ ದಿನಾಂಕ 5-03-2009ರಂದು ಅಧಿಕೃತವಾಗಿ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪ್ರಕಟವಾಗಿರುತ್ತದೆ. ಅದರಂತೆ, ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆಯ ನೀತಿಗಳಲ್ಲಿ ಕೆಲವು ವ್ಯತ್ಯಾಸಗಳಿದ್ದು, ಇದು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸುವ ಸಂದರ್ಭದಲ್ಲಿ ವ್ಯತ್ಯಾಸಗಳಾಗಿದ್ದು, ಈ ಬಗ್ಗೆ ದಿನಾಂಕ: 24-4-2010ರಂದು ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆರವರ ಅಧ್ಯಕ್ಷತೆಯಲ್ಲಿ 100ನೇ ರಾಜ್ಯ ಮಟ್ಟದ ಸಮನ್ವಯ ಸಮಿತಿಯ ಸಭೆಯಲ್ಲಿ ಚರ್ಚಿಸಿದ್ದು, ಆಂಗ್ಲ ಭಾಷೆಯಲ್ಲಿರುವಂತೆಯೇ ಕನ್ನಡ ಭಾಷೆಯಲ್ಲಿಯೂ ಕೈಗಾರಿಕಾ ನೀತಿಯನ್ನು ಸರಿಪಡಿಸುವಂತೆ ತೀರ್ಮಾನಿಸಲಾಗಿರುತ್ತದೆ. ಇದರಿಂದ ಸರ್ಕಾರಕ್ಕೆ ಯಾವುದೇ ಹೆಚ್ಚುವರಿ ಹೊರೆಯಾಗುವುದಿಲ್ಲ. ಇದರಂತೆ ಉಲ್ಲೇಖ (3)ರ ಸರ್ಕಾರಿ ಆದೇಶದಂತೆ ಕನ್ನಡ ಭಾಷೆಯಲ್ಲಿರುವ ಕೈಗಾರಿಕಾ ನೀತಿಯಲ್ಲಿನ ವ್ಯತ್ಯಾಸಗಳನ್ನು ಕೆಳಕಂಡಂತೆ ಸರಿಪಡಿಸಲಾಗಿದ್ದು, ಅದರಂತೆ ಓದಿಕೊಳ್ಳಲು ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 233 ಎಸ್‌ಪಿಐ 2008, ಬೆಂಗಳೂರು ದಿನಾಂಕ: 05-08-2010.

(1) ಮಾರ್ಚ್ 5, 2009ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ಹೊಸ ಕೈಗಾರಿಕಾ ನೀತಿ 2009-14ರ (ಕನ್ನಡ ಅನುವಾದ) ಅನುಬಂಧ-2 ಕಂಡಿಕೆ ಸಂಖ್ಯೆ 9ರ

ಈ ಕೆಳಗಿನ ಮಾಹಿತಿಯನ್ನು

ಹೂಡಿದ ಬಂಡವಾಳ (ಕೋಟಿ ರೂ.ಗಳಲ್ಲಿ)	ಕನಿಷ್ಠ ಉದ್ಯೋಗ ನೀಡಿಕೆ	ಬಡ್ಡಿ ರಹಿತ ಸಾಲದ ಮೊತ್ತ
51-250	ಕನಿಷ್ಠ 200 ಆನಂತರದ ಪ್ರತಿ 50 ಕೋಟಿ ರೂ. ಬಂಡವಾಳ ಹೂಡಿಕೆಗೆ 50 ರಂತೆ	6 ವರ್ಷಗಳಿಗೆ ಲೆಕ್ಕ ಹಾಕಲಾದ ಗ್ರಾಸ್ ವ್ಯಾಟ್ ತೆರಿಗೆಯ ಮೊತ್ತದ 75% ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಶೇ. 75ರ ಮಿತಿಗೆ ಒಳಪಟ್ಟು ಈ ಸಾಲವನ್ನು 6 ವರ್ಷಗಳ ನಂತರ 3 ವಾರ್ಷಿಕ ಕಂತುಗಳಲ್ಲಿ ಮರು ಪಾವತಿ ಮಾಡಬೇಕು.

ಈ ಕೆಳಕಂಡಂತೆ ಓದಿಕೊಳ್ಳುವುದು:

ಹೂಡಿದ ಬಂಡವಾಳ (ಕೋಟಿ ರೂ.ಗಳಲ್ಲಿ)	ಕನಿಷ್ಠ ಉದ್ಯೋಗ ನೀಡಿಕೆ	ಬಡ್ಡಿ ರಹಿತ ಸಾಲದ ಮೊತ್ತ
51–250	ಕನಿಷ್ಠ 200 ಆನಂತರದ ಪ್ರತಿ 50 ಕೋಟಿ ರೂ.ಗಳ ಬಂಡವಾಳ ಹೂಡಿಕೆಗೆ 20 ರಂತೆ	ಪ್ರಾರಂಭಿಕ 6 ವರ್ಷಗಳಿಗೆ ಲೆಕ್ಕ ಹಾಕಲಾದ ಗ್ರಾಸ್ ವ್ಯಾಟ್ ತೆರಿಗೆಯ ಮೊತ್ತದ ಶೇ. 50% ಆದರೆ ಸ್ಥಿರ ಸ್ವತ್ತುಗಳ ಮೇಲಿನ ಬಂಡವಾಳದ ಗರಿಷ್ಠ ಶೇ. 75ರ ಮಿತಿಗೆ ಒಳಪಟ್ಟು; ಈ ಸಾಲವನ್ನು 6 ವರ್ಷಗಳ ನಂತರ 3 ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು.

(2) ಮಾರ್ಚ್ 5, 2009ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ಹೊಸ ಕೈಗಾರಿಕಾ ನೀತಿ 2009–14ರ (ಕನ್ನಡ ಅನುವಾದ) ಅನುಬಂಧ–2 ಕಂಡಿಕೆ ಸಂಖ್ಯೆ 14 (iii) ರಲ್ಲಿನ

ಈ ಕೆಳಗಿನ ಮಾಹಿತಿಯನ್ನು

"14 (iii) ಬಿ.ಐ.ಎಸ್. ಪ್ರಮಾಣ ಪತ್ರ : ಬಿಐಎಸ್‌ಗೆ ನೀಡಲಾದ ಶುಲ್ಕದ 50% (ಗರಿಷ್ಠ 25,000 ರೂಪಾಯಿಗಳು) ಮತ್ತು ಬಿ.ಐ.ಎಸ್. ನಿಂದ ಅನುಮೋದಿತವಾದ ಪರೀಕ್ಷಣಾ ಉಪಕರಣಗಳ ಖರೀದಿಗಾಗಿ ಮಾಡಿದ ವೆಚ್ಚದ 25% (ಗರಿಷ್ಠ 50,000 ರೂಪಾಯಿಗಳು)".

ಈ ಕೆಳಕಂಡಂತೆ ಓದಿಕೊಳ್ಳುವುದು:

"14 (iii) ಬಿ.ಐ.ಎಸ್. ಪ್ರಮಾಣ ಪತ್ರ : ಬಿಐಎಸ್‌ಗೆ ನೀಡಲಾದ ಶುಲ್ಕದ 50% (ಗರಿಷ್ಠ 20,000 ರೂಪಾಯಿಗಳು) ಮತ್ತು ಬಿ.ಐ.ಎಸ್ ನಿಂದ ಅನುಮೋದಿತವಾದ ಪರೀಕ್ಷಣಾ ಉಪಕರಣಗಳ ಖರೀದಿಗಾಗಿ ಮಾಡಿದ ವೆಚ್ಚದ 25% (ಗರಿಷ್ಠ 50,000 ರೂಪಾಯಿಗಳು)".

(3) ಮಾರ್ಚ್ 5, 2009ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ಹೊಸ ಕೈಗಾರಿಕಾ ನೀತಿ 2009–14ರ (ಕನ್ನಡ ಅನುವಾದ) ಅನುಬಂಧ–2 ಕಂಡಿಕೆ ಸಂಖ್ಯೆ 14(V)ರಲ್ಲಿನ

ಈ ಕೆಳಗಿನ ಮಾಹಿತಿಯನ್ನು

"14(V) ತಂತ್ರಜ್ಞಾನದ ಅಳವಡಿಕೆ : ಅಧಿಕೃತ ರಾಷ್ಟ್ರೀಯ ಪ್ರಯೋಗಾಲಯಗಳ ತಂತ್ರ ಜ್ಞಾನವನ್ನು ಅಳವಡಿಸುವ ವೆಚ್ಚದ 50% (ಗರಿಷ್ಠ 50000 ರೂಪಾಯಿಗಳು)".

ಈ ಕೆಳಕಂಡಂತೆ ಓದಿಕೊಳ್ಳುವುದು :

"14(V) ತಂತ್ರಜ್ಞಾನದ ಅಳವಡಿಕೆ : ಅಧಿಕೃತ ರಾಷ್ಟ್ರೀಯ ಪ್ರಯೋಗಾಲಯಗಳ ತಂತ್ರ ಜ್ಞಾನವನ್ನು ಅಳವಡಿಸುವ ವೆಚ್ಚದ 25% (ಗರಿಷ್ಠ 50000 ರೂಪಾಯಿಗಳು)".

(4) ಮಾರ್ಚ್ 5, 2009ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ಹೊಸ ಕೈಗಾರಿಕಾ ನೀತಿ 2009–14ರ (ಕನ್ನಡ ಅನುವಾದ) ಅನುಬಂಧ–2 ಕಂಡಿಕೆ ಸಂಖ್ಯೆ 17 ರಲ್ಲಿನ

ಈ ಕೆಳಗಿನ ಮಾಹಿತಿಯನ್ನು

"17 ರಾಜ್ಯದ ಉದ್ಯೋಗ ಮೀಸಲಾತಿ ನೀತಿಯ ಅನುಷ್ಠಾನಕ್ಕಾಗಿ ಹೆಚ್ಚುವರಿ ಉತ್ತೇಜಕಗಳು:

ಎಲ್ಲಾ ವಲಯಗಳಲ್ಲಿರುವ, 100ಕ್ಕಿಂತ ಹೆಚ್ಚು ಜನರಿಗೆ ಉದ್ಯೋಗ ನೀಡುತ್ತಿರುವ ಮಧ್ಯಮ ಬೃಹತ್ ಮತ್ತು ಮೆಗಾ ಪ್ರಮಾಣದ ಉತ್ಪಾದನಾ ಘಟಕಗಳಿಗೆ:

ಮೀಸಲಾತಿಯ ವ್ಯಾಪ್ತಿಗೆ ಒಳಪಟ್ಟಿರುವ ಉದ್ಯೋಗಿಗಳಿಗೆ ಕಾರ್ಮಿಕರ ರಾಜ್ಯ ವಿಮಾ ಮತ್ತು ಉದ್ಯೋಗಿಗಳ ಭವಿಷ್ಯ ನಿಧಿ ಯೋಜನೆಗಳಿಗೆ ವಂತಿಗೆಯ ಬಾಬ್ತು ಮೊದಲ ಐದು ವರ್ಷಗಳಲ್ಲಿ ಸಲ್ಲಿಸಿದ ಮೊತ್ತವನ್ನು ಮರುಪಾವತಿ ಮಾಡಲಾಗುವುದು".

ಈ ಕೆಳಕಂಡಂತೆ ಓದಿಕೊಳ್ಳುವುದು:

"17 ರಾಜ್ಯದ ಉದ್ಯೋಗ ಮೀಸಲಾತಿ ನೀತಿಯ ಅನುಷ್ಠಾನಕ್ಕಾಗಿ ಹೆಚ್ಚುವರಿ ಉತ್ತೇಜಕಗಳು:

ಎಲ್ಲಾ ವಲಯಗಳಲ್ಲಿರುವ 100ಕ್ಕಿಂತ ಹೆಚ್ಚು ಜನರಿಗೆ ಉದ್ಯೋಗ ನೀಡುವ ಮಧ್ಯಮ, ಬೃಹತ್ ಮತ್ತು ಮೆಗಾ ಪ್ರಮಾಣದ ಉತ್ಪಾದನಾ ಘಟಕಗಳಿಗೆ:

ಮೀಸಲಾತಿಯ ವ್ಯಾಪ್ತಿಗೆ ಒಳಪಟ್ಟಿರುವ ಉದ್ಯೋಗಿಗಳಿಗೆ ಕಾರ್ಮಿಕರ ರಾಜ್ಯ ವಿಮಾ ಮತ್ತು ಉದ್ಯೋಗಿಗಳ ಭವಿಷ್ಯ ನಿಧಿ ಯೋಜನೆಗಳಿಗೆ ವಂತಿಗೆಯ ಬಾಬ್ತು ಮೊದಲ ಐದು ವರ್ಷಗಳಲ್ಲಿ ಪಾವತಿಸಿದ 50% ರಷ್ಟು ಮೊತ್ತವನ್ನು ಮರುಪಾವತಿ ಮಾಡಲಾಗುವುದು".

ಪಿ.ಆರ್. 2150

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಅಪರ್ಣ ಪಾವಟೆ

ಪೀಠಾಧಿಕಾರಿ (ತಾಂತ್ರಿಕ ಕೋಶ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಸಿಆಸುಇ 305 ಸೇಇವಿ 07, ಬೆಂಗಳೂರು ದಿನಾಂಕ : 6-7-10

ದಿನಾಂಕ : 16-4-2008 ರ ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 305 ಸೇಇವಿ 07 ರ ಆದೇಶ ಭಾಗದ ಎರಡನೇ ಕಂಡಿಕೆಯ ಎರಡನೇ ಸಾಲಿನಲ್ಲಿರುವ ನಿಯಮ 106-ಎ ಎಂಬುದರ ಬದಲಾಗಿ, ನಿಯಮ 8 (14-ಎ) ಎಂದು ತಿದ್ದುಪಡಿ ಮಾಡಿ, ಓದಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಎಂ. ವಾಸುದೇವಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸು ಇಲಾಖೆ (ಸೇವೆಗಳು-2)

ಪಿ. ಆರ್. 2156

ಇಂಧನ ಸಚಿವಾಲಯ

ವಿಷಯ : ಇಂಧನ ಇಲಾಖೆಗೆ ಲೇಖನ ಸಾಮಗ್ರಿಗಳನ್ನು ಖರೀದಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶದ ಸಂಖ್ಯೆ : ಸಿಆಸುಇ 6 ಡಿಎಸ್‌ವೈ 2009, ದಿನಾಂಕ 18-5-2009.
2) ಸರ್ಕಾರದ ಪತ್ರ ಸಂಖ್ಯೆ : ಇಎನ್ 150 ಸಮನ್ವಯ 2009, ದಿನಾಂಕ 15-4-2010.
3) ಸರ್ಕಾರದ ಪತ್ರ ಸಂಖ್ಯೆ : ಇಎನ್ 150 ಸಮನ್ವಯ 2009, ದಿನಾಂಕ : 3-7-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ 1 ರಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶದಲ್ಲಿ ಸಚಿವಾಲಯದಲ್ಲಿ ವಿವಿಧ ಇಲಾಖೆಗಳಿಗೆ ಬೇಕಾಗುವ ಲೇಖನ ಸಾಮಗ್ರಿಗಳನ್ನು ಮತ್ತು ಇನ್ನಿತರ ಬಳಕೆ ಪದಾರ್ಥಗಳನ್ನು ಖರೀದಿಸುವ ಅಧಿಕಾರವನ್ನು ಆಯಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳಿಗೆ ವಹಿಸಲಾಗಿದೆ ಮತ್ತು ಈ ಆದೇಶದಲ್ಲಿ ಇಂಧನ ಇಲಾಖೆಗೆ ಲೇಖನ ಸಾಮಗ್ರಿಗಳನ್ನು ಖರೀದಿಸಲು ಲೆಕ್ಕ ಶೀರ್ಷಿಕೆ 2052-00-090-0-01-051 (ಸಾಮಾನ್ಯ ವೆಚ್ಚ) ರಲ್ಲಿ ರೂ. 12,000/- (ಹನ್ನೆರಡು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಒದಗಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : 2 ರ ಪತ್ರದಲ್ಲಿ ಇಂಧನ ಇಲಾಖೆಗೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ದರಪಟ್ಟಿಗಳನ್ನು ಸಲ್ಲಿಸುವಂತೆ ಸಂಸ್ಥೆಗಳಿಗೆ ಕೋರಲಾಗಿತ್ತು. ಅದರಂತೆ ಮೆ॥ ಶ್ರೀ ಎಸ್.ಎಲ್.ವಿ. ಡ್ರಾಯಿಂಗ್ ಸ್ಟೋರ್ಸ್, 617/2 ರಾಜೇಶ್ವರಿ ಮಾರ್ಕೆಟ್, ಅವೆನ್ಯೂ ರೋಡ್, ಬೆಂಗಳೂರು, ಮೆ॥ ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್, 13, 20ನೇ ಕ್ರಾಸ್, ಕಬ್ಬನ್ ಪೇಟೆ, ಬೆಂಗಳೂರು ಮತ್ತು ಮೆ॥ ಡಿಸ್ಟ್ರಿಕ್ಟ್ ಸಪ್ಲೈ ಅಂಡ್ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ದರಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಮೂರು ಸಂಸ್ಥೆಗಳ ದರಪಟ್ಟಿಯನ್ನು ಪರಿಶೀಲಿಸಿದಾಗ ಮೆ॥ ಶ್ರೀ ಎಸ್.ಎಲ್.ವಿ. ಡ್ರಾಯಿಂಗ್ ಸ್ಟೋರ್ಸ್ ಇವರು ಸಲ್ಲಿಸಿರುವ ಬೆಲೆಗಳ ದರಪಟ್ಟಿ ಕಡಿಮೆ ಇರುತ್ತದೆ. ಆದುದರಿಂದ, ಮೆ॥ ಶ್ರೀ ಎಸ್.ಎಲ್.ವಿ. ಡ್ರಾಯಿಂಗ್ ಸ್ಟೋರ್ಸ್ ಇವರಿಂದ ಲೇಖನ ಸಾಮಗ್ರಿಗಳನ್ನು ಪಡೆಯಲು ತೀರ್ಮಾನಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ 3 ರ ಪತ್ರದಲ್ಲಿ ಇಂಧನ ಇಲಾಖೆಗೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವಂತೆ ಮೆ॥ ಶ್ರೀ ಎಸ್.ಎಲ್.ವಿ. ಡ್ರಾಯಿಂಗ್ ಸ್ಟೋರ್ಸ್ ಇವರನ್ನು ಕೋರಲಾಗಿತ್ತು. ಅದರಂತೆ, ಮೆ॥ ಶ್ರೀ ಎಸ್.ಎಲ್.ವಿ. ಡ್ರಾಯಿಂಗ್ ಸ್ಟೋರ್ಸ್ ಇವರು ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಿ ಇದಕ್ಕೆ ಸಂಬಂಧಿಸಿದ ವೆಚ್ಚ ಬಾಬ್ತು ರೂ. 11,998/- (ಹನ್ನೊಂದು ಸಾವಿರದ ಒಂಭೈನೂರ ತೊಂಬತ್ತೆಂಟು ರೂಪಾಯಿಗಳು ಮಾತ್ರ) (ಮೌಲ್ಯವರ್ಧಿತ ತೆರಿಗೆ ಸೇರಿ) ಗಳನ್ನು ಸಂದಾಯ ಮಾಡುವಂತೆ ಬಿಲ್ಲನ್ನು ದಿನಾಂಕ : 23-7-2010 ರಂದು ಸಲ್ಲಿಸಿರುತ್ತಾರೆ. ಆದುದರಿಂದ, ಮೆ॥ ಶ್ರೀ ಎಸ್.ಎಲ್.ವಿ. ಡ್ರಾಯಿಂಗ್ ಸ್ಟೋರ್ಸ್ ಇವರಿಗೆ ಬಿಲ್ಲಿನ ಹಣವನ್ನು ಸಂದಾಯ ಮಾಡಲು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಇಎನ್ 150 ಸಮನ್ವಯ 2008, ಬೆಂಗಳೂರು, ದಿನಾಂಕ : 12-8-2010

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಹಿನ್ನೆಲೆಯಲ್ಲಿ ಇಂಧನ ಇಲಾಖೆಗೆ ಅಗತ್ಯವಿರುವ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವ ಸಂಬಂಧ ಬಿಲ್ಲಿನ ಮೊತ್ತ ವೆಚ್ಚ ರೂ. 11,998/- (ಹನ್ನೊಂದು ಸಾವಿರದ ಒಂಭೈನೂರ ತೊಂಬತ್ತೆಂಟು ರೂಪಾಯಿಗಳು ಮಾತ್ರ) (ಮೌಲ್ಯವರ್ಧಿತ ತೆರಿಗೆ ಸೇರಿ) ಗಳನ್ನು ಮೆ॥ ಶ್ರೀ ಎಸ್.ಎಲ್.ವಿ. ಡ್ರಾಯಿಂಗ್ ಸ್ಟೋರ್ಸ್, 617/2 ರಾಜೇಶ್ವರಿ ಮಾರ್ಕೆಟ್, ಅವೆನ್ಯೂ ರೋಡ್, ಬೆಂಗಳೂರು ಇವರಿಗೆ ಸಂದಾಯ ಮಾಡಲು ಮಂಜೂರಾತಿ ನೀಡಿದೆ.

ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2052-00-090-0-01-051 (ಸಾಮಾನ್ಯ ವೆಚ್ಚ) (ಯೋಜನೇತರ)" ರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ : 10-7-1996 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಎಸ್.ಜೆ. ಸಂಪತ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ. ಆರ್. 2157

ಕಾರ್ಮಿಕ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ಕಾಇ 270 ಎಲ್‌ಎಸ್‌ಐ 2010, ಬೆಂಗಳೂರು ದಿನಾಂಕ : 30-7-10

ಕಾರ್ಮಿಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು ಇಲಾಖೆಯ ವೈದ್ಯಾಧಿಕಾರಿಗಳಿಗೆ ಕಾಲಬದ್ಧ ಪದೋನ್ನತಿ ನೀಡಿ ಹೊರಡಿಸಲಾದ ಅಧಿಸೂಚನೆ ಸಂಖ್ಯೆ : ಕಾಇ 8 ಎಲ್‌ಎಸ್‌ಐ 2008 ದಿನಾಂಕ : 5-12-2008ರ ಕ್ರಸಂ. 21 ರಲ್ಲಿರುವ ಡಾ॥ ಬಿ.ಸಿ.ವಾಸಂತಿ, ಕಿರಿಯ ತಜ್ಞರು, ಕಾರಾವಿ ಚಿಕಿತ್ಸಾಲಯ, ಮಂಡ್ಯ ಇವರ ಜನ್ಮ ದಿನಾಂಕ : 20-12-1962 ಮತ್ತು ವಿದ್ಯಾರ್ಹತೆ M.B.B.S. D.C.H., ಎಂದು ಇರುವುದನ್ನು ಜನ್ಮ ದಿನಾಂಕ 20-12-1961 ಹಾಗೂ ವಿದ್ಯಾರ್ಹತೆ M.B.B.S. D.O.M.S., ಎಂದು ತಿದ್ದುಪಡಿ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಗೋವಿಂದಸ್ವಾಮಿ)
ಪೀಠಾಧಿಕಾರಿ,
ಕಾರ್ಮಿಕ ಇಲಾಖೆ (ಕಾರಾವಿ ಯೋ (ವೈ) ಸೇವೆಗಳು)

ಪಿ. ಆರ್. 2158

ENERGY SECRETARIAT

Sub : Establishment of Gas Based Power Projects in the State of Karnataka-Constitution of Committee to Study the modalities of pricing of gas and to tie up with GAIL regarding LNG Contract.

Read : i) Letter No. A1 R1 A (PS) dated 16-7-2010 received from the Managing Director, Karnataka Power Corporation Limited.

ii) Proceedings of Load Management meeting held on 9-7-2010 under the chairmanship of Chief Secretary, Govt. of Karnataka.

PREAMBLE :

1. Government of Karnataka has entered into Memorandum of Understanding (MoU) with M/s. Gas Authority of India Ltd. (GAIL) on 29-4-2009 for natural gas infrastructure and city gas distribution. Under this agreement GAIL will lay two gas pipe line in the State.

a) Dabhol to Bangalore-(Trunk line-746 Kms, Spur line 650 kms)

b) Kochi-Kanjirrkod-Bangalore pipeline and Kochi – Kanjirrkod Mangalore pipeline- (Trunk line 862 kms, Spur line -252 kms)

With the objective of maximizing the gains from the gas pipe line running across the State, Govenrment is endeavouring to develop gas based power plants all along the trunk and spur lines proposed which pass through the Districts of Belgaum, Gadag, Davanagere, Chitradurga, Tumkur and reach Bidadi.

2. The pipeline configuration of Dabhol-Bangalore trunk line of 746 kms with a diameter of 30" and a branch line (spur) of 650 kms with a diameter of 18"/10"/8". The designed capacity is for 16 Million Metric Standard Cubic Meters per Day (MMSCMD) capacity. The Dabhol to Bangalore pipeline is likely to get the commissioned by 2012 and the Kochi-Kanjirrkod-Bangalore pipeline and Kochi-Kanjirrkod- Mangalore pipeline by 2013.

3. Managing Director, Karnataka Power Corporation Limited, in the letter read at (1) above has stated as follows :

a) Karnataka Power Corporation Limited has made all arrangements for starting the work on the construction of 1400 MW Gas-based Combined Cycle Power Project at Bidadi using the water treated for this purpose at the Bangalore Water Supply & Sewerage Board Sewerage Treatment Plant near Kengeri. The last date for receiving final tender papers is 10-8-2010 for EPC contract for construction of the power plant.

b) The power plant construction will be completed in all respects by December 2012 i.e., within a period of 30 months if not earlier. The GAIL gas pipeline is expected to be completed around the same time. Combining with these two facilities, KPCL has to complete immediately the arrangements for medium/long term gas supply for the plant through the said pipeline from one of the GAIL owned terminals at Dhabol/Cochin/Dahej. For this purpose, GAIL has been pursuing with KPCL to buy gas from them. They are also persuading KPCL to finalize the gas purchase agreement with them for long or medium term at certain price lines they are indicating. Similarly, IOCL and BPCL have also expressed keen interest in supplying gas from the same terminals independently from their own source at rates which they say would be reasonable and cheaper.

c) Karnataka Power Corporation Limited has to finalize gas supply agreement with one of these three agencies, all of which are owned by the Ministry of Petroleum & Natural Gas, Government of India. It is also affirmed by all the three of them that purchase of LNG from abroad by any of them would be governed by the price equalization order of the Government of India. However, all these points need to be finally tackled and agreement concluded at the earliest.

Karnataka Power Corporation Limited has also appointed a consultant in this regard to advise it on certain technical matters including purchase of LNG. Negotiation with these Companies for firming up of gas price (based on LNG supply agreements with foreign suppliers by GAIL/IOCL/BPCL) in the volatile LNG market in Asia is a Complicated and risky task.

Government vide order No. EN 48 PPC 2009 dated 14-5-2010 has nominated KPCL as the anchor with GAIL to ensure long term gas supply for Bidadi Gas based Power Project.

4. In the Load Management Meeting held under the chairmanship of the Chief Secretary on 9-7-2010, a decision was taken to constitute an official committee consisting of the following officers to work out modalities of pricing of gas and to tie up with GAIL regarding LNG contract :

i) Principal Secretary to Govt., Energy Department, Government of Karnataka.
ii) Principal Secretary to Govt., Finance Department, Government of Karnataka.
iii) Secretary to Chief Minister, Government of Karnataka.
iv) Managing Director, Karnataka Power Corporation Limited.
v) Managing Director, Karnataka Power Transmission Corporation Limited (KPTCL)

5. The matter has been examined and hence the following Order :

GOVERNMENT ORDER NO. EN 48 PPC 2009, BANGALORE DATED: 4th August 2010.

Under the circumstances explained in the preamble, Government accords approval for the following;

(a) to constitute a Committee with the following Officers to work out the modalities of pricing of gas for the power projects to be supplied by GAIL/IOC/BPCL & other matters regarding LNG Contract ;

i)	Principal Secretary to Govt., Energy Department, Government of Karnataka	-	Chairman
ii)	Principal Secretary to govt. Finance Department, Government of Karnataka	-	Member
iii)	Secretary to Chief Minister, Government of Karnataka	-	Member
iv)	Managing Director, Karnataka Power Transmission Corporation Limited (KPTCL)	-	Member
v)	Managing Director, Karnataka Power Corporation Limited (KPCL)	-	Member-Secretary

b) The Committee shall submit its Report to the Government within a period of one month.

By Order and in the name of the Governor of Karnataka,

(S.J. Sampath Kumar)
Under Secretary to Government,
Energy Department.

P.R.2159

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ತಿದ್ದೋಲೆ

ಸಂಖ್ಯೆ : ಸಿಆಸುಇ 159 ಸಿಶಾಸೇ 2010, ಬೆಂಗಳೂರು ದಿನಾಂಕ : 9-8-10

ಕರ್ನಾಟಕ ಸರ್ಕಾರ ಸಚಿವಾಲಯದ (ನೇಮಕಾತಿ) ನಿಯಮಗಳು, 1992 ರನ್ವಯ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಸೂಚಿಸಿದ 5 ಅಂಗವಿಕಲ ಅಭ್ಯರ್ಥಿಗಳನ್ನು ಕರ್ನಾಟಕ ಸರ್ಕಾರ ಸಚಿವಾಲಯದ ಶಾಖಾಧಿಕಾರಿ ಹುದ್ದೆಗೆ ನೇಮಕಾತಿ ಮಾಡಿ ಹೊರಡಿಸಿದ ಅಧಿಸೂಚನೆ ಸಂಖ್ಯೆ : ಸಿಆಸುಇ 252 ಸಿಶಾಸೇ 2008, ದಿನಾಂಕ : 19-3-2009 ರಲ್ಲಿನ ಕಂಡಿಕೆ-3ರ ಕ್ರಮ ಸಂಖ್ಯೆ : 5 ರಲ್ಲಿರುವ ಅಭ್ಯರ್ಥಿಯ ಹೆಸರನ್ನು "ಶ್ರೀ ಶಂಕರೇಗೌಡ ದೊಡ್ಡಮನಿ" ಎಂಬುದರ ಬದಲಾಗಿ " ಶ್ರೀ ಶಂಕರಗೌಡ ದೊಡ್ಡಮನಿ" ಎಂಬುದಾಗಿ ತಿದ್ದಿಕೊಂಡು ಓದಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಎಸ್.ಎನ್. ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸಿಬ್ಬಂದಿ)

ಪಿ. ಆರ್. 2160

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : 2010-11ನೇ ಸಾಲಿಗೆ ಕೆಳದಿ ವಸ್ತು ಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರ ಇವರಿಗೆ ನಿಗದಿ ಪಡಿಸಿರುವ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಅವರ ಪತ್ರ ಸಂಖ್ಯೆ ; ಡಿಎಎಂ/ಎಸಿಟಿ/1/21/2010-11, ದಿನಾಂಕ : 28-6-2010.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 28-6-2010ರ ಪತ್ರದಲ್ಲಿ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಇವರು ಪ್ರಸ್ತಾವನೆ ಸಲ್ಲಿಸಿ ಕುವೆಂಪು ವಿಶ್ವವಿದ್ಯಾನಿಲಯ ಇವರ ದಿನಾಂಕ : 9-6-2010ರ ಪತ್ರವನ್ನು ಉಲ್ಲೇಖಿಸಿ ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನ ಕೇಂದ್ರ, ಕೆಳದಿ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರಿಗೆ ಸಿಬ್ಬಂದಿಯ ವೇತನ ಮತ್ತು ಭತ್ಯೆಗಳಿಗಾಗಿ 2010-11ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 2205-00-103-0-01 (ಯೋಜನೇತರ) 101 ಸಹಾಯಾನುದಾನ ಇದರಡಿಯಲ್ಲಿ ಕೆಳದಿ ವಸ್ತು ಸಂಗ್ರಹಾಲಯಕ್ಕೆ ನಿಗದಿ ಪಡಿಸಲಾಗಿರುವ ಅನುದಾನ ರೂ. 7.63 ಲಕ್ಷವನ್ನು ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ ಇವರಿಗೆ ಪೇಯಿಸ್ ರಸೀತಿ ಮೂಲಕ ಬಿಡುಗಡೆ ಮಾಡಲು ಮಂಜೂರಾತಿ ಆದೇಶ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ ಸಂಖ್ಯೆ : ಕಸಂವಾಪ್ರ 139 ಕೆಎಂಯು 2010, ಬೆಂಗಳೂರು, ದಿನಾಂಕ : 5-8-2010

ಕೆಳದಿ ವಸ್ತು ಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರದ ಸಿಬ್ಬಂದಿಯ ವೇತನ ಮತ್ತು ಭತ್ಯೆಗಳಿಗಾಗಿ 2010-11ನೇ ಸಾಲಿನಲ್ಲಿ ನಿಗದಿ ಪಡಿಸಲಾಗಿರುವ ಅನುದಾನ ರೂ. 7.63 ಲಕ್ಷಗಳಲ್ಲಿ ಮೊದಲನೇ ಕಂತಾಗಿ ರೂ. 3.81 ಲಕ್ಷ (ರೂ. ಮೂರು ಲಕ್ಷ ಎಂಭತ್ತೊಂದು ಸಾವಿರ ಮಾತ್ರ) ಗಳನ್ನು ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ, ಶಿವಮೊಗ್ಗ ಇವರಿಗೆ ಪೇಯಿಸ್ ರಸೀತಿ ಮೂಲಕ ಬಿಡುಗಡೆ ಮಾಡಲು ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಇವರಿಗೆ ಈ ಮೂಲಕ ಸರ್ಕಾರ ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2205-00-103-0-01 (ಯೋಜನೇತರ) 101 ಸಹಾಯಾನುದಾನ ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರು ಟಿಪ್ಪಣಿ ಸಂಖ್ಯೆ : ಶಿಇ 1349 ಐಎಫ್ (ಬಿ&ಎ) 2010, ದಿನಾಂಕ : 19-7-2010 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಎಂ. ಕೆ. ಧರ್ಮರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಪಿ. ಆರ್. 2161

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : 2010-11ನೇ ಸಾಲಿನಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಇಲಾಖೆಯ ಅಧಿಕಾರಿಗಳ ಉಪಯೋಗಕ್ಕಾಗಿ ಬಾಹ್ಯ ಮೂಲದಿಂದ ವಾಹನ ಸೌಲಭ್ಯ ಪಡೆಯುವ ಬಗ್ಗೆ.

ಓದಲಾಗಿದೆ : ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು ಇವರ ಪತ್ರ ಸಂಖ್ಯೆ ; ಡಿಎಎಂ/ಎಸಿಟಿ/1/6/2009-10, ದಿನಾಂಕ : 12-5-2010.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 12-5-2010ರ ಪತ್ರದಲ್ಲಿ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಇವರು 2009-10ನೇ ಸಾಲಿನಲ್ಲಿ ಮುಂದುವರಿದ ಹೊಸ ಘಟಕಗಳ ಅಡಿಯಲ್ಲಿ ಇಲಾಖೆಯ ಕಾಮಗಾರಿಗಳ ಮೇಲ್ವಿಚಾರಣೆ ಮತ್ತು ಇತರೆ ಉದ್ದೇಶಗಳಿಗೆ ದಿನಾಂಕ 20-3-2010ರ ಸರ್ಕಾರಿ ಆದೇಶ ಸಂಖ್ಯೆ ಕಸಂವಾಪ್ರ 215 ಕೆಎಂಯು 2009 ರಲ್ಲಿ ಮೂರು ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಮಂಜೂರಾತಿ ನೀಡಲಾಗಿದೆ. 2010-11ನೇ ಸಾಲಿನಲ್ಲಿ ಈ ಇಲಾಖೆಯ ಯೋಜನಾ ಕಾರ್ಯಕ್ರಮಕ್ಕೆ ರೂ. 1733.01 ಹಾಗೂ ಯೋಜನೇತರ ಬಾಬ್ತಿನಲ್ಲಿ ರೂ 137.89 ಲಕ್ಷಗಳನ್ನು ನಿಗದಿಪಡಿಸಿದ್ದು, ಇದಕ್ಕನುಗುಣವಾಗಿ ಇಲಾಖೆಯಿಂದ ಅನೇಕ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು ಇವುಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕಾಗಿರುತ್ತದೆ. ಈ ಕಾಮಗಾರಿಗಳ ಪ್ರಗತಿ ವೀಕ್ಷಿಸಲು ಇಲಾಖೆಯ ಉಪನಿರ್ದೇಶಕರು ಹಾಗೂ ಪುರಾತತ್ವ ಸಂರಕ್ಷಣಾ ಇಂಜಿನಿಯರ್‌ಗಳು ಆಗಿಂದಾಗ್ಗೆ ಪ್ರಯಾಣ ಕೈಗೊಳ್ಳಬೇಕಾಗಿರುವುದರಿಂದ ವಾಹನದ ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿ ಕಳೆದ ವರ್ಷ ಮಂಜೂರಾಗಿರುವ ಮೂರು ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಜೂನ್ 2010 ರಿಂದ ಮಾರ್ಚ್ 2011 ರವರೆಗೆ ಅಂದರೆ 10 ತಿಂಗಳುಗಳಿಗೆ ಮುಂದುವರೆಸಬೇಕಾಗಿರುತ್ತದೆ. ಒಂದು ವಾಹನಕ್ಕೆ ತಿಂಗಳಿಗೆ ರೂ. 20,000 (ರೂ. ಇಪ್ಪತ್ತು ಸಾವಿರ ಮಾತ್ರ) ದಂತೆ 10 ತಿಂಗಳಿಗೆ ರೂ. 2.00 ಲಕ್ಷ ತಗುಲಲಿದ್ದು, ಒಟ್ಟು ಮೂರು ವಾಹನಕ್ಕೆ ರೂ. 6.00 ಲಕ್ಷ ವೆಚ್ಚವಾಗಲಿದೆ. ಈ ವೆಚ್ಚವನ್ನು ಪ್ರಸಕ್ತ ಸಾಲಿನ ಲೆಕ್ಕಶೀರ್ಷಿಕೆ 2205-00-103-0-0 (ಯೋಜನೆ) 059 ಇತರೆ ಖರ್ಚು ಅಡಿಯಲ್ಲಿ ಭರಿಸಲಾಗುವುದೆಂದು ತಿಳಿಸಿ, ಈ ಬಗ್ಗೆ ಸರ್ಕಾರದ ಮಂಜೂರಾತಿ ಆದೇಶ ನೀಡುವಂತೆ ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಕಸಂವಾಪ್ರ 107 ಕೆಎಂಯು 2010, ಬೆಂಗಳೂರು, ದಿನಾಂಕ : 6-8-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2010-11 ನೇ ಸಾಲಿನಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಇಲಾಖೆಯ ಅಧಿಕಾರಿಗಳ ಉಪಯೋಗಕ್ಕಾಗಿ ಬಾಹ್ಯ ಮೂಲದಿಂದ 3 ವಾಹನಗಳನ್ನು ಜೂನ್ 2010 ರಿಂದ ಮಾರ್ಚ್ 2011 ರವರೆಗೆ (10 ತಿಂಗಳು) ಬಾಡಿಗೆ ಆಧಾರದ ಮೇಲೆ ಪಡೆಯಲು ರೂ. 6.00 ಲಕ್ಷ (ರೂ. ಆರು ಲಕ್ಷಗಳು ಮಾತ್ರ) ಗಳನ್ನು ನಿರ್ದೇಶಕರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಇವರಿಗೆ ಬಿಡುಗಡೆ ಮಾಡಿದೆ.

ಈ ವೆಚ್ಚವನ್ನು 2010-11ನೇ ಸಾಲಿನ ಲೆಕ್ಕಶೀರ್ಷಿಕೆ 2205-00-103-0-01 (ಯೋಜನೆ)-059 ಇದರಡಿ ಭರಿಸತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಕನ್ನಡ ಮತ್ತು ಸಂಸ್ಕೃತಿ, ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ ಅವರು ಅನಧಿಕೃತ ಟಿಪ್ಪಣಿ ಸಂಖ್ಯೆ : ಶಿಇ 1426 ಐಎಫ್ (ಬಿ&ಎ) 2010, ದಿನಾಂಕ : 24-7-2010 ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಎಂ. ಕೆ. ಧರ್ಮರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಪಿ. ಆರ್. 2162

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಯಲ್ಲಿ ಮುಂದುವರೆದ ಯೋಜನಾ ಕಾರ್ಯಕ್ರಮದ ಅಡಿಯಲ್ಲಿ 2007-08ನೇ ಸಾಲಿನ ಹೊಸ ಘಟಕಗಳಡಿಯಲ್ಲಿ ಮಂಜೂರಾದ ಮರಾತತ್ವ ಸಂರಕ್ಷಣಾ ಸಹಾಯಕರ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :
1. **ಸರ್ಕಾರದ ಆದೇಶ ಸಂ : ಕಸಂವಾಪ್ರ 70 ಸ್ಥೀಮರ 2007, ದಿನಾಂಕ : 18-8-2007**
2. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಇವರ ದಿನಾಂಕ : 23-6-2010 ರಂದು ಕೊನೆಗೊಂಡ ಪತ್ರ ಸಂಖ್ಯೆ ; ಡಿಎಎಂ:ಇಎಸ್‌ಟಿ. 1 : ಕಸಂ. 255(3) : 2010-11/15.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ : 18-8-2007 ರ ಸರ್ಕಾರಿ ಆದೇಶದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಗೆ ಸಂಬಂಧಿಸಿದಂತೆ ಇಲಾಖೆಯಲ್ಲಿ ಮುಂದುವರೆದ ಯೋಜನಾ ಕಾರ್ಯಕ್ರಮದ ಅಡಿಯಲ್ಲಿ 2007-08ನೇ ಸಾಲಿನ ಹೊಸ ಘಟಕಗಳಡಿಯಲ್ಲಿ ಮಂಜೂರಾದ 4 ಮರಾತತ್ವ ಸಂರಕ್ಷಣಾ ಸಹಾಯಕರ ಹುದ್ದೆಗಳನ್ನು 12ನೇ ಹಣಕಾಸು ಆಯೋಗದ ಅವಧಿಯವರೆಗೆ ಸೃಜಿಸಲಾಗಿದೆ.

ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಇವರು ಪ್ರಸ್ತಾವನೆ ಸಲ್ಲಿಸಿ 12ನೇ ಹಣಕಾಸು ಆಯೋಗದ ಅವಧಿಯು ದಿನಾಂಕ : 31-3-2010ಕ್ಕೆ ಮುಕ್ತಾಯಗೊಂಡಿದ್ದು, ಇದರ ಅಡಿಯಲ್ಲಿ ಇಲಾಖೆಯು ಹಮ್ಮಿಕೊಂಡಿರುವ ಸ್ಮಾರಕಗಳ, ಸಂರಕ್ಷಣಾ ಕಾರ್ಯಕ್ರಮಗಳು ಇನ್ನು ಪೂರ್ಣವಾಗದೆ ಬಾಕಿಯಿರುವುದರಿಂದ ಮತ್ತು 2010-11ನೇ ಸಾಲಿಗೆ ರಾಜ್ಯ ಸರ್ಕಾರದ ಅನುದಾನವು ಕೂಡ ಹೆಚ್ಚಾಗಿದ್ದು, ಎಲ್ಲಾ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಪೂರೈಸಬೇಕಾದಲ್ಲಿ ಉಸ್ತುವಾರಿಗಾಗಿ ಸದರಿ ನಾಲ್ಕು (4) ಮರಾತತ್ವ ಸಂರಕ್ಷಣಾ ಸಹಾಯಕರುಗಳ ಸೇವೆಯು ಅವಶ್ಯಕವಾಗಿರುತ್ತದೆಯೆಂದು ತಿಳಿಸಿ ಸದರಿ ಹುದ್ದೆಗಳನ್ನು ಮುಂದುವರಿಸುವಂತೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಕಸಂವಾಪ್ರ 99 ಕೆಎಂಯು 2010, ಬೆಂಗಳೂರು, ದಿನಾಂಕ : 6-8-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಇಲ್ಲಿನ ನಾಲ್ಕು (4) ಮರಾತತ್ವ ಸಂರಕ್ಷಣಾ ಸಹಾಯಕರುಗಳ ಹುದ್ದೆಗಳನ್ನು ದಿನಾಂಕ : 1-4-2010 ರಿಂದ 31-3-2011ರ ವರೆಗೆ ಒಂದು ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಿದೆ.

ಇದಕ್ಕೆ ತಗಲುವ ವೆಚ್ಚವನ್ನು 2010-11ನೇ ಸಾಲಿನ ಲೆಕ್ಕಶೀರ್ಷಿಕೆ 2205-00-103-0-01 (ಯೋಜನೆ)-059 ಇತರೆ ಖರ್ಚು ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ 10-7-1996ರಲ್ಲಿ ಇಲಾಖೆಯ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
(ಎಂ. ಕೆ. ಧರ್ಮರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಪಿ. ಆರ್. 2163

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಶ್ರೀ ಪ್ರಕಾಶ್ ವಿ. ಮತ್ತಿಹಳ್ಳಿ, ಸಾಂಖ್ಯಿಕ ನಿರೀಕ್ಷಕರು, ಇವರಿಗೆ ಶಿಸ್ತು ಪ್ರಾಧಿಕಾರವು ವಿಧಿಸಿರುವ ದಂಡನಾ ಆದೇಶದ ವಿರುದ್ಧ ಸರ್ಕಾರಕ್ಕೆ ಸಲ್ಲಸಿರುವ ಮೇಲ್ಮನವಿಯ ಕುರಿತು.

ಓದಲಾಗಿದೆ : 1) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರ ದಂಡನಾ ಆದೇಶ ಸಂಖ್ಯೆ: ಆಸಾಂನಿ/174/ಆಜಳಿತ-2/2007-08 ದಿನಾಂಕ: 14-12-2009.

2) ಶ್ರೀ ಪ್ರಕಾಶ್ ವಿ. ಮತ್ತಿಹಳ್ಳಿ, ಸಾಂಖ್ಯಿಕ ನಿರೀಕ್ಷಕರು, ಇವರು ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ: 02-02-2010 ರ ಮೇಲ್ಮನವಿ.

ಪ್ರಸ್ತಾವನೆ :

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸಮೂಹ 'ಸಿ' ವೃಂದದ ನೌಕರರಾದ ಶ್ರೀ ಪ್ರಕಾಶ್ ವಿ. ಮತ್ತಿಹಳ್ಳಿ, ಸಾಂಖ್ಯಿಕ ನಿರೀಕ್ಷಕರು ಇವರಿಗೆ, ಶಿಸ್ತು ಪ್ರಾಧಿಕಾರವಾದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರು ಸದರಿ ನೌಕರರ ವಿರುದ್ಧದ ಜಂಟಿ ಇಲಾಖಾ ವಿಚಾರಣೆಯಲ್ಲಿ ವಿಚಾರಣಾಧಿಕಾರಿಗಳು ಮಾಡಿರುವ ಶಿಫಾರಸ್ಸುಗಳನ್ನು ಪರಿಶೀಲಿಸಿ, ಈ ನೌಕರರ ಮೇಲೆ ಹೊರಿಸಲಾದ ಆರೋಪಗಳು ಸದರಿ ಜಂಟಿ ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿದ್ದುದರಿಂದ, ಅವರ ವಿರುದ್ಧದ ಆರೋಪಗಳು ಗಂಭೀರ ಸ್ವರೂಪದ ಆರೋಪಗಳಾಗಿದ್ದು, ಈ ನೌಕರರಿಗೆ ಕಠಿಣ ದಂಡನೆಯನ್ನು ವಿಧಿಸಬಹುದಾಗಿದ್ದರೂ, ಆಪಾದಿತ ನೌಕರರ ನಡವಳಿಕೆಯಲ್ಲಿ ಸುಧಾರಿಸುವಂತೆ ಎಚ್ಚರಿಕೆ ನೀಡಿ ಹಾಗೂ ಸುಧಾರಿಸಿಕೊಳ್ಳಲು ಅವಕಾಶ ಒದಗಿಸಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ಇವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿರುತ್ತಾರೆ. ಸದರಿ ದಂಡನಾ ಆದೇಶದ ವಿರುದ್ಧ ಈ ನೌಕರರು ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ) ನಿಯಮಗಳು 1957 ರ ನಿಯಮ 18ರ ಮೇರೆಗೆ ಸರ್ಕಾರಕ್ಕೆ ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಈ ನೌಕರರು ಸರ್ಕಾರಕ್ಕೆ ಸಲ್ಲಸಿರುವ ಮೇಲ್ಮನವಿಯನ್ನು ಸದರಿ ನಿಯಮಗಳ ನಿಯಮ 25 (2) ರನ್ವಯ ಸಂಬಂಧಿತ ಇತರೆ ಎಲ್ಲಾ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ.

ಈ ಪ್ರಕರಣದ ಸಾರಾಂಶವು ಈ ರೀತಿ ಇರುತ್ತದೆ. ಶ್ರೀ ಪ್ರಕಾಶ್ ವಿ. ಮತ್ತಿಹಳ್ಳಿ, ಸಂಖ್ಯಿಕ ನಿರೀಕ್ಷಕರು ಇವರು ಹಾವೇರಿಯ ಲೋಕೋಪಯೋಗಿ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಸಹಾಯಕ ಸಾಂಖ್ಯಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಎಸ್.ಹೆಚ್. ವೆಂಕಣ್ಣವರ ಮತ್ತು ಅದೇ ಕಛೇರಿಯ ಮತ್ತೂಬ್ಬ ಸಾಂಖ್ಯಿಕ ನಿರೀಕ್ಷಕರಾದ ಶ್ರೀ ಆರ್.ಎಂ.ಕುಲಕರ್ಣಿ ಇವರನ್ನು ಜೊತೆಗೂಡಿಸಿಕೊಂಡು ಅಂದಿನ ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯಾಗಿದ್ದ ಶ್ರೀ ಎನ್.ಎಸ್. ನಾಗಶೆಟ್ಟಿ ಅವರ ಮೇಲೆ ದ್ವೇಷವನ್ನು ಸಾಧಿಸುವ ಉದ್ದೇಶದಿಂದ ಅವರ ವಿರುದ್ಧ ಒಟ್ಟು 19 ಆಪಾದನೆಗಳನ್ನೊಳಗೊಂಡ ದೂರು ಅರ್ಜಿಯನ್ನು ನೇರವಾಗಿ ಅಂದಿನ ಮಾನ್ಯ ಯೋಜನಾ ಸಚಿವರಿಗೆ ಸಲ್ಲಸಿದ್ದರಿಂದ, ಸದರಿ ದೂರು ಅರ್ಜಿಯ ಬಗ್ಗೆ ಸರ್ಕಾರದ ನಿರ್ದೇಶನದಂತೆ ಹಾವೇರಿ ಜಿಲ್ಲಾಧಿಕಾರಿಗಳಿಂದ ತನಿಖೆಯನ್ನು ನಡೆಸಿ, ಸದರಿ ತನಿಖೆಯಲ್ಲಿ ಎಲ್ಲಾ 19 ಆಪಾದನೆಗಳು ಸತ್ಯಕ್ಕೆ ದೂರವಾದವುಗಳೆಂದು ರುಜುವಾತಾದ ಕಾರಣ, ಈ ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 ಮತ್ತು ನಿಯಮ 27 ನ್ನು ಉಲ್ಲಂಘಿಸಿದಂತಾಗಿದ್ದು, ಈ 3 ನೌಕರರು ಸಮೂಹ 'ಸಿ' ವೃಂದದ ನೌಕರರಾಗಿದ್ದುದರಿಂದ ಇವರ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ಸರ್ಕಾರವು ತೀರ್ಮಾನಿಸಿ, ಅದರಂತೆಯೆ ಮುಂದಿನ ಕ್ರಮ ಕೈಗೊಳ್ಳುವಂತೆ ಶಿಸ್ತು ಪ್ರಾಧಿಕಾರವಾದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರಿಗೆ ಸೂಚಿಸಲಾಗಿತ್ತು. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರು ಮೇಲ್ಕಾಣಿಸಿದ ಸಿ.ಸಿ.ಎ. ನಿಯಮಗಳ ನಿಯಮ 13ರ ಮೇರೆಗೆ ಈ ನೌಕರರ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ಒಬ್ಬ ನಿವೃತ್ತ ನ್ಯಾಯಾಧೀಶರನ್ನು ನೇಮಿಸಿ, ಸದರಿ ಇಲಾಖಾ ವಿಚಾರಣೆಯಲ್ಲಿ ಶ್ರೀ ಪ್ರಕಾಶ್ ವಿ. ಮತ್ತಿಹಳ್ಳಿ, ಸಾಂಖ್ಯಿಕ ನಿರೀಕ್ಷಕರು ಇವರ ದುರ್ನಡತೆಯು ಸಾಬೀತಾಗಿದ್ದುದರಿಂದ, ಶಿಸ್ತು ಪ್ರಾಧಿಕಾರವಾದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರು ಶ್ರೀ ಪ್ರಕಾಶ್ ವಿ. ಮತ್ತಿಹಳ್ಳಿ, ಸಾಂಖ್ಯಿಕ ನಿರೀಕ್ಷಕರು ಇವರಿಗೆ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿರುತ್ತಾರೆ.

ಈ ನೌಕರರು, ತಮಗೆ ಉಂಟಾಗುತ್ತಿದ್ದ ಅವಮಾನ, ಅಸಮಾಧಾನ ಮತ್ತು ಮಾನಸಿಕ ಹಿಂಸೆ, ದೌರ್ಜನ್ಯ ಹಾಗೂ ಜಾತಿ ಕೀಳರಿಮೆ ಮತ್ತು ನಿರಂತರ ಕಿರುಕುಳದ ಪ್ರತಿಫಲವಾಗಿ ಮನನೊಂದು ಅನ್ಯ ಮಾರ್ಗವಿಲ್ಲದೆ ಅಂದಿನ ಕಛೇರಿ ಮುಖ್ಯಸ್ಥರಾಗಿದ್ದ ಹಾವೇರಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ವಿರುದ್ಧ ನೇರವಾಗಿ ಅಂದಿನ ಮಾನ್ಯ ಯೋಜನಾ ಸಚಿವರಿಗೆ ದೂರು ಅರ್ಜಿಯನ್ನು ಸಲ್ಲಿಸಲಾಗಿತ್ತೆಂದು ನೀಡಿರುವ ಹೇಳಿಕೆಯನ್ನು ಗಮನಿಸಲಾಗಿದೆ. ಸಾಮಾನ್ಯವಾಗಿ ಹಾಗೂ ಸ್ವಾಭಾವಿಕವಾಗಿ ಯಾವುದೇ ವ್ಯಕ್ತಿಯೂ ಮತ್ತೊಬ್ಬ ವ್ಯಕ್ತಿಯ ವಿರುದ್ಧ ಕಾರಣವಿಲ್ಲದೇ ದೂರು ಅರ್ಜಿಯನ್ನು ಸಲ್ಲಿಸಲು ಸಾಧ್ಯವಿಲ್ಲವೆಂದು ಹಾಗೂ ಬಲವಾದ ಕಾರಣಗಳಿದ್ದಾಗಲೇ ಇಂತಹ ಕೃತ್ಯಕ್ಕೆ ಕೈ ಹಾಕುವ ಸಾಧ್ಯತೆ ಇರುತ್ತದೆಂಬುದಾಗಿ ಅಭಿಪ್ರಾಯಪಡಲಾಗಿದೆ. ಈ ಅಂಶವನ್ನು ಈ ಸಂಧರ್ಭದಲ್ಲಿ ತುಲನಾತ್ಮಕವಾಗಿ, ನ್ಯಾಯೋಚಿತವಾಗಿ ಮತ್ತು ನಿಷ್ಪಕ್ಷಪಾತವಾಗಿ ಗಮನಿಸುವ ಅವಶ್ಯಕತೆ ಇರುತ್ತದೆ. ಆದಾಗ್ಯೂ ಈ ನೌಕರರು ತಮ್ಮ ಕಾರ್ಯನಿರ್ವಹಣೆಯ ಹಾಗೂ ಸಂಬಂಧಪಟ್ಟ ಸೇವಾ ನಿಯಮಗಳ ಚೌಕಟ್ಟಿನ ಎಲ್ಲೆಯನ್ನು ಮೀರಿ ಕಛೇರಿ ಮುಖ್ಯಸ್ಥರ ಬಗ್ಗೆ ನೇರವಾಗಿ ಮಾನ್ಯ ಇಲಾಖಾ ಸಚಿವರಿಗೆ ದೂರು ಅರ್ಜಿಯನ್ನು ಸಲ್ಲಸಿರುವುದು ನಿಯಮಬಾಹಿರ ಕೃತ್ಯವಾಗಿರುತ್ತದೆ. ಇವರು ತಮ್ಮ ಅಹವಾಲನ್ನು ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸಬಹುದಾಗಿತ್ತು.

ಆದಾಗ್ಯೂ, ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವಂತೆ ಈ ನೌಕರರ ದುರ್ನಡತೆಯ ಯಾವುದೇ ಅತ್ಯಂತ ಗಂಭೀರ ಸ್ವರೂಪದ ದುರ್ನಡತೆಯಾಗಿರುವುದಿಲ್ಲವಾದ್ದರಿಂದ, ಅಂದರೆ ಇವರಿಂದ ಸರ್ಕಾರದ ಹಣದ ದುರುಪಯೋಗವಾಗಲಿ ಅಥವಾ ಯಾವುದೇ ಕ್ರಿಮಿನಲ್ ಅಪರಾಧವಾಗಲಿ ಎಸಗಿರುವುದು ಕಂಡುಬರುತ್ತಿಲ್ಲವಾದ್ದರಿಂದ ಇವರಿಗೆ ಶಿಸ್ತು ಪ್ರಾಧಿಕಾರವಾದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರು ಮೇಲೆ ಓದಲಾದ ಆದೇಶದಲ್ಲಿ ವಿಧಿಸಿರುವ ದಂಡನೆಯನ್ನು ರದ್ದುಪಡಿಸಿ, ಇನ್ನುಮುಂದೆ ಇಂತಹ ದುರ್ವರ್ತನೆ ಮರುಕಳಿಸದಂತೆ ಎಚ್ಚರಿಕೆಯಿಂದ ವರ್ತಿಸತಕ್ಕದ್ದೆಂದು ಸೂಚಿಸಿ, ಇವರಿಗೆ ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ) ನಿಯಮಗಳು 1957 ರ ನಿಯಮ 8 (i) ರ ಮೇರೆಗೆ ವಾಗ್ದಂಡನೆ ವಿಧಿಸಲು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಪಿಡಿ 24 ಎಸ್‌ಎಂಸಿ 2010 ಬೆಂಗಳೂರು, ದಿನಾಂಕ: 29-07-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಮೇಲ್ಮನವಿ ಪ್ರಾಧಿಕಾರವಾದ ಸರ್ಕಾರವು ಶ್ರೀ ಪ್ರಕಾಶ್ ವಿ. ಮತ್ತಿಹಳ್ಳಿ, ಸಾಂಖ್ಯಿಕ ನಿರೀಕ್ಷಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಪ್ರಸ್ತುತ ನಿಯೋಜನೆ ಮೇರೆಗೆ ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರ ಆಪ್ತ ಸಹಾಯಕರು ಇವರಿಗೆ ಶಿಸ್ತು ಪ್ರಾಧಿಕಾರವಾದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶಕರು ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಆದೇಶದಲ್ಲಿ ವಿಧಿಸಿರುವ ದಂಡನೆಯನ್ನು ರದ್ದುಪಡಿಸಿ, ಇನ್ನುಮುಂದೆ ಇಂತಹ ದುರ್ವರ್ತನೆ ಮರುಕಳಿಸದಂತೆ ಎಚ್ಚರಿಕೆಯಿಂದ ವರ್ತಿಸತಕ್ಕದ್ದೆಂದು ಸೂಚಿಸಿ, ಸದರಿ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಗಳು 1957 ರ ನಿಯಮ 8 (ii) ರ ಮೇರೆಗೆ ವಾಗ್ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ವಿ. ಸಾಯಿಬಾಬ)

ಸರ್ಕಾರದ ಅಧೀನ ಕಾರ್ಯದರ್ಶಿ

ಯೋಜನೆ, ಕಾರ್ಯಕ್ರಮ ಸಂಯೋಜನೆ

ಮತ್ತು ಸಾಂಖ್ಯಿಕ ಇಲಾಖೆ (ಎಸ್-5)

ಪಿ.ಆರ್. 2059

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯನ್ನು ವಿಭಜಿಸಿ ಯಾದಗಿರಿ ಜಿಲ್ಲೆಯನ್ನು ಹೊಸದಾಗಿ ಸ್ಥಾಪಿಸಲಾಗಿರುವುದರಿಂದ ಇಲಾಖೆಯ ಸಿಬ್ಬಂದಿ ಮಾದರಿ ರಚನೆಯನ್ನು ಮರು ವಿನ್ಯಾಸಗೊಳಿಸುವ ಬಗ್ಗೆ.

ಓದಲಾಗಿದೆ :

1) ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ 59 ಭೂದಾಮು 2008 ದಿ: 26-12-2009.
2) ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 1029 ವೆಚ್ಚ 7/2009 ದಿ: 29-12-2009.
3) ಸರ್ಕಾರಿ ಆದೇಶ ಸಂಖ್ಯೆ: ಕಂಇ 71 ಭೂದಾಮು 2009 ದಿ: 23-02-2010.
4) ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಆಡಳಿತ/ಸಿಬ್ಬಂದಿ/ಇ2/112/2009-10, ದಿ: 23-11-2009 ಹಾಗೂ 18-12-2009.
5) ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಆಡಳಿತ/ಸಿಬ್ಬಂದಿ/ಇ2/112/2009-10, ದಿ: 05-03-2010
6) ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಆಡಳಿತ/ಸಿಬ್ಬಂದಿ/ಇ2/112/2009-10, ದಿ: 26-03-2010.
7) ಸರ್ಕಾರಿ ಆದೇಶ ಸಂಖ್ಯೆ: ವಾಕೈ 216 ಕೈಸೇವಿ 2009 (ಭಾಗ-1) ದಿ: 19-05-2010.
8) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಪತ್ರ ಸಂಖ್ಯೆ: ಆಡಳಿತ/ಸಿಬ್ಬಂದಿ/ಇ2/112/2010-11 ದಿ: 19-07-2010.

* * *

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆಯನ್ನು ವಿಭಜಿಸಿ ನೂತನ ಯಾದರಿರ್ ಜಿಲ್ಲೆಯನ್ನು ಸ್ಥಾಪಿಸಲಾಗಿರುವುದರಿಂದ ಉಲ್ಲೇಖಿತ (7)ರ ಆದೇಶದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ, ಯಾದಗಿರ್ ಕಛೇರಿಯ ರಾಜ್ಯ ವಲಯ/ಜಿಲ್ಲಾ ಪಂಚಾಯತ್ ವಲಯಗಳಿಗೆ ಂಜ-ುಂಠಿ ಆಧಾರದ ಮೇಲೆ ಹುದ್ದೆಗಳನ್ನು ಸೃಜಿಸಿ/ಸ್ಥಳಾಂತರಿಸಿ ಸರ್ಕಾರದ ಮಂಜೂರಾತಿ ನೀಡಲಾಗಿರುತ್ತೆ.

ಕೈಗಾರಿಕಾ ನಿರ್ದೇಶನಾಲಯ ಉಲ್ಲೇಖ (8) ರ ಪತ್ರದಲ್ಲಿ ಅವಿಭಜಿತ ಗುಲ್ಬರ್ಗಾ ಜಿಲ್ಲೆಯ (1) ಯಾದಗಿರ್ (2) ಶಹಾಪೂರ ಹಾಗೂ (3) ಸುರಪೂರ ತಾಲ್ಲೂಕುಗಳು ನೂತನ ಯಾದಗಿರ್ ಜಿಲ್ಲೆಯ ಆಡಳಿತ ಕಾರ್ಯ ವ್ಯಾಪ್ತಿಗೆ ಒಳಪಡುವುದರಿಂದ ಈ ತಾಲ್ಲೂಕುಗಳಲ್ಲಿನ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗಳನ್ನು ಗುಲ್ಬರ್ಗಾ ಜಿಲ್ಲೆಯ ಆಡಳಿತ ವ್ಯಾಪ್ತಿಯಿಂದ ಯಾದಗಿರ್ ಜಿಲ್ಲೆಯ ಆಡಳಿತ ವ್ಯಾಪ್ತಿಗ ತಂದು ಈ ಜಿಲ್ಲೆಗಳಲ್ಲಿನ ಸಿಬ್ಬಂದಿ ಮಾದರಿ ರಚನೆಯನ್ನು ಮರು ವಿನ್ಯಾಸಗೊಳಿಸಲು ಕೋರಲಾಗಿರುತ್ತದೆ. ಸದರಿ ಹುದ್ದೆಗಳನ್ನು ನೂತನ ಯಾದಗಿರ್ ಜಿಲ್ಲೆಗೆ ಸ್ಥಳಾಂತರಿಸುವ ವಿಷಯವನ್ನು ಪರಿಶೀಲಿಸಿದೆ. ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 216 ಕೈಸೇವಿ 2009, ಭಾಗ-2, ಬೆಂಗಳೂರು, ದಿನಾಂಕ: 27ನೇ ಜುಲೈ, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ/ಯಾದಗಿರ್ ಜಿಲ್ಲೆಗಳಲ್ಲಿನ ಇಲಾಖೆಯ ಸಿಬ್ಬಂದಿ ಮಾದರಿ ರಚನೆಯನ್ನು ಮರು ವಿನ್ಯಾಸಗೊಳಿಸಿ ಗುಲ್ಬರ್ಗಾ ಜಿಲ್ಲೆಯ ಆಡಳಿತ ವ್ಯಾಪ್ತಿಯಲ್ಲಿನ ಕೆಳಕಂಡ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗಳನ್ನು ಉಪ ನಿರ್ದೇಶಕರು (ಖಾಗ್ರಾ) ಕಛೇರಿ, ಜಿಲ್ಲಾ ಪಂಚಾಯತ್, ಯಾದಗಿರ್ ಆಡಳಿತ ವ್ಯಾಪ್ತಿಗೆ ಈ ಕೂಡಲೇ ಜಾರಿಗೆ ಬರುವಂತೆ ಒಳಪಡಿಸಿ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಉಪ ನಿರ್ದೇಶಕರು (ಖಾಗ್ರಾ), ಜಿಲ್ಲಾ ಪಂಚಾಯತ್, ಯಾದಗಿರ್ ಕಛೇರಿಯ ಆಡಳಿತ ವ್ಯಾಪ್ತಿಯಲ್ಲಿ:

ಕ್ರ. ಸಂ.	ಪದನಾಮ	ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ	ಷರಾ
1	ಕೈಗಾರಿಕಾ ವಿಸ್ತರಣಾಧಿಕಾರಿ (ಯಾದಗಿರ್, ಶಹಾಪೂರ ಹಾಗೂ ಸುರಪೂರ)	3 (ಉಲ್ಲೇಖಿತ ತಾಲ್ಲೂಕುಗಳಲ್ಲಿನ ತಲಾ ಒಂದು ಹುದ್ದೆ)	8825-16000	ಅವಿಭಜಿತ ಗುಲ್ಬರ್ಗಾ ಜಿಲ್ಲೆಯ ಆಡಳಿತ ವ್ಯಾಪ್ತಿಯಿಂದ ಯಾದಗಿರ್ ಜಿಲ್ಲೆಗೆ ಸ್ಥಳಾಂತರಿಸಿದೆ.

ಸ್ಥಳಾಂತರಿಸಿದ ಹುದ್ದೆಗಳಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಮುಂದುವರೆಸಲಾಗಿದೆ.

ಮೇಲ್ಕಂಡ ಮರು ವಿನ್ಯಾಸದ ಹಿನ್ನೆಲೆಯಲ್ಲಿ ಪೂರಕ ಆಡಳಿತ ಕ್ರಮಗಳನ್ನು ಜಾರಿಗೊಳಿಸತಕ್ಕದ್ದೆಂದು ಕೈಗಾರಿಕಾ ನಿರ್ದೇಶನಾಲಯ / ಜಂಟಿ ನಿರ್ದೇಶಕರು. ಜಿಲ್ಲಾ ಕೈಗಾರಿಕಾ ಕೇಂದ್ರ, ಗುಲ್ಬರ್ಗಾ/ಯಾದಗಿರ್ ಇವರುಗಳಿಗೆ ನಿರ್ದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಬಿ.ಸಿ. ಪ್ರಕಾಶ್)

ಸರ್ಕಾರದ ಅಧೀನ ಕಾರ್ಯದರ್ಶಿ

ವಾಣಿಜ್ಯ ಮತು ಕೈಗಾರಿಕೆ ಇಲಾಖೆ (ಸೇವೆಗಳು)

ಪಿ.ಆರ್. 2060

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಮಾಹಿತಿ ಶಿಕ್ಷಣ ಮತ್ತು ಸಂಪರ್ಕದ ಮೇಲೆ ಕೈಪಿಡಿ ಆರೋಗ್ಯ ಮತ್ತು ಪೌಷ್ಠಿಕಾಂಶ ಹೊಸ ಯೋಜನೆಗೆ ಮಂಜೂರಾತಿ ನೀಡುವ ಕುರಿತು.

ಪ್ರಸ್ತಾವನೆ :

2010-11 ಸಾಲಿನ ಮಾಹಿತಿ ಶಿಕ್ಷಣ ಮತ್ತು ಸಂಪರ್ಕದ ಮೇಲೆ ಕೈಪಿಡಿ –ಆರೋಗ್ಯ ಮತ್ತು ಪೌಷ್ಠಿಕಾಂಶ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡುವಂತೆ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಕೋರಿರುತ್ತಾರೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಅಂಗನವಾಡಿ ಕೇಂದ್ರಗಳ ಮೂಲಕ ಅನುಷ್ಠಾನಗೊಳಿಸುತ್ತಿದ್ದು. ರಾಜ್ಯದ ಗ್ರಾಮೀಣ ಗುಡ್ಡಗಾಡು ಹಾಗೂ ನಗರಗಳ ಕೊಳಚೆ ಪ್ರದೇಶದಲ್ಲಿ ಪ್ರತಿ 800/300 ಜನಸಂಖ್ಯೆಗೆ ಒಂದರಂತೆ ಒಟ್ಟು 60046 ಅಂಗನವಾಡಿ ಕೇಂದ್ರ ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಪ್ರತಿ ಅಂಗನವಾಡಿ ಕೇಂದ್ರದಲ್ಲಿ ಒಬ್ಬ ಕಾರ್ಯಕರ್ತೆ ಹಾಗೂ ಒಬ್ಬ ಸಹಾಯಕಿಯರು ಈ ಯೋಜನೆಯನ್ನು ಸಮುದಾಯದಲ್ಲಿ ಅನುಷ್ಠಾನಗೊಳಿಸುತ್ತಿರುತ್ತಾರೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯು ಈ ಕೆಳಕಂಡ 5 ಮುಖ್ಯ ಉದ್ದೇಶಗಳನ್ನು ಒಳಗೊಂಡಿದ್ದು, ಪೂರಕ ಪೌಷ್ಠಿಕ ಆಹಾರ, ಚುಚ್ಚುಮದ್ದು, ಆರೋಗ್ಯ ತಪಾಸಣೆ, ಮಾಹಿತಿ ಸೇವೆ (ರೆಫರಲ್) 3-6 ವರ್ಷದ ಶಾಲಾ ಪೂರ್ವ ಶಿಕ್ಷಣ, ತಾಯಂದಿರು ಮತ್ತು ಮಹಿಳೆಯರಿಗೆ ಆರೋಗ್ಯ ಮತ್ತು ಆಹಾರದ ಕುರಿತು ತಿಳುವಳಿಕೆಗಳನ್ನು ನೀಡುವ 6 ಸೇವೆಗಳನ್ನು ಒದಗಿಸುತ್ತಿದೆ ;

ಅ) 0-6 ವರ್ಷದ ಮಕ್ಕಳ ಆರೋಗ್ಯ, ಪೌಷ್ಠಿಕ ಮಟ್ಟವನ್ನು ವೃದ್ಧಿಸುವುದು.

ಆ) ಮಗುವಿನ ದೈಹಿಕ ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುವುದು.

ಇ) ಮಕ್ಕಳಲ್ಲಿ ಸಾವು, ಅನಾರೋಗ್ಯ, ಅಪೌಷ್ಠಿಕತೆ ಮತ್ತು ಶಾಲಾ ಬಿಡುವಿಕೆಯ ಪ್ರಮಾಣವನ್ನು ಕಡಿಮೆಗೊಳಿಸುವುದು.

ಈ) ಶಿಶು ಅಭಿವೃದ್ಧಿ ಕಾರ್ಯಕ್ರಮವನ್ನು ಉತ್ತಮಗೊಳಿಸುವ ಕಾರ್ಯ ನೀತಿ ಮತ್ತು ಅದನ್ನು ಜಾರಿಗೊಳಿಸುವ ದಿಸೆಯಲ್ಲಿ ಪರಿಣಾಮಕಾರಿಯಾದ ಸಮನ್ವಯತೆಯನ್ನು ಸಾಧಿಸುವುದು.

ಉ) ಆರೋಗ್ಯ ಮತ್ತು ಪೌಷ್ಠಿಕತೆಯ ಶಿಕ್ಷಣವನ್ನು ಕೊಡುವ ಮೂಲಕ ತಾಯಂದಿರಲ್ಲಿ ತಮ್ಮ ಮಕ್ಕಳ ಆರೋಗ್ಯ ಮತ್ತು ಪೌಷ್ಠಿಕತೆಯನ್ನು ನೋಡಿಕೊಳ್ಳುವ ಕುರಿತು ಸಾಮರ್ಥ್ಯವನ್ನು ಹೆಚ್ಚಿಸುವುದು.

ರಾಜ್ಯ ಮಹಿಳೆಯರು, ಕಿಶೋರಿಯರು ಹಾಗೂ ಮಕ್ಕಳಲ್ಲಿ ಹೆಚ್ಚಿನವರು ಅಪೌಷ್ಠಿಕತೆ, ರಕ್ತ ಹೀನತೆ, ವಿವಿಧ ರೀತಿಯ ಪೌಷ್ಠಿಕಾಂಶಗಳ ಕೊರತೆಯಿಂದ ನರಳುತ್ತಿದ್ದು, ಸೂಕ್ತ ತಿಳುವಳಿಕೆಯನ್ನು ನೀಡುವುದರ ಮೂಲಕ ಅಪೌಷ್ಠಿಕತೆ ಮತ್ತು ಮರಣ ಪ್ರಮಾಣ ತಗ್ಗಿಸುವುದು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಗ್ರಾಮ ಆರೋಗ್ಯ ದಿನವನ್ನು ಆಚರಿಸುವ ಮೂಲಕ ತಾಯಂದಿರಿಗೆ, ಮಹಿಳೆಯರಿಗೆ ಮಕ್ಕಳ ಹಾಗೂ ಮಹಿಳೆಯರ ಆರೋಗ್ಯದ ಬಗ್ಗೆ ತಿಳುವಳಿಕೆಯನ್ನು ನೀಡುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಈ ಒಂದು ಸೇವೆಯ ಅಂಗವಾಗಿ ಅಂಗನವಾಡಿ ಕಾರ್ಯಕರ್ತೆಯರು ಪ್ರತಿ ದಿವಸ ಸುಮಾರು 2 ರಿಂದ 3 ಮನೆಗಳಿಗೆ ಭೇಟಿ ನೀಡಿ ತಾಯಂದಿರಿಗೆ ತಿಳುವಳಿಕೆ ನೀಡುತ್ತಿದ್ದಾರೆ. ತಿಂಗಳಲ್ಲಿ 2 ಬಾರಿ ತಾಯಂದಿರ ಸಭೆ ಹಾಗೂ ಒಂದು ಬಾರಿ ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಗ್ರಾಮ ಆರೋಗ್ಯ ದಿನವನ್ನು ಆಚರಿಸುವ ಮೂಲಕ ತಾಯಂದಿರಿಗೆ, ಮಹಿಳೆಯರಿಗೆ ಮಕ್ಕಳ ಅಭಿವೃದ್ಧಿ ಹಾಗೂ ಮಹಿಳೆಯ ಆಹಾರ ಹಾಗೂ ಆರೋಗ್ಯ ಕುರಿತು ತಿಳುವಳಿಕೆಯನ್ನು ನೀಡುತ್ತಿರುತ್ತಾರೆ.

ಮೇಲ್ಕಾಣಿಸಿದ ಸಂದರ್ಭಗಳಲ್ಲಿ ತಿಳುವಳಿಕೆ ನೀಡಬೇಕಿರವ 48 ವಿಷಯಗಳನ್ನು ತಜ್ಞರೊಂದಿಗೆ ಚರ್ಚಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಆಯ್ಕೆ ಮಾಡಲಾಗಿರುತ್ತದೆ. ಈ ವಿಷಯಗಳ ಕುರಿತು ಅಂಗನವಾಡಿ ಕಾರ್ಯಕರ್ತೆಯರು ಆ ತಾಯಂದಿರಿಗೆ, ಮಹಿಳೆಯರಿಗೆ ಹೇಳಬೇಕಿರುವ ವಿಷಯದ ವಿವರವನ್ನು ಸಂಬಂಧಪಟ್ಟ ತಜ್ಞರಿಂದ ಪಡೆಯಲಾಗಿದ್ದು, ಸಮಗ್ರ ಕೈಪಿಡಿಯನ್ನು ಮುದ್ರಿಸಿ ನೀಡಲು ಉದ್ದೇಶಿಸಲಾಗಿದೆ. ಕೈಪಿಡಿಯೊಂದಿಗೆ 3-4 ವಿಷಯಗಳನ್ನೊಳಗೊಂಡ ಚಿಕ್ಕ ಚಿಕ್ಕ ಫ್ಲಾಷ್‌ಕಾರ್ಡ್ ಅಥವಾ ಫ್ಲಿಪ್ ಚಾರ್ಟ್‌ಗಳನ್ನು ಮುದ್ರಿಸಿ ಎಲ್ಲಾ ಮೇಲ್ವಿಚಾರಕಿಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ವಿತರಿಸಲು ಯೋಜಿಸಲಾಗಿದೆ. ಈ ಕಾರ್ಯವು ಈಗಾಗಲೇ ಚಾರಿಯಲ್ಲಿದ್ದು ಸಲಹೆಗಾರರನ್ನು ನೇಮಿಸಿಕೊಂಡು ಚಿತ್ರಣಗಳ ಮೂಲಕ ಮುದ್ರಿಸಲಾಗುತ್ತಿದೆ.

ಅಪರ ಮುಖ್ಯ ಕಾರ್ಯದರ್ಶಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ ಅಧಿಕಾರಯುತ ಸಮಿತಿಯ ದಿನಾಂಕ: 27-05-2010 ರ ಸಭೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ನಿರ್ದೇಶರು, ಮಹಿಳಾ ಮತ್ತು ಮಕ್ಕಳ ಅಭೀವೃದ್ಧಿ ಇಲಾಖೆ ಇವರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಈ ಕೆಳಗೆ ಸೂಚಿಸಿದಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಮಮಇ 124 ಐಸಿಡಿ 2010, ಬೆಂಗಳೂರು, ದಿನಾಂಕ: 30ನೇ ಜೂನ್, 2010

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯ ಫಲಾನುಭವಿಗಳು, 0–6 ವರ್ಷದ ಮಕ್ಕಳು, ಗರ್ಭಿಣಿ/ಬಾಣಂತಿಯರು, ಕಿಶೋರಿಯರು ಇವರಿಗೆ ನೀಡುತ್ತಿರುವ 6 ಸೇವೆಗಳ ಕುರಿತು ಅಂದರೆ ಪೂರಕ ಪೌಷ್ಠಿಕ ಆಹಾರ, ಚುಚ್ಚು ಮದ್ದು, ಆರೋಗ್ಯ ತಪಾಸಣೆ, ಮಾಹಿತಿ ಸೇವೆ, ಶಾಲಾಪೂರ್ವ ಶಿಕ್ಷಣ ಮತ್ತು ತಾಯಂದಿರಿಗೆ/ ಮಹಿಳೆಯರಿಗೆ ಆರೋಗ್ಯ ಹಾಗೂ ಆಹಾರದ ಕುರಿತಾದ ಮಾಹಿತಿಯನ್ನು ಒಳಗೊಂಡ ಪ್ರಸ್ತಕವನ್ನು ನಿಯಮಗಳನ್ನು ಪಾಲಿಸಿಕೊಂಡು ಮುದ್ರಿಸಿ ಅಂಗನವಾಡಿ ಕಾರ್ಯಕರ್ತೆಯರು/ ಸಹಾಯಕಿಯರ ಮೂಲಕ ಹಂಚಿಕೆ ಮಾಡುವ ಮಾಹಿತಿ ಶಿಕ್ಷಣ ಮತ್ತ ಸಂಪರ್ಕದ ಮೇಲೆ ಕೈಪಿಡಿ– ಆರೋಗ್ಯ ಮತ್ತು ಪೌಷ್ಠಿಕಾಂಶ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ಮಂಜೂರಾತಿ ನೀಡಲಾಗಿದೆ.

ಇತ್ತೀಚಿನ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ನಿಯಮಗಳನ್ನು ಆಧರಿಸಿ ರೂಪಿಸಲಾದ ಯೋಜನೆಗೆ ಸಂಬಂಧಿಸಿದ ಮಾರ್ಗಸೂಚಿ/ರೂಪುರೇಷೆಗಳನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯ, ಭಾರದ ಸರ್ಕಾರ ರವರಿಂದ ಪಡೆದು ಈ ಮಾರ್ಗಸೂಚಿಗಳನ್ನು ಸ್ಥಳೀಯ ಉಪಯೋಗಕ್ಕಾಗಿ ಕನ್ನಡ ಭಾಷೆಗೆ ತರ್ಜುಮೆ ಮಾಡಿ ಮುದ್ರಿಸಲು ಅವಶ್ಯ ಕ್ರಮ ಕೈಗೊಳ್ಳುವಂತೆ ಸಹ ಸೂಚಿಸಲಾಗಿದೆ.

ಇದಕ್ಕೆ ಸಂಭವಿಸುವ ವೆಚ್ಚವನ್ನು ಮಾಹಿತಿ ಶಿಕ್ಷಣ ಮತ್ತು ಸಂಪರ್ಕದ ಮೇಲೆ ಕೈಪಿಡಿ– ಆರೋಗ್ಯ ಮತ್ತು ಪೌಷ್ಠಿಕಾಂಶ ಯೋಜನೆ ಲೆಕ್ಕಶೀರ್ಷಿಕೆ 2235–02–102–0–34 (ಯೋಜನೆ) ಅಡಿಯಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 22 ಐಎಂಎಂ 2010, ದಿನಾಂಕ: 13–05–2010 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 308 ವೆಚ್ಚ–3/10 ದಿನಾಂಕ: 26–05–2010 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ವಿ. ಶಿವಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ–1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪಿ.ಆರ್. 2061

ಕಂದಾಯ ಸಚಿವಾಲಯ

ವಿಷಯ : ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ತಹಶೀಲ್ದಾರ್, ಚನ್ನಪಟ್ಟಣ ತಾಲ್ಲೂಕು ಪ್ರಸ್ತುತ ಕಂದಾಯ ಅಧಿಕಾರಿ, ಬಿ.ಎಂ.ಟಿ.ಎಫ್. ಬಿಬಿಎಂಪಿ ಕಟ್ಟಡ, ಎನ್.ಆರ್.ಚೌಕ, ಬೆಂಗಳೂರು ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡುವ ಕುರಿತು – ಆದೇಶ

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಕಂಇ 11 ಎಡಿಇ 2007 ದಿ: 24–03–2007.
2) ಆರ್ಥಿಕ ಸರ್ಕಾರದ ಆದೇಶ ಸಂಖ್ಯೆ: ಕಂಇ 11 ಎಡಿಇ 2007 ದಿ: 24–10–2007.
3) ಸರ್ಕಾರದ ಸಮ ಸಂಖ್ಯೆಯ ಕಾರಣ ಕೇಳುವ ನೋಟೀಸು ದಿನಾಂಕ: 19–06–2008.
4) ಶ್ರೀಮತಿ ಕೆ.ಹೆಚ್.ಭಾಗ್ಯವತಮ್ಮ, ತಹಶೀಲ್ದಾರ್ ಇವರ ಲಿಖಿತ ಹೇಳಿಕೆ ದಿನಾಂಕ: 03–10–2008.
5) ಸರ್ಕಾರದ ಆದೇಶ ಸಂಖ್ಯೆ: ಕಂಇ 11 ಎಡಿಇ 2007 ದಿ: 30–09–2009.
6) ಶ್ರೀ ಹೆಚ್.ವಿ. ರಾಮಚಂದ್ರರಾವ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀರು, ಹಾಗೂ ವಿಚಾರಣಾಧಿಕಾರಿಗಳು, ಬೆಂಗಳೂರು ಇವರ ವಿಚಾರಣಾ ವರದಿ ದಿನಾಂಕ: 9–4–2010.

ಪ್ರಸ್ತಾವನೆ :

ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಇವರು ರೈತರೊಬ್ಬರಿಂದ ಜಮೀನಿನ ವಿವಾದದ ಬಗ್ಗೆ ಇರುವ ಪ್ರಕರಣದಲ್ಲಿ ರೈತರಿಗೆ ಅನುಕೂಲ ಮಾಡಿಕೊಡಲು ಅಕ್ರಮ ಸಂಭಾವನೆ ರೂ. 10,000/–ಗಳನ್ನು ಪಡೆಯುತ್ತಿರುವ ದೃಶ್ಯವು ಟಿ.ವಿ. 9 ಚಾನಲ್‌ನಲ್ಲಿ ದಿನಾಂಕ: 24–3–2007 ರಂದು ಬಿತ್ತರಗೊಂಡಿರುತ್ತದೆ. ಇವರು ಅಕ್ರಮ ಸಂಭಾವನೆ ಪಡೆಯುತ್ತಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಸರ್ಕಾರವು ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಸರ್ಕಾರದ ದಿನಾಂಕ: 24–03–2007 ರ ಆದೇಶದಲ್ಲಿ ಇವರ ದುರ್ನಡತೆ ಆಪಾದನೆಗೆ ಇಲಾಖಾ ವಿಚಾರಣೆ ಕಾಯ್ದಿರಿಸಿ, 1957 ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ ನಿಯಮ 10(1)(ಡಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಸರ್ಕಾರದ ದಿನಾಂಕ: 24–10–2007 ರ ಆದೇಶದಲ್ಲಿ, ಅಮಾನತ್ತುಗೊಂಡಿದ್ದ ಶ್ರೀಮತಿ ಕೆ.ಹೆಚ್. ಬಾಗವತಮ್ಮ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಇವರ ಅಮಾನತ್ತನ್ನು ತೆರವುಗೊಳಿಸಿ ಆದೇಶಿಸಲಾಗಿತ್ತು.

ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳು ತಮ್ಮ ದಿನಾಂಕ: 03–09–2007 ರ ಪತ್ರದಲ್ಲಿ ಶ್ರೀಮತಿ ಕೆ.ಹೆಚ್. ಬಾಗವತಮ್ಮ ಇವರ ವಿರುದ್ಧದ ಕ.ನಾ.ಸೇ. (ವ.ನಿ. ಮತ್ತು ಮೇ) ನಿಯಮಾವಳಿ 1957 ರಡಿಯಲ್ಲಿ ಕರಡು ದೋಷಾರೋಪಣಾ ಪಟ್ಟಿಯನ್ನು ಪೂರಕ ದಾಖಲೆಗಳೊಂದಿಗೆ ಕಳುಹಿಸಿದ್ದು, ಸರ್ಕಾರವು ಮೇಲೆ ಓದಲಾದ ಕ್ರಮ ಸಂಖ್ಯೆ (3) ದಿನಾಂಕ 19–06–2008 ರಲ್ಲಿ ಸದರಿಯವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಿದ್ದು, ಅದಕ್ಕೆ ಅಪಾದಿತ ನೌಕರರು ಮೇಲೆ ಓದಲಾದ ಕ್ರಮ ಸಂಖ್ಯೆ : (4) ದಿನಾಂಕ: 3–10–2008 ರಂದು ರಕ್ಷಣಾ ಹೇಳಿಕೆ ನೀಡಿ, ಸದರಿ ನೋಟೀಸಿಗೆ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಆದ್ದರಿಂದ, ದೋಷಾರೋಪಣೆಯಲ್ಲಿ ವಿವರಿಸಿರುವ ಆಪಾದನೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಿ, ಪ್ರಕರಣವನ್ನು ಇಲಾಖಾ ವಿಚಾರಣೆಗೆ ವಹಿಸಲು ನಿರ್ಧರಿಸಿ ಸರ್ಕಾರವು ಓದಲಾದ ಕ್ರಮ ಸಂಖ್ಯೆ: (5) ರ ದಿನಾಂಕ: 30–9–2009 ರ ಆದೇಶದಲ್ಲಿ, ಕ.ನಾ.ಸೇ. (ವ.ನಿ ಮತ್ತು ಮೇ) ನಿಯಾಮಾವಳಿಗಳ ನಿಯಮ 11 ರಡಿಯಲ್ಲಿ ಶ್ರೀ ಹೆಚ್.ವಿ. ರಾಮಚಂದ್ರರಾವ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿತ್ತು.

ಸರ್ಕಾರದ ಆದೇಶದಂತೆ, ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ, ಮೇಲೆ ಓದಲಾದ ಕ್ರಮ ಸಂಖ್ಯೆ: (6) ರಂತೆ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ, ಶ್ರೀಮತಿ ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ಇವರು ಈ ಹಿಂದೆ ಚನ್ನಪಟ್ಟಣ ತಾಲ್ಲೂಕು ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ರೈತರೊಬ್ಬರಿಂದ 10 ಸಾವಿರ ರೂಪಾಯಿಗಳನ್ನು ಅಕ್ರಮ ಸಂಭಾವನೆಯಾಗಿ ಪಡೆದ ದೃಶ್ಯವು ಟಿ.ವಿ. 9 ಸುದ್ದಿ ಚನಲ್‌ನಲ್ಲಿ ದಿನಾಂಕ : 24-03-2007 ರಂದು ಬಿತ್ತರಗೊಂಡಿದ್ದು, ಸದರಿ ಅಧಿಕಾರಿಯು ಭ್ರಷ್ಟಾಚಾರ ನಿರ್ಮೂಲನಾ ಕಾಯಿದೆ 1988ಕ್ಕೆ ವಿರುದ್ಧವಾಗಿ ವರ್ತಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಇವರನ್ನು ಅಮಾನತ್ತಿನಲ್ಲಿರಿಸಲಾಗಿತ್ತು. ಈ ಸಂಬಂಧ ಇಲಾಖಾ ವಿಚಾರಣೆ ನಡೆಸಲು ಶ್ರೀ ಹೆಚ್.ವಿ. ರಾಮಚಂದ್ರರಾವ್ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಇವರನ್ನು ದಿನಾಂಕ : 30-09-2009 ರಂದು ನೇಮಿಸಲಾಗಿತ್ತು. ಅದರಂತೆ, ಇಲಾಖಾ ವಿಚಾರಣೆಯನ್ನು ನಡೆಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ವಿಚಾರಣಾ ಸಮಯದಲ್ಲಿ ದೂರು ದಾಖಲೆ ಮಾಡಿದ ವ್ಯಕ್ತಿಯ ಆಸ್ತಿ ವಿವರ, ಜಮೀನಿನ ಸರ್ವೆ ನಂಬರ್ ಯಾವುದೂ ತಿಳಿದು ಬಂದಿಲ್ಲ ಹಾಗೂ ಆಪಾದಿತರು ತೆಗೆದುಕೊಂಡರು ಎಂದು ಹೇಳಲಾದ ರೂ. 10,000-00 ಗಳನ್ನು ದೂರುದಾರರು ಕೊಟ್ಟಿಲ್ಲ, ಟಿ.ವಿ. 9 ಸಂಸ್ಥೆಯು ಕೊಟ್ಟಿದ್ದು, ಇದನ್ನು ಆಪಾದಿತ ಅಧಿಕಾರಿಗೆ ಏತಕ್ಕಾಗಿ ಕೊಟ್ಟರು ಎಂಬುದು ಸ್ಪಷ್ಟವಾಗಿರುವುದಿಲ್ಲ. ಒಂದು ಸುದ್ದಿಗಾಗಿ ಅಕ್ರಮ ಸಂಭಾವನೆ ರೂಪದಲ್ಲಿ 10 ಸಾವಿರ ರೂಪಾಯಿಗಳು ಕೊಟ್ಟಿರುತ್ತಾರೆಯೇ ಎಂಬುದೂ ಸಹ ಸಾಬೀತಾಗಿರುವುದಿಲ್ಲ. ಇದರಲ್ಲಿ ಯಾವ ಉದ್ದೇಶಕ್ಕಾಗಿ ಟಿ.ವಿ.9 ಸಂಸ್ಥೆಯಿಂದ ಹಣ ನೀಡಲಾಗಿದೆ ಎಂಬುದೂ ಸಹ ವಿಚಾರಣೆಯಲ್ಲಿ ಸಾಬೀತಾಗಿಲ್ಲ ಹಾಗೂ ವಿಚಾರಣೆಯಲ್ಲಿ ಯಾವುದೇ ರೈತರು ಸಾಕ್ಷಿ ನೀಡಿಲ್ಲ. ಟಿ.ವಿ.9 ಸಂಸ್ಥೆಯವರು, ಈ ಹಣ ತೆಗೆದುಕೊಳ್ಳುವ ದೃಶ್ಯವನ್ನು ಶೂಟ್ ಮಾಡಿದ ಅಧಿಕಾರಿಯು ವಿರೋಧಾಭಾಸದ ಹೇಳಿಕೆಗಳನ್ನು ನೀಡಿರುವುದರಿಂದ ಆಪಾದನೆಯು ಸಾಬೀತಾಗಿಲ್ಲವೆಂದು ವಿಚಾರಣಾಧಿಕಾರಿಗಳು ವರದಿಯನ್ನು ನೀಡಿರುತ್ತಾರೆ.

ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ ಯಾವ ಕೆಲಸಕ್ಕಾಗಿ ಅಕ್ರಮ ಸಂಭಾವನೆ ನೀಡಲಾಯಿತು ಎಂಬ ಬಗ್ಗೆ ದೂರು ಇರುವುದಿಲ್ಲ ಹಾಗೂ ಸಂಬಂಧಪಟ್ಟ ರೈತರ ಸಾಕ್ಷಿಯೂ ಸಹ ಇರುವುದಿಲ್ಲ. ಅದ್ದರಿಂದ, ವಿಚಾರಣಾ ವರದಿಯನ್ನು ಒಪ್ಪಿಕೊಂಡು ಆಪಾದಿತರಾದ ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ಇವರ ವಿರುದ್ಧದ ವಿಚಾರಣೆಯನ್ನು ಕೈ ಬಿಡಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 11 ಎಡಿಇ 2007, ಬೆಂಗಳೂರು, ದಿನಾಂಕ: 21ನೇ ಜುಲೈ, 2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ಚನ್ನಪಟ್ಟಣ ತಾಲ್ಲೂಕು ಪ್ರಸ್ತುತ ಕಂದಾಯ ಅಧಿಕಾರಿ, ಬಿ.ಎಂ.ಟಿ.ಎಫ್. ಬಿಬಿಎಂಪಿ ಕಟ್ಟಡ, ಎನ್.ಆರ್.ಚೌಕ, ಬೆಂಗಳೂರು ಇವರ ವಿರುದ್ಧ ಹೂಡಲಾದ ಇಲಾಖಾ ವಿಚಾರಣೆಯನ್ನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೈಬಿಟ್ಟು ಆದೇಶಿಸಲಾಗಿದೆ. ಹಾಗೂ ಈ ಹಿಂದೆ ಅಮಾನತ್ತಿನಲ್ಲಿಟ್ಟ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಿ ಆದೇಶಿಸಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಸ್. ಬಿ. ಸಸಾಲಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. 2062

ಕಂದಾಯ ಸಚಿವಾಲಯ

ವಿಷಯ : ಶ್ರೀ ಬಿ. ಸಂಪತ್‌ಕುಮಾರ್, ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಸಾಮಾನ್ಯ ಭವಿಷ್ಯ ನಿಧಿ ಖಾತೆಯಿಂದ ಭಾಗಶಃ ಮೊಬಲಗು ಹಿಂದಕ್ಕೆ ಪಡೆಯಲು ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು ಇವರ ಪತ್ರ ಸಂಖ್ಯೆ: ಇಎಸ್‌ಟಿ/ಸಿಆರ್/01/2010-11 ದಿನಾಂಕ: 29-05-2010 ಹಾಗೂ 22-06-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಪತ್ರಗಳಲ್ಲಿ, ಶ್ರೀ ಬಿ. ಸಂಪತ್‌ಕುಮಾರ್, ತಹಶೀಲ್ದಾರ್ ದೊಡ್ಡಬಳ್ಳಾಪುರ ತಾಲ್ಲೂಕು ಇವರು ಸಾಮಾನ್ಯ ಭವಿಷ್ಯ ನಿಧಿಯ ಖಾತೆ ಸಂಖ್ಯೆ ಜಿಎ 10121 ಹೊಂದಿದ್ದು, ಸದರಿ ಸಾಮಾನ್ಯ ಭವಿಷ್ಯ ನಿದಿಯ ಖಾತೆಯಲ್ಲಿರುವ ರೂ. 5,40,000/- ಗಳಲ್ಲಿ ರೂ. 4,00,000/- ಗಳನ್ನು ಅವರ ಮಗನ ಮದುವೆ ಸಲುವಾಗಿ ಹಿಂತೆಗೆದುಕೊಳ್ಳಲು ಇಚ್ಚಿಸಿದ್ದು, ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ, ಜಿಪಿಎಫ್ ನಿಯಮಗಳನ್ವಯ ಅರ್ಜಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಅಧಿಕಾರಿಯ ಮನವಿಯನ್ನು ಸರ್ಕಾರವು ಪರಿಶೀಲಿಸಿ, ಶ್ರೀ ಬಿ. ಸಂಪತ್‌ಕುಮಾರ್, ತಹಶೀಲ್ದಾರ್ ದೊಡ್ಡಬಳ್ಳಾಪುರ ತಾಲ್ಲೂಕು ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಅವರ ಜಿಪಿಎಫ್ ಖಾತೆಯಿಂದ ಭಾಗಶಃ ಮೊಬಲಗು ಹಿಂದಕ್ಕೆ ಪಡೆಯಲು ಮಂಜೂರಾತಿ ನೀಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 329 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 24ನೇ ಜುಲೈ, 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಶ್ರೀ ಬಿ. ಸಂಪತ್‌ಕುಮಾರ್, ತಹಶೀಲ್ದಾರ್ ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಜಿಪಿಎಫ್ ಖಾತೆ ಸಂಖ್ಯೆ: ಜಿಎ 10121 ರಿಂದ ರೂ. 4,00,000/- (ರೂ. ನಾಲ್ಕು ಲಕ್ಷಗಳು ಮಾತ್ರ) ಮೊಬಲಗನ್ನು ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮ 1957 ರ ನಿಯಮ 27(ಬಿ) ಯನ್ನು ಸಡಿಲಿಸಿ, ನಿಯಮ 27(ಇ) ರ ಪ್ರಕಾರ ಬಳಕೆ ಪ್ರಮಾಣ ಪತ್ರವನ್ನು ಪಡೆಯುವ ಷರತ್ತಿಗೊಳಪಟ್ಟು, ನಿಯಮ 24 (ಸಿ) ಮತ್ತು ನಿಯಮ 27ರ ಅಪವಾದದ ರೀತ್ಯ, ಅವರ ಮಗನ ಮದುವೆಯ ವೆಚ್ಚವನ್ನು ಭರಿಸುವ ಉದ್ದೇಶಕ್ಕಾಗಿ ಹಿಂದಕ್ಕೆ ಪಡೆಯಲು ಮಂಜೂರಾತಿ ನೀಡಿ ಆದೇಶಿಸಿದೆ.

ಮೇಲ್ಕಂಡ ಹಣವನ್ನು ಸದುಪಯೋಗ ಪಡಿಸಿಕೊಂಡ ಬಗ್ಗೆ ದೃಢೀಕರಣ ಪತ್ರ ನೀಡುವಂತೆ ಸಹಾ ಸದರಿ ಅಧಿಕಾರಿಗೆ ನಿರ್ದೇಶಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 409 ವೆಚ್ಚ-7/2010, ದಿನಾಂಕ: 9-7-2010 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಸ್. ಬಿ. ಸಸಾಲಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. 2063

KA/BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ನವೆಂಬರ್ ೪, ೨೦೧೦ (ಕಾರ್ತಿಕ ೧೩, ಶಕ ವರ್ಷ ೧೯೩೨)	ಸಂಚಿಕೆ ೪೩

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 442 ಸಅಸೇ 2010, ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್, 2010

ಪ್ರೊ॥ ಎಸ್. ಮಾದೇಶ್ವರನ್, ಪ್ರಾಧ್ಯಾಪಕರು, ಸೆಂಟರ್ ಫಾರ್ ಎಕನಾಮಿಕ್ ಸ್ಟಡೀಸ್ ಆಂಡ್ ಪಾಲಿಸಿ, ಇನ್ಸ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಾಮಿಕ್ ಚೇಂಜ್ (ISEC), ಬೆಂಗಳೂರು ಇವರನ್ನು ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 16 ರನ್ವಯ ಪ್ರಕಾರ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 283 ಸಅಸೇ 2010, ದಿನಾಂಕ : 12–07–2010 ರಲ್ಲಿ ಸೃಜಿಸಲಾದ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ಸೃಜಿಸಲಾದ ವೇತನ ಶ್ರೇಣಿ ರಹಿತ ವಿಶೇಷಾಧಿಕಾರಿ (ಮೌಲ್ಯಮಾಪನ) ಹುದ್ದೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಗುತ್ತಿಗೆ ಆಧಾರದ ಮೇಲೆ ನೇಮಿಸಲಾಗಿದೆ.

ಇವರ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ (ಸೇವೆಗಳು–3)

ANNEXURE

The Terms and Conditions For Contract Appointment of Professor S. Madeswaran, Special Officer (Evaluation), Planning, Programme Monitoring and Statistics Department

1. **PERIOD OF CONTRACT :**

   The period of contract of Sri S. Madeswaran, Professor, ISEC is for the period of **two** years or so long as the service of S. Madeswaran, are required in the said office, whichever is earlier.

2. **THE COMMENCEMENT AND TERMINATION OF CONTRACT :**

   The contract shall commence on the date on which the official takes charge of the post under the State Government and ends on the date on which he hands over charge of the post under the Government.

3. **PAY AND OTHER ALLOWANCES :**

   During the period of contract Sri S. Madeswaran shall be entitled to pay including DA/HRA/CCA admisible to him in his parent organization.

4. **LEAVE RULES :**

   He will be governed by the leave rules applicable to him in the parent organization.

5. **LIC ANNUITY SCHEME :**

The Government shall pay Management contribution towards LIC Annuity Scheme as per ISEC Rules.

6. **P.F. CONTRIBUTIONS :**

Contribution plus D.A. shall be deducted from salary of the employees every month at the rates prevailing as per ISEC rules land shall be remitted to ISEC together with employer's contribution by the Government.

7. **GRATUTITY FUND CONTRIBUTION :**

Government Shall Pay contribution towards service gratuity as per ISEC Rules.

8. **MEDICAL CONCESSION :**

The Official Shall be entitled to the medical attendance as per the Karnataka Government Servants (Medical Attendance) Rules 1963.

9. He shall perform the functions of Special Officer and attend to all work entrusted to him from time by the said office.

10. He shall perform his duties diligently and he shall maintain strict secrecy in respect of official information which he comes to know in the course of his duties.

11. He shall be liable to reimburse to Government all the losses which the Government may sustain due to mis-conduct of any sort on his part.

This order is issued with the concurrence of Finance Department vide Note No: FD 1417 Services-1/2010, Dated : 15-09-2010.

A.R.VIJAYANANDA SHARMA,
Under Secretary to Government,
Department of Personnel and
Administrative Reforms (Services-3)

ಪಿ.ಆರ್. 1507

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಹೆಚ್‌ಡಿ 464 ಎಸ್‌ಎಸ್‌ಟಿ 2010, ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್, 2010

ದಿನಾಂಕ : 30-09-2010ರಂದು ಅಯೋಧ್ಯ ರಾಮ ಜನ್ಮ ಭೂಮಿ-ಬಾಬರಿ ಮಸೀದಿ ವಿವಾದ ಕುರಿತು ಮಾನ್ಯ ಉಚ್ಚ ನ್ಯಾಯಾಲಯ, **ಅಲಹಾಬಾದ್** ರವರು ತೀರ್ಪು ನೀಡಲಿದ್ದು, ಈ ಸಂಬಂಧದಲ್ಲಿ ಗದಗ ಜಿಲ್ಲೆಯಲ್ಲಿನ **ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ** ಸಲುವಾಗಿ ದಂಡ ಪ್ರಕ್ರಿಯಾ ಸಂಹಿತೆ 1974ರ (ಕೇಂದ್ರ ಕಾಯ್ದೆ ಕಲಂ 21)ರಲ್ಲಿರುವ **ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ** ಸದರಿ ಸಂಹಿತೆಯಡಿ ನೀಡಬಹುದಾದ ಎಲ್ಲಾ ಅಧಿಕಾರಗಳನ್ನು ನೀಡಿ, ಈ ಕೆಳಕಂಡ ಪಟ್ಟಿಯ ಕಲಂ (2)ರಲ್ಲಿ ಹೆಸರಿಸಿರುವ ಅಧಿಕಾರಿಗಳನ್ನು ದಿನಾಂಕ: 30-9-2010 ರಿಂದ 1-10-2010ರವರೆಗೆ ಕಾರ್ಯನಿರ್ವಾಹಕ ದಂಡಾಧಿಕಾರಿ ಅಂದರೆ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳನ್ನಾಗಿ ಕಲಂ(4)ರಲ್ಲಿ ನಮೂದಿಸಿರುವ ಸ್ಥಳಗಳಿಗೆ ನೇಮಿಸಿ ಆದೇಶಿಸಲಾಗಿದೆ.

ಅ.ಸಂ.	ಅಧಿಕಾರಿಯ ವಿವರ	ತಾಲ್ಲೂಕು	ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳೆಂದು ನೇಮಕ ಮಾಡಬೇಕಾದ ಕಂದಾಯ ವಲಯ
01	02	03	04
01	ಸಹಾಯಕ ಕಾರ್ಯದರ್ಶಿಗಳು. ಜಿಲ್ಲಾ ಪಂಚಾಯತ್, ಗದಗ	ಗದಗ	ಗದಗ ವಲಯ
02	ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಗದಗ.		ಬೆಟಗೇರಿ ವಲಯ
03	ಸಹಕಾರ ಸಂಘಗಳ ಉಪ ನಿಬಂಧಕರು, ಗದಗ	ಮುಂಡರಗಿ	ಮುಂಡರಗಿ
04	ಸಹಾಯಕ ನಿರ್ದೇಶಕರು, ಮೀನುಗಾರಿಕಾ ಇಲಾಖೆ, ಗದಗ		ಡಂಬಳ
05	ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಗದಗ.	ನರಗುಂದ	ನರಗುಂದ ವಲಯ
06	ಉಪ-ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಗದಗ		ಕೊಣ್ಣೂರ ವಲಯ
07	ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಗದಗ	ರೋಣ	ರೋಣ ವಲಯ
08	ಜಿಲ್ಲಾ ಜಲಾಯನಯನ [illegible]		ನರೇಗಲ್ ವಲಯ

09	ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಗದಗ		[illegible] ವಲಯ
10	ಯೋಜನಾ ನಿರ್ದೇಶಕರು, ಡಿಆರ್‌ಡಿಎ, ಜಿ.ಪಂ., ಗದಗ.	ಶಿರಹಟ್ಟಿ	ಶಿರಹಟ್ಟಿ
11	ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿರಹಟ್ಟಿ		ಲಕ್ಷ್ಮೇಶ್ವರ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ. ಸಿದ್ದಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 1508

ಅಧಿಸೂಚನೆ

ಸಂಖ್ಯೆ: ಹೆಚ್‌ಡಿ 463 ಎಸ್‌ಎಸ್‌ಟಿ 2010, ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್, 2010

ದಿನಾಂಕ 30-09-2010ರಂದು ಅಯೋಧ್ಯ ರಾಮ ಜನ್ಮ ಭೂಮಿ-ಬಾಬರಿ ಮಸೀದಿ ವಿವಾದ ಕುರಿತು ಮಾನ್ಯ ಉಚ್ಛ ನ್ಯಾಯಾಲಯ, ಅಲಹಾಬಾದ್ ರವರು ತೀರ್ಪು ನೀಡಲಿದ್ದು, ಈ ಸಂಬಂಧವಲ್ಲಿ ಯಾದಗಿರಿ ಜಿಲ್ಲೆಯಲ್ಲಿನ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ದಂಡ ಪ್ರಕ್ರಿಯಾ ಸಂಹಿತೆ 1974ರ (ಕೇಂದ್ರ ಕಾಯ್ದೆ ಕಲಂ 21)ರಲ್ಲಿರುವ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಸಂಹಿತೆಯಡಿ ನೀಡಬಹುದಾದ ಎಲ್ಲಾ ಅಧಿಕಾರಗಳನ್ನು ನೀಡಿ, ಈ ಕೆಳಕಂಡ ಪಟ್ಟಿಯ ಕಲಂ (2)ರಲ್ಲಿ ಹೆಸರಿಸಿರುವ ಅಧಿಕಾರಿಗಳನ್ನು ದಿನಾಂಕ: 30-9-2010ರಂದು ಕಾರ್ಯನಿರ್ವಾಹಕ ದಂಡಾಧಿಕಾರಿ ಅಂದರೆ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳನ್ನಾಗಿ ಕಲಂ(3)ರಲ್ಲಿ ನಮೂದಿಸಿರುವ ಸ್ಥಳಗಳಿಗೆ ನೇಮಿಸಿ ಆದೇಶಿಸಲಾಗಿದೆ.

ಕ್ರ.ಸಂ.	ಅಧಿಕಾರಿಯ ಹೆಸರು ಮತ್ತು ಪದನಾಮ	ಕ್ಷೇತ್ರ ವ್ಯಾಪಿ
1	2	3
01	ಶ್ರೀ ಜಿ.ಎಸ್. ಪಾಟೀಲ್, ಸ.ಕಾ.ನಿ.ಅ., ಲೋ.ಇ. ಶಹಾಪುರ	ಶಹಾಪುರ
02	ಶ್ರೀ ಜಿ.ಎಂ.ಡೊಳ್ಳಿ, ಸಹಾಯಕ ನಿರ್ದೇಶಕರು, ಕ.ಭೂ.ಸೇ.ನಿ., ಶಹಾಪುರ	ಶಹಾಪುರ
03	ಶ್ರೀ ಜಿ.ಸಿ ತೊಂಟಗಂಟಿ, ಸ.ಕಾ.ನಿ.ಅ. ಪಂ.ರಾ.ಇಂ. ಶಹಾಪುರ	ಶಹಾಪುರ
04	ಶ್ರೀ ಗುರಣ್ಣ ಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಹಾಪುರ	ಶಹಾಪುರ
05	ಶ್ರೀ ಹಣಮಿಂತರಾಯ್ಗ ಓಲೆಕಾರ, ಸಿ.ಡಿ.ಪಿ.ಓ., ಶಹಾಪುರ	ಶಹಾಪುರ
06	ಶ್ರೀ ಎ. ರಾಜಣ್ಣ, ಸಹಾಯಕ ಕೃಷಿ ನಿರ್ದೇಶಕರು, ಶಹಾಪುರ	ಶಹಾಪುರ
07	ಶ್ರೀ ರಾಜು ಬಿ. ದೇಶಮುಖ, ಸಹಾಯಕ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಶಹಾಪುರ	ಶಹಾಪುರ
08	ಶ್ರೀ ಸಿದ್ದಣ್ಣ ಮಾನಶಿವಣಿ, ಅಕ್ಷರ ದಾಸೋಹ ಅಧಿಕಾರಿಗಳು, ಶಹಾಪುರ	ಶಹಾಪುರ
09	ಶ್ರೀ ಭೀಮರಾಯ ಸ.ಕಾ.ನಿ.ಅ., ಲೋ.ಇ. ಸುರಪುರ	ಸುರಪುರ
10	ಶ್ರೀ ಚನ್ನಬಸಪ್ಪ ಮೊಕಾರೆ, ಸ.ಕಾ.ನಿ.ಅ. ಪಂ.ರಾ.ಇಂ, ಸುರಪುರ	ಸುರಪುರ
11	ಶ್ರೀ ಪಲ್ಲಾರೆಡ್ಡಿ, ಕಾ.ನಿ.ಅ., ತಾಲ್ಲೂಕು ಪಂಚಾಯತ್, ಸುರಪುರ	ಸುರಪುರ
12	ಶ್ರೀ ವೀರೇಶ ಬಿರಾದಾರ, ವಿಶೇಷ ತಹಸೀಲ್ದಾರ, ಹುಣಸಗಿ	ಸುರಪುರ
13	ಶ್ರೀ ಥಾಮಸ್ ದೊಡ್ಡಮನಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಸುರಪುರ	ಸುರಪುರ
14	ಶ್ರೀ ಶಾಂತಗೌಡ ಪಾಟೀಲ್, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸುರಪುರ	ಸುರಪುರ
15	ಶ್ರೀ ಶಿವರಾಜ ಅರಣ್ಯಾಧಿಕಾರಿಗಳು, ಸುರಪುರ	ಸುರಪುರ
16	ಶ್ರೀ ರಾಜಶೇಖರರೆಡ್ಡಿ, ಸ.ಕಾ.ನಿ.ಅ., ಲೋ.ಇ., ಯಾದಗಿರಿ	ಯಾದಗಿರಿ
17	ಶ್ರೀ ವೀರಭದ್ರಪ್ಪ, ಕಾ.ನಿ.ಅ., ತಾಲ್ಲೂಕು ಪಂಚಾಯತ್, ಯಾದಗಿರಿ	ಯಾದಗಿರಿ
18	ಶ್ರೀ ಅಭಿಮನ್ಯು, ಸ.ಕಾ.ನಿ.ಅ., ಜಿ.ಪಂ.ಇಂ. ವಿಭಾಗ, ಯಾದಗಿರಿ	ಯಾದಗಿರಿ

19	ಶ್ರೀ ರಾಘವೇಂದ್ರರಾವ ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ಯಾದಗಿರಿ	ಯಾದಗಿರಿ
20	ಶ್ರೀ ಆರ್.ಬಿ. ಮಜರಹುಸೇನ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಯಾದಗಿರಿ	ಯಾದಗಿರಿ
21	ಶ್ರೀ ಸೈಯದ್ ಇನಿಬ್ ಅಲಿ, ವಲಯ ಅರಣ್ಯಾಧಿಕಾರಿಗಳು, ಯಾದಗಿರಿ	ಯಾದಗಿರಿ
22	ಶ್ರೀ ನಾರಾಯಣಸ್ವಾಮಿ, ಶಿಶು ಅಭಿವೃದ್ಧಿ ಅಧಿಕಾರಿಗಳು, ಯಾದಗಿರಿ	ಯಾದಗಿರಿ
23	ಶ್ರೀ ಕಾರ್ಯದರ್ಶಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ, ಯಾದಗಿರಿ	ಯಾದಗಿರಿ
24	ಶ್ರೀ ದೇವದುರ್ಗ, ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ, ತಾಲ್ಲೂಕು ಪಂಚಾಯತ್, ಯಾದಗಿರಿ	ಯಾದಗಿರಿ
25	ಶ್ರೀ ಸುರೇಶ ಜಾಧವ, ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ಯಾದಗಿರಿ	ಯಾದಗಿರಿ
26	ಸಹಾಯಕ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಯಾದಗಿರಿ	ಯಾದಗಿರಿ
27	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ, ಯಾದಗಿರಿ	ಯಾದಗಿರಿ
28	ಶ್ರೀ ಕೆಂಚಪ್ಪ, ಸಹಾಯಕ ನಿರ್ದೇಶಕರು, ಜಲಾನಯನ ಇಲಾಖೆ, ಯಾದಗಿರಿ	ಯಾದಗಿರಿ
29	ಶ್ರೀ ಪ್ರವೀಣಕುಮಾರ, ಸಹಾಯಕ ನಿರ್ದೇಶಕರು, ಜಲಾನಯನ ಇಲಾಖೆ, ಯಾದಗಿರಿ	ಯಾದಗಿರಿ
30	ಸಾಮಾಜಿಕ ವಲಯ, ಅರಣ್ಯಾಧಿಕಾರಿಗಳು, ಯಾದಗಿರಿ	ಯಾದಗಿರಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ. ಸಿದ್ದಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 1509

ಅಧಿಸೂಚನೆ

ಸಂಖ್ಯೆ: ಹೆಚ್‌ಡಿ 460 ಎಸ್‌ಎಸ್‌ಟಿ 2010, ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್, 2010

ದಿನಾಂಕ: 30-09-2010 ರಂದು ಅಯೋಧ್ಯ ರಾಮ ಜನ್ಮ ಭೂಮಿ-ಬಾಬರಿ ಮಸೀದಿ ವಿವಾದ ಕುರಿತು ಮಾನ್ಯ ಉಚ್ಚ ನ್ಯಾಯಾಲಯ, ಅಲಹಾಬಾದ್ ರವರು ತೀರ್ಪು ನೀಡಲಿದ್ದು, ಈ ಸಂಬಂಧದಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿನ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಸಲುವಾಗಿ ದಂಡ ಪ್ರಕ್ರಿಯಾ ಸಂಹಿತೆ 1974ರ(ಕೇಂದ್ರ ಕಾಯ್ದೆ ಕಲಂ 21) ರಲ್ಲಿರುವ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಸಂಹಿತೆಯಡಿ ನೀಡಬಹುದಾದ ಎಲ್ಲಾ ಅಧಿಕಾರಗಳನ್ನು ನೀಡಿ, ಈ ಕೆಳಕಂಡ ಪಟ್ಟಿಯ ಕಲಂ(2) ರಲ್ಲಿ ಸೂಚಿಸಿರುವ ಅಧಿಕಾರಿಗಳನ್ನು ದಿನಾಂಕ : 30-09-2010 ರಿಂದ 04-10-2010 ರವರೆಗೆ ಕಾರ್ಯನಿರ್ವಾಹಕ ದಂಡಾಧಿಕಾರಿ ಅಂದರೆ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಗಳನ್ನಾಗಿ ಕಲಂ(3) ರಲ್ಲಿ ನಮೂದಿಸಿರುವ ಸ್ಥಳಗಳಿಗೆ ನೇಮಿಸಿ ಆದೇಶಿಸಲಾಗಿದೆ.

ಕ್ರ.ಸಂ. 1	ಅಧಿಕಾರಿಯ ಹೆಸರು ಮತ್ತು ಪದನಾಮ 2	ಕ್ಷೇತ್ರ ವ್ಯಾಪ್ತಿ 3
1	ಡಾ. ಶರಣಬಸಪ್ಪಾ ನೀಲಂಗೆ, ಉಪ-ನಿರ್ದೇಶಕರು, ಪಶು ಪಾಲನಾ ಮತ್ತು ಪಶು ವೈದ್ಯಕೀಯ ಇಲಾಖೆ, ಗುಲ್ಬರ್ಗಾ.	ಸ್ಟೇಷನ್ ಬಜಾರ್ ಪೊಲೀಸ್ ಠಾಣೆ, ಗುಲ್ಬರ್ಗಾ.
2	ಶ್ರೀ ರವಿಕಿಣಬಂಟಿ, ವಿಶೇಷ ಭೂಸ್ವಾಧೀನಾಧಿಕಾರಿಗಳು (ಸಣ್ಣ ನೀರಾವರಿ), ಗುಲ್ಬರ್ಗಾ.	ಚೌಕ್ ಪೊಲೀಸ್ ಠಾಣೆ, ಗುಲ್ಬರ್ಗಾ.
3	ಶ್ರೀ ಆರ್.ಎಸ್. ಯಳಮಲ್ಲೆ, ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಗುಲ್ಬರ್ಗಾ.	ಬ್ರಹ್ಮಪೂರ ಪೊಲೀಸ್ ಠಾಣೆ, ಗುಲ್ಬರ್ಗಾ.

4	ಶ್ರೀ ಜಯಪ್ಪಾ, ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಗುಲ್ಬರ್ಗಾ.	ರೋಜಾ ಪೊಲೀಸ್ ಠಾಣೆ, ಗುಲ್ಬರ್ಗಾ.
5	ಶ್ರೀ ಆರ್.ಎಸ್. ಬೀರಾದಾರ್, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಗುಲ್ಬರ್ಗಾ.	ಗ್ರಾಮೀಣ ಪೊಲೀಸ್ ಠಾಣೆ, ಗುಲ್ಬರ್ಗಾ.
6	ಶ್ರೀ ಚನ್ನಬಸಪ್ಪಾ ಮುದೋಳ, ಉಪ ಯೋಜನಾ ಸಂಯೋಜಕರು (Dy.pc) ಸರ್ವ ಶಿಕ್ಷಣ ಅಭಿಯಾನ, ಗುಲ್ಬರ್ಗಾ.	ನ್ಯೂ ರಾಘವೇಂದ್ರ ಕಾಲೋನಿ ಪೊಲೀಸ್ ಠಾಣೆ, ಗುಲ್ಬರ್ಗಾ.
7	ಶ್ರೀ ವಸಂತ ವಿ.ಕುಲಕರ್ಣಿ, ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಗುಲ್ಬರ್ಗಾ.	ಅಶೋಕ ನಗರ ಪೊಲೀಸ್ ಠಾಣೆ, ಗುಲ್ಬರ್ಗಾ.
8	ಶ್ರೀ ಸಮದ್ ಪಟೇಲ್, ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ಗುಲ್ಬರ್ಗಾ.	ಮಹಾತ್ಮ ಬಸವೇಶ್ವರ ಪೊಲೀಸ್ ಠಾಣೆ, ಗುಲ್ಬರ್ಗಾ.
9	ಶ್ರೀ ಬಸವರಾಜ, ಯೋಜನಾ ಮೌಲ್ಯಮಾಪನ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಗುಲ್ಬರ್ಗಾ.	ವಿಶ್ವ ವಿದ್ಯಾಲಯ ಪೊಲೀಸ್ ಠಾಣೆ, ಗುಲ್ಬರ್ಗಾ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸಿ. ಸಿದ್ದಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ,
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 1510

HIGH COURT OF KARNATAKA

NOTIFICATION

No. LCA-II. 238/2010, Bangalore, Dated : 24th September, 2010

Sri K.A. Panchalingaiah, Chief Administrative officer, District & Sessions Court, Mysore, is permitted to retire from service with effect from the afternoon of 30-10-2010 (since 31-10-2010 falls on Sunday), on attaining the age of superannuation, under Rule 95(1) of K.C.S.Rules.

By Order,
K.V. VENKATESH,
ASSISTANT REGISTRAR

PR. 1511

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಅಪಜೀ 106 ಅಪಸೇ 2010, ಬೆಂಗಳೂರು, ದಿನಾಂಕ: 20ನೇ ಸೆಪ್ಟೆಂಬರ್, 2010

ರಾಜ್ಯ ಅರಣ್ಯ ಸೇವೆಗೆ ಸೇರಿದ ಈ ಕೆಳಕಂಡ ಉಪ ಅರಣ್ಯ ಸಂರಕ್ಷಣಾಧಿಕಾರಿ/ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ/ಆಡಳಿತಾಧಿಕಾರಿ/ಆಡಳಿತ ಸಹಾಯಕ ಹಾಗೂ ವ್ಯವಸ್ಥಾಪಕ ವೃಂದದ ಅಧಿಕಾರಿಗಳು 60 ವರ್ಷಗಳ ವಯೋಮಿತಿಯನ್ನು ಪೂರೈಸುವುದರಿಂದ, ಅವರ ಹೆಸರಿನ ಮುಂದೆ ನಮೂದಿಸಲಾದ ದಿನಾಂಕದಂದು ಸೇವೆಯಿಂದ ವಯೋನಿವೃತ್ತಿ ಹೊಂದಲು ಸರ್ಕಾರದ ಅನುಮತಿ ನೀಡಿದೆ.

ಇವರಿಂದ ಸರ್ಕಾರಕ್ಕೆ ಬರಬೇಕಾದ ಯಾವುದೇ ಬಾಕಿಗಳಿದ್ದಲ್ಲಿ, ಅದನ್ನು ಇವರ ನಿವೃತ್ತಿ ಸೌಲಭ್ಯಗಳಿಂದ ಕಡಿತಗೊಳಿಸತಕ್ಕದ್ದು.

ಸರ್ಕಾರದಿಂದ / ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಂದ ಮುಂದಿನ ಸ್ಪಷ್ಟ ಆದೇಶ ಬರುವವರೆಗೆ ಅವರುಗಳ ತಾತ್ಕಾಲಿಕ ಪಿಂಚಣಿಯನ್ನು (Provisional Pension) ಮಾತ್ರ ಬಿಡುಗಡೆಗೊಳಿಸಲು ಮಹಾಲೇಖಪಾಲರು ಕ್ರಮ ಕೈಗೊಳ್ಳತಕ್ಕದ್ದು.

ಕ್ರ.ಸಂ.	ಅಧಿಕಾರಿಯ ಹೆಸರು ಶ್ರೀಯುತರು	ಪದನಾಮ	ಜನ್ಮ ದಿನಾಂಕ	ನಿವೃತ್ತಿಯ ದಿನಾಂಕ
1.	ಶ್ರೀ ಪರಮಶಿವಯ್ಯ	ಸ.ಅ.ಸಂ	10-01-1951	31-01-2011
2.	ಶ್ರೀ ನಾಯಕ್. ಕೆ.ಎಸ್	ಉ.ಅ.ಸಂ	15-02-1951	28-02-2011

3.	ಶ್ರೀ ಮನೋಜ್ ಆರ್.ಬಿ	ಸ.ಅ.ಸಂ	05-03-1951	31-03-2011
4.	ಶ್ರೀ ಶ್ರೀನಿವಾಸ ಜಿ.ಟಿ	ಸ.ಅ.ಸಂ	14-03-1951	31-03-2011
5.	ಶ್ರೀ ಹೊಸಮನಿ.ಡಿ ಎಸ್.ಆರ್	ಉ.ಅ.ಸಂ	16-03-1951	31-03-2011
6.	ಶ್ರೀ ಮಂಜುನಾಥ ಹೊಬ್ಳಿಯು.ಸ್	ಉ.ಅ.ಸಂ	20-03-1951	31-03-2011
7.	ಶ್ರೀ ಪಿಠೋಬರಾವ್. ಹೆಚ್.ಹೆಚ್.	ಆಡಳಿತ ಸಹಾಯಕ	01-04-1951	31-03-2011
8.	ಶ್ರೀ ನಾರಾಯಣಪ್ಪ. ಎನ್	ಆಡಳಿತಾಧಿಕಾರಿ	10-04-1951	30-04-2011
9.	ಶ್ರೀ ಮಾಳಗಿಮನಿ ವೈ.ಆರ್.	ಆಡಳಿತ ಸಹಾಯಕ	01-06-1951	31-05-2011
10.	ಶ್ರೀ ನಾಯಕ್.ಎ. ಎಲ್	ಉ.ಅ.ಸಂ	20-06-1951	30-06-2011
11.	ಶ್ರೀ ನಂಜಾರೆಡ್ಡಿ. ವಿ.	ವ್ಯವಸ್ಥಾಪಕರು	01-07-1951	30-06-2011
12.	ಶ್ರೀ ರಾಜು. ಬಿ	ಸ.ಅ.ಸಂ	27-07-1951	31-07-2011
13.	ಶ್ರೀ ಪುಟ್ಟಸ್ವಾಮಿ	ಉ.ಅ.ಸಂ	28-07-1951	31-07-2011
14.	ಶ್ರೀ ಜಿತಗೊಂಡ ಶಿವಾಜಿ	ವ್ಯವಸ್ಥಾಪಕರು	12-08-1951	31-08-2011
15.	ಶ್ರೀ ಬಾಳಗಿ. ಎಂ.ಎಸ್	ಉ.ಅ.ಸಂ	31-08-1951	31-08-2011
16.	ಶ್ರೀ ಚಿಕ್ಕನಾರಾಪ್ಪ.ಬಿ.ಎನ್.	ಉ.ಅ.ಸಂ	18-09-1951	30-09-2011
17.	ಶ್ರೀ ಕೃಷ್ಣಮೂರ್ತಿ ಜಿ.	ಆಡಳಿತ ಅಧಿಕಾರಿ	05-10-1951	31-10-2011
18.	ಶ್ರೀ ಗುಜಮಾಗಡಿ ಹೆಚ್.ಹೆಚ್.	ವ್ಯವಸ್ಥಾಪಕರು	02-11-1951	30-11-2011
19.	ಶ್ರೀ ಪಾಟೀಲ್.ಎನ್.ವೈ	ಆಡಳಿತ ಸಹಾಯಕ	05-11-1951	30-11-2011

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಡಗಾವೆ ಬಸವರಾಜ್,

ಸರ್ಕಾರದ ಅಧೀನ ಕಾರ್ಯದರ್ಶಿ,

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ (ಸೇವೆಗಳು)

ಪಿ.ಆರ್. 1512

PERSONNEL AND ADMINISTRATIVE REFORMS SECRETARIAT

NOTIFICATION

No: DPAR 92 CHUSIA 2010, Bangalore, Dated 25th September 2010

Sri P. T. Kulkarni, Deputy Chief Electoral Officer & Ex-Officio Deputy Secretary to Government, D.P.A.R. (Elections) is sanctioned combined leave as follows :

1. Earned Leave for 30 days w.e.f. 25-10-2010 to 23-11-2010 (bdi).
2. Commuted Leave for 39 days w.e.f. 24-11-2010 to 01-01-2011 (bdi).

Sri T. Shamaiah, Joint Chief Electoral Officer & Ex-Officio Deputy Secretary to Government, D.P.A.R. (Elections) is placed in additional charge of the duties of the post of Deputy Chief Electoral Officer & Ex. Officio Deputy Secretary to Government, during the absence on leave of Sri P.T. Kulkarni.

Certified that Sri P. T. Kulkarni would have continued to officiate as Deputy Chief Electoral Officer & Ex-Officio Deputy Secretary to Government, but for his proceeding on leave.

By Order and in the Name of the Governor of Karnataka,

C.S. SURANJANA,

Chief Electoral Officer &

Ex-Officio Principal Secretary to Government,

DP & AR (Elections)

P.R. 1513

ಭಾಷಾಂತರ ನಿರ್ದೇಶನಾಲಯ

ಅಧಿಕೃತ ಜ್ಞಾಪನ

ಸಂಖ್ಯೆ: ಭಾನಿ/55/ಆಡಳಿತ/ಮುಂಬಡ್ತಿ/ 2010, ಬೆಂಗಳೂರು, ದಿನಾಂಕ: 01ನೇ ಅಕ್ಟೋಬರ್, 2010

ಭಾಷಾಂತರ ನಿರ್ದೇಶನಾಲಯದ ಈ ಕೆಳಕಂಡ ಭಾಷಾಂತರಕಾರರ ವೃಂದದ ಅಧಿಕಾರಿಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವೇತನ ಶ್ರೇಣಿ ರೂ. 11400-21600ರ ಸಂಶೋಧನಾಧಿಕಾರಿ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡಿ ಅವರುಗಳ ಹೆಸರುಗಳ ಮುಂದೆ ನಮೂದಿಸಿರುವ ಹುದ್ದೆಗಳಲ್ಲಿ ಸ್ಥಳ ನಿಯುಕ್ತಿಗೊಳಿಸಲಾಗಿದೆ.

ಕ್ರಮ ಸಂಖ್ಯೆ	ಅಧಿಕಾರಿ ಹೆಸರು ಮತ್ತು ಪ್ರಸ್ತುತ ಹುದ್ದೆ	ಬಡ್ತಿ ನೀಡಿ ನೇಮಿಸಲಾದ ಹುದ್ದೆ
1.	ಶ್ರೀ ಹೆಚ್. ವೂಲೆಪ್ಪ, ಭಾಷಾಂತರಕಾರರು (ಕನ್ನಡ) ಭಾಷಾಂತರ ನಿರ್ದೇಶನಾಲಯ	ಶ್ರೀ ಜಿ. ಚನ್ನಬಸಪ್ಪ, ಸಂಶೋಧನಾಧಿಕಾರಿ ಇವರ ವಯೋನಿವೃತ್ತಿಯಿಂದ ತೆರವಾದ ಹುದ್ದೆ ಭಾಷಾಂತರ ನಿರ್ದೇಶನಾಲಯ
2.	ಶ್ರೀ ಜಿ. ಗಂಗರಾಜು, ಭಾಷಾಂತರಕಾರರು (ಕನ್ನಡ) ಭಾಷಾಂತರ ನಿರ್ದೇಶನಾಲಯ	ಶ್ರೀ ಜಿ. ಮಹದೇವ್, ಸಂಶೋಧನಾಧಿಕಾರಿ ಇವರ ಮುಂಬಡ್ತಿಯಿಂದ ತೆರವಾದ ಹುದ್ದೆ ಭಾಷಾಂತರ ನಿರ್ದೇಶನಾಲಯ

ಡಾ॥ ಕೆ.ಎಸ್. ಗೀತಾ,
ನಿರ್ದೇಶಕರು.

ಪಿ.ಆರ್. 1514

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 302 ಎಲ್‌ಇಟಿ 2010, ಬೆಂಗಳೂರು, ದಿನಾಂಕ: 29ನೇ ಸೆಪ್ಟೆಂಬರ್, 2010

ಶ್ರೀ ಗುರುದಾಸ ಎಂ. ಭಟ್, ಅಪರ ಕಾರ್ಮಿಕ ಆಯುಕ್ತರು. ಕಾರ್ಮಿಕ ಇಲಾಖೆ ಪ್ರಸ್ತುತ ನಿಯೋಜನೆಯ ಮೇರೆಗೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಇವರ ಸೇವೆಯನ್ನು ಮಾತೃ ಇಲಾಖೆಗೆ ಹಿಂಪಡೆದು ದಿನಾಂಕ: 30-09-2010 ರಂದು ವಯೋ ನಿವೃತ್ತಿ ಹೊಂದಲಿರುವ ಶ್ರೀ ಎಸ್. ಮಂಜುನಾಥ ಶಾಸ್ತ್ರಿ, ಅಪರ ಕಾರ್ಮಿಕ ಆಯುಕ್ತರು (ಆಡಳಿತ), ಇವರ ಸ್ಥಾನಕ್ಕೆ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಅಲ್ಲದೆ ಈ ಅಧಿಕಾರಿಯವರನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ಹುದ್ದೆಯ ಅಧಿಕ ಪ್ರಭಾರದಲ್ಲಿ ಇಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಯು.ಎನ್. ನಾಗೇಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ.

ಪಿ.ಆರ್. 1515

HIGH COURT OF KARNATAKA

NOTIFICATION

No: GOB(I)92/2010, Bangalore, Dated 1st October 2010

PART-I

In exercise of the powers conferred by Sub-Section (3) of Section 11 of the Bangalore City Civil Courts Act, 1979 the High Court of Karnataka hereby designates the following Judges of the Bangalore City Civil Court, mentioned in Column No. 2 of the table below, as the Vacation City Civil Judge, for hearing of all the matters which required to be immediately and promptly dealt with during Dasara Vacation of 2010 for the periods mentioned in Column No. 4 of the table below,

TABLE

Sl. No.	Designation	City Civil Court	Period	
			From	To
1	2	3	4	
1.	XXIV Addl. City Civil and Sessions Judge, Bangalore	Bangalore	11-10-2010	14-10-2010
2.	VII Addl. City Civil & Sessions Judge, Bangalore	Bangalore	15-10-2010	

PART-II

In exercise of the powers conferred under Sub-Section (3) (a) of Section 11 of the Bangalore City Civil Courts Act, 1979, the Vacation City Civil Judge are directed to dispose of urgent civil matters in which injunction, stay of proceedings and attachment orders etc., are sought for during the Dasara Vacation of 2010.

PART-III

In exercise of the powers conferred under Sub-Section (3) (c) of Section 11 of the Bangalore City Civil Courts Act, 1979 the Vacation City Civil Judge are directed to exercise the same administrative control over the staff of the City Civil Court, Bangalore, that are being exercised by the Principal City Civil and Sessions Judge, Bangalore, during the period of Dasara Vacation of 2010, in the absence of Prl. City Civil and Sessions Judge, Bangalore in the headquarters.

By Order of the High Court,
R.B.BUDIHAL
Registrar General.

P.R.1516

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 180 ಪೊಸಿಪ 2010, ಬೆಂಗಳೂರು, ದಿನಾಂಕ: 11ನೇ ಅಕ್ಟೋಬರ್, 2010

ಸರ್ಕಾರದ ಅಧಿಸೂಚನೆ ಸಂಖ್ಯೆ : ಒಇ 169 ಪೊಸಿಪ 2006, ದಿನಾಂಕ 26–07–2006ರ ಪ್ರಕಾರ ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್‌ಗಳ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ) ನಿಯಮಗಳು, 1997 ರಡಿಯಲ್ಲಿ ಸಹಾಯಕ ಕಮಾಂಡೆಂಟ್ ಹುದ್ದೆಗೆ ನೇರ ನೇಮಕಾತಿಗೊಂಡು ಶ್ರೀ ಕೆ.ಎಸ್. ರಘುನಾಥ್ ರವರು ದಿನಾಂಕ : 01–08–2006ರಂದು ಕರ್ತವ್ಯಕ್ಕೆ ಹಾಜರಾಗಿದ್ದು ದಿನಾಂಕ : 01–02–2009 ರಂದು 2½ ವರ್ಷಗಳ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆಂದು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು, 1977ರ ನಿಯಮ 5(1)(ಎ)ರ ಪ್ರಕಾರ ಘೋಷಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 1517

ಇಂಧನ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಎನ್ 80 ಪಿಪಿಸಿ 2010, ಬೆಂಗಳೂರು, ದಿನಾಂಕ: 08ನೇ ಅಕ್ಟೋಬರ್, 2010

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ), ಬೆಂಗಳೂರು ಇವರ ಕಛೇರಿ ಆದೇಶ ಸಂಖ್ಯೆ : 103/2010–11, ದಿನಾಂಕ : 06–10–2010ರಲ್ಲಿ ಶ್ರೀ ಕಣದಾಳೆ ಎಸ್.ಎಂ., ವಲಯ ಅರಣ್ಯ ಅಧಿಕಾರಿ ಇವರನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇಲ್ಲಿ ಖಾಲಿ ಇರುವ ಹುದ್ದೆಗೆ ನೇಮಕ ಮಾಡಲಾಗಿದೆ.

ಆದ್ದರಿಂದ ಶ್ರೀ ಕಣದಾಳೆ ಎಸ್.ಎಂ., ಇವರನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ಖಾಲಿ ಇರುವ ವಲಯ ಅರಣ್ಯ ಅಧಿಕಾರಿ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಮರು ನಿಯುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್.ಬಿ.ಕೃಷ್ಣಪ್ಪನವರ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

ಪಿ.ಆರ್. 1518

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 240 ಆಸೇವ 2010, ಬೆಂಗಳೂರು, ದಿನಾಂಕ: 05ನೇ ಅಕ್ಟೋಬರ್, 2010

ಶ್ರೀ ಅಬ್ದುಲ್ ಖಯ್ಯೂಂ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೀದರ್ ಜಿಲ್ಲೆ, ಬೀದರ್, ಇವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವಿಶೇಷ ಜಿಲ್ಲಾಧಿಕಾರಿಗಳು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, (Bangalore-Mysore Infrastructure Corridor Project), ಬೆಂಗಳೂರು-ಖಾಲಿ ಹುದ್ದೆಗೆ ವರ್ಗಾಯಿಸಿ ನೇಮಿಸಲು ಇವರ ಸೇವೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವಶಕ್ಕೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು. ಇಲಾಖೆ (ಸೇವೆಗಳು–2).

ಪಿ.ಆರ್. 1520

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ನವೆಂಬರ್ ೪, ೨೦೧೦ (ಕಾರ್ತೀಕ ೧೩ ಶಕ ವರ್ಷ ೧೯೩೨)	ಸಂಚಿಕೆ ೪೩

ಭಾಗ-೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯ, ಸಾಗರ

ಅಧಿಸೂಚನೆ ಸಂಖ್ಯೆ: ಬಿ3:ಅಮೊ.ವಾಹನ.24/10-11, ದಿನಾಂಕ:11ನೇ ಅಕ್ಟೋಬರ್, 2010

ಸಾಗರ ವಿಭಾಗದ ವ್ಯಾಪ್ತಿಯಲ್ಲಿ ಶ್ರೀಗಂಧದ ಹಾಗೂ ಇತರೆ ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆಯಲ್ಲಿ ತೊಡಗಿದ್ದ ವಾಹನಗಳನ್ನು ಸಾಗರ ವಿಭಾಗದ ಇಲಾಖಾ ಸಿಬ್ಬಂದಿ ವರ್ಗದವರು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡ ಸದರಿ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963ರ ಸೆಕ್ಷನ್ 71(ಎ) ಪ್ರಕಾರ ಜರುಗಿಸುವಂತೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಲಾದ ವಾಹನಗಳ ತಪಶೀಲು ಕೆಳಕಂಡಂತಿರುತ್ತದೆ.

ಕ್ರ ಸಂ.	ವಾಹನಗಳ ವಿವರ	ಅರಣ್ಯ, ಮೊಕದ್ದಮೆ ಸಂಖ್ಯೆ	ಯಂತ್ರದ ಸಂಖ್ಯೆ	ಛಾಸೀಸ್ ಸಂಖ್ಯೆ
1.	ಟಿ.ವಿ.ಎಸ್. ಮ್ಯಾಕ್ಸ್-100 ಬೈಕ್ ಕೆಎ-15-ಹೆಚ್-8961	ಅಂಬ್ಲಿಗೊಳ ವಲಯದ ಅ.ಮೊ. ಸಂ.44/10-11 ದಿ:16.08.2010	C9211M473485	9211F417551
2.	ಮಾರುತಿ ವ್ಯಾನ್ ನಂಬರ್ ಇಲ್ಲ	ಶಿರಾಳಕೊಪ್ಪ ವಲಯದ ಅ.ಮೊ. ಸಂ.29/2010-11 ದಿ:23.08.2010	Not Visible	IN-87-2931
3.	ಕ್ಯಾಂಟರ್ ಕೆಎ-37-2369	ಸೊರಬ ವಲಯದ ಅ.ಮೊ.ಸಂ:78/10-11 ದಿ:06.09.2010	I50626955	MED 50634400
4.	ಮಹೇಂದ್ರ ಫಿಕ್‌ಅಫ್ ಕೆಎ-23-7646	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿದಳ, ಶಿಕಾರಿಪುರ ಅ.ಮೊ.31/2010-11 ದಿ:10.09.2010	AC11F56190	MAIRC2ACA 12445397
5.	ಹಿರೋಹೊಂಡಾ ಸಿ.ಡಿ.ಡಿಲಕ್ಸ್ ಕೆಎ-15-ಎಲ್-0105	ಅಂಬ್ಲಿಗೊಳ ವಲಯದ ಅ.ಮೊ. ಸಂ:55/10-11 ದಿ:05.10.2010	HA11EA89E10643	MBLHA11EE89E12453

ಈ ಮೇಲ್ಕಂಡ ವಾಹನದ ಬಗ್ಗೆ ಯಾರು ವಾರಸುದಾರರು ಇಲ್ಲಿಯವರೆಗೆ ಹಾಜರಾಗದೇ ಇರುವುದರಿಂದ ಸದರಿ ವಾಹನಗಳ ನಿಜವಾದ ವಾರಸುದಾರರು ಯಾರಾದರೂ ಇದ್ದಲ್ಲಿ ಅವರು ವಾಹನಗಳ ಬಗ್ಗೆ ಅಧಿಕೃತ ಹಕ್ಕು ಬಾದ್ಯತೆಗಳನ್ನು ಕೆಳ ಸಹಿ ಮಾಡಿರುವವರ ಸಮ್ಮುಖದಲ್ಲಿ ಅಧಿಸೂಚನೆಯು ಕರ್ನಾಟಕ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ ಮೂವತ್ತು (30) ದಿನಗಳ ಒಳಗೆ ಹಾಜರುಪಡಿಸಬೇಕಾಗಿ ಮತ್ತು ವಾಹನಗಳನ್ನು ಶ್ರೀಗಂಧ ಮತ್ತು ಇತರೇ ಅರಣ್ಯ ಉತ್ಪನ್ನವನ್ನು ಕಳ್ಳಸಾಗಣೆ ಮಾಡಲು ಉಪಯೋಗಿಸಿದಕ್ಕಾಗಿ ವಾಹನಗಳನ್ನು ಏಕೆ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದರ ಬಗ್ಗೆ ಅವರುಗಳು ಅಧಿಕೃತ ಸಮಜಾಯಿಷಿಯನ್ನು ಬರಹದ ಮೂಲಕ ಇತರೆ ದಾಖಲಾತಿಗಳೊಂದಿಗೆ ಈ ಕೆಳಸಹಿ ಮಾಡಿದವರ ಸಮ್ಮುಖದಲ್ಲಿ ಹಾಜರುಪಡಿಸಲು ಈ ಮೂಲಕ ಪ್ರಕಟಿಸಲಾಗಿದೆ. ಈ ಮೇಲ್ಕಂಡ ವಾಹನಗಳ ಬಗ್ಗೆ ಯಾವ ವಾರಸುದಾರರು

ಮೇಲ್ಕಾಣಿಸಿದ ಅವಧಿಯೊಳಗೆ ಲಿಖಿತ ಮೂಲಕ ಯಾವುದೇ ಅರ್ಜಿಯನ್ನು ಈ ಕೆಳಸಹಿದಾರರಿಗೆ ಸಲ್ಲಿಸದೇ ಇದ್ದಲ್ಲಿ ವಾಹನಗಳನ್ನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ)ರ ಪ್ರಕಾರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಮನೋಜ್ ಕುಮಾರ್ ತ್ರಿಪಾಠಿ
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿ.ಆರ್.1512

ಕರ್ನಾಟಕ ವಿಧಾನಸಭೆ

ವಿಧಾನಸಭೆಯ ಸಚಿವಾಲಯ, ಅಂಚೆ ಪೆಟ್ಟಿಗೆ ನಂ.5074, ವಿಧಾನಸೌಧ, ಬೆಂಗಳೂರು-560 233

ಸಂಖ್ಯೆ: ವಿಸಸ/ಶಾರಶಾ/24/ಸಿಎ/2008-09, ದಿನಾಂಕ:30ನೇ ಸೆಪ್ಟೆಂಬರ್, 2010

ವಿಷಯ: ವಿಧಾನಸಭಾ ಸದಸ್ಯರ ವಿಳಾಸದ ಬದಲಾವಣೆ.

ಬಸವನಬಾಗೇವಾಡಿ ವಿಧಾನಸಭಾ ಕ್ಷೇತ್ರದ ಮಾನ್ಯ ಸದಸ್ಯರಾದ ಶ್ರೀ ಎಸ್.ಕೆ. ಬೆಳ್ಳುಬ್ಬಿ ಅವರು ಕೆಳಕಂಡಂತೆ ತಮ್ಮ ವಿಳಾಸವನ್ನು ಬದಲಾಯಿಸಿರುತ್ತಾರೆ.

ಶ್ರೀ ಎಸ್.ಕೆ. ಬೆಳ್ಳುಬ್ಬಿ,
ವಿಧಾನಸಭಾ ಸದಸ್ಯರು, ನಂ.15, 3ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, ಆರ್.ಎಂ.ವಿ. ಎಕ್ಸ್‌ಟೆನ್ಷನ್, ನ್ಯೂ ಬಿ.ಇ.ಎಲ್.ರಸ್ತೆ,
ಬೆಂಗಳೂರು-560 094, ಮೊಬೈಲ್: 9731895943/ 9916956149.

ಆದಕಾರಣ, ಮಾನ್ಯ ಸದಸ್ಯರಿಗೆ ಇನ್ನು ಮುಂದೆ ಕಳುಹಿಸಲಾಗುವ ಎಲ್ಲಾ ಕಾಗದ ಪತ್ರಗಳನ್ನು ಮೇಲ್ಕಂಡ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ಕೋರಲು ನಿರ್ದೇಶಿತನಾಗಿದ್ದೇನೆ.

ಕೆ.ಪಿ. ಗೋಪಿಕೃಷ್ಣ
ಅಧೀನ ಕಾರ್ಯದರ್ಶಿ,
ಕರ್ನಾಟಕ ವಿಧಾನಸಭೆ.

ಪಿ.ಆರ್.1497

HIGH COURT OF KARNATAKA, BANGALORE

NOTIFICATION NO.HCBB No.202/2010

DATED:5TH OCTOBER, 2010

DASARA VACATION OF 2010

The High Court will remain closed for Dasara Vacation from Monday the 11th October, 2010 to Friday the 15th Ocober 2010 (Both days inclusive).

No appeals, Petitions or Applications and any other paper of Civil nature including Vakalathnama will be received during the Vacation except in cases where it is sought to obtain urgent interim orders like stay orders, attachment and temporary injunctions etc.

Criminal Appeals, Criminal Revision Petitions, Criminal Petitions and urgent applications in Criminal matters will be received during the Dasara Vacation.

There will be no sittings during Dasara Vacation in the Circuit Benches at Dharwad and Gulbarga. Urgent matters of the nature specified above pertaining to the Circuit Benches of Dharwad and Gulbarga may be filed / moved before the Principal Bench at Bangalore.

During Dasara Vacation of 2010 i.e., from Monday the 11th October 2010 to Friday the 15th October 2010 (both days inclusive) the working hours for the office of the High Court of Karnataka, Principal Bench at Bangalore and Circuit Benches at Dharwad and Gulbarga shall be between 10.15 AM to 02.00 PM, except on all Vacation Court Sitting Days, on vacation court sitting days the working hours shall be between 10.15 AM to 05.00 PM.

Vacation Benches mentioned hereunder will sit on Tuesday the 12th and Thursday the 14th October 2010 in Court Halls mentioned against them on the "SITTING DAYS" noted below at 10.30 AM during the Vacation to hear urgent matters. Matters of the nature referred to above filed during vacation and inclusive of the day previous to the sitting day will be posted before the respective Benches. But those cases filed on the sitting day will not be posted on that day, except by the Special Orders of the Vacation Bench.

On the days of sitting, after completion of the Division Bench sitting, the Vacation Judges will sit single and take up Single Bench matters.

Memos for posting will not be entertained by the Reigstrar (Judicial) or the Deputy Registrar during Dasara Vacation. Motions to take up the case/s shall be made before the respective Benches.

PRINCIPAL BENCH AT BANGALORE

VACATION BENCH DIVISION BENCH	COURT HALL	VACATION JUDGES SINGLE BENCH	COURT HALL
11.10.2010 TO 15.10.2010 Sitting day 12.10.2010			
Hon'ble Mr. Justice N. Kumar AND Hon'ble Mr. Justice Jawad Rahim (All Division Bench matters)	9	Hon'ble Mr. Justice N. Kumar Hon'ble Mr. Justice V. Jagannathan Hon'ble Mr. Justice Jawad Rahim	9 10 11

VACATION BENCH DIVISION BENCH	COURT HALL	VACATION JUDGES SINGLE BENCH	COURT HALL
11.10.2010 TO 15.10.2010 Sitting day 14.10.2010			
Hon'ble Mr. Justice N. Kumar AND Hon'ble Mr. Justice H.S. Kempanna (All Division Bench matters)	9	Hon'ble Mr. Justice N. Kumar Hon'ble Mr. Justice V. Jagannathan Hon'ble Mr. Justice H.S. Kempanna	9 10 11

By Order of Hon'ble the Chief Justice

PR-1490 Registrar (Judicial)

IN THE COURT OF 2nd ADDITIONAL CHIEF METROPOLITAN MEGISTRATE, BANGALURU CITY

Notification No./ 2010, Dated:20th August, 2010

It is hereby notified for the information of the public that the unclaimed properties mentioned under are in the custody of the Jayanagar Police station, Bengaluru city, as unclaimed shall be confiscated to the Government, and disposed off according to law of not claimed by the owner with proof of ownership within one months from the date of the publication of notification.

Sl. No.	Cr.No.	Section	PF No.	Reg.No.	Chasis No.	Eng.No.
1.	40/89	379 IPC	88/89	CKJ-9609	KD207048	KE934211
2.	846/97	379 IPC	74/98	CKQ-4537	7544107/87	498237107/87
3.	331/00	379 IPC	92/00	CKP-9536	375284	393781
4.	43/01	379 IPC	21/02	TN-28-V-7617		47007663808
5.	43/01	379 IPC	21/02	-		
6.	239/02	457, 380 IPC	90/02	KA-05-Q-5037		
7.	252/02	379 IPC	168/02	Dup.KA-02-E-98, Original KA-03-E-8217	NIFD819233	NIFD81938
8.	40/05	41 cl(d) r/w 102 crpc	14/05	KA-07-H-7687	P1810E064221	P1810M-064173
9.	40/05	41 cl(d) r/w 102 crpc	14/05	KA-04-K-554		P1301M704451
10.	40/05	41 cl(d) r/w 102 crpc	15/05			E30CE03403

Sl. No.	Cr.No.	Section	PF No.	Reg.No.	Chasis No.	Eng.No.
11.	40/05	41cl (d) r/w 102 crpc	15/05	KA-04-E-7273	97B10F-06839	99B10E12058
12.	314/05	379 IPC	90/05	KA-01-H-4419		
13.	81/06	41 cl(d) r/w 102 crpc & 379 IPC	27/06	KA-07-E-3797	ILI308244	ILI308244
14.	81/06	41 cl(d) r/w 102 crpc & 379 IPC	28/06	KA-08-Y-742	M1010F030047	M1010M-031147
15.	81/06	41 cl(d) r/w 102 crpc & 379 IPC	29/06	-		
16.	236/05	379 IPC	98/06	KA-05-EN-9013 (Dup) KA-05-EN-9912 (Ori)	812067	801567
17.	66/06	379 IPC	124/06	KA-05-ED-2848 (Ori) KA-05-EN-6661	309368	309368
18.	299/06	399, 402 IPC	139/06	KA-03-W-8334	7810M196575	7810F-148975
19.	105/07	41 cl(d) r/w 102 crpc & 379 IPC	43/07	-	MD62AFIX 31 N85810	1N-310 74062
20.	213/07	379 IPC	95/07	KA-02-E-5195	F10E38968	F1LF012699
21.	213/07	379 IPC	99/07	KA-04-EC-1474	02C20C10873	02C180M07042
22.	245/07	41 cl(d) r/w 102 crpc & 379 IPC	120/07	KA-51-E-3909	DUMBMF56369	DUF BMF78478
23.	580/99	379 IPC	17/08	KA-13-E-1704	30M94H09482	30F94 H09482
24.	51/08	41 cl(d) r/w 102 crpc & 379 IPC	20/08	KA-02-EF-4680	KA02/2476/04	02F18E35462
25.	09/08	379 IPC	106/08	KA-05-EJ-5048	DFFBJB69961	DFMBJB76705
26.	201/08	392 IPC	107/08	KA-04-V-9615	NIEQM924231	NIFQM928635
27.	387/08	41 cl(d) r/w 102 crpc & 379 IPC	155/08	KA-05-EH-5368	7909F 425554	7909M475077
28.	387/08	41 cl(d) r/w 102 crpc & 379 IPC	156/08	KA-05-EG-7861	ILI 144241	ILI 144241

Sl. No.	Cr.No.	Section	PF No.	Reg.No.	Chasis No.	Eng.No.
29.	409/08	41 cl(d) r/w 102 crpc & 379 IPC	161/08	KA-03-V-481		145280042
30.	14/09	379 IPC	08/09	KA-13-L-007	M-1201F115960	M-1201M117489
31.	275/07	379 IPC	30/09			
32.	32/09	380 IPC	39/09	KA-04-EY-4939	MD2BSJB22RW E47852	JAMBRD45087
33.	157/08	379 IPC	75/09	KA-01EE-9086	ME4JF082E78669559	JF08E8848481
34.	35/09	41 cl(d) r/w 102 crpc & 379 IPC	92/09	KA-04-EL-9218	DHVBMC61623	DHGBMC60444
35.	380/09	41 cl(d) r/w 102 crpc & 379 IPC	"	KA-03-EH-3732		
36.	538/09	41 cl(d) r/w 102 crpc & 379 IPC	147/09	KA-07K-1558	DHVBM88729	DHGVMBD87374
37.	194/05	379 IPC	03/10	KA-04-P-808	7806F047644	78064095173
38.	194/05	379 IPC	04/10	KA-05-ER-351	03L5KA-348808	5KA348808
39.	81/08	379 IPC	15/10	KA-01-V-80 (dup) KA-01-V-980 (Ori)	02M20F16046	02M18E11780
40.	38/10	379 IPC	23/10	KA-04EJ-281	05F16C20132	05F15M19582
41.	38/10	379 IPC	24/10	KA-41-J-3270	MD621AD1972C 55819	
42.	38/10	379 IPC	24/10	KA-05-EH-288	MD621BD1972A69011	
43.	"	"	"	KA-38-H-7793	D3C20F08702	D3C18E24221
44.	38/10	379 IPC	26/10	KA-16-E-4567		
45.	"	"	27/10	KA-04-EF-5436	ME4JF083	JF08E5192131
46.	"	"	"	KA-05-K-88	372133	361893
47.	194/05	379 IPC	43/10	KA-05-EB-1113	99919F09654	99G17E09422
48.	"	"	"	KA-04-EC-3831	03G20C12378	03G18M01726
49.	"	"	"		96819F01380	96B17E01348
50.	"	"	"	KA-43-EM-2270	MD625AF1752E 30583	0FE51405921
51.	194/05	379 IPC	44/10	KA-02-ES-3846	N3302F394528	N3302M399879

Auto Rikshaws

Sl. No.	Cr.No.	Section	PF No.	Reg.No.	Chasis No.	Eng.No.
1.	660/01	379 IPC	226/01	MH-08-D-5391 (Dup), KA-02-4156 (Ori)	24F93K27243	-
2.	432/08	399, 402 IPC	170/08	KA-05-C-1063		
3.	02/09	392 IPC	44/09	KA-03-1906		

Cars

Sl. No.	Cr.No.	Section	PF No.	Reg.No.	Chasis No.	Eng.No.
1.	253/03	379 IPC	70/03	KA-34-P-3638	SB-308 IN1296608	F8-B1M1792513
2.	197/05	399, 400 IPC	59/05	KA-02-P-1511		

II Addl. Chief Metro Politan Magistrate,

Bangalore City.

PR-1500

IN THE COURT OF THE VIII ADDL CHIEF METROPOLITAN MAGISTRATE, BANGALORE CITY

It is hereby notified for the information of the public that the under mentioned AUTO RIKSHAW which is in the custody of Sheshadripuram Police Station, Bangalore City has unclaimed shell be confiscated to the Government and disposed to law if not claimed by the owner with proof of ownership with in three month from the date of publication of this notification.

Sl. No.	C.Miss No.	P.F. No.	Vehicle No.	Eng. & Chasis No.	Nature of property
1.	310/2007	93/2007	KA-05-D-2536	Eng No.AEMBIIF44288 Chasis No.24FBHGO3317	AUTO RIKSHAW

VIII Addl. Chief MetroPolitan Magistrate,

Bangalore City.

PR-1511

ಕರ್ನಾಟಕ ಸರ್ಕಾರ

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1.

ಸಂಖ್ಯೆ:ಆಸಾನಿ/11/ಆಡಳಿತ-2/2007-08, ದಿನಾಂಕ:30ನೇ ಸೆಪ್ಟೆಂಬರ್, 2010

ವಿಷಯ: ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು (ಪ್ರಸ್ತುತ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಕೋಲಾರ ಇವರು ಬೆಂಗಳೂರು (ಗ್ರಾಮಾಂತರ) ಮತ್ತು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿದ ಕರ್ತವ್ಯಲೋಪ, ಅನಧಿಕೃತ ಗೈರು ಹಾಜರಾತಿ, ಸರ್ಕಾರದ ದಾಖಲಾತಿಗಳ ಬದಲಾವಣೆ (tampering of office records) ಇತ್ಯಾದಿ ಆರೋಪಗಳ ಮೇಲೆ ಅಮಾನತ್ತುಗೊಂಡ ನಂತರ ಸೇವೆಗೆ ಪುನರ್ ಸ್ಥಾಪನೆಗೊಂಡಿರುವ ಸರ್ಕಾರಿ ನೌಕರ ಇವರ ವಿರುದ್ಧ "ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ ಅಂತಿಮ ಆದೇಶ ಹೊರಡಿಸುವ ಕುರಿತು"

ಉಲ್ಲೇಖ:
1) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ರಾಮನಗರ ಜಿಲ್ಲೆ ಇವರ ಪತ್ರದ ಸಂಖ್ಯೆ:ಜಿಸಂಸಂ/ರಾಮು/152/08-09, ದಿನಾಂಕ 20.5.2008.
2) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರ ಪತ್ರದ ಸಂಖ್ಯೆ:ಜಿಸಂಸಂ/ ಆಡಳಿತ/ 282/07-08, ದಿನಾಂಕ 23.5.2008.
3) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ರಾಮನಗರ ಜಿಲ್ಲೆ ಇವರ ಪತ್ರದ ಸಂಖ್ಯೆ:ಜಿಸಂಸಂ/ರಾಮು/152/08-09, ದಿನಾಂಕ 30.6.2008.
4) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ಸಂಖ್ಯೆ:ಆಡಳಿತ/16/2008-09, ದಿನಾಂಕ 17.7.2008.
5) ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1954ರ ನಿಯಮ:11ರ ಅಡಿಯಲ್ಲಿ ಹೊರಡಿಸಲಾದ ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಕಾರಣ ಕೇಳುವ ಜ್ಞಾಪನದ ದಿನಾಂಕ 17.9.2008.
6) ಸೇವೆಯಲ್ಲಿ ಅಮಾನತ್ತಿನಲ್ಲಿದ್ದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಸಲ್ಲಿಸಿದ ಕೋರಿಕೆ ದಿನಾಂಕ 27.10.2008.
7) ನಿರ್ದೇಶನಾಲಯದ ಇದೇ ಕ್ರಮಾಂಕದ ಜ್ಞಾಪನದ ದಿನಾಂಕ 7.11.2008.
8) ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಅವರ ಮನವಿ ದಿನಾಂಕ 25.11.2008.
9) ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ಸಂಖ್ಯೆ:ಆಡಳಿತ: 412/2008-09, ದಿನಾಂಕ 22.12.2008.
10) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಜ್ಞಾಪನದ ದಿನಾಂಕ 22.12.2008.
11) ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಇವರ ಮನವಿ ದಿನಾಂಕ 5.01.2009.
12) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಜ್ಞಾಪನದ ದಿನಾಂಕ 4/11.2.2009.
13) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಆದೇಶದ ದಿನಾಂಕ 11.2.2009.

14) ನಿವೃತ್ತ ಜಿಲ್ಲಾ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಇವರ ಪತ್ರದ ದಿನಾಂಕ 21.4.2010 ರೊಂದಿಗೆ ಸಲ್ಲಿಸಿದ ಇಲಾಖಾ ವಿಚಾರಣಾ ವರದಿ.

15) ಆರೋಪಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಇವರಿಗೆ ಹೊರಡಿಸಲಾದ ಇದೇ ಕ್ರಮಾಂಕದ 2ನೇ ಕಾರಣ ಕೇಳುವ ಜ್ಞಾಪನದ ದಿನಾಂಕ 27.4.2010.

16) ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಇವರ ಮನವಿಗಳು ದಿನಾಂಕ (1) 24.5.2010 (2) 2.6.2010

17) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಹಿಂಬರಹಗಳು ದಿನಾಂಕ (1) 15.6.2010.

18) ಆಪಾದಿತ ಸರ್ಕಾರಿ ನೌಕರರ ಮನವಿ ದಿನಾಂಕ 6.7.2010.

19) ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಹಿಂಬರಹ ದಿನಾಂಕ 27.7.2010.

ಪ್ರಸ್ತಾವನೆ:

ಈ ನಿರ್ದೇಶನಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ ಆದಿಕುಮಾರ್, ಇವರನ್ನು ಈ ನಿರ್ದೇಶನಾಲಯದ ಆದೇಶದ ಸಂಖ್ಯೆ:ಆಡಳಿತ/260/2006-07, ದಿನಾಂಕ 29.6.2006ರಲ್ಲಿ ಕೇಂದ್ರ ಕಚೇರಿಯಿಂದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಬೆಂಗಳೂರು (ಗ್ರಾಮಾಂತರ ಜಿಲ್ಲೆ) ಇಲ್ಲಿ ಅನ್ಯ ಕರ್ತವ್ಯದ ಮೇಲೆ ನಿಯೋಜಿಸಲಾಗಿತ್ತು.

ಈ ಅವಧಿಯಲ್ಲಿ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು, ಇವರ ನಿರಂತರವಾದ ಅನಧಿಕೃತ ಗೈರು ಹಾಜರಾತಿ, ಸ್ವಹಿತಾಸಕ್ತಿ ಆಧರಿಸಿ ಕರ್ತವ್ಯ ನಿರ್ವಹಣೆ, ಕಚೇರಿ ಮುಖ್ಯಸ್ಥರಿಗೆ ತಪ್ಪು ಮಾಹಿತಿ ನೀಡಿ ತನಗೆ ಅನುಕೂಲವಾಗುವ ರೀತಿಯಲ್ಲಿ ಪತ್ರ ವ್ಯವಹಾರ ಮಾಡುವುದು, ನಂಬಿಕೆ ದ್ರೋಹ ಎಸಗುವುದು, ಇತ್ಯಾದಿ ದುರ್ನಡತೆ ಕಾರಣಗಳಿಂದ, ಅವರನ್ನು ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸುವುದರ ಬದಲಾಗಿ, ಈ ನಿರ್ದೇಶನಾಲಯದ ಆದೇಶದ ಸಂಖ್ಯೆ:ಆಡಳಿತ/665/2007-08, ದಿನಾಂಕ 11.1.2008ರಲ್ಲಿ ಅವರನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ರಾಮನಗರ ಜಿಲ್ಲೆ (ಹೊಸದಾಗಿ ಸೃಜಿಸಲಾದ ಜಿಲ್ಲೆ/ ಕಚೇರಿ) ಇಲ್ಲಿಗೆ ಸ್ಥಳಾಂತರಿಸಲಾಗಿತ್ತು.

ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು (ಈ ಇಲಾಖಾ ವಿಚಾರಣಾ ಪ್ರಕರಣದಲ್ಲಿ ಆಪಾದಿತ ಸರ್ಕಾರಿ ನೌಕರರು), ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಗೆ ಸ್ಥಳಾಂತರಗೊಂಡಿದ್ದರಿಂದ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು (ಗ್ರಾಮಾಂತರ ಜಿಲ್ಲೆ) ಇವರ ಆದೇಶದ ಸಂಖ್ಯೆ:ಆಡಳಿತ/57/2007-08, ದಿನಾಂಕ 29.1.2008ರಲ್ಲಿ ಇನ್ನಿತರ ವಿಷಯಗಳೊಂದಿಗೆ **ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಇವರ ಪ್ರಭಾರವನ್ನು ಶ್ರೀಮತಿ ಮಂಜುಳ, ಬೆರಳಚ್ಚುಗಾರರು ಇವರಿಗೆ ವಹಿಸಿಕೊಳ್ಳುವಂತೆ ಸೂಚಿಸಿದ್ದರಿಂದ"** ಆಪಾದಿತ ಸರ್ಕಾರಿ ನೌಕರರು ಆ ಕಚೇರಿಯಲ್ಲಿ ನಿರ್ವಹಿಸುತ್ತಿದ್ದ ಆಡಳಿತ ಮತ್ತು ಲೆಕ್ಕ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಸೂಚಿಸಿದವರಿಗೆ ವಹಿಸತಕ್ಕದ್ದು ಅವರ ಕರ್ತವ್ಯ ಮತ್ತು ಜವಾಬ್ದಾರಿಯಾಗಿದ್ದರೂ (as per Rule:8(i) of "Hand Book of Office Procedure" which reads as "case worker shall prepare, whenever there is a transfer, a detailed list of all the papers and cases pending with him with reference to the special Registers, periodical registers, and case register and hand over complete charge of these records and registers to his successors) ಪ್ರಭಾರವನ್ನು ವಹಿಸುವ ಬಗ್ಗೆ ಈ ವಿಧಾನವನ್ನು ಅನುಸರಿಸದೇ "ಅತ್ಯಂತ ಬೇಜವಾಬ್ದಾರಿ ರೀತಿಯಲ್ಲಿ ವರ್ತಿಸಿದ್ದರಿಂದ ಹಾಗೂ ಈ ಅಪಾದಿತ ಸರ್ಕಾರಿ ನೌಕರರು ಎಸಗಿದ ದುರ್ನಡತೆ ಮತ್ತು ಕರ್ತವ್ಯಲೋಪದ ಕಾರಣದಿಂದ ಆ ಕಚೇರಿಯ ಸಿಬ್ಬಂದಿಗಳ ಸೇವಾ ವಿಷಯಗಳ ನಿರ್ವಹಣೆ ಮತ್ತು ಲೆಕ್ಕ ವಿಭಾಗದ ಕಾರ್ಯಗಳು ಸ್ಥಗಿತಗೊಂಡಿದ್ದರಿಂದ, ಆ ಕಚೇರಿಯಲ್ಲಿ ಈ ಆಪಾದಿತ ಸರ್ಕಾರಿ ನೌಕರನಿಗೆ ಒದಗಿಸಲಾಗಿದ್ದ ಕಪಾಟಿನ ಬೀಗವನ್ನು **ದಿನಾಂಕ 23.5.2008** ರಂದು ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಮತ್ತು ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ಬಲವಂತವಾಗಿ ತೆರೆಯಿಸಿ, ಅವರು ನಿರ್ವಹಿಸಿದ್ದ/ ಬಾಕಿ ಇರಿಸಿಕೊಂಡಿದ್ದ ಪತ್ರ ವ್ಯವಹಾರ, ಸಿಬ್ಬಂದಿಗಳ ಸೇವಾ ಪುಸ್ತಕಗಳು, ಕಡತಗಳು ಹಾಗೂ ಇನ್ನಿತರ ದಾಖಲಾತಿಗಳನ್ನು (ಒಟ್ಟು 141) ಕಚೇರಿಯ ವಶಕ್ಕೆ ಪಡೆದುಕೊಂಡಿದ್ದನ್ನು ಉಲ್ಲೇಖ(2)ರಲ್ಲಿನ ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಇವರ ವರದಿಯಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ.

ಮೇಲಿನ ಕಂಡಿಕೆಯಲ್ಲಿ ವಿವರಿಸಿದಂತೆ, ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್ ಇವರನ್ನು ರಾಮನಗರ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಗೆ ಸ್ಥಳಾಂತರಿಸಿದ ನಂತರವೂ ಅವರ "ಅನಧಿಕೃತ ಗೈರು ಹಾಜರಾತಿ", ಬೇಜವಾಬ್ದಾರಿತನ, ಕರ್ತವ್ಯ ಲೋಪ," ಇತ್ಯಾದಿ ಪ್ರವೃತ್ತಿಯನ್ನು ನಿರಂತರವಾಗಿ ಮುಂದುವರೆಸಿದ್ದರಿಂದ, ಈ **ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್,** ಇವರಿಗೆ ಅವರ ಮನೆ ವಿಳಾಸಕ್ಕೆ ನೀಡಲಾಗಿದ್ದ ಜ್ಞಾಪನದ ಸಂಖ್ಯೆ:ಜಿಸಂಸಂ/ರಾಮ/ಆಡಳಿತ/30/07-08, ದಿನಾಂಕ 15.5.2008ರಲ್ಲಿ, ಸದರಿಯವರು ದಿನಾಂಕ 23.4.2008ರಂದು ದಿನಾಂಕ 24.4.2008 ರಂದು ಹಾಗೂ ದಿನಾಂಕ 1.5.2008 ರಿಂದ ದಿನಾಂಕ 15.5.2008ರ ವರೆಗೆ (ಒಟ್ಟು ಗೈರು ಹಾಜರಾದ ದಿನಗಳು 17) ಅನಧಿಕೃತ ಗೈರು ಹಾಜರಾತಿಯಿಂದ ಆ ಕಚೇರಿಯ ಸಿಬ್ಬಂದಿಗಳ ಮಾಸಿಕ ವೇತನ ಬಿಲ್ಲು ತಯಾರಿಕೆ ಸಹಿತವಾಗಿ ಆಡಳಿತ ಮತ್ತು ಲೆಕ್ಕ ವಿಭಾಗದ ಕರ್ತವ್ಯ ನಿರ್ವಹಣೆ ಸಂಪೂರ್ಣವಾಗಿ ಸ್ಥಗಿತಗೊಂಡಿದ್ದನ್ನು ವಿವರಿಸಿ, ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಲಾಗಿದ್ದರೂ, ಅವರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾತಿಯನ್ನು ಮುಂದುವರೆಸಿದ್ದರಿಂದ, ಆ ಕಚೇರಿಯ ಆಡಳಿತ ಮತ್ತು ಲೆಕ್ಕ ವಿಭಾಗದ ಕರ್ತವ್ಯಗಳ ಹಿತದೃಷ್ಟಿಯಿಂದ ಹಾಗೂ ಆ ವಿಭಾಗದ ಕಾರ್ಯಗಳು ಸ್ಥಗಿತಗೊಂಡಿರುವುದರಿಂದ ಕಚೇರಿ ಕಾರ್ಯಗಳ ನಿರ್ವಹಣೆಗಾಗಿ ಅವರಿಗೆ ನೀಡಲಾದ ಕಪಾಟಿನ ಬೀಗವನ್ನು ದಿನಾಂಕ 15.5.2008ರಂದು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಮತ್ತು ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ಬಲವಂತವಾಗಿ ತೆರೆಯಿಸಿ, ಅವರು ನಿರ್ವಹಿಸುತ್ತಿದ್ದ/ ಬಾಕಿ ಇರಿಸಿಕೊಂಡಿದ್ದ, ಪತ್ರವ್ಯವಹಾರ, ಸೇವಾ ಪುಸ್ತಕಗಳು, ಕಡತಗಳನ್ನು ಹಾಗೂ ಇನ್ನಿತರ ದಾಖಲಾತಿಗಳನ್ನು ಕಚೇರಿ ವಶಕ್ಕೆ ಪಡೆದುಕೊಂಡಿರುವ ಕುರಿತು ಉಲ್ಲೇಖ(1)ರಲ್ಲಿನ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ರಾಮನಗರ ಇವರ ಪತ್ರದಲ್ಲಿ ವರದಿ ಸಲ್ಲಿಸಿರುತ್ತಾರೆ.

ಈ ಪ್ರಕರಣದಲ್ಲಿ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಅವರು ಅವರ ಅನಧಿಕೃತ ಗೈರು ಹಾಜರಾತಿಯ ದುರ್ನಡತೆಯನ್ನು ಮುಂದುವರೆಸುವುದನ್ನು ಸೀಮಿತಗೊಳಿಸದೇ, ಇವರು "ಸರ್ಕಾರದ ಹಣಕಾಸಿನ ವಿಷಯಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು **ಅವರಿಗೆ ಅನುಕೂಲವಾಗುವ ರೀತಿಯಲ್ಲಿ** ದುರುದ್ದೇಶದಿಂದ ಬದಲಾಯಿಸಿ ಗಂಭೀರವಾದ ದಂಡಾರ್ಹ ದುರ್ನಡತೆ (Criminal misconduct) ಪ್ರದರ್ಶಿಸಿ ನಂಬಿಕೆ ದ್ರೋಹ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವ ಕುರಿತು, ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಮೇಲಿನ ಕಂಡಿಕೆಯಲ್ಲಿ ವಿವರಿಸಿದಂತೆ, ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದ ಶ್ರೀ ಆದಿಕುಮಾರ್, ಅವರ ಮನೆ ವಿಳಾಸಕ್ಕೆ ನೀಡಲಾದ ಜ್ಞಾಪನದ ಸಂಖ್ಯೆ: ಜಿಸಂಸಂ/ರಾಮ/ಆಡಳಿತ/338-40/2008-09, ದಿನಾಂಕ 24.6.2008ರಲ್ಲಿ **"ಅವರ ಕಚೇರಿಯ ದ್ವಿತೀಯ ದರ್ಜೆ ಸಹಾಯಕರಾದ ಕುಮಾರಿ ಆರ್. ಜ್ಯೋತಿ, ಇವರ ಅಕ್ಟೋಬರ್ 2007 ರಿಂದ ಫೆಬ್ರವರಿ 2008ರ ವರೆಗಿನ ವೇತನ ರೂ.34,774/- ಗಳನ್ನು ಡ್ರಾ ಮಾಡಿ, ವೇತನ ಬಟವಾಡೆ ಪುಸ್ತಕದಲ್ಲಿ ರೂ.34,774/- ಎಂದು ಇದ್ದ ಮೊತ್ತವನ್ನು ರೂ.32,774/- ಎಂದು ತಿದ್ದಿರುವ** ಕುರಿತು ಅವರ ವಿವರಣೆ ನೀಡುವಂತೆ ನೀಡಲಾದ ಜ್ಞಾಪನ, ಅದೇ ಆರೋಪಿತ ಪ್ರಥಮ ದರ್ಜೆ ಸಹಾಯಕರಾದ ಶ್ರೀ ಆದಿಕುಮಾರ್, ಇವರು **"ಶ್ರೀಮತಿ ಪಿ. ಮಂಜು, ಗಣತಿದಾರರು,** ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ರಾಮನಗರ ಹಾಗೂ **ಶ್ರೀಮತಿ ವೀಣಾ ಕುಲಕರ್ಣಿ, ಗಣತಿದಾರರು,** ತಾಲ್ಲೂಕು ಕಚೇರಿ, ಹೊಸಕೋಟೆ (ಬೆಂಗಳೂರು ಗ್ರಾಮಾಂತರ ಜಿಲ್ಲೆ) ಇವರುಗಳಿಂದ ತಲಾ ರೂ.2550-00 ಮತ್ತು 5600-00 ಗಳನ್ನು, ಸರ್ಕಾರದ ಕಚೇರಿಗಳಲ್ಲಿ ಅನುಷ್ಠಾನಗೊಳಿಸದೇ ಇದ್ದ ಉದ್ದೇಶಕ್ಕಾಗಿ ಅನಧಿಕೃತವಾಗಿ ಹಣ ವಸೂಲು ಮಾಡಿರುವ ಆಪಾದನೆ ಹಾಗೂ ಅವರ ಮೇಲಿನ ಇನ್ನಿತರ ಅತೀ ಗಂಭೀರ ಸ್ವರೂಪದ ಆಪಾದನೆಗಳನ್ನು ಪರಿಗಣಿಸಿ, ಈ ನಿರ್ದೇಶನಾಲಯದ ಉಲ್ಲೇಖ(4)ರಲ್ಲಿನ ಇದೇ ಕ್ರಮಾಂಕದ ಆದೇಶದ ಸಂಖ್ಯೆ:ಆಡಳಿತ/216/2008-09, ದಿನಾಂಕ 17.7.2008ರಲ್ಲಿ, ಶ್ರೀ ಆದಿಕುಮಾರ್, ಆರೋಪಿತ ಸರ್ಕಾರಿ ನೌಕರರು ಇವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ, ಅವರನ್ನು ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು.

ಮೇಲೆ ವಿವರಿಸಿದಂತೆ ಹಾಗೂ ಅಮಾನತ್ತು ಆದೇಶದನ್ವಯ, ಆರೋಪಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಇವರು "ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ (ಅನ್ಯ ಕರ್ತವ್ಯದ ಮೇಲೆ) ನಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ರಾಮನಗರ ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿದ ಕರ್ತವ್ಯಲೋಪ, ದಂಡಾರ್ಹ ದುರ್ನಡತೆ, ನಿರಂತರವಾದ ಅನಧಿಕೃತ ಗೈರು ಹಾಜರಾಗಿ, ಇತ್ಯಾದಿ ಅಪಾದನೆಗಳನ್ನೊಳಗೊಂಡಂತೆ "ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ:11ರ ಅನ್ವಯ", ಅವರ ಮೇಲಿನ ಆರೋಪಗಳನ್ನು **"ಆರೋಪಗಳಿಗೆ ಸಂಬಂಧಿಸಿದಂತೆ ವಿವರಣೆಯನ್ನು, ಆರೋಪಗಳನ್ನು ಸಮರ್ಥಿಸುವ ದಸ್ತಾವೇಜುಗಳನ್ನು ಹಾಗೂ ಸಾಕ್ಷಿ ಪಟ್ಟಿಯನ್ನು"** ಈ ಕೆಳಗೆ ತಿಳಿಸಲಾದ 12 ಆರೋಪಗಳನ್ನೊಳಗೊಂಡಂತೆ ಅನುಕ್ರಮವಾಗಿ ಅನುಬಂಧ-1 ರಿಂದ 4ರ ವರೆಗೆ ಲಗತ್ತಿಸಿ, ಉಲ್ಲೇಖ(5)ರಲ್ಲಿ ಹೊರಡಿಸಲಾದ "ಕಾರಣ ಕೇಳುವ ಜ್ಞಾಪನ" ದಿನಾಂಕ 17.09.2008ರಲ್ಲಿ ಅದು ಅವರಿಗೆ ತಲುಪಿದ/ ಜಾರಿಯಾದ 15 ದಿನಗಳ ಒಳಗಾಗಿ ಅವರ ಮೇಲೆ ಹೊರಿಸಲಾದ ಆರೋಪಗಳಿಗೆ ಸಂಬಂಧಿಸಿದಂತೆ, ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಆರೋಪ:1

ಶ್ರೀ ಆದಿಕುಮಾರ್, ಈ ನಿರ್ದೇಶನಾಲಯದ ಪ್ರಥಮ ದರ್ಜೆ ಸಹಾಯಕರಾದ (ಪ್ರಸ್ತುತ ಅಮಾನತ್ತಿನಲ್ಲಿ) ಹಾಗೂ ಆಪಾದಿತ ದುರ್ನಡತೆ ಹೊಂದಿದ ನೀವು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಗೆ ಸಂಬಂಧಿಸಿದಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ದಿನಾಂಕ 21.5.2007ರ ಪತ್ರದಲ್ಲಿ ಇನ್ನಿತರ ವಿಷಯಗಳೊಂದಿಗೆ ನಿಮ್ಮ ಅನಧಿಕೃತ ಗೈರು ಹಾಜರಾತಿ ಕಾರಣದಿಂದ ಅವರ ಕಚೇರಿ ಸಿಬ್ಬಂದಿಗಳ ಸೇವಾ ವಿಷಯ ನಿರ್ವಹಣೆ, ವೇತನ ಬಿಲ್ಲು ತಯಾರಿಕೆ, ಇತ್ಯಾದಿ ಕರ್ತವ್ಯ ನಿರ್ವಹಣೆಗೆ ತೊಂದರೆಯಾಗುತ್ತಿದ್ದು, ನಿಮ್ಮ ಸೇವೆಯನ್ನು ಅವರ ಕಚೇರಿಯಿಂದ ಹಿಂದಕ್ಕೆ ಪಡೆಯಬೇಕೆಂದು ಕೋರಿದರು. ಈ ಪ್ರಸ್ತಾವನೆಯನ್ನು ಪರಿಶೀಲಿಸುವ ಹಂತದಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪ್ರಸ್ತುತ ಇಲಾಖಾ ವಿಚಾರಣೆ ಪ್ರಕರಣದಲ್ಲಿ ಆಪಾದಿತ ದುರ್ನಡತೆ ಹೊಂದಿದ ಸರ್ಕಾರಿ ನೌಕರರಾದ ನಿಮ್ಮ ಸ್ವಂತ ಕೈಬರಹದಿಂದ ಬರೆಯಲಾದ ಪತ್ರದ ಸಂಖ್ಯೆ:ಜಿಸಂಸಂಬೆಂಗ್ರಾ/ಆಡಳಿತ/06-07, ದಿನಾಂಕ 13.7.2007ರಲ್ಲಿ "ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು, ಈ ಕಚೇರಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಇವರನ್ನು ವರ್ಗಾವಣೆ ಮಾಡಬಾರದಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ' ಎಂದು ಮರು ಪ್ರಸ್ತಾವನೆ ಸಲ್ಲಿಸಿದ್ದನ್ನು ಕೇಂದ್ರ ಕಚೇರಿಯು ತೀಕ್ಷ್ಣವಾಗಿ ಪ್ರತಿಕ್ರಿಯಿಸಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ದ್ವಂದ್ವ ಹೇಳಿಕೆ (duel statement) ಕುರಿತು ಅವರ ವಿವರಣೆ ಕೇಳಲಾಗಿ, ಆಪಾದಿತ ಸರ್ಕಾರಿ ನೌಕರರಾದ ನೀವು ನಿರ್ದೇಶಕರಿಗೆ ಒಂದು ಮನವಿ ಪತ್ರವನ್ನು ತುರ್ತಾಗಿ ಕಳುಹಿಸಬೇಕಾಗಿದೆ" ಎಂದು ಅದು ನಿಮ್ಮ ವೈಯಕ್ತಿಕ ವರ್ಗಾವಣೆ ವಿಷಯವೆಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಮಾಹಿತಿ ನೀಡದೆ, ಆತುರವಾಗಿ ಸಹಿ ಮಾಡುವಂತೆ ತಿಳಿಸಿದ್ದರಿಂದ "ನಿಮ್ಮ ಮೇಲೆ ನಂಬಿಕೆ ಇಟ್ಟು ಸಹಿ ಮಾಡಿದ್ದಾಗಿ" ಹಾಗೂ ಆಪಾದಿತ ಸರ್ಕಾರಿ ನೌಕರರಾದ ನೀವು "ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆಂದು" ಬರೆದಿದ್ದನ್ನು ಅವರು ಗಮನಿಸಿರಲಿಲ್ಲವೆಂದು ತಿಳಿಸಿರುತ್ತಾರೆ.

ಆದುದರಿಂದ, ಈ ಪ್ರಕರಣದಲ್ಲಿ ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮವನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹಾಗೂ ಕಚೇರಿ ಮುಖ್ಯಸ್ಥರಿಗೆ/ ಇಲಾಖಾ ಮುಖ್ಯಸ್ಥರಿಗೆ "ನಂಬಿಕೆ ದ್ರೋಹ" ಎಸಗಿರುತ್ತೀರಿ.

ಆರೋಪ:2

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಆದೇಶದ ಸಂಖ್ಯೆ:ಆಡಳಿತ/661/2007-08, ದಿನಾಂಕ 11.1.2008ರಲ್ಲಿ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನಿಮ್ಮನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ರಾಮನಗರ ಜಿಲ್ಲೆ, ಇಲ್ಲಿಗೆ

ವರ್ಗಾವಣೆ ಮಾಡಿದ್ದರಿಂದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರ ಕಚೇರಿ ಆದೇಶದ ಸಂಖ್ಯೆ ಆಡಳಿತ/51/2007-08, ದಿನಾಂಕ 29.1.2008ರಲ್ಲಿ ದಿನಾಂಕ 31.1.2008 ರಿಂದ ಅನ್ವಯವಾಗುವಂತೆ ನಿಮ್ಮನ್ನು ಕೆಲಸದಿಂದ ಬಿಡುಗಡೆಗೊಳಿಸಿ ಪ್ರಭಾರವನ್ನು ವಹಿಸಿಕೊಡುವಂತೆ ಸೂಚಿಸಲಾಗಿತ್ತು. ಆದರೆ ನೀವು ಕೆಲವು ಪತ್ರ ವ್ಯವಹಾರಗಳನ್ನು ಮಾತ್ರ ಅವರಿಗೆ ನೀಡಿ, ಸಂಬಂಧಿಸಿದ ಕಡತಗಳನ್ನಾಗಲೀ, ಸೇವಾ ಪುಸ್ತಕಗಳನ್ನಾಗಲೀ ಮತ್ತು ಕಾರ್ಯನಿರ್ವಹಣಾ ವರದಿಗಳನ್ನಾಗಲೀ ಹಾಗೂ ಇನ್ನಿತರ ಯಾವುದೇ ದಾಖಲಾತಿಗಳನ್ನು ನೀಡದೇ ಇದ್ದುದರಿಂದ ನಿಮಗೆ ಅನೇಕ ಸಾರಿ ಮೌಖಿಕವಾಗಿ ತಿಳಿಸಲಾಗಿತ್ತು ಹಾಗೂ ಅಂತಿಮವಾಗಿ ದಿನಾಂಕ 9.6.2008ರಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಹೊರಡಿಸಿದ ಜ್ಞಾಪನಕ್ಕೂ ನೀವು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಆಡಳಿತ ಮತ್ತು ಲೆಕ್ಕ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ವಹಿಸತಕ್ಕದ್ದು ನಿಮ್ಮ ಜವಾಬ್ದಾರಿಯಾಗಿದ್ದರೂ ಪ್ರಭಾರವನ್ನು ವಹಿಸದೇ ಆ ವಿಭಾಗಕ್ಕೆ ಸಂಬಂಧಿಸಿದ ಕರ್ತವ್ಯ ನಿರ್ವಹಣೆಯಲ್ಲಿ ಅಡೆತಡೆಯನ್ನುಂಟು ಮಾಡಿ ಅತ್ಯಂತ ಬೇಜವಾಬ್ದಾರಿ ರೀತಿಯಲ್ಲಿ ವರ್ತಿಸಿ ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿದ್ದರಿಂದ ನಿಮಗೆ ನೀಡಲಾದ ಕಪಾಟಿನ ಬೀಗವನ್ನು ದಿನಾಂಕ 23.5.2008 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಮತ್ತು ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ಬಲವಂತವಾಗಿ ತೆರೆಯಿಸಿ ನೀವು ನಿರ್ವಹಿಸಿದ್ದ/ ಬಾಕಿ ಇರಿಸಿಕೊಂಡಿದ್ದ ಪತ್ರ ವ್ಯವಹಾರ, ಸಿಬ್ಬಂದಿಗಳ ಸೇವಾ ಪುಸ್ತಕಗಳು, ಕಡತಗಳನ್ನು ಹಾಗೂ ಇನ್ನಿತರ ದಾಖಲಾತಿಗಳನ್ನು (ಒಟ್ಟು 141) ಆ ಕಚೇರಿ ವಶಕ್ಕೆ ಪಡೆದುಕೊಂಡಿದ್ದರಿಂದ ಈ ಪ್ರಕರಣದಲ್ಲಿ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3ನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿ ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿರುತ್ತೀರಿ.

ಆರೋಪ:3

ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ಹಾಗೂ ಆಪಾದಿತ ಸರ್ಕಾರಿ ನೌಕರರಾದ ನೀವು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಅನ್ಯ ಕರ್ತವ್ಯದ ಮೇಲೆ ನಂತರ ದಿನಾಂಕ 31.1.2008 ರಿಂದ ಅದೇ ಕಚೇರಿಗೆ ವರ್ಗಾವಣೆ ಹೊಂದಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ಕೂಡ ನಿಮ್ಮ ಅನಧಿಕೃತ ಗೈರುಹಾಜರಾತಿ, ಬೇಜವಾಬ್ದಾರಿತನ, ಕರ್ತವ್ಯಲೋಪ ಮತ್ತು ದುರ್ನಡತೆ ಪ್ರವೃತ್ತಿಯನ್ನು ನಿರಂತರವಾಗಿ ಮುಂದುವರೆಸಿದ್ದರಿಂದ ನಿಮ್ಮ ಮನೆ ವಿಳಾಸಕ್ಕೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ರಾಮನಗರ ಜಿಲ್ಲೆ ಇವರು ನೀಡಲಾದ ಜ್ಞಾಪನದ ಸಂಖ್ಯೆ:ಜಿಸಂಸಂ/ ರಾಮ/ಆಡಳಿತ/30/2007-08, ದಿನಾಂಕ 15.5.2008ರಲ್ಲಿ ನಿಮ್ಮ ಅನಧಿಕೃತ ಗೈರು ಹಾಜರಾತಿಯಿಂದ ಅವರ ಕಚೇರಿಯ ಸಿಬ್ಬಂದಿಗಳ ಮಾಸಿಕ ವೇತನ ಬಿಲ್ಲು ತಯಾರಿಕೆ ಸಹಿತವಾಗಿ ಆಡಳಿತ ಮತ್ತು ಲೆಕ್ಕ ವಿಭಾಗದ ಕರ್ತವ್ಯ ನಿರ್ವಹಣೆ ಸಂಪೂರ್ಣವಾಗಿ ಸ್ಥಗಿತಗೊಂಡಿರುವುದನ್ನು ವಿವರಿಸಿ, ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಲಾಗಿದ್ದರೂ, ನೀವು ಸರ್ಕಾರದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾತಿಯನ್ನು ಮುಂದುವರೆಸಿದ್ದರಿಂದ, ಕಚೇರಿ ಕಾರ್ಯಗಳ ನಿರ್ವಹಣೆಗಾಗಿ ನಿಮಗೆ ಕಚೇರಿಯಲ್ಲಿ ನೀಡಲಾದ ಕಪಾಟಿನ ಬೀಗವನ್ನು ದಿನಾಂಕ 15.5.2008ರಂದು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಮತ್ತು ಆ ಕಚೇರಿಯ ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ತೆರೆಯಿಸಿ, ನೀವು ನಿರ್ವಹಿಸುತ್ತಿದ್ದ/ ಬಾಕಿ ಇರಿಸಿಕೊಂಡಿದ್ದ ಪತ್ರ ವ್ಯವಹಾರ, ಸೇವಾ ಪುಸ್ತಕಗಳು, ಕಡತಗಳನ್ನು ಮತ್ತು ಇನ್ನಿತರ ದಾಖಲಾತಿಗಳನ್ನು ಆ ಕಚೇರಿ ವಶಕ್ಕೆ ಪಡೆದುಕೊಂಡು, ಆ ವಿಭಾಗದ ಕರ್ತವ್ಯ ನಿರ್ವಹಣೆ ಮುಂದುವರೆಸಲಾಗಿದೆಯಾದರೂ, ಜವಾಬ್ದಾರಿಯುತವಾದ ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿದ್ದ ಸರ್ಕಾರಿ ನೌಕರರಾದ ನೀವು ಅತ್ಯಂತ ಬೇಜವಾಬ್ದಾರಿ ರೀತಿಯ ದುರ್ನಡತೆ ಪ್ರದರ್ಶಿಸಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 3ನ್ನು ಸಂಪೂರ್ಣವಾಗಿ ಉಲ್ಲಂಘಿಸಿರುತ್ತೀರಿ.

ಆರೋಪ:4

ಆಪಾದಿತ ಸರ್ಕಾರಿ ನೌಕರರಾದ (Accused Government official) ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ರಾಮನಗರ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಅದೇ ಕಚೇರಿಯ ದ್ವಿತೀಯ ದರ್ಜೆ ಸಹಾಯಕರಾದ ಶ್ರೀಮತಿ ಆರ್. ಜ್ಯೋತಿ ಇವರ ಅಕ್ಟೋಬರ್ 2007 ರಿಂದ ಫೆಬ್ರವರಿ 2008ರ ವರೆಗಿನ ವೇತನಕ್ಕೆ ಸಂಬಂಧಿಸಿದಂತೆ ಒಟ್ಟು ರೂ.34,774/-ರ ಬಿಲ್ಲನ್ನು ತಯಾರಿಸಿ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಂದ ರುಜು ಪಡೆದುಕೊಂಡು ಖಜಾನೆಯಿಂದ ರೂ.34,774/-ಗಳ ಚೆಕ್ ಸ್ವೀಕೃತಿಯಾದ ನಂತರ, ನಿಯಮಾನುಸಾರ ನಗದೀಕರಿಸಿ ಸದರಿ ದ್ವಿತೀಯ ದರ್ಜೆ ಸಹಾಯಕರಿಗೆ ರೂ.32,774/- ಗಳನ್ನು ಮಾತ್ರ ವಿತರಿಸಿ, ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ರೂ.2000/-ಗಳಷ್ಟು ಸರ್ಕಾರದ ಹಣವನ್ನು ಸ್ವಂತಕ್ಕಾಗಿ ದುರ್ಬಳಕೆ ಮಾಡಿಕೊಂಡಿದ್ದಲ್ಲದೇ ವೇತನ ಬಟವಾಡೆ ಪುಸ್ತಕದಲ್ಲಿ ರೂ.34,774/- ಎಂದು ಇದ್ದ ಮೊತ್ತವನ್ನು ರೂ.32,774/- ಎಂದು ತಿದ್ದಿ, ಮೇಲಾಧಿಕಾರಿಗಳಿಗೆ ದಾರಿ ತಪ್ಪಿಸುವ ಹಾಗೂ ಕಚೇರಿ ಮುಖ್ಯಸ್ಥರಿಗೆ ಮತ್ತು ಸರ್ಕಾರಕ್ಕೆ ಮೋಸ ಮಾಡುವ ದುರುದ್ದೇಶದಿಂದ ಹಣಕಾಸಿನ ವಿಷಯಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನಿಮ್ಮ ಸ್ವಹಿತದೃಷ್ಟಿಯಿಂದ ಬದಲಾಯಿಸಿ, ದಂಡಾರ್ಹ ದುರ್ನಡತೆ (Criminal misconduct) ಪ್ರದರ್ಶಿಸಿ ನಂಬಿಕೆ ದ್ರೋಹ ಎಸಗಿರುತ್ತೀರಿ.

ಆರೋಪ: 5

ಆಪಾದಿತ ಸರ್ಕಾರಿ ನೌಕರರಾದ (Accused Government Official) ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಅನ್ಯ ಕರ್ತವ್ಯದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ 01.12.2008 ರಿಂದ ಹೊಸಕೋಟೆ ತಾಲ್ಲೂಕು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕು: ವೀಣಾ ಕುಲಕರ್ಣಿ, ಗಣತಿದಾರರಿಂದ ರೂ.5600/- (ರೂ. ಐದು ಸಾವಿರದ ಆರು ನೂರುಗಳು ಮಾತ್ರ) ಗಳನ್ನು ಸರ್ಕಾರದ ಕಚೇರಿಯಲ್ಲಿ ಅನುಷ್ಠಾನಗೊಳಿಸದೇ ಇದ್ದ ಉದ್ದೇಶಕ್ಕಾಗಿ ಪಡೆದುಕೊಂಡಿರುತ್ತೀರೆಂದು, ಸದರು ಗಣತಿದಾರರು

ದಿನಾಂಕ 14.5.2008 ರಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರಿಗೆ ನಿಮ್ಮ ವಿರುದ್ಧ ದೂರು ನೀಡಿರುತ್ತಾರೆ. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಜವಾಬ್ದಾರಿಯುತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೀವು ಆಡಳಿತ ಮತ್ತು ಲೆಕ್ಕ ವಿಷಯಕ್ಕೆ ಸಂಬಂಧಿಸಿದಂತೆ ಸಹದ್ಯೋಗಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಬದಲಾಗಿ ಸರ್ಕಾರದ ಕಚೇರಿಗಳಲ್ಲಿ ಇನ್ನು ಅನುಷ್ಠಾನಗೊಳಿಸದೇ ಉದ್ದೇಶಕ್ಕಾಗಿ ಎಂದು ಸಹೋದ್ಯೋಗಿಗಳಿಗೆ ತಪ್ಪು ಮಾಹಿತಿ ನೀಡಿ, ಅವರಿಂದ ಹಣ ವಸೂಲು ಮಾಡಿ ಸಹೋದ್ಯೋಗಿಗಳಿಗೆ ಮತ್ತು ಕಚೇರಿ ಮುಖ್ಯಸ್ಥರಿಗೆ ನಂಬಿಕೆ ದ್ರೋಹ ಎಸಗಿ, ಗಂಭೀರ ಸ್ವರೂಪದ ದುರ್ನಡತೆ ಎಸಗಿರುತ್ತೀರೆಂದು ಸ್ಪಷ್ಟವಾಗಿ ಕಂಡು ಬರುತ್ತದೆ.

ಆರೋಪ: 6

ಸದರಿ ಆಪಾದಿತ ಸರ್ಕಾರಿ ನೌಕರರಾದ (Accused Government Official) ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ರಾಮನಗರ ಜಿಲ್ಲೆ, ಇಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾಗ 4ನೇ ಆರೋಪದಲ್ಲಿ ವಿವರಿಸಲಾದ ಆ ಕ್ರಮದ ವಿಧಾನದಂತೆ ಮತ್ತೊಂದು ವಂಚನೆ ಪ್ರಕರಣವನ್ನು ಎಸಗಿರುವ ಕುರಿತು ಕುಮಾರಿ ಪಿ. ಮಂಜು, ಗಣತಿದಾರರು, ತಾಲ್ಲೂಕು ಕಚೇರಿ, ರಾಮನಗರ ಜಿಲ್ಲೆ, ಇವರು ದಿನಾಂಕ:26.6.2008 ರಂದು ನಿಮ್ಮ ವಿರುದ್ಧ ನೀಡಿದ ದೂರಿನಲ್ಲಿ ವಿವರಿಸುತ್ತಾ "ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು, ಇವರು ಡಿ.ಸಿ.ಪಿ.ಎಸ್. ಹಣ ರೂ.2500/-ಗಳನ್ನು ಪಡೆದು ಖಜಾನೆಗೆ ಸಂದಾಯ ಮಾಡಬೇಕೆಂದು ತಿಳಿಸಿದ್ದು, ಅವರಿಗೆ ನಾನು ನವೆಂಬರ್ 2008ರ ಕೊನೆ ದಿನದಂದು ರೂ.2500/- ಗಳನ್ನು ಕೊಟ್ಟಿರುವುದಾಗಿ, ಅದಕ್ಕೆ ಅವರು ನನಗೆ ಯಾವುದೇ ರೀತಿಯ ಸ್ವೀಕೃತಿಯನ್ನು ನೀಡಿರುವುದಿಲ್ಲ" ಎಂದು ಗಂಭೀರ ಸ್ವರೂಪದ ಆರೋಪ ಮಾಡಿದ್ದನ್ನು ಪರಿಗಣಿಸಲಾಗಿ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿ ನಿಮ್ಮ ಸಹೋದ್ಯೋಗಿಗಳಿಗೆ ಹಾಗೂ ಕಚೇರಿ ಮುಖ್ಯಸ್ಥರಿಗೆ ಹಾಗೂ ಸರ್ಕಾರಕ್ಕೆ ನಂಬಿಕೆ ದ್ರೋಹ ಎಸಗಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 1966ರ ನಿಯಮ 3ನ್ನು ಉಲ್ಲಂಘಿಸಿರುತ್ತೀರಿ.

ಆರೋಪ: 7

ಸದರಿ ಆಪಾದಿತ ಸರ್ಕಾರಿ ನೌಕರರಾದ ಹಾಗೂ ಪ್ರಸ್ತುತ ಅಮಾನತ್ತಿನಲ್ಲಿರುವ ಶ್ರೀ ಆದಿಕುಮಾರ, ಪ್ರಥಮ ದರ್ಜೆ ಸಹಾಯಕರಾದ ನೀವು ದಿನಾಂಕ 11.2.2008 ರಂದು ಸಲ್ಲಿಸಿದ ಮನವಿಯಲ್ಲಿ "ದಿನಾಂಕ 31.1.2008ರಂದು ಕೇಂದ್ರ ಕಚೇರಿಯಿಂದ ಬಿಡುಗಡೆ ಹೊಂದಿ ಸೇರಿಕೆ ಕಾಲವನ್ನು ಉಪಯೋಗಿಸಿಕೊಂಡು ದಿನಾಂಕ 11.2.2008 ರಂದು ಪೂರ್ವಾಹ್ನ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ರಾಮನಗರ ಜಿಲ್ಲೆ ಇಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಿದ್ದೇನೆ" ಎಂದು ನಮೂದಿಸಿ ವರದಿ ಮಾಡಿಕೊಂಡಿದ್ದು, ನಂತರ ಈ ಕೆಳಗೆ ತಿಳಿಸಿದ ದಿನಾಂಕಗಳಂದು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತೀರಿ:

1) ದಿನಾಂಕ 01.5.2008 ರಿಂದ 31.5.2008
2) ದಿನಾಂಕ 01.06.2008 ರಿಂದ 30.6.2008.

} ಒಟ್ಟು ಗೈರು ಹಾಜರಾದ ದಿನಗಳು 61

ದಿನಾಂಕ 01.07.2008ರಲ್ಲಿ ನೀವು ಕರ್ತವ್ಯಕ್ಕೆ ನಿಗದಿತ ಸಮಯಕ್ಕೆ ಹಾಜರಾಗದೇ ಇದ್ದುದಕ್ಕಾಗಿ ಅಥವಾ ಅನಧಿಕೃತ ಗೈರು ಹಾಜರಾಗಿದ್ದುದನ್ನು ಪರಿಗಣಿಸಿ, ಆ ದಿನದ ನಿಮ್ಮ ಹಾಜರಾತಿಯನ್ನು (x) ಎಂದು ಹಾಜರಾತಿ ಪುಸ್ತಕದಲ್ಲಿ ಗುರುತಿಸಲಾಗಿದ್ದರೂ, ಕಚೇರಿ ಮುಖ್ಯಸ್ಥರ ಅನುಮತಿ ಪಡೆಯದೆ ಅಥವಾ ಅವರಿಂದ ದೃಢೀಕರಿಸದೆ ದಿನಾಂಕ 1.7.2008 ರಂದು (x) ಎಂದು ಗುರುತಿಸಲಾಗಿದ್ದರೂ, ಅದರ ಕೆಳಗೆ ಸಹಿ ಮಾಡಿ ಗಂಭೀರ ಸ್ವರೂಪದ ಲೋಪ ದೋಷ ಎಸಗಿ ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿರುತ್ತೀರಿ. ದಿನಾಂಕ 08.03.1984ರಂದು ದ್ವಿತೀಯ ದರ್ಜೆ ಸಹಾಯಕರಾಗಿ ಸರ್ಕಾರಿ ಸೇವೆಗೆ ಸೇರಿದ ನೀವು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಮೈಸೂರು ನಂತರ ಕೇಂದ್ರ ಕಚೇರಿಯಲ್ಲಿ ಹಲವಾರು ವರ್ಷಗಳ ಸೇವೆ ಸಲ್ಲಿಸಿದ್ದರೂ ಹಾಗೂ ಹೊಸದಾಗಿ ಸರ್ಕಾರಿ ಸೇವೆಗೆ ಸೇರಿದ ಸಿಬ್ಬಂದಿಗಳಿಗೆ ಮಾದರಿಯಾಗಿ (exemplary) ವರ್ತಿಸಿ ಅಂತಹವರಿಗೆ ಸರ್ಕಾರದ ಸೇವೆಗೆ ಸಂಬಂಧಿಸಿದಂತೆ, ಮಾರ್ಗದರ್ಶನ ನೀಡಬಹುದಾದ ನೀವು 24 ವರ್ಷಗಳ ಸೇವೆಯ ನಂತರವೂ ಅನಧಿಕೃತ ಗೈರು ಹಾಜರಾಗುವ ಪ್ರವೃತ್ತಿಯನ್ನು ನಿರಂತರವಾಗಿ ಮುಂದುವರೆಸಿ, ಅತ್ಯಂತ ಬೇಜವಾಬ್ದಾರಿಯ ನಡತೆಯನ್ನು ಪ್ರದರ್ಶಿಸಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3ಕ್ಕೆ ವಿರುದ್ಧವಾಗಿ ವರ್ತಿಸಿರುತ್ತೀರಿ.

ಆರೋಪ: 8

ಪ್ರಸ್ತುತ ಅಮಾನತ್ತಿನಲ್ಲಿರುವ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಅನ್ಯ ಕರ್ತವ್ಯದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಈ ಕೆಳಗೆ ತಿಳಿಸಲಾದ ಅವಧಿಯಲ್ಲಿ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತೀರಿ.

ದಿನಾಂಕ 14.5.2007 ರಿಂದ 24.5.2007ರ ಈ ಬಗ್ಗೆ ನಿಮಗೆ ದಿನಾಂಕ 18.5.2007 ರಂದು ಜ್ಞಾಪನ ನೀಡಲಾಗಿದ್ದರೂ ಅದಕ್ಕೆ ವಿವರಣೆ ಸಲ್ಲಿಸಿರುವುದಿಲ್ಲ. ಸ್ವತಃ ನೀವೇ ಕಾರ್ಯನಿರ್ವಾಹಕರಾಗಿದ್ದರಿಂದ, ಅನ್ಯ ಕರ್ತವ್ಯದ ಮೇಲಿದ್ದ ನಿಮ್ಮ ಹಾಜರಾತಿ ಕುರಿತು ಪ್ರತಿ ತಿಂಗಳು ಕೇಂದ್ರ ಕಚೇರಿಗೆ ವೇತನ ನೀಡುವುದಕ್ಕಾಗಿ ಮಾಹಿತಿ ನೀಡಬೇಕಾಗಿದ್ದರೂ, ಉದ್ದೇಶಪೂರ್ವಕವಾಗಿ ಸಲ್ಲಿಸಿರುವುದಿಲ್ಲ. ಅದೇ ಅವಧಿಯಲ್ಲಿ ನಿಮ್ಮನ್ನು ನಂಜನಗೂಡು ಪೋಲೀಸ್ ಠಾಣೆಯಲ್ಲಿ ಇಟ್ಟಿರುವುದಾಗಿ ಮೌಖಿಕವಾಗಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಗೆ ತಿಳಿಸಿದ್ದರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿ ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿರುತ್ತೀರಿ.

ಆರೋಪ: 9

ಆಗಸ್ಟ್ 2007ರಲ್ಲಿನ ನಿಮ್ಮ ಅನಧಿಕೃತ ಗೈರು ಹಾಜರಾತಿಯನ್ನು ಮುಚ್ಚಿ ಹಾಕಲು, ಸ್ವತಃ ಜವಾಬ್ದಾರಿಯುತ ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿದ್ದ ನೀವು ನಿಮಗೆ ವಹಿಸಲಾದ ಸರ್ಕಾರದ ದಾಖಲಾತಿಗಳನ್ನು ಸುರಕ್ಷಿತವಾಗಿಡುವ ಬದಲಾಗಿ ಆಗಸ್ಟ 2007ರ ಹಾಜರಾತಿ ಪುಸ್ತಕದ ಭಾಗವನ್ನು ಹರಿದು ಹಾಕಿ ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿರುತ್ತೀರಿ.

ಆರೋಪ:10

ಪ್ರಸ್ತುತ ಅಮಾನತ್ತಿನಲ್ಲಿದ್ದ ಸರ್ಕಾರಿ ನೌಕರರಾದ ನೀವು ದಿನಾಂಕ 14.5.2007 ರಿಂದ 24.5.2007ರ ವರೆಗೆ ಅನಧಿಕೃತ ಗೈರು ಹಾಜರಾಗಿದ್ದರಿಂದ ನಿಮಗೆ ವಹಿಸಲಾದ ಆಡಳಿತ ಮತ್ತು ಲೆಕ್ಕ ವಿಭಾಗದ ಕರ್ತವ್ಯಗಳ ನಿರ್ವಹಣೆಯಲ್ಲಿ ಹಾಗೂ ವೈಯಕ್ತಿಕ ಸೇವಾ ವಿಷಯದಲ್ಲಿ ತಡೆ ಉಂಟು ಮಾಡಿ, ಅತ್ಯಂತ ಬೇಜವಾಬ್ದಾರಿಯಾಗಿ ವರ್ತಿಸಿರುತ್ತೀರಿ.

ಆರೋಪ: 11

ಪ್ರಸ್ತುತ ಅಮಾನತ್ತಿನಲ್ಲಿದ್ದ ಸರ್ಕಾರಿ ನೌಕರರಾದ ನೀವು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಈ ಕೆಳಗೆ ತಿಳಿಸಲಾದ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತೀರಿ:-

1. ಶ್ರೀ ಕೆ.ಸಿದ್ದರಾಜು,ಸಹಾಯಕ ನಿರ್ದೇಶಕರು ಇವರ ಪ್ರವಾಸದ ಬಿಲ್ಲು ಹಣ:

ಅ) ಮೇ 2007 : ರೂ.374-00

ಆ) ಜೂನ್ 2007 : ರೂ.246-00

ಇ) ಜುಲೈ 2007 : ರೂ.164-00

ಈ) ಆಗಸ್ಟ್ 2007 : ರೂ.741-00

2. ತಾಲ್ಲೂಕು ಯೋಜನಾ ಘಟಕಕ್ಕೆ ವರ್ಗಾವಣೆ ಆದೇಶದಲ್ಲಿದ್ದ ಶ್ರೀ ಕೆ. ಸಿದ್ದರಾಜು, ಸಹಾಯಕ ನಿರ್ದೇಶಕರು ಇವರಿಗೆ ಮಂಜೂರಾದ ಹಬ್ಬದ ಮುಂಗಡ ರೂ.2000/- ಗಳನ್ನು ಸರ್ಕಾರಕ್ಕೆ ಜಮಾ ಮಾಡುವಂತೆ ಜವಾಬ್ದಾರಿಯುತ ಪ್ರಥಮ ದರ್ಜೆ ಸಹಾಯಕರಾದ ಹಾಗೂ ಆಡಳಿತ ಮತ್ತು ಲೆಕ್ಕ ವಿಭಾಗದ ಕಾರ್ಯನಿರ್ವಾಹಕರಾದ ನಿಮಗೆ ಅವರು ನೀಡಿದ್ದನ್ನು ಸರ್ಕಾರಕ್ಕೆ ಜಮಾ ಮಾಡದೆ, ಈ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

3. ಈ ನಿರ್ದೇಶನಾಲಯದ ಆದೇಶದ ದಿನಾಂಕ 29.6.2006ರ ಅನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸರ್ಕಾರದ ಆದೇಶದ ಸಂಖ್ಯೆ:ಪಿಡಿ/25/ಎಸ್ ಆರ್ ಪಿ/06, ದಿನಾಂಕ 27.7.2006ರಲ್ಲಿ ಮಂಜೂರಾದ ತುಟ್ಟಿ ಭತ್ಯೆಯ ಬಾಕಿಯನ್ನು ಈ ಕೆಳಗೆ ತಿಳಿಸಲಾದ ಅಧಿಕಾರಿಗಳಿಗೆ ವಿತರಿಸದೇ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

ಅ) ಸಹಾಯಕ ನಿರ್ದೇಶಕರಾಗಿದ್ದ ಶ್ರೀ ಕೆ. ಸಿದ್ದರಾಜು : ರೂ.879-00

ಆ) ಸ್ವತಃ ಕಚೇರಿ ಮುಖ್ಯಸ್ಥರಾಗಿದ್ದ ಶ್ರೀ ಬಿ. : ರೂ.505-00

ಶ್ರೀನಿವಾಸಾಚಾರ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಇವರ ನವೆಂಬರ್ ತಿಂಗಳಿನ ವೇತನ ವ್ಯತ್ಯಾಸ (ಈ ಹಣವನ್ನು ದುರುಪಯೋಗ ಪಡಿಸಿಕೊಳ್ಳುವ ಉದ್ದೇಶದಿಂದ ನೀವು ಸ್ವತಃ ತಯಾರಿಸಿದ ಬಿಲ್ಲಿನಲ್ಲಿ ಯಾವ ವಿಷಯ ಎಂದು ನಮೂದಿಸಿರುವುದಿಲ್ಲ)

ಆರೋಪ: 12

ಪ್ರಸ್ತುತ ಅಮಾನತ್ತಿನಲ್ಲಿರುವ ಪ್ರಥಮ ದರ್ಜೆ ಸಹಾಯಕರಾದ ಶ್ರೀ ಆದಿಕುಮಾರ್, ಆದ ನೀವು 2004ನೇ ಸಾಲಿನಲ್ಲಿ ಕೇಂದ್ರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀಮತಿ ಗಿರಿಯಮ್ಮ, ಗಣತಿದಾರರಿಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸುವಲ್ಲಿ ಎಸಗಿದ ಲೋಪದೋಷಗಳ ಕುರಿತು ನಿಮಗೆ ನೀಡಲಾದ ಜ್ಞಾಪನದ ದಿನಾಂಕ:05.01.2007ಕ್ಕೆ ಸಂಬಂಧಿಸಿದಂತೆ, ದಿನಾಂಕ 29.10.2007ರಂದು ನೀಡಿದ ನಿಮ್ಮ ವಿವರಣೆಯಲ್ಲಿ "ನೀವು ಯಾವುದೇ ಲೋಪದೋಷಗಳನ್ನು ಎಸಗದೆ ಇದ್ದಾಗಲೂ, ನಿಮ್ಮ ಮೇಲಿನ ವೈಯಕ್ತಿಕ ದ್ವೇಷ ಮತ್ತು ಸೇಡಿನಿಂದ ಆ ಜ್ಞಾಪನವನ್ನು ನಿಮಗೆ ನೀಡುವಂತೆ ಮಾಡಿದ್ದರಿಂದ ನಿಮಗೆ ಮಾನಸಿಕ ಹಿಂಸೆಯಾಗಿದ್ದು ನಿಮ್ಮ ಕುಟುಂಬದವರೆಲ್ಲರೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹಾಗೂ ಸದರಿ ಅವರಿಗೆ ಮಾನಸಿಕ ಹಿಂಸೆ ನೀಡುತ್ತಿರುವವರೇ ನಿಮ್ಮ ಆತ್ಮಹತ್ಯೆಗೆ ಕಾರಣರಾಗುತ್ತಾರೆಂದು ನಿಮಗೆ ಜ್ಞಾಪನ ನೀಡಿದ ಇಲಾಖಾ ಮುಖ್ಯಸ್ಥರಿಗೆ ಹೆದರಿಸುವ (Black mail) ನಿಮ್ಮ ವರ್ತನೆಯು ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯಲ್ಲಿರುತ್ತದೆ. ಕೇಂದ್ರ ಕಚೇರಿಯಿಂದ ನಿಮ್ಮನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಗೆ ನಿಯೋಜಿಸಿದ/ ವರ್ಗಾವಣೆ ಮಾಡಿದ ನಂತರವೂ ನಿಮ್ಮ ಅನಧಿಕೃತ ಗೈರು ಹಾಜರಾತಿ, ಕರ್ತವ್ಯಲೋಪ, ದುರ್ನಡತೆ, ಸರ್ಕಾರದ ಹಣದ ದುರಪಯೋಗ ನಿರಂತರವಾಗಿ ಆ ಕಚೇರಿಯಲ್ಲಿಯೂ ಮುಂದುವರೆದಿದ್ದರಿಂದ ನಿಮಗೆ ಹಲವಾರು ಜ್ಞಾಪನಗಳನ್ನು ನೀಡುವ, ನಿಮ್ಮನ್ನು ಸೇವೆಯಿಂದ ಅಮಾನತ್ತು ಗೊಳಿಸುವಂತಹ ಪರಿಸ್ಥಿತಿಗೆ ಸ್ವತಃ ನೀವೇ ಕಾರಣರಾಗಿದ್ದರಿಂದ, ಈ ಎಲ್ಲಾ ಕಾರಣಗಳಿಂದಾಗಿ ಮಾನಸಿಕ ಹಿಂಸೆ ಎಂದು ಪರಿಗಣಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಲ್ಲಿ ಅದು ನಿಮ್ಮ Cognizable offence ಎಂದು (ತಕ್ಷಣ ಪೋಲೀಸಿನವರು ದಸ್ತಗಿರಿ ಮಾಡಬಹುದಾದ ಅಪರಾಧ) ಪರಿಗಣಿಸುವಂತೆ ಸೂಚಿಸಲಾಗಿತ್ತು ಹಾಗೂ ಶ್ರೀಮತಿ ಗಿರಿಯಮ್ಮ, ಗಣತಿದಾರರು ಇವರ ಖಾಯಂಪೂರ್ವ ಅವಧಿಯನ್ನು ಘೋಷಿಸುವ ಪ್ರಕರಣಕ್ಕೆ ಸಂಬಂಧಿಸಿದಂತೆ, ನಿಮಗೆ ನೀಡಲಾದ ಜ್ಞಾಪನಕ್ಕೆ ವಿವರಣೆ ನೀಡುವಂತೆ ಸೂಚಿಸಲಾಗಿದ್ದರೂ, ನಿಮ್ಮ ವಿವರಣೆ ನೀಡಿರುವುದಿಲ್ಲ. ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು (ಪ್ರಸ್ತುತ ಅಮಾನತ್ತಿನಲ್ಲಿ) ಆದ ನಿಮ್ಮ ವಿರುದ್ಧ ಮೇಲೆ ತಿಳಿಸಲಾದ ಎಲ್ಲಾ ಆರೋಪಗಳಿಗೆ ಸಂಬಂಧಿಸಿದಂತೆ ವಿಶೇಷವಾಗಿ ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಕುಮಾರಿ ಆರ್. ಜ್ಯೋತಿ,

ದ್ವಿತೀಯ ದರ್ಜೆ ಸಹಾಯಕರು ಇವರಿಗೆ ವೇತನ ನೀಡುವ ವಿಷಯದಲ್ಲಿ ದಾಖಲಾತಿಗಳನ್ನು ನಿಮ್ಮ ಸ್ವಹಿತ ದೃಷ್ಟಿಯಿಂದ ದುರುದ್ದೇಶಪೂರ್ವಕವಾಗಿ ಬದಲಾಯಿಸಿ (tempering of Government records) ಗಂಭೀರ ಸ್ವರೂಪದ ದುರ್ನಡತೆ ಪ್ರದರ್ಶಿಸಿ (Criminal Misconduct) ಸರ್ಕಾರಕ್ಕೆ ನಂಬಿಕೆ ದ್ರೋಹ ಎಸಗಿರುವುದರಿಂದ ಹಾಗೂ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ ನಿರಂತರವಾಗಿ ಅಧಿಕೃತ ಗೈರು ಹಾಜರಾಗಿ, ಕರ್ತವ್ಯ ಲೋಪ, ಬೇಜವಾಬ್ದಾರಿತನ ಮತ್ತು ದುರ್ನಡತೆ ಪ್ರದರ್ಶಿಸಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1986ರ ನಿಯಮ-3 ನ್ನು ಉಲ್ಲಂಘಿಸಿದ್ದರಿಂದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸಲು ಉದ್ದೇಶಿಸಲಾಗಿದೆ.

ಆಪಾದಿತ ಸರ್ಕಾರಿ ನೌಕರರು (AGO-Accused Government official) ದಿನಾಂಕ 13.10.2008ರಂದು ಮೇಲೆ ವಿವರಿಸಲಾದ ಅವರ ಮೇಲಿನ ಆಪಾದನೆಗಳನ್ನೊಳಗೊಂಡ ಉಲ್ಲೇಖ(5)ರಲ್ಲಿನ ಕಾರಣ ಕೇಳುವ ಜ್ಞಾಪನವನ್ನು ಸ್ವೀಕರಿಸಿದ ನಂತರ, ಉಲ್ಲೇಖ(6)ರಲ್ಲಿನ ದಿನಾಂಕ 27.10.2008ರಂದು ಸಲ್ಲಿಸಿದ ಅವರ ಮನವಿಯಲ್ಲಿ ಅವರ ವಿರುದ್ಧ ಹೊರಿಸಲಾದ 12-ಆರೋಪಗಳನ್ನೊಳಗೊಂಡ **"ಕಾರಣ ಕೇಳುವ ಜ್ಞಾಪನಕ್ಕೆ"** ಉತ್ತರಿಸಲು ದಾಖಲಾತಿಗಳನ್ನು ಸಂಬಂಧಿಸಿದ ಕಚೇರಿಗಳಿಂದ ಪಡೆದು ಸಲ್ಲಿಸಬೇಕಾಗಿರುವುದರಿಂದ, ಹಾಗೂ ಈ ಬಗ್ಗೆ **"ಕಾನೂನು ತಜ್ಞರಿಂದ"** ಸಲಹೆ ಪಡೆಯ ಬೇಕಾಗಿದ್ದರಿಂದ, ಅವರಿಗೆ ಈಗಾಗಲೇ ನೀಡಲಾದ 15 ದಿನಗಳ ನಂತರ 1-ತಿಂಗಳು ಕಾಲಾವಕಾಶ ನೀಡಬೇಕೆಂದು ಸಲ್ಲಿಸಿದ ಕೋರಿಕೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ:11ರ ಉಪ ನಿಯಮಗಳ ಅನ್ವಯ ಹಾಗೂ, ಅದೇ ನಿಯಮಗಳ ನಿಯಮ 11(4)ರ ಅನ್ವಯ, ಪರಿಶೀಲಿಸಿ, ಆರೋಪಿತ ಸರ್ಕಾರಿ ನೌಕರನಿಗೆ (AGO) **"ಆರೋಪ ಪಟ್ಟಿ"** ಜಾರಿ ಮಾಡಿದ ನಂತರ ನಿಗದಿಪಡಿಸಲಾದ ಅವದಿಯ ಒಳಗಾಗಿ ಆತನನ್ನು ರಕ್ಷಿಸಿಕೊಳ್ಳಬೇಕಾದ ಲಿಖಿತ ಹೇಳಿಕೆಯನ್ನು ನಿಗದಿತ ಅವಧಿಯೊಳಗಾಗಿ ಸಲ್ಲಿಸದೇ ಇದ್ದಲ್ಲಿ, ಆತನು ಏನೂ ಹೇಳುವುದಿಲ್ಲವೆಂದು ಪರಿಗಣಿಸಿ, ಇಲಾಖಾ ವಿಚಾರಣೆ ಏರ್ಪಡಿಸಬಹುದಾಗಿದ್ದರಿಂದ, ಕಾಲಾವಕಾಶ ನೀಡುವಂತೆ ಸಲ್ಲಿಸಲಾಗಿದ್ದ ಸದರಿಯವರ ಕೋರಿಕೆಯನ್ನು ತಿರಸ್ಕರಿಸಬಹುದಾಗಿತ್ತಾದರೂ, ನೈಸರ್ಗಿಕ ನ್ಯಾಯದ ತತ್ವದ ದೃಷ್ಟಿಯಿಂದ (in the interest of principles of natural justice) ಅವರ ಲಿಖಿತ ಹೇಳಿಕೆ ಸಲ್ಲಿಸಲು ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಜ್ಞಾಪನದ ದಿನಾಂಕ 7.11.2008ರಲ್ಲಿ ಅವರಿಗೆ 15 ದಿನಗಳ ಕಾಲಾವಕಾಶ ನೀಡಲಾಗಿತ್ತು ಹಾಗೂ "ಸದರಿ ಪ್ರಥಮ ದರ್ಜೆ ಸಹಾಯಕರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ನಾಶ ಪಡಿಸಬಾರದೆಂಬ ಉದ್ದೇಶದಿಂದ ಸದರಿ ಆಪಾದಿತ ಸರ್ಕಾರಿ ನೌಕರರನ್ನು ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸಲಾಗಿದ್ದರಿಂದ, ನಿಯಮಗಳ ಅನ್ವಯ, ಯಾವುದೇ ದಾಖಲಾತಿಗಳನ್ನು ಸಂಬಂಧಿಸಿದ ಕಚೇರಿಗಳಿಂದ ಆಪಾದಿತ ಸರ್ಕಾರಿ ನೌಕರರು, ಈ ಹಂತದಲ್ಲಿ ಪಡೆಯಲು ಅವಕಾಶವಿಲ್ಲವಾದ್ದರಿಂದ, ಹಾಗೂ ಸದರಿ ಅಮಾನತ್ತಿನಲ್ಲಿದ್ದ ಸರ್ಕಾರಿ ನೌಕರರು ಜೀವನಾಂಶ ಭತ್ಯೆಗಾಗಿ ಮತ್ತು ಪತ್ರ ವ್ಯವಹಾರಗಳ ಉದ್ದೇಶಕ್ಕಾಗಿ ಮನೆ ವಿಳಾಸವನ್ನು ತಿಳಿಸುವುದು ಕಡ್ಡಾಯವಾಗಿದ್ದರೂ, ಸದರಿಯವರು **ದಿನಾಂಕ 25.8.2008ರಂದು ಸರ್ಕಾರಕ್ಕೆ** ಹಾಗೂ, **ದಿನಾಂಕ:18.10.2008ರಂದು** ಮತ್ತು **ದಿನಾಂಕ:27.10.2008ರಂದು** ಈ ನಿರ್ದೇಶನಾಲಯಕ್ಕೆ ಸಲ್ಲಿಸಿದ್ದ ಅವರ ಮನವಿಗಳಲ್ಲಿ ಅವರ ಮನೆ ವಿಳಾಸ ನಮೂದಿಸದೇ ಸಲ್ಲಿಸಿದ್ದನ್ನು ತೀವ್ರವಾಗಿ ಪರಿಗಣಿಸಿ, ಇದೊಂದು ಅವರ **"ದುರ್ನಡತೆ"** ಎಂದು ಪರಿಗಣಿಸಲಾಗಿದ್ದು, ಸದರಿ ಅವರ ಮನೆ ವಿಳಾಸವನ್ನು ಕೇಂದ್ರ ಕಚೇರಿಗೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಅಮಾನತ್ತಿನಲ್ಲಿದ್ದ ಈ ಆಪಾದಿತ ಸರ್ಕಾರಿ ನೌಕರರು ದಿನಾಂಕ 25.8.2008ರಂದು ಸರ್ಕಾರಕ್ಕೆ ಹಾಗೂ ದಿನಾಂಕ 27.10.2008 ರಂದು ಸಲ್ಲಿಸಿದ್ದ ಅವರ ಮನವಿಗಳನ್ನು ಪರಿಶೀಲಿಸಲಾಗಿ ಈ ಆಪಾದಿತ ಸರ್ಕಾರಿ ನೌಕರರನ್ನು ಅಮಾನತ್ತಿನಲ್ಲಿದ್ದ ಅವಧಿಯಲ್ಲಿ, ಆತನನ್ನು ಸಂಪರ್ಕಿಸಲು ಅಥವಾ ಆತನಿಗೆ ಯಾವುದೇ ಜ್ಞಾಪನ/ ಪತ್ರ ವ್ಯವಹಾರಗಳು, ತಲುಪದೆ ಇರುವಂತೆ ದುರುದ್ದೇಶಪೂರ್ವಕವಾಗಿ ಅವರ ಅಮಾನತ್ತಿನಲ್ಲಿದ್ದ ಅವದಿಯಲ್ಲಿ ಆತನ ಮನೆ ವಿಳಾಸವನ್ನು ಯಾವುದೇ ಪತ್ರ ವ್ಯವಹಾರಗಳಲ್ಲಿ ತಿಳಿಸದೇ, ಮೇಲಾಧಿಕಾರಿಗಳನ್ನು ಮತ್ತು ಶಿಸ್ತು ಪ್ರಾಧಿಕಾರವನ್ನು ನಿರಂತರವಾಗಿ ತಪ್ಪುದಾರಿಗೆ ಎಳೆಯುವ ಹಾಗೂ ಅವರ ವಿರುದ್ಧ ಉದ್ದೇಶಿಸಲಾಗಿದ್ದ ಇಲಾಖಾ ವಿಚಾರಣೆಯ ದಾರಿಯನ್ನು ತಪ್ಪಿಸುವ ಪ್ರಯತ್ನವನ್ನು ನಿರಂತರವಾಗಿ ಈ ಆರೋಪಿತ ನೌಕರರು ಎಸಗಿರುತ್ತಾರೆ.

ಮೇಲೆ ವಿವರಿಸಲಾದ ಅಂಶಗಳನ್ನು ಪುನರುಚ್ಚರಿಸುತ್ತಾ ಹಾಗೂ ಈ ಇಲಾಖಾ ವಿಚಾರಣೆಯ ದಾರಿಯನ್ನು ತಪ್ಪಿಸಬಹುದಾದ ದುರುದ್ದೇಶದಿಂದ, ಅಮಾನತ್ತಿನಲ್ಲಿದ್ದ ಆರೋಪಿತ ನೌಕರರು, ಉಲ್ಲೇಖ(5)ರಲ್ಲಿರುವ ಅವರ ಮನವಿ ದಿನಾಂಕ 27.10.2008 ಹಾಗೂ, ಅದಕ್ಕೆ ಪ್ರತ್ಯುತ್ತರವಾಗಿ ಹೊರಡಿಸಲಾಗಿದ್ದ ದಿನಾಂಕ 7.11.2008ರಂದು ಹೊರಡಿಸಲಾದ ಉಲ್ಲೇಖ (7)ರಲ್ಲಿರುವ ಜ್ಞಾಪನವನ್ನು ಉಲ್ಲೇಖಿಸದೆ, ಹಾಗೂ ಅವರ ಮನೆ ವಿಳಾಸ ನೀಡದೆ "ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ" ಎಂದು ನಮೂದಿಸಿ ಉಲ್ಲೇಖ(8)ರಲ್ಲಿನ ದಿನಾಂಕ 25.11.2008ರಂದು ಸಲ್ಲಿಸಿದ್ದ ಅವರ ಇನ್ನೊಂದು ಮನವಿಯಲ್ಲಿ ಉಲ್ಲೇಖ(5)ರಲ್ಲಿನ ದಿನಾಂಕ 27.10.2008ರ ಅವರ ಮನವಿಯಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದರಿಂದ, ಈ ನಿರ್ದೇಶನಾಲಯದ ಜ್ಞಾಪನದ ದಿನಾಂಕ 22.12.2008ನ್ನು ಹೊರಡಿಸಿ, ಈ ಆಪಾದಿತ ಸರ್ಕಾರಿ ನೌಕರರು, ಅವರ ಅಮಾನತ್ತಿನಲ್ಲಿದ್ದ ಅವಧಿಯಲ್ಲಿ ಅವರ ಮನೆ ವಿಳಾಸವನ್ನು ನೀಡದೆ ಇರುವುದರ ಕುರಿತು ವಿವರಿಸಲಾಗಿತ್ತು. ಹಾಗೂ ಅದೇ ಜ್ಞಾಪನದಲ್ಲಿ ಅಮಾನತ್ತಿನಲ್ಲಿದ್ದ ಈ ಆರೋಪಿತ ಸರ್ಕಾರಿ ನೌಕರನ ದಿನಾಂಕ 25.11.2008ರ ಮನವಿಗೆ ಸಂಬಂಧಿಸಿದಂತೆ "ಸರ್ಕಾರದ ಕಚೇರಿ ಕಾರ್ಯವಿಧಾನಗಳ ನಿಯಮಗಳನ್ವಯ (as per office procedure) ಆತನ ಕೋರಿಕೆಯನ್ನು ಕಚೇರಿಯಲ್ಲಿ ಸ್ವೀಕರಿಸಿರುವ ಕುರಿತು ಕಚೇರಿ ಸೀಲು/ ದಿನಾಂಕ ನಮೂದಿಸದೇ ಹಾಗೂ ಸಾಮಾನ್ಯ ಸ್ವೀಕೃತಿ ವಹಿಯಲ್ಲಿ ದಾಖಲಿಸದೆ ಕೇಂದ್ರ ಕಚೇರಿಗೆ ಸಲ್ಲಿಸಿದ್ದನ್ನು ತೀವ್ರವಾಗಿ ಪರಿಗಣಿಸಿ, ಕಚೇರಿ ಕಾರ್ಯ ವಿಧಾನಗಳನ್ನು ಅನುಸರಿಸುವಂತೆ ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಗೆ ಎಚ್ಚರಿಕೆ ನೀಡಲಾಗಿತ್ತು.

ಮೇಲಿನ ಕಂಡಿಕೆಗಳಲ್ಲಿ ವಿವರಿಸಿದಂತೆ, ಆಪಾದಿತ ಸರ್ಕಾರಿ ನೌಕರರು, ಆತನ ವಿರುದ್ಧದ **12- ಆರೋಪಗಳಿಗೆ ಸಂಬಂಧಿಸಿದಂತೆ,** ಆತನ ಮೇಲಿನ ಆರೋಪಗಳನ್ನು ನಿರ್ಧಿಷ್ಟವಾಗಿ ಒಪ್ಪಿಕೊಂಡಿರುವ ಕುರಿತು ಅಥವಾ ನಿರಾಕರಿಸಿರುವ ಕುರಿತು ಆತನ ಲಿಖಿತ ವಿವರಣೆಯನ್ನು ಸಲ್ಲಿಸದೆ ಅನಗತ್ಯವಾದ ಪತ್ರ ವ್ಯವಹಾರಗಳನ್ನು ಮುಂದುವರೆಸಿ, ದಿನಾಂಕ 5.1.2009ರ ಅವರ ಇನ್ನೊಂದು ಮನವಿಯಲ್ಲಿ ಇನ್ನಿತರ ವಿಷಯಗಳೊಂದಿಗೆ **"ನನ್ನ**

ರಕ್ಷಣಾ ಹೇಳಿಕೆ ನೀಡಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿದೆ ಎಂದು ಸದರಿ ಜ್ಞಾಪನವನ್ನು ತಿಳಿಸಿ ನಾನು ನನ್ನ ರಕ್ಷಣಾ ಹೇಳಿಕೆ ನೀಡಲು ದಾಖಲಾತಿಗಳನ್ನು ಪಡೆಯಲು ಅವಕಾಶವಿಲ್ಲವಾದ್ದರಿಂದ ನನ್ನ ಕೋರಿಕೆಯನ್ನು ತಿರಸ್ಕರಿಸಲಾಗಿದೆ ಎಂದೂ ತಿಳಿಸಲ್ಪಟ್ಟಿದೆ. ಆದರೆ ನನ್ನ ವಿರುದ್ಧ ನಿರ್ದಿಷ್ಟ ಆರೋಪಗಳಿಗೆ ಸೂಕ್ತ ದಾಖಲಾತಿಗಳೇ ಇಲ್ಲದೇ ನಾನು ಈ ಬಗ್ಗೆ ನನ್ನ ರಕ್ಷಣಾ ಹೇಳಿಕೆ ನೀಡಲು ಹೇಗೆ ಸಾಧ್ಯ? ಎಂದು ಶಿಸ್ತು ಪ್ರಾಧಿಕಾರವನ್ನು ಪ್ರಶ್ನಿಸಿದ್ದನ್ನು ನಿಯಮಾನುಸಾರ ಪರಿಶೀಲಿಸಿ, ಈ ನಿರ್ದೇಶನಾಲಯದ ಇದೇ ಕ್ರಮಾಂಕದ ಜ್ಞಾಪನದ ದಿನಾಂಕ 4.2.2009ರಲ್ಲಿ ಈ ಕೆಳಗಿನಂತೆ ಸೂಚಿಸಲಾಗಿತ್ತು.

"ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಸಲ್ಲಿಸಿದ ಅವರ ಮನವಿ ದಿನಾಂಕ 27.10.2008ನ್ನು ಹಾಗೂ ದಿನಾಂಕ 25.11.2008ನ್ನು ನಿಯಮಾನುಸಾರ ಪರಿಶೀಲಿಸಿ, ಅನುಕ್ರಮವಾಗಿ ಅದೇ ಕ್ರಮಾಂಕದ ಜ್ಞಾಪನದ ದಿನಾಂಕ 7.11.2008ರಲ್ಲಿ ಮತ್ತು ಅದೇ ಕ್ರಮಾಂಕದ ಜ್ಞಾಪನದ ದಿನಾಂಕ 22.12.2008ರಲ್ಲಿ ಈ ಹಂತದಲ್ಲಿ ಸದರಿಯವರಿಗೆ ಯಾವುದೇ ದಾಖಲಾತಿಗಳನ್ನು ಸಂಬಂಧಿಸಿದ ಕಚೇರಿಗಳಿಂದ ಪಡೆಯಲು ಅವಕಾಶವಿಲ್ಲವೆಂದು ಸ್ಪಷ್ಟಪಡಿಸಿದ್ದಾಗ್ಯೂ, ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಅವರ ರಕ್ಷಣಾ ಹೇಳಿಕೆಯನ್ನು ಅಂದರೆ, ಅವರ ವಿರುದ್ಧದ ಆರೋಪಗಳನ್ನು ಒಪ್ಪಿರುವ ಅಥವಾ ಒಪ್ಪದೇ ಇರುವ ಲಿಖಿತ ಹೇಳಿಕೆಗಳನ್ನು ಸಲ್ಲಿಸುವುದನ್ನು ಅನಾವಶ್ಯಕವಾಗಿ ಮುಂದೂಡುವ ಉದ್ದೇಶದಿಂದ ಹಾಗು ಇಲಾಖಾ ವಿಚಾರಣೆಯ ದಾರಿಯನ್ನು ತಪ್ಪಿಸುವ ದುರುದ್ದೇಶದಿಂದ ದಾಖಲಾತಿಗಳನ್ನು ಒದಗಿಸುವಂತೆ ದಿನಾಂಕ 5.1.2009ರಂದು ಸಲ್ಲಿಸಿದ ಅವರ ಕೋರಿಕೆಯನ್ನು, ಈ ಕೆಳಗೆ ವಿವರಿಸಲಾದ ನಿಯಮಗಳನ್ವಯ ಪರಿಶೀಲಿಸಿ ಅವರ ಕೋರಿಕೆಯನ್ನು ತಿರಸ್ಕರಿಸಲಾಗಿತ್ತು:-

1) As per Rule:11(4) of KCS (CCA) Rules, 1957:- the Disciplinary Authority shall deliver or cause to be delivered to the Government servant a copy of the articles of charges, the statement of the imputations of mis conduct or mis behaviour and a list of documents and witnesses by which each article of charge is proposed to be sustained and shall require the Government Servant to submit, within such time as may be specified a written statement of his defence

(2) As per Rule 11(5) of KCS (CCA) Rules, 1957: If no defence statement is submitted by the Government Servant, the Disciplinary Authority may itself inquire into the articles of charges or may, if it considers it necessary to do so, appoint under Sub rule(2) an enquiry Authority for the purpose.

ಅಂದರೆ ಆಪಾದಿತ ಸರ್ಕಾರಿ ನೌಕರನ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಿದ್ದಲ್ಲಿ, ಆರೋಪ ಪಟ್ಟಿಯ ಅನುಬಂಧ-3ರಲ್ಲಿನ ದಾಖಲಾತಿಗಳನ್ನು, ಆಪಾದಿತ ಸರ್ಕಾರಿ ನೌಕರನಿಗೆ ವಿಚಾರಣಾ ಸಂದರ್ಭದಲ್ಲಿ ದಾಖಲಾತಿಗಳನ್ನು ಪರಿಶೀಲಿಸಲು ಮೇಲಿನ ನಿಯಮಗಳಲ್ಲಿ ಅವಕಾಶ ಒದಗಿಸಿದ್ದರಿಂದ, ಹಾಗೂ ಆತನ ವಿರುದ್ಧದ ಪ್ರಮುಖವಾದ ಆರೋಪಗಳಲ್ಲಿ "ಶ್ರೀಮತಿ ಆರ್. ಜ್ಯೋತಿ, ದ್ವಿತೀಯ ದರ್ಜೆ ಸಹಾಯಕರು ಇವರಿಗೆ ವಾಸ್ತವವಾಗಿ ಬಟವಾಡೆ ಮಾಡಬೇಕಾದ ರೂ.34,774/- ನ್ನು ರೂ.32,774/- ಎಂದು ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಅವರು ವೇತನ ವಹಿಯಲ್ಲಿ ತಿದ್ದಿರುವ ಕುರಿತು, ಹಾಗೂ ಅವರಿಗೆ ರೂ.32,774/-ನ್ನು ಮಾತ್ರ ಬಟವಾಡೆ ಮಾಡಿ, ರೂ.2000/-ಗಳನ್ನು ದುರುಪಯೋಗ ಪಡಿಸಿಕೊಂಡಿರುವ ಕುರಿತು ಕಚೇರಿ ಮುಖ್ಯಸ್ಥರು ವರದಿ ಮಾಡಿದ ದಾಖಲೆಯನ್ನು, ಅದೇ ರೀತಿ, ಅದೇ ಆರೋಪಿ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್ ಅವರು ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಅನ್ಯ ಕರ್ತವ್ಯದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಹಾಗೂ ನಂತರ ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸರ್ಕಾರದ ಕಚೇರಿಯಲ್ಲಿ ಅನುಷ್ಠಾನಗೊಳಿಸದೇ ಇದ್ದ ಉದ್ದೇಶಕ್ಕಾಗಿ ಶ್ರೀಮತಿ ವೀಣಾ ಕುಲಕರ್ಣಿ, ಗಣತಿದಾರರು, ಹೊಸಕೋಟೆ ತಾಲ್ಲೂಕು, ಮತ್ತು ಶ್ರೀಮತಿ ಪಿ.ಮಂಜು, ಗಣತಿದಾರರು, ರಾಮನಗರ ಇವರಿಗೆ ವಂಚನೆ ಮಾಡಿ, ರೂ.5600/-ಗಳನ್ನು, ಹಾಗೂ ರೂ.2500/-ಗಳನ್ನು ಅವರಿಂದ ಅನಧಿಕೃತವಾಗಿ ಪಡೆದುಕೊಂಡಿದ್ದರ ಕುರಿತು, ಆ ಮಹಿಳಾ ಸಿಬ್ಬಂದಿಗಳು ದಿನಾಂಕ 14.5.2008 ರಂದು ಹಾಗೂ ದಿನಾಂಕ 26.6.2008ರಂದು ಸಲ್ಲಿಸಿದ್ದ ದೂರುಗಳನ್ನು ಆಪಾದಿತ ಶ್ರೀ ಆದಿಕುಮಾರ್, ರವನ್ನು ಸರ್ಕಾರದ ಸೇವೆಯಿಂದ ಅಮಾನತ್ತುಗೊಳಿಸಿ ಹೊರಡಿಸಲಾಗಿದ್ದ ಆದೇಶದ ದಿನಾಂಕ 17.7.2008ರಲ್ಲಿ ಯಥಾವತ್ತಾಗಿ ಪುನರುಚ್ಚರಿಸಲಾಗಿದ್ದರಿಂದ, ಆತನಿಗೆ ಪ್ರತ್ಯೇಕವಾಗಿ ದಾಖಲಾತಿಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸಲಿಲ್ಲವಾದ್ದರಿಂದ, ಅವರ ಕೋರಿಕೆಯನ್ನು ಪರಿಶೀಲಿಸಲು ಸೂಕ್ತವಲ್ಲವೆಂದು ಹಾಗೂ, ಆಪಾದಿತ ಸರ್ಕಾರಿ ನೌಕರನಿಗೆ ವಿಚಾರಣಾ ಸಂದರ್ಭದಲ್ಲಿ ದಾಖಲಾತಿಗಳನ್ನು ಪರಿಶೀಲಿಸಲು ನಿಯಮಗಳ ಅನ್ವಯ ಸಾಕಷ್ಟು ಅವಕಾಶ ಒದಗಿಸಿದ್ದರಿಂದ, ಅವರ ಕೋರಿಕೆಯನ್ನು ಪರಿಶೀಲಿಸಲು ಸೂಕ್ತವಲ್ಲವೆಂದು ಅವರಿಗೆ ತಿಳಿಸಲಾಗಿತ್ತು.

ಒಟ್ಟಾರೆ, ಈ ಪ್ರಕರಣದಲ್ಲಿನ ಆರೋಪಿ ಶ್ರೀ ಆದಿಕುಮಾರ್, ಇವರು ಉಲ್ಲೇಖ(5)ರಲ್ಲಿನ ಕಾರಣ ಕೇಳುವ ಜ್ಞಾಪನದಲ್ಲಿನ ಅವರ ವಿರುದ್ಧದ ಆರೋಪಗಳಿಗೆ ಅವರ ವಿವರಣೆಯನ್ನು ಸಲ್ಲಿಸದೇ, ಕೇವಲ ಅನಗತ್ಯವಾಗಿ ಪತ್ರ ವ್ಯವಹಾರಗಳನ್ನು ಮುಂದುವರೆಸಿದ್ದಲ್ಲದೆ, ಆತನ ವಿರುದ್ಧ ಕ್ರಮ ಕೈಗೊಂಡಲ್ಲಿ ಅಥವಾ ದಂಡನೆ ವಿಧಿಸಿದ್ದಲ್ಲಿ ಆತನಿಗೆ ಹೊರಡಿಸಲಾದ 'ಕಾರಣ ಕೇಳುವ ಜ್ಞಾಪನಕ್ಕೆ' ವಿವರಣೆಯನ್ನು ಸಲ್ಲಿಸಲು ಆತನಿಗೆ ಅವಕಾಶ ನೀಡಲೇ ಇಲ್ಲವೆಂದು ವಾದಿಸಲು ಸಾಧ್ಯವಾಗುವ ರೀತಿಯಲ್ಲಿ, ಆತನ ವಿರುದ್ಧದ ಈ ಇಲಾಖಾ ವಿಚಾರಣಾ ಪ್ರಕರಣವನ್ನು ಹಾಳು ಮಾಡಲು ಹಾಗು ಇಲಾಖಾ ವಿಚಾರಣಾ ಪ್ರಕರಣದ ದಾರಿಯನ್ನು ತಪ್ಪಿಸಲು ನಿರಂತರವಾಗಿ ಪ್ರಯತ್ನಿಸಿದ್ದ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಆತನು ಲಿಖಿತ ಹೇಳಿಕೆ/ ವಿವರಣೆ ಸಲ್ಲಿಸದೆ, ಪ್ರಸ್ತುತ ಆತನ ವಿರುದ್ಧದ ಇಲಾಖಾ ವಿಚಾರಣೆಯ ಪ್ರಾರಂಭದ ಹಂತದಿಂದಲೂ, ಸಂಪೂರ್ಣವಾಗಿ ನಕಾರಾತ್ಮಕ ಪ್ರತಿಕ್ರಿಯೆ (negative reaction) ನೀಡುತ್ತಲೆ ಮುಂದುವರೆದಿದ್ದರಿಂದ, ಆತನ ವಿರುದ್ಧ ಹೊರಡಿಸಲಾದ ಆರೋಪಗಳ ಸತ್ಯಾಸತ್ಯತೆಯನ್ನು ಕಂಡು ಕೊಳ್ಳಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು,

1957ರ ನಿಯಮ:11ರ ಅನ್ವಯ ಉಲ್ಲೇಖ(13)ರಲ್ಲಿನ ದಿನಾಂಕ 11.2.2009ರ ಆದೇಶದಲ್ಲಿ ಶ್ರೀ ಪದ್ಮನಾಭ ಕೇದಿಲಾಯ, ನಿವೃತ್ತ ಜಿಲ್ಲಾ ಹಾಗೂ ಸೆಷೆನ್ಸ್ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಕಾತಿ ಮಾಡಲಾಗಿತ್ತು.

ನಿವೃತ್ತ ಜಿಲ್ಲಾ ನ್ಯಾಯಾಧೀಶರು ಆದ ವಿಚಾರಣಾಧಿಕಾರಿಗಳು, ದಿನಾಂಕ 21.4.2010ರಂದು (ಉಲ್ಲೇಖ: 14) ಸಲ್ಲಿಸಿದ ಅವರ ವಿಚಾರಣಾ ವರದಿಯಲ್ಲಿ **"ಆಪಾದಿತರು (ಅಂದರೆ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು) ದೋಷಾರೋಪಣೆಯಲ್ಲಿ ನಮೂದಿಸಿದಂತೆ, 1966ರ ಸರ್ಕಾರಿ ನೌಕರರ ನಡತೆ ನಿಯಮಾವಳಿ 3 ರಂತೆ ಗಂಭೀರ ತಪ್ಪು ಮಾಡಿರುವುದು ಸ್ಪಷ್ಟವಾಗಿ ಸಾಭೀತಾಗಿದೆ. ತನ್ನ ಕೆಲಸದಲ್ಲಿ ನಿರ್ಲಕ್ಷತೆ, ಇತರರಿಗೆ ಮೋಸ, ವಂಚನೆ, ಹಣದ ದುರುಪಯೋಗ, ಇತ್ಯಾದಿ ತಪ್ಪು ಮಾಡಿರುವುದು ಸ್ಪಷ್ಟವಾಗಿ ಕಂಡು ಬಂದಿದೆ. ಆದ್ದರಿಂದ 9ನೇ ಆರೋಪ ಹೊರತುಪಡಿಸಿ ಉಳಿದ ಆರೋಪಗಳು ಸಾಬೀತಾಗಿರುತ್ತದೆ" ಎಂದು ಸ್ಪಷ್ಟವಾಗಿ ತಿಳಿಸಿರುತ್ತಾರೆ.**

ಈ ವಿಚಾರಣಾ ವರದಿಯನ್ನು ಈ ಆದೇಶದ ಒಂದು ಭಾಗವನ್ನಾಗಿಸಿ, ಗುರುತಿಸಲಾಗಿದೆ,

ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 6 ಎಸ್ ಡಿ ಇ 91, ದಿನಾಂಕ 21.3.1992ರ ಅನ್ವಯ, ಆಪಾದಿತ ಸರ್ಕಾರಿ ನೌಕರನಿಗೆ, ಈ ನಿರ್ದೇಶನಾಲಯದ ಉಲ್ಲೇಖ(15)ರಲ್ಲಿನ 2ನೇ ಕಾರಣ ಕೇಳುವ ಜ್ಞಾಪನದೊಂದಿಗೆ ಇಲಾಖಾ ವಿಚಾರಣಾ ವರದಿಯನ್ನು ಜಾರಿ ಮಾಡಿ, ಆತನ ಲಿಖಿತ ಹೇಳಿಕೆಯನ್ನು 15 ದಿನಗಳ ಒಳಗಾಗಿ ಸಲ್ಲಿಸುವಂತೆ ಆತನಿಗೆ ಸೂಚಿಸಲಾಗಿತ್ತು.

ಆದರೆ, ಆಪಾದಿತ ಸರ್ಕಾರಿ ನೌಕರನು, ಆತನಿಗೆ ಉಲ್ಲೇಖ(5)ರಲ್ಲಿನ ಕಾರಣ ಕೇಳುವ ಜ್ಞಾಪನ ನೀಡಿ ಆತನ ಲಿಖಿತ ವಿವರಣೆ ನೀಡುವಂತೆ ಸೂಚಿಸಲಾದ ಸಂದರ್ಭದಲ್ಲಿ ಅನುಸರಿಸಲಾಗಿದ್ದ ತಂತ್ರವನ್ನೇ (tactic) ಆತನು ದಿನಾಂಕ 10.5.2010ರಂದು ಸ್ವೀಕರಿಸಿದ 2ನೇ ಕಾರಣ ಕೇಳುವ ಜ್ಞಾಪನಕ್ಕೆ ಆತನ ವಿವರಣೆ ಸಲ್ಲಿಸದೇ ದಿನಾಂಕ 24.5.2010ರಂದು ಸಲ್ಲಿಸಿದ ಆತನ ಕೋರಿಕೆಯಲ್ಲಿ **"ಅದಕ್ಕೆ ಉತ್ತರ ನೀಡಲು ನನಗೆ ಕೆಲವೊಂದು ದಾಖಲಾತಿಗಳು ಬೇಕಾಗುತ್ತವೆ. ಅಂತೆಯೇ ನನ್ನ ಕಾನೂನು ಸಲಹೆಗಾರರು ತುರ್ತು ಕೆಲಸದ ನಿಮಿತ್ತ ಸದ್ಯದಲ್ಲಿ ನನಗೆ ಅಲಭ್ಯರಿರುತ್ತಾರೆ. ಅವರ ಸಲಹೆ ಪಡೆದು ನಾನು ಮೇಲಿನ ಉಲ್ಲೇಖದ ಜ್ಞಾಪನಕ್ಕೆ ಉತ್ತರ ನೀಡಬೇಕಾಗಿರುವುದರಿಂದ ನನಗೆ ನೀಡಲಾಗಿರುವ ಕಾಲಾವಕಾಶ ಮುಗಿದ ನಂತರ ಮತ್ತೆ 60 ದಿನಗಳ ಕಾಲಾವಕಾಶ ನೀಡಬೇಕೆಂದು ಕೋರುತ್ತೇನೆ, ಮತ್ತು ನನಗೆ ಬೇಕಾದ ದಾಖಲಾತಿಗಳ ಬಗ್ಗೆ ಪ್ರತ್ಯೇಕ ಮನವಿಯನ್ನು ಸಲ್ಲಿಸುತ್ತೇನೆಂದು"** ತಿಳಿಸಿರುತ್ತಾರೆ.

ಈ ಆಪಾದಿತ ನೌಕರರು, ಮತ್ತು ಉಲ್ಲೇಖ(16)ರಲ್ಲಿರುವ ದಿನಾಂಕ 24.5.2010ರಂದು ಸಲ್ಲಿಸಿದ ಮನವಿಯನ್ನು ಪರಿಶೀಲಿಸುವ ಹಂತದಲ್ಲಿ ದಿನಾಂಕ 2.6.2010 ರಂದು ಸಲ್ಲಿಸಿದ ಅವರ ಇನ್ನೊಂದು ಮನವಿಯಲ್ಲಿ ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯ ಅಕ್ವಿಟೆನ್ಸ್ ಪ್ರತಿ, ನಗದು ಪುಸ್ತಕದ ಪ್ರತಿ ಹಾಗೂ ಇನ್ನಿತರ ದಾಖಲಾತಿಗಳನ್ನು ಒದಗಿಸುವಂತೆ ಕೋರಿದ್ದರು.

ಮೇಲಿನ ದಿನಾಂಕ 24.5.2010ರಂದು ಹಾಗೂ ದಿನಾಂಕ 2.6.2010ರಂದು ಸಲ್ಲಿಸಿದ ಅವರ ಮನವಿಗಳನ್ನು ಪರಿಶೀಲಿಸಿ, ಅವರ ಮನವಿಯ ದಿನಾಂಕ 24.5.2010ಕ್ಕೆ ಸಂಬಂಧಿಸಿದಂತೆ "ಅವರ ಕಾನೂನು ಸಲಹೆಗಾರರು ತುರ್ತು ಕೆಲಸದ ನಿಮಿತ್ತ ಅಲಭ್ಯರಿರುತ್ತಾರೆ" ಎಂದು ನಮೂದಿಸಿ 60 ದಿನಗಳ ಕಾಲಾವಕಾಶವನ್ನು ನೀಡಬೇಕೆಂಬುದನ್ನು ಪರಿಶೀಲಿಸಿ, "ಆಪಾದಿತ ಸರ್ಕಾರಿ ನೌಕರರ ಕಾನೂನು ಸಲಹೆಗಾರರು" ಲಭ್ಯವಿರದೇ ಇರುವುದು ಅಪಾದಿತರ ವೈಯಕ್ತಿಕ ಸಮಸ್ಯೆಯಾಗಿದ್ದರಿಂದ, ಅವರ ಲಿಖಿತ ಹೇಳಿಕೆ ಸಲ್ಲಿಸಲು ಹೆಚ್ಚಿನ ಕಾಲಾವಕಾಶ ನೀಡಲು ಅದೊಂದು ಸೂಕ್ತವಾದ ಕಾರಣವಲ್ಲವೆಂದು, ಹಾಗೂ ಉಲ್ಲೇಖ 16ರಲ್ಲಿರುವ ಅವರ ಮನವಿ ದಿನಾಂಕ 2.6.2010ಕ್ಕೆ ಸಂಬಂಧಿಸಿದಂತೆ ಅದರಲ್ಲಿನ ಅಂಶಗಳನ್ನು ಪರಿಶೀಲಿಸಿ, ಅವರು ಒದಗಿಸುವಂತೆ ನಮೂದಿಸಲಾದ ಅಕ್ವಿಟೆನ್ಸ್ ಹಾಗೂ ಅದಕ್ಕೆ ಸಂಬಂಧಿಸಿದ ನಗದು ಪುಸ್ತಕವನ್ನು ಇಲಾಖಾ ವಿಚಾರಣಾ ಸಂದರ್ಭದಲ್ಲಿ ಈ ಆಪಾದಿತ ಸರ್ಕಾರಿ ನೌಕರರ ಉಪಸ್ಥಿತಿಯಲ್ಲಿ ಪರಿಶೀಲಿಸಿ, ಇಲಾಖಾ ವಿಚಾರಣಾ ವರದಿಯಲ್ಲಿ ದಾಖಲಿಸಿ, ವಿವರಿಸಿದ್ದರಿಂದ, ಹಾಗೂ ಈ ವಾಸ್ತವಾಂಶವು ಆಪಾದಿತ ನೌಕರರಾದ ಶ್ರೀ ಆದಿಕುಮಾರ್, ಅವರಿಗೆ ಸಂಪೂರ್ಣವಾಗಿ ಮಾಹಿತಿ ಇದ್ದಾಗಲೂ, ಇಲಾಖಾ ವರದಿಗೆ ಸಂಬಂಧಿಸಿದಂತೆ ಅವರ ವಿರುದ್ಧ ಕ್ರಮ ಜರುಗಿಸುವುದನ್ನು ತಡೆಗಟ್ಟಲು ಅಥವಾ ಅಂಥಹ ಕ್ರಮ ಜರುಗಿಸುವುದನ್ನು ಮುಂದೂಡುವ ಉದ್ದೇಶದಿಂದ, ಮೇಲಿನ ದಿನಾಂಕ 2.6.2010ರ ಮನವಿಯಲ್ಲಿ ಅದೇ ದಾಖಲಾತಿಗಳನ್ನು ಒದಗಿಸುವಂತೆ ಕೋರಿದ್ದು, ಸ್ಪಷ್ಟವಾಗಿ ಕಂಡು ಬರುತ್ತದೆಯಾದ್ದರಿಂದ, ಉಲ್ಲೇಖ (17) ರಲ್ಲಿ ತಿಳಿಸಲಾದ ಹಿಂಬರಹದ ದಿನಾಂಕ 15.6.2010ರಲ್ಲಿ ಅವರ ಕೋರಿಕೆಯನ್ನು ತಿರಸ್ಕರಿಸಲಾಗಿತ್ತು. ಆದಾಗ್ಯೂ, ಅದೇ ಹಿಂಬರಹ ಕೊನೆಯ ಕಂಡಿಕೆಯಲ್ಲಿ "ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 12 ಸೇಇವಿ 94, ದಿನಾಂಕ 7.12.1994ರಲ್ಲಿ ಆಪಾದಿತ ಸರ್ಕಾರಿ ನೌಕರರಿಗೆ ಇಲಾಖಾ ವಿಚಾರಣೆ ನಂತರ ದಂಡನೆಯನ್ನು ವಿಧಿಸುವ ಕುರಿತು ನೀಡಲಾದ ಸೂಚನೆಯಲ್ಲಿ "ಆಪಾದಿತ ಸರ್ಕಾರಿ ನೌಕರನಿಗೆ ಇಲಾಖಾ ವಿಚಾರಣಾ ವರದಿಯನ್ನು ಕಳುಹಿಸಿ, ಅವರಿಗೆ ಸೂಕ್ತ ಕಾಲಾವಕಾಶವನ್ನು ನೀಡಿ, ಅವರ ಹೇಳಿಕೆಯನ್ನು ಪಡೆದು, ತದನಂತರ ಸೂಕ್ತ ದಂಡನೆಯನ್ನು ವಿಧಿಸಬಹುದು" ಎಂದು ಸೂಚಿಸಿದ್ದನ್ನು ವಿವರಿಸಿದ್ದಾಗ್ಯೂ, ಅದೇ ಕಂಡಿಕೆಯಲ್ಲಿ, ಈ ಹಿಂಬರಹ ತಲುಪಿದ 15 ದಿನಗಳ ಒಳಗಾಗಿ ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಆದರೆ, ಈ ಆಪಾದಿತ ಸರ್ಕಾರಿ ನೌಕರರಿಗೆ, ದಿನಾಂಕ 27.4.2010ರಂದು ಹೊರಡಿಸಲಾದ 2ನೇ ಕಾರಣ ಕೇಳುವ ಜ್ಞಾಪನವನ್ನು ದಿನಾಂಕ 10.5.2010ರಂದು ಸ್ವೀಕರಿಸಿದ್ದು, ಹಾಗೂ ಅವರಿಗೆ ನೀಡಲಾದ ಹಿಂಬರಹದ ದಿನಾಂಕ 15.6.2010ನ್ನು ದಿನಾಂಕ 22.6.2010ರಂದು ಸ್ವೀಕರಿಸಿದ್ದು, ಅವರಿಗೆ ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸಲು ನೈಸರ್ಗಿಕ ನ್ಯಾಯದ ತತ್ವದ ಅನ್ವಯ (Principles of natural justice) ಗರಿಷ್ಠ (maximum) ಒಂದೂವರೆ ತಿಂಗಳಷ್ಟು ಕಾಲಾವಕಾಶವಿತ್ತಾದರೂ, ಈ ಅವಧಿಯ ಒಳಗಾಗಿ ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸದೆ, ಉಲ್ಲೇಖ 18ರಲ್ಲಿರುವ ಅವರ ಮತ್ತೊಂದು ಮನವಿ ದಿನಾಂಕ 6.7.2010ರಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಒಂದು ತೀರ್ಪನ್ನು ವಿವರಿಸಿ, ಅವರಿಗೆ ಬೇಕಾದ ದಾಖಲಾತಿಗಳನ್ನು ಒದಗಿಸುವಂತೆ ಮಾಹಿತಿ ಹಕ್ಕು ಅಧಿನಿಯಮಗಳ ಅಡಿಯಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಮನವಿ ಪತ್ರ ಸಲ್ಲಿಸಿದ್ದು, ಅವರಿಗೆ ಅವುಗಳು ದೊರಕಿದ ತಕ್ಷಣ 2ನೇ ಕಾರಣ ಕೇಳುವ ಜ್ಞಾಪನಕ್ಕೆ ಉತ್ತರಿಸಲು ಸಾಧ್ಯವಾಗುವುದರಿಂದ, ಸೂಕ್ತ ಕಾಲಾವಕಾಶ ನೀಡಬೇಕೆಂದು ಪರಿಶೀಲಿಸಲಾಗಿ, ಅವರ ಮನವಿ ದಿನಾಂಕ 2.6.2010ರಲ್ಲಿ "ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ತಿದ್ದುಪಡಿಯಾದ ಅಕ್ವಿಟೆನ್ಸ್ ಪ್ರತಿ ಹಾಗೂ ನಗದು ಪುಸ್ತಕ ಒದಗಿಸುವಂತೆ ಕೋರಿದ್ದನ್ನು ಪರಿಶೀಲಿಸಲಾಗಿ, ಅವರು ಮಾಹಿತಿ ಹಕ್ಕು

ಅಧಿನಿಯಮಗಳ ಅಡಿಯಲ್ಲಿ ಸಲ್ಲಿಸಲಾಗಿದೆ ಎನ್ನಲಾದ ಅವರ ಅರ್ಜಿಗೂ, ಹಾಗೂ ಅವರು ದಿನಾಂಕ 2.6.2010ರಂದು ಸಲ್ಲಿಸಿದ ಅರ್ಜಿಯಲ್ಲಿನ ದಾಖಲಾತಿಗಳು ಒಂದಕ್ಕೊಂದು ಸಂಬಂಧವಿಲ್ಲದ ದಾಖಲಾತಿಗಳಾಗಿದ್ದರಿಂದ, ಹಾಗೂ ಅವರು ಅವರ ದಿನಾಂಕ 6.7.2010ರ ಮನವಿಯಲ್ಲಿ ತಿಳಿಸಲಾದ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರತಿಯನ್ನು ಹಾಗೂ ಅವರು ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಮಾಹಿತಿ ಹಕ್ಕು ಅಧಿನಿಯಮಗಳ ಅಡಿಯಲ್ಲಿ ಸಲ್ಲಿಸಲಾಗಿದೆ ಎನ್ನಲಾದ ಅರ್ಜಿಗಳ ಪ್ರತಿಯನ್ನು ಲಗತ್ತಿಸಿಲ್ಲವಾದ್ದರಿಂದ, ಹಾಗೂ, ಮಾಹಿತಿ ಹಕ್ಕು ಅಧಿನಿಯಮಗಳ ಅಡಿಯಲ್ಲಿ ಸಲ್ಲಿಸಲಾಗಿದೆ ಎನ್ನಲಾದ ಅರ್ಜಿಗೆ ಹಾಗೂ, ಅವರ ವಿರುದ್ಧದ ಇಲಾಖಾ ವಿಚಾರಣಾ ವರದಿಗೆ ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸುವುದಕ್ಕೆ, ಒಂದಕ್ಕೊಂದು ಸಂಬಂಧಪಟ್ಟಿಲ್ಲವಾದ್ದರಿಂದ, ಉಲ್ಲೇಖ(17) ರಲ್ಲಿ ತಿಳಿಸಲಾದ ಅವರಿಗೆ ನೀಡಲಾದ ಮತ್ತೊಂದು ಹಿಂಬರಹದ ದಿನಾಂಕ 27.7.2010 ರಲ್ಲಿ ಅವರ ಕೋರಿಕೆ ದಿನಾಂಕ 6.7.2010ನ್ನು ತಿರಸ್ಕರಿಸಲಾಗಿದೆ.

ಒಟ್ಟಾರೆ ಆರೋಪಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಇವರಿಗೆ ಹೊರಡಿಸಲಾದ 2ನೇ ಕಾರಣ ಕೇಳುವ ಜ್ಞಾಪನ ದಿನಾಂಕ 27.4.2010ರ ನಂತರ ದಿನಾಂಕ 6.7.2010ರ ವರೆಗೆ, ಆಪಾದಿತ ಸರ್ಕಾರಿ ನೌಕರರು, ಅವರ 3ನೇ ಅರ್ಜಿಯನ್ನು ಸಲ್ಲಿಸುವ ವರೆಗಿನ ಪತ್ರ ವ್ಯವಹಾರಗಳನ್ನು ಪರಿಶೀಲಿಸಲಾಗಿ, ಅಪಾದಿತ ಸರ್ಕಾರಿ ನೌಕರರು, ಅವರ 2ನೇ ಕಾರಣ ಕೇಳುವ ಜ್ಞಾಪನಕ್ಕೆ ಲಿಖಿತ ಹೇಳಿಕೆ ಸಲ್ಲಿಸುವುದನ್ನು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳುವ (avoid) ಪ್ರಯತ್ನವನ್ನು ಮಾಡುತ್ತಿರುವುದಾಗಿ, ಹಾಗೂ ಅವರಿಗೆ ಜಾರಿ ಮಾಡಲಾದ ವಿಚಾರಣಾ ವರದಿಯನ್ವಯ **ಅವರ ವಿರುದ್ಧದ 12 ಆರೋಪಗಳಲ್ಲಿ 11 ಆರೋಪಗಳು ಸಾಬೀತಾಗಿದ್ದರಿಂದ,** ಅವರಿಗೆ ದಂಡನೆ ವಿಧಿಸಿದಲ್ಲಿ, ಅವರಿಗೆ 2ನೇ ಕಾರಣ ಕೇಳುವ ಜ್ಞಾಪನಕ್ಕೆ ವಿವರಣೆ ಸಲ್ಲಿಸಲು ಕಾಲಾವಕಾಶ ನೀಡಿಲ್ಲವೆಂದು (ಸಾಕಷ್ಟು ಕಾಲಾವಕಾಶ ನೀಡಿದ್ದಾಗ್ಯೂ) ವಾದಿಸುವ ದುರುದ್ದೇಶದಿಂದ, ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸಿಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತದೆ.

ಒಟ್ಟಾರೆ, ಆಪಾದಿತ ಸರ್ಕಾರಿ ನೌಕರರು, ಅವರ ಮೇಲಿನ 12 ಆರೋಪಗಳಿಗೆ ಸಂಬಂಧಿಸಿದಂತೆ, ಅವರಿಗೆ ದಿನಾಂಕ 17.9.2008ರಂದು ಹೊರಡಿಸಲಾದ "ಕಾರಣ ಕೇಳುವ ಜ್ಞಾಪನಕ್ಕೆ" ಮತ್ತು ಅವರ ವಿರುದ್ಧದ ಇಲಾಖಾ ವಿಚಾರಣೆ ನಂತರ, ವಿಚಾರಣಾ ವರದಿಯೊಂದಿಗೆ, ಅವರಿಗೆ ದಿನಾಂಕ 27.4.2010ರಂದು ಹೊರಡಿಸಲಾದ "2ನೇ ಕಾರಣ ಕೇಳುವ ಜ್ಞಾಪನಕ್ಕೆ" ಅವರ ವಿವರಣೆಯನ್ನು ಸಲ್ಲಿಸದೇ, ಅವರ ವಿರುದ್ಧದ ಆರೋಪಗಳನ್ನು ಸ್ವತಃ ಒಪ್ಪಿಕೊಂಡಿದ್ದರಿಂದ, ಹಾಗೂ ಅವರ ವಿರುದ್ಧದ ಇಲಾಖಾ ವಿಚಾರಣಾ ವರದಿಯನ್ನು ಒಪ್ಪಿಕೊಂಡಿದ್ದರಿಂದ, ಅವರ ವಿರುದ್ಧದ ಒಟ್ಟು 12 ಆರೋಪಗಳಲ್ಲಿ 11 ಆರೋಪಗಳು, ನ್ಯಾಯಬದ್ಧವಾಗಿ ರುಜುವಾತಾಗಿದ್ದರಿಂದ, ಇಲಾಖಾ ವಿಚಾರಣೆಯ ವರದಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡು "ಮಾಡಿರುವ ತಪ್ಪಿಗೆ ಸಮನಾದ ಶಿಕ್ಷೆ" ಎಂಬಂತೆ, ಆಪಾದಿತ ಸರ್ಕಾರಿ ನೌಕರನಿಗೆ ಸೂಕ್ತವಾದ ದಂಡನೆಯನ್ನು ವಿಧಿಸತಕ್ಕದ್ದಾಗಿದೆ. ಹಾಗೂ ಈ ಆಪಾದಿತ ನೌಕರರಾದ ಶ್ರೀ ಆದಿಕುಮಾರ್, ಇವರ ವಿರುದ್ಧದ ಕೆಲವು ಆರೋಪಗಳಿಗೆ ಸಂಬಂಧಿಸಿದಂತೆ, ಈ ಕೆಳಗೆ ತಿಳಿಸಲಾದ ಅಂಶಗಳನ್ನು ವಿವರಿಸುವುದರೊಂದಿಗೆ ಈ ಆಪಾದಿತ ಸರ್ಕಾರಿ ನೌಕರರ ಇತ್ತೀಚಿನ ಸಂಕ್ಷಿಪ್ತ ಸೇವಾ ಚರಿತ್ರೆಯನ್ನು (ಈ ಇಲಾಖಾ ವಿಚಾರಣೆಗೆ ಸಂಬಂಧಪಟ್ಟಿಲ್ಲವಾದರೂ) ಈ ಕೆಳಗೆ ತಿಳಿಸಲಾಗಿದೆ:-

ಎ) ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಇವರ ಅನಧಿಕೃತ ಗೈರು ಹಾಜರಾತಿ, ದುರ್ನಡತೆ, ಕರ್ತವ್ಯಲೋಪ, ಸರ್ಕಾರದ ಹಣದ ದುರುಪಯೋಗ, ಇತ್ಯಾದಿ ಆರೋಪಗಳಿಗೆ ಸಂಬಂಧಿಸಿದಂತೆ, ಈ ನಿರ್ದೇಶನಾಲಯದ ಆದೇಶದ ಸಂಖ್ಯೆ:ಆಡಳಿತ/216/2008-09, ದಿನಾಂಕ 17.7.2008ರಲ್ಲಿ ಅವರನ್ನು ಅಮಾನತ್ತುಗೊಳಿಸಲಾದ ಈ ಅದೇಶವನ್ನು ಅವರೇ ತಿಳಿಸಲಾದ ಅವರ ಮನೆ ವಿಳಾಸಕ್ಕೆ (ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು, ಸಂಖ್ಯೆ:23/24, ಟೀಚರ್ಸ್ ಕಾಲನಿ, ವಿ.ವಿ. ಬಡಾವಣೆ, ಬಂ.ಶ್ರೀ ಸರ್ಕಲ್ ಹತ್ತಿರ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ) ಕಳುಹಿಸಲಾಗಿದ್ದನ್ನು "ಸ್ವೀಕರಿಸಲು ನಿರಾಕರಿಸಿರುವ" ಕುರಿತು ["refuse to receive"] ಎಂದು ಅಂಚೆ ಇಲಾಖೆಯ ಷರಾಗಳನ್ನೊಳಗೊಂಡ ಕವರನ್ನು ಪರಿಶೀಲಿಸಲಾಗಿ ಆಪಾದಿತ ಸರ್ಕಾರಿ ನೌಕರರು ಉದ್ದೇಶಪೂರ್ವಕವಾಗಿ ತಿರಸ್ಕರಿಸಿರುವುದು ಕಂಡು ಬರುತ್ತದೆ.

ಬಿ) ಅದೇ ರೀತಿ, ಆಪಾದಿತ ಸರ್ಕಾರಿ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು:1957ರ ನಿಯಮ:11ರ ಅಡಿಯಲ್ಲಿ ದಿನಾಂಕ 11.9.2009ರಂದು ಹೊರಡಿಸಲಾದ "ಕಾರಣ ಕೇಳುವ ಜ್ಞಾಪನವನ್ನು" ಅವರ ಅದೇ ಮನೆ ವಿಳಾಸಕ್ಕೆ ಕಳುಹಿಸಲಾಗಿತ್ತಾದರೂ, "not found daily" ಎಂದು ಅಂಚೆ ಇಲಾಖೆಯು ಹಿಂತಿರುಗಿಸಿರುತ್ತಾರೆ.

ಅಂತಿಮವಾಗಿ, ಈ ಜ್ಞಾಪನವನ್ನು ಅವರಿಗೆ ದಿನಾಂಕ 13.10.2008ರಂದು ಜಾರಿ ಮಾಡಲಾಗಿತ್ತು.

ಸಿ) ಈ ನಿರ್ದೇಶನಾಲಯದ ಆದೇಶದ ಸಂಖ್ಯೆ:ಆಡಳಿತ/112/2008-09, ದಿನಾಂಕ 4.11.2008ರಲ್ಲಿ ಅವರನ್ನು ಸೇವೆಗೆ ಪುನರ್ ಸ್ಥಾಪಿಸಿ, ಆದೇಶ ಹೊರಡಿಸಿದ ನಂತರ ಆ ಆದೇಶದ ಪ್ರತಿಯನ್ನು, ಸ್ವತಃ ಅವರೇ ನೀಡಲಾದ ವಿಳಾಸಕ್ಕೆ ಕಳುಹಿಸಲಾಗಿದ್ದರೂ, ಈ ಆದೇಶವನ್ನು ಒಳಗೊಂಡಿದ್ದ ಆ ಅಂಚೆ ಕವರು "person not found during delivery time" ಎಂಬ ಷರಾದೊಂದಿಗೆ ಹಿಂತಿರುಗಿ ಬಂದಿರುತ್ತದೆ.

ಈ ಬಗ್ಗೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ರಾಮನಗರ ಮತ್ತು ಕೋಲಾರ ಇವರಿಗೆ ದಿನಾಂಕ 10.12.2008 ರಂದು ಪತ್ರ ಬರೆಯಲಾಗಿತ್ತು.

ಡಿ) ಅದೇ ವಿಷಯಕ್ಕೆ ಸಂಬಂಧಿಸಿದಂತೆ, ಆಪಾದಿತ ಸರ್ಕಾರಿ ನೌಕರರು ಅಮಾನತ್ತಿನ ಅವಧಿಯಲ್ಲಿ ಅವರ ಮನೆ ವಿಳಾಸ ನಮೂದಿಸದೇ ಸರ್ಕಾರಕ್ಕೆ ದಿನಾಂಕ 25.8.2008ರಂದು ಹಾಗೂ ದಿನಾಂಕ 18.10.2007ರಂದು, ದಿನಾಂಕ 27.10.2007ರಂದು, ಸಲ್ಲಿಸಿದ ಅವರ ಮನವಿಗಳಲ್ಲಿ ಅವರ ಮನೆ ವಿಳಾಸವನ್ನು ನಮೂದಿಸದೇ ಸಲ್ಲಿಸಿದ್ದನ್ನು ತೀವ್ರವಾಗಿ ಪರಿಗಣಿಸಿ ಇದೊಂದು ಅವರ "ದುರ್ವರ್ತನೆ" ಎಂದು ಅದೇ ಆಪಾದಿತ ಸರ್ಕಾರಿ ನೌಕರರಿಗೆ ದಿನಾಂಕ 7.11.2008 ರಂದು ಹೊರಡಿಸಲಾದ ಜ್ಞಾಪನದಲ್ಲಿ ಅವರಿಗೆ ತಿಳಿಸಲಾಗಿತ್ತು.

ಇ) ಒಟ್ಟಾರೆ, ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಅವರನ್ನು ಅಮಾನತ್ತುಗೊಳಿಸಲಾದ ಆದೇಶವನ್ನು ಹಾಗೂ ಅವರನ್ನು ಸೇವೆಗೆ ಪುನರ್ ಸ್ಥಾಪಿಸಿದ ಆದೇಶವನ್ನು ಪಡೆದುಕೊಳ್ಳಲು ಉದ್ದೇಶಪೂರ್ವಕವಾಗಿ ತಪ್ಪಿಸಿಕೊಳ್ಳಲು (avoid) ಅದೇ ರೀತಿ, ಅವರಿಗೆ ಉಲ್ಲೇಖ (5)

ರಲ್ಲಿನ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು, 1957ರ ನಿಯಮ: 11ರ ಅಡಿಯಲ್ಲಿ ಹೊರಡಿಸಲಾದ ಅವರ ವಿರುದ್ಧದ ಆರೋಪಗಳನ್ನು ಕಾರಣ ಕೇಳುವ ಜ್ಞಾಪನವನ್ನು ಸ್ವೀಕರಿಸಲು ಹಾಗೂ ಅದೇ ರೀತಿ ಕಾರಣ ಕೇಳುವ ಜ್ಞಾಪನಕ್ಕೆ ಅವರಿಗೆ ಸಾಕಷ್ಟು ಸಮಯಾವಕಾಶ (maximum) ನೀಡಿದ್ದರೂ, ಲಿಖಿತ ವಿವರಣೆ ಸಲ್ಲಿಸಲು ಹಾಗೂ ಅವರ ವಿರುದ್ಧದ ಇಲಾಖಾ ವಿಚಾರಣೆ ನಂತರ, ಅವರಿಗೆ ಇಲಾಖಾ ವಿಚಾರಣಾ ವರದಿಯನ್ನು ಒದಗಿಸಿ, ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಸಾಕಷ್ಟು ಕಾಲಾವಕಾಶ ನೀಡಲಾಗಿದ್ದರೂ ((maximum) ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸದೇ, ಅನವಶ್ಯಕವಾದ ಮನವಿಯನ್ನು ಸಲ್ಲಿಸುವುದರಲ್ಲಿ ಸಮಯವನ್ನು ವ್ಯರ್ಥಪಡಿಸಿ, ಒಟ್ಟಾರೆ ಅವರ ಲಿಖಿತ ಹೇಳಿಕೆ ಸಲ್ಲಿಸುವುದನ್ನು ನಿರಂತರವಾಗಿ ತಪ್ಪಿಸಿಕೊಳ್ಳುವ (avoid) ಪ್ರಯತ್ನವನ್ನು ಇವರು ಮಾಡಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ ಹಾಗೂ ಇಂತಹ ಅವರ ನಡತೆಯು ಆತನ ಮೇಲೆ ಹೊರಿಸಲಾದ ಎಲ್ಲಾ ಆರೋಪಗಳನ್ನು ಒಪ್ಪಿಕೊಂಡಂತಾಗುತ್ತದೆ ಎಂದು ಸ್ಪಷ್ಟವಾಗಿ ಸಾಬೀತಾಗುತ್ತದೆ. ಅಲ್ಲದೆ, ಇಂತಹ ಅವರ ನಡತೆಯು, ಅವರಿಗೆ ದಂಡನೆ ವಿಧಿಸಿದಲ್ಲಿ, ಅವರಿಗೆ ಕಾಲಾವಕಾಶ ನೀಡಿಲ್ಲವೆಂದು ವಾದಿಸಬಹುದಾದ ದುರುದ್ದೇಶದಿಂದಲೂ ಎಂದು ಸ್ಪಷ್ಟವಾಗಿ ಕಂಡು ಬರುತ್ತದೆ.

(ಎಫ್) ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಇವರ ವಿರುದ್ಧದ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ, ಸಂಕ್ಷಿಪ್ತವಾಗಿ ವಿವರಿಸುವುದಾದಲ್ಲಿ ಅವರ ವಿರುದ್ಧ ಹೊರಿಸಲಾದ ಒಟ್ಟು 12–ಆರೋಪಗಳಲ್ಲಿ, 11 ಆರೋಪಗಳು ಸಾಬೀತಾಗಿರುವುದಾಗಿ ವಿಚಾರಣಾಧಿಕಾರಿಗಳು ಸಲ್ಲಿಸಿದ ವರದಿಯಲ್ಲಿ ತಿಳಿಸಿರುತ್ತಾರೆ.

ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಇವರು ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಕಚೇರಿ ಮುಖ್ಯಸ್ಥರು ದಿನಾಂಕ 21.5.2007ರಂದು ಸಲ್ಲಿಸಿದ ವರದಿಯೊಂದರಲ್ಲಿ ಆಪಾದಿತರ ಅನಧಿಕೃತ ಗೈರು ಹಾಜರಾತಿ, ಕರ್ತವ್ಯಲೋಪ ವಿವರಿಸಿ, ಪರ್ಯಾಯ ವ್ಯವಸ್ಥೆ ಮಾಡುವಂತೆ ತಿಳಿಸಲಾದ ಅಲ್ಪಾವಧಿಯಲ್ಲಿಯೇ ದಿನಾಂಕ 13.7.2007ರ ಅವರ ಇನ್ನೊಂದು ಪತ್ರದಲ್ಲಿ (ಇದು ಆಪಾದಿತ ಸರ್ಕಾರಿ ನೌಕರರ ಸ್ವಂತ ಕೈಬರಹದಿಂದ ಬರೆಯಲಾದ ಪತ್ರ) ಶ್ರೀ ಆದಿಕುಮಾರ್ (ಆಪಾದಿತ ಸರ್ಕಾರಿ ನೌಕರ) ಪ್ರಥಮ ದರ್ಜೆ ಸಹಾಯಕರು ಈ ಕಚೇರಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಅವರನ್ನು ವರ್ಗಾವಣೆ ಮಾಡಬಾರದಾಗಿ ವಿನಂತಿಸಿಕೊಳ್ಳುತ್ತೇನೆ" ಎಂದು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ, ಈ ನಿರ್ದೇಶನಾಲಯದ ಪತ್ರದ ದಿನಾಂಕ 31.7.2007ರಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು (ಗ್ರಾಮಾಂತರ) ಇವರು ಮೇಲೆ ತಿಳಿಸಲಾದ ಎರಡೂ ಪತ್ರಗಳಲ್ಲಿನ ದ್ವಂದ್ವ ಹೇಳಿಕೆ ಕುರಿತು (dual statement) ವಿವರಣೆ ನೀಡುವಂತೆ ಸೂಚಿಸಲಾಗಿತ್ತು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ದಿನಾಂಕ 8.8.2008ರಂದು ಸಲ್ಲಿಸಿದ ವಿವರಣೆಯಲ್ಲಿ ಇನ್ನಿತರ ವಿಷಯಗಳೊಂದಿಗೆ "ಶ್ರೀ ಆದಿಕುಮಾರ್ ಪ್ರಥಮ ದರ್ಜೆ ಸಹಾಯಕರು ದಿನಾಂಕ 13.7.2007ರಂದು ದೂರವಾಣಿ ಮುಖಾಂತರ ನನಗೆ ಕರೆ ಮಾಡಿ, ಅವರ ವೈಯಕ್ತಿಕ ವಿಚಾರದ ಬಗ್ಗೆ ಒಂದು ಮನವಿಯನ್ನು ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಇವರಿಗೆ ಇಂದೇ ತುರ್ತಾಗಿ ಸಲ್ಲಿಸಬೇಕಾಗಿದ್ದು, ಅದಕ್ಕೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಾದ ನನ್ನ ಸಹಿ ಅಗತ್ಯವೆಂದು ತಿಳಿಸಿದರು. ಆದ್ದರಿಂದ ಬೆಳಿಗ್ಗೆ 9.30 ಗಂಟೆಗೆ ಕಚೇರಿಗೆ ಬರಲು ಅವರಿಗೆ ಸೂಚಿಸಿ, ನಾನು ಕೂಡ ಕಚೇರಿಗೆ ಹಾಜರಾದೆನು. 15 ನಿಮಿಷಗಳ ವರೆಗೆ ಇವರು (ಅಂದರೆ ಆಪಾದಿತ ಸರ್ಕಾರಿ ನೌಕರರು) ಕಚೇರಿಗೆ ಬರದ ಕಾರಣ 9.45 ಗಂಟೆಗೆ ಕಚೇರಿಯಿಂದ ಹೊರಡಲು ನಾನು ಸಿದ್ದವಾದೆನು. ಇದೇ ಸಮಯದಲ್ಲಿ ಇವರು (ಅಂದರೆ ಆಪಾದಿತ ಸರ್ಕಾರಿ ನೌಕರರು) ಕಚೇರಿಗೆ ಬಂದು, ಒಂದು ನಿವೇದನೆಯನ್ನು ತೋರಿಸಿ, ಈ ಮನವಿ ಪತ್ರವನ್ನು ನಿರ್ದೇಶಕರಿಗೆ ಈ ದಿನವೇ ತುರ್ತಾಗಿ ಕಳುಹಿಸಬೇಕಾಗಿದೆ. ನೀವು ಪ್ರವಾಸದಿಂದ ಹಿಂತಿರುಗುವುದು ವಿಳಂಬವಾಗುವುದೆಂದು ತಿಳಿಸಿ ಆತುರ–ಆತುರವಾಗಿ ನಿವೇದನೆಗೆ ಸಹಿ ಮಾಡುವಂತೆ ಕೋರಿಕೊಂಡಲು. ನಾನು ಪ್ರವಾಸಕ್ಕೆ ಹೋಗಬೇಕಾದ ಆತುರದಲ್ಲಿ ನಂಬುಗೆಯ ಮೇಲೆ ಸಹಿ ಮಾಡಿರುತ್ತೇನೆಂದು ವಿವರಿಸಿ, ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರನ್ನು ಬದಲಾಯಿಸಬೇಕೆಂದು" ಅವರು ವಿವರಿಸಿದ್ದನ್ನು ಪರಿಶೀಲಿಸಲಾಗಿ, ಈ ಆರೋಪಿತ ಸರ್ಕಾರಿ ನೌಕರರು ನಂಬಿಕೆಗೆ ಅನರ್ಹರಾಗಿದ್ದು, ಅದೇ ಹುದ್ದೆಯಲ್ಲಿ ಮುಂದುವರೆದಲ್ಲಿ ಅಪಾಯಕಾರಿ ಬೆಳವಣಿಗೆ ಎಂದು ಪರಿಗಣಿಸತಕ್ಕದ್ದಾಗಿದೆ. ಹಾಗೂ ಇಂತಹ "ನಂಬಿಕೆ ದ್ರೋಹ" ಎಸಗಿದ ಸರ್ಕಾರಿ ನೌಕರನೊಬ್ಬನಿಗೆ ಬೆಂಬಲಿಸಿದಂತಾಗುತ್ತದೆ.

(ಜಿ) ಅವರ ವಿರುದ್ಧದ ಮೊದಲನೆಯ ಆರೋಪವು ಈ ಆರೋಪಿತ ಸರ್ಕಾರಿ ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಕಚೇರಿ ಮುಖ್ಯಸ್ಥರಿಗೆ/ ಇಲಾಖಾ ಮುಖ್ಯಸ್ಥರಿಗೆ "ನಂಬಿಕೆ ದ್ರೋಹ" ಎಸಗಿರುವುದರ ಕುರಿತಾಗಿರುತ್ತದೆ.

(ಹೆಚ್) ಆಪಾದಿತ ಸರ್ಕಾರಿ ನೌಕರರ ವಿರುದ್ಧದ (2ನೇ) ಆರೋಪವು ಆಪಾದಿತ ಸರ್ಕಾರಿ ನೌಕರರು ದಿನಾಂಕ 11.1.2008ರ ಆದೇಶದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಿಂದ ವರ್ಗಾವಣೆ ಹೊಂದಿದ ನಂತರ ಅವರು ನಿರ್ವಹಿಸುತ್ತಿದ್ದ ಕಡತಗಳ/ದಾಖಲಾತಿಗಳ/ ವಹಿಗಳ/ಸೇವಾ ಪುಸ್ತಕಗಳ ಪ್ರಭಾರ ವಹಿಸದೇ ಇರುವುದರ ಕುರಿತಾಗಿದ್ದು, ಅವರ ವಿರುದ್ಧದ ಈ ಆರೋಪವು ಸಾಬೀತಾಗಿದ್ದರಿಂದ, ಆಪಾದಿತ ಸರ್ಕಾರಿ ನೌಕರರು, ಸರ್ಕಾರಿ ನೌಕರನೊಬ್ಬನಿಗೆ ಸಲ್ಲದ ರೀತಿಯಲ್ಲಿ ವರ್ತಿಸಿ ಸರ್ಕಾರದ ಜವಾಬ್ದಾರಿಯುತ ಹುದ್ದೆಯಲ್ಲಿ ಮುಂದುವರೆಯಲು ಸೂಕ್ತವಲ್ಲವೆಂದು ಪರಿಗಣಿಸತಕ್ಕದ್ದಾಗಿದೆ.

ಆಪಾದಿತ ಸರ್ಕಾರಿ ನೌಕರರು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ದಿನಾಂಕ 31.1.2008ರಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಅನಧಿಕೃತ ಗೈರು ಹಾಜರಾತಿಯಿಂದ ಆ ಕಚೇರಿಯ ಆಡಳಿತ ಮತ್ತು ಲೆಕ್ಕ ವಿಭಾಗದ ಕಾರ್ಯಗಳು ಸ್ಥಗಿತಗೊಂಡಿದ್ದರಿಂದ, ಹಾಗೂ ಆಪಾದಿತ ಸರ್ಕಾರಿ ನೌಕರರು ಅವರ ಅನಧಿಕೃತ ಗೈರು ಹಾಜರಾತಿಯನ್ನು ಮುಂದುವರೆಸಿದ್ದರಿಂದ, ಕಚೇರಿಯ ಕಾರ್ಯನಿರ್ವಹಣೆಗಾಗಿ ಅವರಿಗೆ ನೀಡಲಾದ ಕಪಾಟಿನ ಬೀಗವನ್ನು ತೆರೆಯಿಸಿ, ಅವರು ನಿರ್ವಹಿಸುತ್ತಿದ್ದ ಪತ್ರ ವ್ಯವಹಾರ, ಇನ್ನಿತರ ದಾಖಲಾತಿಗಳನ್ನು ಕಚೇರಿ ವಶಕ್ಕೆ ಪಡೆದುಕೊಂಡಿರುವುದರ ಕುರಿತಾಗಿದ್ದು, ಈ ಆರೋಪವು ಸಂಪೂರ್ಣವಾಗಿ ಸಾಬೀತಾಗಿದ್ದರಿಂದ, ಸರ್ಕಾರದ ಕರ್ತವ್ಯದಲ್ಲಿ ಅಡೆತಡೆ ಉಂಟುಮಾಡಿದ ಈ ಆರೋಪಿತ ಸರ್ಕಾರಿ ನೌಕರರು ಸರ್ಕಾರದ ಜವಾಬ್ದಾರಿಯುತ ಹುದ್ದೆಯಲ್ಲಿ ಮುಂದುವರೆಯಲು ಸಂಪೂರ್ಣವಾಗಿ ಅನರ್ಹರಾಗಿರುತ್ತಾರೆ.

ಐ) ಆಪಾದಿತರ ಮೇಲಿನ 4ನೇ ಆರೋಪವು ಆಪಾದಿತ ಸರ್ಕಾರಿ ನೌಕರರು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ಅದೇ ಕಚೇರಿಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಿದ್ದ ದ್ವಿತೀಯ ದರ್ಜೆ ಹಾಯಕರಾದ ಕು॥ ಆರ್. ಜ್ಯೋತಿ ಅವರ ಅಕ್ಟೋಬರ್ 2007ರಿಂದ ಫೆಬ್ರವರಿ 2008ರ ವರೆಗಿನ ವೇತನಕ್ಕೆ ಸಂಬಂಧಿಸಿದಂತೆ, ಒಟ್ಟು ರೂ.34,774/- ಬಿಲ್ಲನ್ನು, ಸ್ವತಃ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್ ಇವರೇ ತಯಾರಿಸಿ ಖಜಾನೆಯಿಂದ ಅಷ್ಟೇ ಮೊತ್ತದ (ಅಂದರೆ ರೂ.34,774/-) ಕ್ ಸ್ವೀಕೃತಿಯಾದ ನಂತರ, ಅದನ್ನು ನಗದೀಕರಿಸಿ, ಆ ದ್ವಿತೀಯ ದರ್ಜೆ ಸಹಾಯಕರಿಗೆ ರೂ.32,774/- ಗಳನ್ನು ಮಾತ್ರ ವಿತರಿಸಿ, ಆಪಾದಿತ ಸರ್ಕಾರಿ ಕರರಾದ ಶ್ರೀ ಆದಿಕುಮಾರ್ ಇವರು ರೂ.2000/-ಗಳಷ್ಟು ಸರ್ಕಾರದ ಹಣವನ್ನು ಸ್ವಂತಕ್ಕಾಗಿ ದುರ್ಬಳಕೆ ಮಾಡಿಕೊಂಡಿದ್ದಲ್ಲದೇ "ವೇತನ ಬಟವಾಡೆ ಸ್ತಕದಲ್ಲಿ ರೂ.34,774/- ಎಂದು ಇದ್ದ ಮೊತ್ತವನ್ನು ರೂ.32,774/- ಎಂದು ತಿದ್ದಿ, ಸಂಬಂಧಿಸಿದ ದ್ವಿತೀಯ ದರ್ಜೆ ಸಹಾಯಕರಿಗೆ ವಂಚನೆ ಮಾಡಿರುವ ಮೇಲಾಧಿಕಾರಿಗಳಿಗೆ ದಾರಿ ತಪ್ಪಿಸುವ ಹಾಗೂ ಸರ್ಕಾರಕ್ಕೆ ಮೋಸ ಮಾಡುವಂತಹ ದುರುದ್ದೇಶದಿಂದ ಹಣಕಾಸಿನ ವಿಷಯಕ್ಕೆ ಬಂಧಿಸಿದ ದಾಖಲಾತಿಗಳನ್ನು ಅವರ ಸ್ವಹಿತ ದೃಷ್ಟಿಯಿಂದ ಬದಲಾಯಿಸಿ ದಂಡಾರ್ಹ ದುರ್ನಡತೆ (criminal misconduct) ಪ್ರದರ್ಶಿಸಿ ವಂಚನೆ ಹಾಗೂ ನಂಬಿಕೆ ದ್ರೋಹ ಎಸಗಿರುವುದರ ಕುರಿತು ಕು॥ ಆರ್. ಜ್ಯೋತಿ ರವರಿಗೆ ರೂ.34,774/-ಗಳ ವೇತನದಲ್ಲಿ ರೂ.2000/- ಗಳನ್ನು ಕಡಿಮೆ ಕೊಟ್ಟದ್ದು ಸಾಬೀತಾಗಿದೆ" ಎಂದು ವಿಚಾರಣಾ ವರದಿಯಲ್ಲಿ ವಿವರಿಸಿದ್ದನ್ನು ಪರಿಶೀಲಿಸಲಾಗಿ, ದಿನಾಂಕ 8.3.1984ರಂದು ಸರ್ಕಾರದ ಸೇವೆಗೆ ಸೇರಿದ ಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಇವರು 25 ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿದ್ದು, ಹೊಸದಾಗಿ ಕರ್ತವ್ಯಕ್ಕೆ ಸೇರಿದ ಕು॥ ಜ್ಯೋತಿ, ತೀಯ ದರ್ಜೆ ಸಹಾಯಕರಿಗೆ ಸರ್ಕಾರದ ಸೇವೆಯ ಮಹತ್ವ, ಕರ್ನಾಟಕ ನಾಗರೀಕ ಸೇವಾ ಹಾಗೂ ಇನ್ನಿತರ ನಿಯಮಾವಳಿಗೊಳಪಟ್ಟು ರ್ಯನಿರ್ವಹಿಸುವುದರ ಕುರಿತು ಮಾರ್ಗದರ್ಶನ ನೀಡುವುದರ ಬದಲಾಗಿ, ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಇವರು ಸ್ವತಃ ನಧಿಕೃತ ಗೈರು ಹಾಜರಾತಿ, ಸರ್ಕಾರದ ಹಣದ ದುರುಪಯೋಗ, ದುರ್ನಡತೆ ಇತ್ಯಾದಿ ಅನೈತಿಕ ಚಟುವಟಿಕೆಗಳಲ್ಲಿ ನಿರತರಾಗಿ (indulged himself in egal activities) ಕೇವಲ 2-3 ವರ್ಷಗಳಷ್ಟು ಸೇವೆ ಸಲ್ಲಿಸಿದ ದ್ವಿತೀಯ ದರ್ಜೆ ಸಹಾಯಕರಾದ ಮಹಿಳಾ ಸಿಬ್ಬಂದಿ ಯ ಎದುರು 25 ವರ್ಷಕ್ಕಿಂತ ಚ್ಚಿನ ಸೇವೆ ಸಲ್ಲಿಸಿದ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಇವರು ತಲೆ ತಗ್ಗಿಸುವಂತಹ ದುಷ್ಟತನದ ದುರ್ನಡತೆಯನ್ನು ಪ್ರದರ್ಶಿಸಿ, ರ್ಕಾರಿ ನೌಕರನೊಬ್ಬನಿಗೆ ಸಲ್ಲದಂತೆ ವರ್ತಿಸಿರುತ್ತಾರೆ.

(ಜೆ) ಆಪಾದಿತ ಸರ್ಕಾರಿ ನೌಕರರ ಮೇಲಿನ ಆರೋಪ(5) ಮತ್ತು (6)ರಲ್ಲಿ ಅನುಕಂಪದ ಆಧಾರದ ಮೇಲೆ ಹೊಸದಾಗಿ ಕರ್ತವ್ಯಕ್ಕೆ ಸೇರಿದ್ದ ಮಹಿಳಾ ಸಿಬ್ಬಂದಿಗಳಾದ ಶ್ರೀಮತಿ ವೀಣಾ ಕುಲಕರ್ಣಿ, ಗಣತಿದಾರರಿಂದ ರೂ.5600/- ಗಳನ್ನು ಹಾಗೂ ಶ್ರೀಮತಿ ಪಿ. ಮಂಜು, ಗಣತಿದಾರರಿಂದ ರೂ.2500/-ಗಳನ್ನು ಒತ್ತಾಯಪೂರ್ವಕವಾಗಿ ವಸೂಲು ಮಾಡಿ, ಆ ಇಬ್ಬರೂ ಮಹಿಳಾ ಸಿಬ್ಬಂದಿಗಳಿಗೆ ವಂಚನೆ/ ಮೋಸ ಮಾಡಿರುವುದಕ್ಕೆ ಬಂಧಪಟ್ಟಿರುತ್ತದೆ. ಈ ಎರಡೂ ಆಪಾದನೆಗಳಿಗೆ ಸಂಬಂಧಿಸಿದಂತೆ, ವಿಚಾರಣಾ ವರಿದಯನ್ನು ಪರಿಶೀಲಿಸಲಾಗಿ, "ಶ್ರೀಮತಿ ವೀಣಾ ಕುಲಕರ್ಣಿ, ಣತಿದಾರರಿಂದ ರೂ.5600/- ಗಳನ್ನು ಆಪಾದಿತರು ಮೋಸದಿಂದ ಪಡೆದಿರುವುದು ಅದೇ ರೀತಿ ಶ್ರೀಮತಿ ಪಿ. ಮಂಜು, ಗಣತಿದಾರರಿಂದ ರೂ.2500/-ಗಳನ್ನು ಆಪಾದಿತರು ವಂಚನೆಯಿಂದ ಸುಳ್ಳು ಕಾರಣ ಹೇಳಿ ಪಡೆದಿರುವುದು ಹಾಗೂ, ಹೊಸದಾಗಿ ಸರ್ಕಾರದ ಸೇವೆಗೆ ಸೇರಿದ ಮಹಿಳಾ ಹೋದ್ಯೋಗಿಗಳಿಗೆ ಅನ್ಯಾಯ ಮಾಡಿ ದುರ್ನಡತೆ ಎಸಗಿರುವುದು" ಸಾಬೀತಾಗಿದೆಯಾದ್ದರಿಂದ, ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ವರು ಈ ಪ್ರಕರಣದಲ್ಲಿ ವಿಶೇಷವಾಗಿ ಹೊಸದಾಗಿ ಸರ್ಕಾರದ ಸೇವೆಗೆ ಸೇರಿದ ಮಹಿಳಾ ಸಿಬ್ಬಂದಿಗಳಿಗೆ ಮೋಸ/ ವಂಚನೆ ಮಾಡಿ, ಗುರುತರವಾದ ರ್ನಡತೆ ಎಸಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.

(ಕೆ) ಆಪಾದಿತ ಸರ್ಕಾರಿ ನೌಕರನ ಮೇಲಿನ (7)ನೇ ಆರೋಪವು ಆಪಾದಿತ ಸರ್ಕಾರಿ ನೌಕರನು ರಾಮನಗರ ಜಿಲ್ಲಾ ಸಂಖ್ಯಾ ಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ 1.5.2008 ರಿಂದ ದಿನಾಂಕ 30.6.2008ರ ವರೆಗೆ ಅನಧಿಕೃತ ಗೈರು ಜರಾಗಿದ್ದು, ಈ ಆರೋಪವನ್ನು ಸ್ವತಃ ಆಪಾದಿತರು ಸಾಬೀತುಪಡಿಸಿದ್ದಾರೆಂದು ವಿಚಾರಣಾ ವರದಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಅದೇ ರೀತಿ 8ನೇ ರೋಪವು ಹಾಗೂ (10)ನೇ ಆರೋಪವು ಆಪಾದಿತರು ದಿನಾಂಕ 14.5.2007 ರಿಂದ ದಿನಾಂಕ 24.5.2007ರ ವರೆಗೆ ಅನಧಿಕೃತ ಗೈರು ಹಾಜರಾತಿ ಗಿದ್ದರ ಕುರಿತಾಗಿದ್ದು, ಅದೇ ಅವಧಿಯಲ್ಲಿ ಅವರನ್ನು "ನಂಜನಗೂಡು ಪೋಲೀಸ್ ಠಾಣೆ" ಯಲ್ಲಿ ಇಟ್ಟಿರುವುದಾಗಿ ಸ್ವತಃ ಆಪಾದಿತ ಸರ್ಕಾರಿ ನೌಕರರು ಖಿಕವಾಗಿ ಮಾಹಿತಿ ನೀಡಿರುತ್ತಾರೆಂಬುದರಕುರಿತಾಗಿರುತ್ತದೆ.

ಇಲಾಖಾ ವಿಚಾರಣಾ ಸಮಯದಲ್ಲಿ ಸ್ವತಃ ಆಪಾದಿತ ಸರ್ಕಾರಿ ನೌಕರರು "ಯಾವುದೋ ಅಪರಾಧಕ್ಕೆ ತಾನು ಈ ಅವಧಿಯಲ್ಲಿ ಂಜನಗೂಡು ಪೋಲೀಸು ಠಾಣೆಯಲ್ಲಿದ್ದುದ್ದನ್ನು" ಒಪ್ಪಿಕೊಂಡಿದ್ದರಿಂದ, 8ನೇ ಆರೋಪದಲ್ಲಿನ "ಅನಧಿಕೃತ ಗೈರು ಹಾಜರಾತಿ" ಸಂಪೂರ್ಣವಾಗಿ ಬೀತಾಗಿರುತ್ತದೆ. "ಅಪರಾಧಿ ನಾನಲ್ಲವೆಂದು" ಆಪಾದಿತ ನೌಕರನು ಯಾವುದೇ ಕಾರಣಕ್ಕೂ ತಪ್ಪಿಸಿಕೊಳ್ಳಲು ಸಾದ್ಯವಿಲ್ಲವಾದ್ದರಿಂದ ಸರ್ಕಾರಿ ಕರರೊಬ್ಬರು "ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ" ಪೋಲೀಸ್ ಠಾಣೆಯಲ್ಲಿರುವುದಾಗಿ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳಿಗೆ ಗೂ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳಿಗೆ ಸಂಪೂರ್ಣವಾದ ವಿರುದ್ಧದ ವರ್ತನೆಯಾಗಿರುತ್ತದೆ, ಹಾಗೂ ಸರ್ಕಾರಿ ನೌಕರನೊಬ್ಬನಿಗೆ ಲ್ಲದ "ಕಾನೂನು ಬಾಹಿರ ಚಟುವಟಿಕೆಯಲ್ಲಿ" (illegal activitie) ತೊಡಗಿಸಿಕೊಂಡು ಪೋಲೀಸ್ ಠಾಣೆಯಲ್ಲಿದ್ದರಿಂದ, ಆಪಾದಿತರಿಗೆ ವಹಿಸಲಾಗಿದ್ದ ರ್ಕಾರದ ಕರ್ತವ್ಯಗಳ ನಿರ್ವಹಣೆಗೆ ತಡೆ ಉಂಟು ಮಾಡಿ ಅತ್ಯಂತ ಬೇಜವಾಬ್ದಾರಿಯಾಗಿ ವರ್ತಿಸಿರುವುದು ಸ್ಪಷ್ಟವಾಗಿ ಸಾಬೀತಾಗಿದೆ.

(ಎಲ್) ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಅವರ ವಿರುದ್ಧದ (11)ನೇ ಆರೋಪವು "ಸ್ವತಃ ಕಚೇರಿ ಮುಖ್ಯಸ್ಥರಾಗಿದ್ದ ಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ (ಶ್ರೀ ಬಿ ಶ್ರೀನಿವಾಸಾಚಾರ್) ವೇತನ ವ್ಯತ್ಯಾಸದ ಹಣವನ್ನು ದುರುಪಯೋಗ ಮಾಡಿಕೊಂಡಿರುವುದು, ಹಾಗೂ, ದೇ ಕಚೇರಿಯ ಸಹಾಯಕ ನಿರ್ದೇಶಕರ (ಶ್ರೀ ಸಿದ್ದರಾಜು) ಪ್ರವಾಸದ ಬಿಲ್ಲು ಹಾಗೂ ಹಬ್ಬದ ಮುಂಗಡದ ಹಣವನ್ನು ಆಪಾದಿತರು ಸ್ವಂತಕ್ಕಾಗಿ

ದುರುಪಯೋಗ ಪಡಿಸಿಕೊಂಡಿರುವುದಕ್ಕೆ ಇಲಾಖಾ ವಿಚಾರಣೆಯಲ್ಲಿ ಸಂಪೂರ್ಣವಾಗಿ ಹಾಗೂ ನಿಸ್ಸಂಶಯವಾಗಿ ಸಾಬೀತಾಗಿರುತ್ತದೆ. ಆದ್ದರಿಂದ, ಇಂತಹ ಅಪರಾಧ ಮನೋಭಾವದ ವ್ಯಕ್ತಿಯನ್ನು ಅದೇ ಸೇವೆಯಲ್ಲಿ ಮುಂದುವರೆಸಿದಲ್ಲಿ ಅತ್ಯಂತ ಅಪಾಯಕಾರಿ ಬೆಳವಣಿಗೆಗೆ ಕಾರಣರಾಗುತ್ತಾರೆ.

(ಎಂ) ಆಪಾದಿತ ಸರ್ಕಾರಿ ನೌಕರರ ಮೇಲಿನ (12)ನೇ ಆರೋಪವು ಆಪಾದಿತ ಸರ್ಕಾರಿ ನೌಕರರು ಕೇಂದ್ರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀಮತಿ ಗಿರಿಯಮ್ಮ, ಗಣತಿದಾರರು, ಇವರಿಗೆ ಸಂಬಂಧಿಸಿದ ಕಡತವನ್ನು ನಿರ್ವಹಿಸುವಲ್ಲಿ ಎಸಗಿದ ಲೋಪದೋಷಗಳ ಕುರಿತು, ಇಂತಹ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಸಂಬಂಧಿಸಿದ ಅಥವಾ ಆ ಕಡತಗಳನ್ನು ನಿರ್ವಹಿಸಿದ್ದ ಸಿಬ್ಬಂದಿಗಳ ವಿವರಣೆ ಪಡೆಯತಕ್ಕದ್ದಾಗಿದೆಯಾದ್ದರಿಂದ, ಆ ಕಡತವನ್ನು ಆಪಾದಿತ ಸರ್ಕಾರಿ ನೌಕರರು, ಕೇಂದ್ರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಿರ್ವಹಿಸಿದ್ದರಿಂದ, ಅವರಿಗೆ ವಿವರಣೆ ಕೇಳಿ ಹೊರಡಿಸಲಾದ ಜ್ಞಾಪನಕ್ಕೆ ಸಂಬಂಧಿಸಿದಂತೆ, ಅದೇ ವಿಷಯದ ಕುರಿತು ಸೀಮಿತವಾಗಿ ವಿವರಣೆ ಸಲ್ಲಿಸತಕ್ಕದ್ದಾಗಿತ್ತೇ ಹೊರತು ಆಪಾದಿತ ಸರ್ಕಾರಿ ನೌಕರನು ದಿನಾಂಕ 29.10.2007ರಂದು ನೀಡಿದ ಅವರ ವಿವರಣೆಯಲ್ಲಿ ಇನ್ನಿತರ ವಿಷಯಗಳೊಂದಿಗೆ "ತಾನು ಯಾವುದೇ ಲೋಪದೋಷಗಳನ್ನು ಎಸಗದೆ ಇದ್ದಾಗಲೂ, ಅವರ ಮೇಲಿನ ವೈಯಕ್ತಿಕ ದ್ವೇಷ ಮತ್ತು ಸೇಡಿನಿಂದ ಆ ಜ್ಞಾಪನವನ್ನು ತನಗೆ ನೀಡುವಂತೆ ಮಾಡಿದ್ದರಿಂದ ಆತನಿಗೆ ಮಾನಸಿಕ ಹಿಂಸೆಯಾಗಿದ್ದು, ಆತನ ಕುಟುಂಬದವರೆಲ್ಲರೂ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆಂದು ಹಾಗೂ ಈ ಅಪಾದಿತರಿಗೆ ಮಾನಸಿಕ ಹಿಂಸೆ ನೀಡುತ್ತಿರುವವರೇ ಅವರ ಆತ್ಮಹತ್ಯೆಗೆ ಕಾರಣರಾಗುತ್ತಾರೆಂದು, ಆಪಾದಿತರಿಗೆ ಜ್ಞಾಪನ ನೀಡಿದ ಇಲಾಖಾ ಮುಖ್ಯಸ್ಥರಿಗೆ ಹೆದರಿಸುವ (black mail) ಆತನ ವರ್ತನೆಯು ಸರ್ಕಾರಿ ನೌಕರರೊಬ್ಬನಿಗೆ ಸಲ್ಲದ ರೀತಿಯಲ್ಲಿರುತ್ತದೆ ಎಂಬುದಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ.

ಇಲಾಖಾ ಮುಖ್ಯಸ್ಥರ ವಿರುದ್ಧದ ಅವರ ಈ ಆರೋಪವನ್ನು ಪರಿಶೀಲಿಸಿ, ಕೇಂದ್ರ ಕಚೇರಿಯಿಂದ ಅವರನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಗಳಿಗೆ ನಿಯೋಜಿಸಿ/ ವರ್ಗಾಯಿಸಿದ ನಂತರವೂ ಅವರ ಅನಧಿಕೃತ ಗೈರು ಹಾಜರಾಗಿ ಕರ್ತವ್ಯಲೋಪ, ದುರ್ನಡತೆ, ಸರ್ಕಾರದ ಹಣದ ದುರುಪಯೋಗ ನಿರಂತರವಾಗಿ ಆ ಕಚೇರಿಯಲ್ಲಿಯೂ ಮುಂದುವರೆಸಿದ್ದರಿಂದ ಅವರಿಗೆ ಹಲವಾರು ಜ್ಞಾಪನಗಳನ್ನು ನೀಡುವ, ಅವರನ್ನು ಸೇವೆಯಿಂದ ಅಮಾನತ್ತುಗೊಳಿಸುವಂತಹ ಪರಿಸ್ಥಿತಿಗೆ ಸ್ವತಃ ಅವರೇ ಕಾರಣರಾಗಿದ್ದರೂ, "ಅದೊಂದ ಮಾನಸಿಕ ಹಿಂಸೆ" ಎಂದು ಪರಿಗಣಿಸಕೊಂಡು "ಆತ್ಮಹತ್ಯೆ" ಮಾಡಿಕೊಂಡಿದ್ದಲ್ಲಿ ಅದು ಅವರ cognizable offence ಎಂದು (ತಕ್ಷಣ ಪೋಲೀಸರವರು ದಸ್ತಗಿರಿ ಮಾಡಬಹುದಾದ ಅಪರಾಧ) ಪರಿಗಣಿಸುವಂತೆ ಸೂಚಿಸಲಾಗಿತ್ತು ಹಾಗೂ ಆ ಕಡತದ ನಿರ್ವಹಣೆಯಲ್ಲಿ ಎಸಗಿದ ಲೋಪದೋಷಕ್ಕೆ ವಿವರಣೆ ಸಲ್ಲಿಸುವಂತೆ ಸೂಚಿಸಲಾಗಿತ್ತಾದರೂ, ಅವರು ಯಾವುದೇ ವಿವರಣೆ ನೀಡಿರುವುದಿಲ್ಲ. ಆಪಾದಿತ ಸರ್ಕಾರಿ ನೌಕರರಿಗೆ ಕಚೇರಿಯಿಂದ ನೀಡಲಾದ ಒಂದು ಜ್ಞಾಪನಕ್ಕೆ ಮಾನಸಿಕೆ ಹಿಂಸೆ ನೀಡಿದಂತಾಗುತ್ತದೆ ಎಂದು ಇಲಾಖಾ ಮುಖ್ಯಸ್ಥರನ್ನು ಹೆದರಿಸುವ ಈ "ಆಪಾದಿತ ಸರ್ಕಾರಿ ನೌಕರನ" ವರ್ತನೆಯು ಸರ್ಕಾರಿ ನೌಕರನೊಬ್ಬನಿಗೆ ಸಲ್ಲದ ವರ್ತನೆಯಾಗಿರುತ್ತದೆಯಾದ್ದರಿಂದ ಆತನ ಮೇಲಿನ 12ನೇ ಆರೋಪವು, ಇಲಾಖಾ ವಿಚಾರಣೆಯಲ್ಲಿ ಸ್ಪಷ್ಟವಾಗಿ ಸಾಬೀತಾಗಿದೆ.

ಮೇಲಿನ ಇಲಾಖಾ ವಿಚಾರಣೆಗೆ ಸಂಬಂಧಿಸಿದ ಆರೋಪಗಳಲ್ಲದೇ ಆಪಾದಿತ ಸರ್ಕಾರಿ ನೌಕರರ ಸಂಕ್ಷಿಪ್ತ ಸೇವಾ ಚರಿತ್ರೆಯನ್ನು ಪರಿಶೀಲಿಸಲಾಗಿ, ಸದರಿಯವರು 1992, 1993 ಮತ್ತು 1994ನೇ 3 ವರ್ಷಗಳಲ್ಲಿ ಈ ಕೆಳಗೆ ತಿಳಿಸಲಾದ ಅವಧಿಗೆ ಅನಧಿಕೃತ ಗೈರು ಹಾಜರಾಗಿದ್ದು, ಈ ನಿರ್ದೇಶನಾಲಯದ ಆದೇಶದ ಸಂಖ್ಯೆ: ಆಡಳಿತ/616/94-95, ದಿನಾಂಕ 24.2.1995 ರಲ್ಲಿ ಆ ಅವಧಿಯನ್ನು ಸಕ್ರಮಗೊಳಿಸಿ, ಈ ಕೆಳಕಂಡಂತೆ ರಜೆ ಮಂಜೂರು ಮಾಡಲಾಗಿದೆ.

	ದಿನಾಂಕ	ದಿನಗಳು
	1	2
1	24.8.1992 ರಿಂದ 7.11.1992ರ ವರೆಗೆ	76 ದಿನಗಳು ಅಸಾಧಾರಣ ರಜೆ (EOL)
	26.1.1992 ರಿಂದ 20.1.1994ರ ವರೆಗೆ	360 ದಿನಗಳು ಹಕ್ಕಿನಲ್ಲಿಲ್ಲದರಜೆ (Leave not due)
	21.1.1994 ರಿಂದ 17.5.1994ರ ವರೆಗೆ	117 ದಿನಗಳು ಅಸಾಧಾರಣ ರಜೆ (EOL)
	ಒಟ್ಟು	**553 ದಿನಗಳು**

ಮೇಲಿನ ಆದೇಶವನ್ನು ಪರಿಶೀಲಿಸಲಾಗಿ, ಸದರಿಯವರಿಗೆ **ಒಟ್ಟು 553 ದಿನಗಳಷ್ಟು ರಜೆ ಮಂಜೂರಾತಿ ಮಾಡಿರುವುದು (ವಿಶೇಷವಾಗಿ ಒಂದೇ ಸಲಕ್ಕೆ 360 ದಿನಗಳಷ್ಟು ಹಕ್ಕಿನಲ್ಲಿಲ್ಲದ ರಜೆ ಮಂಜೂರಾತಿ ಮಾಡಿರುವುದು**) ನಿಯಮಗಳಿಗೆ ವಿರುದ್ಧವಾದ್ದರಿಂದ, ಈ ಬಗ್ಗೆ ಪ್ರತ್ಯೇಕವಾಗಿ ಪತ್ರ ವ್ಯವಹಾರ ಮಾಡಲಾಗುತ್ತಿದೆ.

ಇದೇ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು, ಕೇಂದ್ರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವದಿಯಲ್ಲಿ (ಪ್ರಭಾರ ಅಧೀಕ್ಷಕರಾಗಿ ಕೂಡ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯನ್ನೂ ಸೇರಿಸಿ) ವಿಶೇಷವಾಗಿ 2003, 2004 ಮತ್ತು 2005ನೇ ಸಾಲಿನಲ್ಲಿ ಅನಧಿಕೃತ ಗೈರು ಹಾಜರಾತಿ, ಕರ್ತವ್ಯ ನಿರ್ವಹಣೆಯಲ್ಲಿ ಗಂಭೀರ ಸ್ವರೂಪದ ಅನೇಕ ಲೋಪದೋಷಗಳು, ದುರ್ನಡತೆ ಎಸಗಿದ್ದಲ್ಲದೆ, ಅನಧಿಕೃತ ಗೈರು ಹಾಜರಾಗಿದ್ದರಿಂದ, ಕೇಂದ್ರ ಕಚೇರಿಯಲ್ಲಿ ಅವರ ವಶದಲ್ಲಿದ್ದ ಕೇಂದ್ರ ಕಚೇರಿಯ ನೌಕರರ ಸೇವಾ ವಿಷಯಕ್ಕೆ ಸಂಬಂಧಿಸಿದ ಕಡತಗಳನ್ನು ಸೇವಾ ಪುಸ್ತಕಗಳನ್ನು ಹಾಗೂ ವಿಲೇವಾರಿ ಮಾಡದೇ ಬಾಕಿ ಇರಿಸಿಕೊಂಡಿದ್ದ ಹಲವಾರು ಪತ್ರವ್ಯವಹಾರಗಳನ್ನು ಅವರಿಗೆ ನೀಡಲಾದ ಕಪಾಟಿನ ಬೀಗವನ್ನು ಕೇಂದ್ರ ಕಚೇರಿಯ ಅಧಿಕಾರಿಗಳ ಮತ್ತು ಆಡಳಿತ ವಿಭಾಗದ ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ಬಲವಂತವಾಗಿ ತೆಗೆಯಿಸಿ ಬೇರೆ ಸಿಬ್ಬಂದಿಗೆ ವಹಿಸಿ, ವಿಲೇವಾರಿ ಮಾಡುವಂತಹ ಕ್ರಮ ವಹಿಸಲಾಗಿತ್ತು

ಮೇಲೆ ವಿವರಿಸಿದಂತೆ ಆಪಾದಿತ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಇವರ ಅನಧಿಕೃತ ಗೈರು ಹಾಜರಿಯಿಂದ ಅವರು ನಿರ್ವಹಿಸುತ್ತಿದ್ದ ಕಡತಗಳನ್ನು/ದಾಖಲಾತಿಗಳನ್ನು ನಿಯಮಾನುಸಾರ ಬಲವಂತವಾಗಿ ಕಚೇರಿಯ ವಶಕ್ಕೆ ತೆಗೆದುಕೊಂಡಿದ್ದರಿಂದ ಹಾಗೂ ಅವರ ವಿರುದ್ಧ ಕರ್ತವ್ಯ ನಿರ್ವಹಣೆಯಲ್ಲಿನ ಅನೇಕ ಲೋಪದೋಷಗಳು ಸಾಬೀತಾಗುವ ಸಾಧ್ಯತೆಯನ್ನು ನಾಶಗೊಳಿಸುವ ಉದ್ದೇಶದಿಂದ ಸದರಿ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು **"ದಿನಾಂಕ 10.3.2005 ರಂದು ಬೆಳಿಗ್ಗೆ 8.30 ಗಂಟೆಗೆ ಆಡಳಿತ ವಿಭಾಗದ ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗುವ ಪೂರ್ವದಲ್ಲಿಯೇ ಆಡಳಿತ ವಿಭಾಗದಲ್ಲಿನ ಅಲ್ಮೇರಾ ಸಂಖ್ಯೆ:ಎಜಿಸಿ 16-01ರ ಬೀಗವನ್ನು ಅವರಲ್ಲಿದ್ದ ಕೀಲಿ ಕೈಯಿಂದ ತೆರೆದು ಅದರಲ್ಲಿದ್ದ 61 ಪತ್ರ ವ್ಯವಹಾರಗಳನ್ನು, ಆರು ಸೇವಾ ಪುಸ್ತಕಗಳನ್ನು ಹಾಗೂ ಇನ್ನಿತರ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿರುವುದನ್ನು** ಹಾಗೂ ಕಚೇರಿ ಆದೇಶದ ದಿನಾಂಕ 27.11.2004ಲ್ಲಿ, ಸದರಿಯವರು ಅನರ್ಹರಾಗಿದ್ದರೂ, ರೂ.4575-8400ರ ವೇತನ ಶ್ರೇಣಿಯಲ್ಲಿ ದಿನಾಂಕ 3.3.1999ರಿಂದ ಜಾರಿಗೆ ಬರುವಂತೆ, ಸ್ವಯಂಚಾಲಿತ ವಿಶೇಷ ವೇತನ ಬಡ್ತಿ ಮಂಜೂರು ಮಾಡಿಕೊಂಡಿದ್ದು, ಕಚೇರಿಯ ದಾಖಲಾತಿಗಳನ್ನು/ ಸೇವಾ ಪುಸ್ತಕಗಳನ್ನು ಕಚೇರಿಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತೆಗೆದುಕೊಂಡು ಹೋಗಿದ್ದ ಘಟನೆಗೆ ಸಂಬಂಧಿಸಿದಂತೆ, ಅವರ ವಿರುದ್ಧ ಸಂಬಂಧಿಸಿದ ಪೋಲೀಸ್ ಠಾಣೆಯಲ್ಲಿ ದೂರು ನೀಡುವ ಕುರಿತು ಪರಿಶೀಲಿಸುತ್ತಿದ್ದ ಹಂತದಲ್ಲಿ ದಿನಾಂಕ 14.5.2005ರಂದು (ದಿನಾಂಕ 10.3.2005ರ ಘಟನೆಯ 5ನೇ ದಿನ) ಈ ಆಪಾದಿತ ಸರ್ಕಾರಿ ನೌಕರರು ಕೇಂದ್ರ ಕಚೇರಿಯಲ್ಲಿ ಹಾಜರಾಗಿ, ಅವರು ದಿನಾಂಕ 10.3.2005ರಂದು ಮಾಡಿದ್ದೆಲ್ಲವನ್ನು/ ಎಸಗಿದ್ದೆಲ್ಲವನ್ನು ಒಪ್ಪಿಕೊಂಡು, ದಿನಾಂಕ 14.5.2005ರಂದು ಒಂದು ಮನವಿ ಸಲ್ಲಿಸಿದ್ದು, ಅದನ್ನು ಈ ಕೆಳಗೆ ಪುನರುಚ್ಚರಿಸಲಾಗಿದೆ:-

ನಿವೇದನೆ-

"ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನಾನು ತಮ್ಮಲ್ಲಿ ಈ ಮೂಲಕ ಕೋರಿಕೊಳ್ಳುವುದೇನೆಂದರೆ, ಈ ದಿನ ಅಂದರೆ ದಿನಾಂಕ 14.3.2005ರಂದು ಆಡಳಿತಾಧಿಕಾರಿಗಳವರ ಕೊಠಡಿಯಲ್ಲಿ ಜರುಗಿದ ಅಧೀಕ್ಷಕರ ಸಭೆಯಲ್ಲಿ ನಾನು ಪ್ರಸ್ತುತ ನಿರ್ವಹಿಸುತ್ತಿರುವ ವಿಭಾಗದ ಪ್ರಭಾರವನ್ನು ಬೇರೊಬ್ಬರಿಗೆ ವಹಿಸಿಕೊಡುವಂತೆ ಮಾನ್ಯ ಆಡಳಿತಾಧಿಕಾರಿಗಳು ಸೂಚನೆ ನೀಡಿರುತ್ತಾರೆ. ಇದಕ್ಕೆ ಕಾರಣ ನನ್ನ ವಿಭಾಗದಲ್ಲಿ ಬಹಳಷ್ಟು ಕಡತಗಳು ಬಾಕಿ ಇದ್ದು, ನನ್ನಿಂದ ಪ್ರಮಾದವಶಾತ್ ತಪ್ಪೊಂದು ನಡೆದು ಹೋಗಿರುತ್ತದೆ. ಆದರೆ ಇನ್ನು ಮುಂದೆ ಈ ರೀತಿ ಆಗದಂತೆ ನಾನು ಜವಾಬ್ದಾರಿಯಿಂದ ಕೆಲಸ ನಿರ್ವಹಿಸುತ್ತೇನೆ ಹಾಗೂ ಯಾವುದಾದರೂ ಕಡತ/ ಪತ್ರಗಳು ಕಣ್ಮರೆಯಾದಲ್ಲಿ ಅದರ ಜವಾಬ್ದಾರಿ ನನ್ನದೇ ಆಗಿರುತ್ತದೆ. ಆದ್ದರಿಂದ, ಪ್ರಸ್ತುತ ನನ್ನ ಅಧೀಕ್ಷಕರ ಹೆಚ್ಚಿನ ಪ್ರಭಾರವನ್ನು ಶ್ರೀಯುತ ಆನಂದಗೋಪಾಲನ್ ರವರಿಗೆ ವಹಿಸಿ ಕನಿಷ್ಠ ಪಕ್ಷ ನನ್ನನ್ನು ವಿಷಯ ನಿರ್ವಾಹಕರ ಹುದ್ದೆಯಲ್ಲಿಯೇ ಮುಂದುವರೆಸಬೇಕೆಂದು, ಬಾಕಿ ಉಳಿದಿರುವ ಎಲ್ಲಾ ಕಡತ/ ಪತ್ರಗಳನ್ನು ಇನ್ನು 15 ದಿನಗಳೊಳಗಾಗಿ ವಿಲೇವಾರಿ ಮಾಡುತ್ತೇನೆಂದು ಕೇಳಿಕೊಳ್ಳುತ್ತಾ, ನನ್ನ ಮನವಿಯನ್ನು ಸಹಾನುಭೂತಿಯಿಂದ ಪರಿಗಣಿಸಬೇಕೆಂದು ಕೋರುತ್ತೇನೆ. ಮತ್ತು ನನ್ನ ಸಹೋದ್ಯೋಗಿಗಳಿಂದ ಏನಾದರೂ ಬಂದಲ್ಲಿ ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಸಹ ಕೋರಿದ್ದೇನೆ.

ಬೆಂಗಳೂರು, ದಿ:14.03.2005

ಸಹಿ

(ಆದಿಕುಮಾರ್)

ಮೇಲಿನ ದಿನಾಂಕ 14.03.2005ರಂದು ಸಲ್ಲಿಸಿದ್ದ ಅವರ 'ನಿವೇದನೆಯಲ್ಲಿ' "ಇನ್ನುಮುಂದೆ ನಾನು ಜವಾಬ್ದಾರಿಯಿಂದ ಕೆಲಸ ನಿರ್ವಹಿಸುತ್ತೇನೆ" ಎಂದು ಲಿಖಿತವಾಗಿ ತಿಳಿಸಿದ್ದಾಗ್ಯೂ, ಪ್ರಸ್ತುತ ಇಲಾಖಾ ವಿಚಾರಣೆಗೆ ಸಂಬಂಧಿಸಿದಂತೆ, ಈ ಆಪಾದಿತರ ವಿರುದ್ಧದ 12 ಆರೋಪಗಳಲ್ಲಿ, 11 ಆರೋಪಗಳು ನಿಸ್ಸಂಶಯವಾಗಿ ಸಾಬೀತಾಗಿದ್ದರಿಂದ, ಸರ್ಕಾರಿ ನೌಕರನೊಬ್ಬನಿಗೆ ಸಲ್ಲದ ರೀತಿಯಲ್ಲಿ ನಿರಂತರವಾಗಿ ವರ್ತಿಸುತ್ತಿರುವ ಇಂತಹ ಆಪಾದಿತ ಸರ್ಕಾರಿ ನೌಕರರನ್ನು ಅದೇ ಹುದ್ದೆಯಲ್ಲಿ ಮುಂದುವರೆಸುವುದು ಸೂಕ್ತವೇ ಅಥವಾ ಮುಂದುವರೆಸಿದಲ್ಲಿ ಉಂಟಾಗುವ ಪರಿಣಾಮಗಳ ಬಗ್ಗೆ ಯೋಚಿಸತಕ್ಕದ್ದಾಗಿದೆ.

ಪ್ರಸ್ತುತ ಇಲಾಖಾ ವಿಚಾರಣೆಯನ್ನು ಮುಂದುವರೆಸುತ್ತಾ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು, ಸರ್ಕಾರದ ಸೇವೆಯಿಂದ ಅಮಾನತ್ತುಗೊಂಡ ನಂತರ, ಅವರ ಮನೆ ವಿಳಾಸವಿಲ್ಲದೇ ನೇರವಾಗಿ ಸರ್ಕಾರಕ್ಕೆ ಸಲ್ಲಿಸಲಾದ ಅವರ ಮನವಿ ದಿನಾಂಕ 26.8.2008ರಲ್ಲಿ **"ಕೆಲವೊಂದು ಆಡಳಿತಾತ್ಮಕ ಕಾರಣಗಳಿಂದ ಅವರನ್ನು ದಿನಾಂಕ 25.7.2008 ರಿಂದ ಅಮಾನತ್ತಿನಲ್ಲಿರಿಸಲಾಗಿದೆ. ಆದರೆ ಅವರು ನಿರ್ದೋಷಿಯಾಗಿದ್ದು, ಅದನ್ನು ಇಲಾಖಾ ವಿಚಾರಣೆ ನಡೆಸಿದಲ್ಲಿ ನನ್ನ ನಿರ್ದೋಷಿತನವನ್ನು ಸಾಬೀತುಪಡಿಸುತ್ತೇನೆ ಎಂದು ಸರ್ಕಾರಕ್ಕೆ ಸವಾಲೊಡ್ಡಿದ್ದರೂ,** (he had challenged directly to Government) ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು, 1957ರ ನಿಯಮ:11ರ ಅಡಿಯಲ್ಲಿ ಅವರಿಗೆ ನೀಡಲಾದ "ಕಾರಣ ಕೇಳುವ ಜ್ಞಾಪನಕ್ಕೆ" ಸಾಕಷ್ಟು ಕಾಲಾವಕಾಶ ನೀಡಿದ ನಂತರವೂ ಅವರ ವಿವರಣೆ ಸಲ್ಲಿಸದೇ ಇರುವುದನ್ನು ಅದೇ ರೀತಿ, ಆತನ ವಿರುದ್ಧದ ಇಲಾಖಾ ವಿಚಾರಣಾ ವರದಿಯನ್ನು ಅವರಿಗೆ ಒದಗಿಸಿ, ಅವರ ವಿವರಣೆಯನ್ನು ಒದಗಿಸುವಂತೆ ಸೂಚಿಸಲಾದ ನಂತರವೂ, ಹಲವಾರು ಕಾರಣಗಳನ್ನು ನೀಡುತ್ತಾ, ಅದಕ್ಕೂ ಅವರ ವಿವರಣೆಯನ್ನು ಸಲ್ಲಿಸುವುದರಲ್ಲಿ ವಿಫಲರಾಗಿದ್ದರಿಂದ, ಆತನ ವಿರುದ್ಧದ ಎಲ್ಲಾ ಆರೋಪಗಳನ್ನು ಅವರೇ ಸ್ವಯಂ ಆಗಿ ಒಪ್ಪಿಕೊಂಡಂತಾಗಿದೆ. ಹಾಗೂ ಇಲಾಖಾ ವಿಚಾರಣಾ ವರದಿಯಲ್ಲಿ, ಆಪಾದಿತ ಸರ್ಕಾರಿ ನೌಕರರು **"ತನ್ನ ಕೆಲಸದಲ್ಲಿ ನಿರ್ಲಕ್ಷತೆ, ಇತರರಿಗೆ ಮೋಸ, ವಂಚನೆ, ಹಣದ ದುರುಪಯೋಗ ಇತ್ಯಾದಿ ತಪ್ಪು ಮಾಡಿರುವುದು ಸ್ಪಷ್ಟವಾಗಿ ಸಾಬೀತಾಗಿರುತ್ತದೆಯಾದ್ದರಿಂದ"** ಅವರ ವಿರುದ್ಧ ಹಲವಾರು ಆರೋಪಗಳು (multiple charges) ಸಾಬೀತಾಗಿರುತ್ತವೆ.

ಸರ್ಕಾರದ ಸೇವೆಗೆ 1984ರಲ್ಲಿ ಸೇರಿದ ಆಪಾದಿತ ಸರ್ಕಾರಿ ನೌಕರರು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಮತ್ತು ಹೆಚ್ಚಿನ ಸೇವೆಯನ್ನು ಕೇಂದ್ರ ಕಚೇರಿಯಲ್ಲೇ ಸಲ್ಲಿಸಿ, ವಿಶೇಷವಾಗಿ ಆಡಳಿತ ವಿಭಾಗದಲ್ಲಿ (Administration Section) ಅಧಿಕಾರಿಗಳ/ ಸಿಬ್ಬಂದಿಗಳ ಸೇವಾ ವಿಷಯವನ್ನು (including disciplinary proceedings) ನಿರ್ವಹಿಸಿದ **"ಅಪಾರವಾದ ಅನುಭವ"** ಹೊಂದಿದ್ದ ಇವರು ಮೇಲೆ ವಿವರಿಸಲಾದ ಹಲವಾರು ಆರೋಪಗಳನ್ನು (multiple charges) ಎಸಗಿದ್ದನ್ನು ಪರಿಶೀಲಿಸಲಾಗಿ, ಇವರು ಸರ್ಕಾರದ ಪ್ರಸ್ತುತ ಹುದ್ದೆಯಲ್ಲಿ ಮುಂದುವರೆಯಲು ಅನರ್ಹರೆಂದು ಸಾಬೀತಾಗುತ್ತದೆ.

ಒಟ್ಟಾರೆ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಇವರ ವಿರುದ್ಧದ **12 ಗಂಭೀರ ಸ್ವರೂಪದ ಆರೋಪಗಳಲ್ಲಿ, 11 ಆರೋಪಗಳು ಇಲಾಖಾ ವಿಚಾರಣೆಯಲ್ಲಿ** ಸಾಬೀತಾಗಿದ್ದು, ಇಂಥಹವರು ಅದೇ ಸೇವೆಯಲ್ಲಿ ಮುಂದುವರೆದಲ್ಲಿ ಇಂತಹದೇ ದುಷ್ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆ ಇರುವುದರಿಂದ, ಹಾಗೂ ಇಂತಹವರನ್ನು ಸರ್ಕಾರದ ಸೇವೆಯಲ್ಲಿನ ಯಾವುದೇ ಜವಾಬ್ದಾರಿಯುತ ವೃಂದದಲ್ಲಿ ಮುಂದುವರೆಸಿದಲ್ಲಿ, ಆಡಳಿತ/ ಲೆಕ್ಕ ವಿಭಾಗದ ಕರ್ತವ್ಯಗಳ ಜವಾಬ್ದಾರಿಗಳನ್ನೇ ವಹಿಸಬೇಕಾಗುತ್ತದೆಯಾದ್ದರಿಂದ, ಬೇರೆ ಸಿಬ್ಬಂದಿಗಳನ್ನೂ ಅವರದೇ ದಾರಿಗೆ ಎಳೆಯಲು ಪ್ರಯತ್ನಿಸಿ, ಅವರನ್ನು ಹಾಳು ಮಾಡುವ ಸಾಧ್ಯತೆ ಇರುವುದರಿಂದ, **ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ:**

ಕಚೇರಿ ಆದೇಶ ಸಂಖ್ಯೆ:ಆಡಳಿತ/495/2010-11

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ ಆಗಿರುವ ನಾನು ನಿವೃತ್ತ ಜಿಲ್ಲಾ ನ್ಯಾಯಾಧೀಶರೂ ಆದ ವಿಚಾರಣಾಧಿಕಾರಿಗಳು ಸಲ್ಲಿಸಿರುವ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಇವರ ವಿರುದ್ಧದ ವಿಚಾರಣಾ ವರದಿಯನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಲಾಗಿ ವಿಚಾರಣಾಧಿಕಾರಿಗಳು, ವಿಚಾರಣಾ ಸಂದರ್ಭದಲ್ಲಿ ಲಭ್ಯವಿರುವ ಮಾಹಿತಿಯನ್ನು ಮತ್ತು ಪುರಾವೆಗಳನ್ನು ತುಲನೆ ಮಾಡಿ ವಿಚಾರಣೆ ಸಮಯದಲ್ಲಿ ಆಪಾದಿತ ಸರ್ಕಾರಿ ನೌಕರನಿಗೆ ತನ್ನನ್ನು ರಕ್ಷಿಸಿಕೊಳ್ಳಲು ಸಾಕಷ್ಟು ಅವಕಾಶ ನೀಡಿದ್ದಾಗ್ಯೂ, ಅಪಾದಿತ ಸರ್ಕಾರಿ ನೌಕರರ ವಿರುದ್ಧದ 12 ವಿವಿಧ ಆರೋಪಗಳಲ್ಲಿ (multiple charges) 11 ಆರೋಪಗಳು ಸಾಬೀತಾಗಿರುತ್ತವೆ. ವಿಚಾರಣಾದಿಕಾರಿಗಳು ನಿಜಕ್ಕೂ ಈ ಆಪಾದನೆಗಳನ್ನು ನ್ಯಾಯಬದ್ಧವಾಗಿ ಇಲಾಖಾ ವಿಚಾರಣೆ ನಡೆಸಿ ರುಜುವಾತು ಪಡಿಸಿರುತ್ತಾರೆ.

ಆಪಾದಿತ ಸರ್ಕಾರಿ ನೌಕರನು ಆತನಿಗೆ 2ನೇ ಕಾರಣ ಕೇಳುವ ಜ್ಞಾಪನದೊಂದಿಗೆ ಒದಗಿಸಲಾದ ಇಲಾಖಾ ವಿಚಾರಣಾ ವರದಿಗೆ ಸಂಬಂಧಿಸಿದಂತೆ, ಗರಿಷ್ಠ (maximum) ಕಾಲಾವಕಾಶ ನೀಡಿದ ನಂತರವೂ ಲಿಖಿತ ವಿವರಣೆ ಸಲ್ಲಿಸದೇ ಇರುವುದರಿಂದ, ಆಪಾದಿತ ಸರ್ಕಾರಿ ನೌಕರರ ವಿರುದ್ಧದ **12 ವಿವಿಧ ಆರೋಪಗಳಲ್ಲಿ 11 ವಿವಿಧ ಆರೋಪಗಳು** (multiple charges) ಸಾಬೀತಾಗಿದ್ದನ್ನು ಪರಿಗಣಿಸಿ, **"ಮಾಡಿರುವ ತಪ್ಪಿಗೆ ಸಮನಾದ ಶಿಕ್ಷೆ"** ಎಂಬಂತೆ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 18 ಬೇಇವಿ 2001, ದಿನಾಂಕ 14.9.2001ರಲ್ಲಿ ವಿವರಿಸಲಾದ **"ಯಾವ ಯಾವ ದುರ್ನಡತೆಗಳಿಗೆ ಯಾವ ಯಾವ ದಂಡನೆಗಳು ಯೋಗ್ಯ"** ವೆಂಬುದನ್ನು ಪರಿಶೀಲಿಸಿ, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ ಆಗಿರುವ ನಾನು ಶ್ರೀ ಆದಿಕುಮಾರ್, ಈ ನಿರ್ದೇಶನಾಲಯದ ಪ್ರಥಮ ದರ್ಜೆ ಸಹಾಯಕರು, ಪ್ರಸ್ತುತ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಕೋಲಾರ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(v) ರ ಅನ್ವಯ **"ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು, ಇವರನ್ನು ಪ್ರಸ್ತುತ ಅವರು ಹೊಂದಿರುವ ರೂ.7275-13350ರ ವೇತನ ಶ್ರೇಣಿಯ ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ರೂ.5800-10500ರ ವೇತನ ಶ್ರೇಣಿಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಖಾಯಂ ಆಗಿ ಇಳಿಸಲಾಗಿದೆ ಹಾಗೂ ಅವರ ವೇತನವನ್ನು ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿ ರೂ.5800-10500ರಲ್ಲಿ ಮೂಲ ವೇತನ ರೂ.5800/- ನಿಗದಿ ಪಡಿಸಲಾಗಿದೆ ಹಾಗೂ ಇವರು ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಯಲ್ಲಿ ವಾರ್ಷಿಕ ವೇತನ ಬಡ್ತಿಗಳನ್ನು ಪಡೆಯತಕ್ಕದ್ದು. ಹಾಗೂ ಅವರ ಜೇಷ್ಠತೆಯನ್ನು ದ್ವಿತೀಯ ದರ್ಜೆ ಸಹಾಯಕರ ವೃಂದದಲ್ಲಿ ಪ್ರಸ್ತುತ ದ್ವಿತೀಯ ದರ್ಜೆ ಸಹಾಯಕರ ಜೇಷ್ಠತಾ ಪಟ್ಟಿಯಲ್ಲಿ ಅಂತಿಮ ಸಂಖ್ಯೆಯನ್ನು ಹೊಂದತಕ್ಕದ್ದು"**.

ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಇವರ ಅಮಾನತ್ತು ಅವಧಿಯನ್ನು "ಅಮಾನತ್ತಿನಲ್ಲಯೇ ಕಳೆದ ಅವಧಿ" (ದಿನಾಂಕ 17.7.2008 ರಿಂದ 23.12.2008ರ ವರೆಗೆ) ಎಂದು ಪರಿಗಣಿಸತಕ್ಕದ್ದು. ಈ ಆದೇಶದ ಪರಿಣಾಮವಾಗಿ ಶ್ರೀ ಆದಿಕುಮಾರ್, ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ, ಮಂಡ್ಯ ಜಿಲ್ಲೆ ಇಲ್ಲಿ ಖಾಲಿ ಇರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೇಮಕಾತಿ ಮಾಡಿ ಆದೇಶಿಸಲಾಗಿದೆ.

ಆಪಾದಿತ ಸರ್ಕಾರಿ ನೌಕರನಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು ಇವರ ವಿರುದ್ಧದ ಸಾಬೀತಾದ ಆರೋಪಗಳಲ್ಲಿ ಈ ಕೆಳಗೆ ವಿವರಿಸಲಾದ ಹಣಕಾಸಿನ ವಂಚನೆ ಮತ್ತು ಸರ್ಕಾರದ ಹಣದ ದುರುಪಯೋಗ ಸಾಬೀತಾಗಿರುತ್ತದೆ.

1	ಶ್ರೀಮತಿ ಆರ್.ಜ್ಯೋತಿ, ದ್ವಿತೀಯ ದರ್ಜೆ ಸಹಾಯಕರ ವೇತನಕ್ಕೆ ಸಂಬಂಧಿಸಿದಂತೆ ಸರ್ಕಾರದ ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದು (ಆರೋಪ; 4ರಲ್ಲಿ ವಿವರಿಸಲಾಗಿದೆ)	ರೂ.2,000-00
2	ಶ್ರೀಮತಿ ವೀಣಾ ಕುಲಕರ್ಣೀ, ಗಣತಿದಾರರಿಂದ ಅನಧಿಕೃತವಾಗಿ ವಸೂಲು ಮಾಡಿದ ಹಣ (ಆರೋಪ; 5ರಲ್ಲಿ ವಿವರಿಸಲಾಗಿದೆ)	ರೂ.5,600-00
3	ಅದೇ ರೀತಿ ಶ್ರೀಮತಿ ಪಿ.ಮಂಜು, ಗಣತಿದಾರರಿಗೆ ವಂಚಿಸಿ, ಅವರಿಂದ ವಸೂಲು ಮಾಡಿದ ಹಣ	ರೂ.2,500-00
4	ಅದೇ ರೀತಿ ಸ್ವತಃ ಕಚೇರಿ ಮುಖ್ಯಸ್ಥರ ಹಾಗೂ ಸಹಾಯಕ ನಿರ್ದೇಶಕರ ತುಟ್ಟಿ ಭತ್ಯೆ ಬಾಕಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದು (ಆರೋಪ; 11ರಲ್ಲಿ ವಿವರಿಸಲಾಗಿದೆ).	ರೂ. 879-00 ರೂ. 505-00

5	ಅದೇ ರೀತಿ ಕಚೇರಿಯ ಸಹಾಯಕ ನಿರ್ದೇಶಕರ ಪ್ರವಾಸದ ಬಿಲ್ ಹಣ ಹಾಗೂ ಅವರದೇ ಹಬ್ಬದ ಮುಂಗಡವನ್ನು ದುರುಪಯೋಗ ಮಾಡಿರುತ್ತಾರೆ. (ವಿವರ ಆರೋಪ: 11ರಲ್ಲದೆ)	ರೂ. 374-00 ರೂ. 246-00 ರೂ. 164-00 ರೂ. 741-00 ರೂ.2,000-00
	ಮೇಲಿನ ಕ್ರಮ ಸಂಖ್ಯೆ(1) ರಿಂದ (5)ರ ವರೆಗೆ ಆಪಾದಿತ ಸರ್ಕಾರಿ ನೌಕರರು ದುರುಪಯೋಗ ಪಡಿಸಿಕೊಂಡ ಒಟ್ಟು ಹಣ:	**ರೂ.15,009-00**

ಮೇಲೆ ತಿಳಿಸಲಾದ ಒಟ್ಟು ಹಣವನ್ನು ಶ್ರೀ ಆದಿಕುಮಾರ್ ಅವರಿಂದ ನೇರವಾಗಿ ತಕ್ಷಣ ವಸೂಲು ಮಾಡಿ, ಮೇಲೆ ತಿಳಿಸಲಾದ ಸಿಬ್ಬಂದಿಗಳ ಹೆಸರಿನಲ್ಲಿ ವೈಯಕ್ತಿಕವಾಗಿ ಬ್ಯಾಂಕ್ ಡ್ರಾಫ್ಟ್ ಗಳನ್ನು ಅವರವರ ಹೆಸರಿನಲ್ಲಿ ಅವರವರ ಕಚೇರಿಯ ವಿಳಾಸಕ್ಕೆ ಕಳುಹಿಸಿ, ಈ ನಿರ್ದೇಶನಾಲಯಕ್ಕೆ ಝೆರಾಕ್ಸ್ ಪ್ರತಿಗಳನ್ನು ಸಲ್ಲಿಸುವಂತೆ ಮಂಡ್ಯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಆದೇಶಿಸಲಾಗಿದೆ, ಹಾಗೂ ಈ ಆದೇಶವನ್ನು ಅನುಷ್ಠಾನಗೊಳಿಸದೆ ಇದ್ದಲ್ಲಿ, ಈ ವೆಚ್ಚವನ್ನು ಭರಿಸುವುದು, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ.

ಹೆಚ್.ಇ. ರಾಜಶೇಖರಪ್ಪ
ನಿರ್ದೇಶಕರು ಮತ್ತು ಶಿಸ್ತು ಪ್ರಾಧಿಕಾರ.

ಕೇಸ್ ಸಂಖ್ಯೆ : ಆಸಾಂನಿ/11/ಆಡಳಿತ-2/2007-08

ಕಛೇರಿ ಪತ್ರ ಸಂಖ್ಯೆ: ಕಛೇರಿ ಆದೇಶ ಸಂಖ್ಯೆ ಆಡಳಿತ:580:2008-09 ದಿನಾಂಕ 11-02-2009

ಶ್ರೀ ಎ. ಪದ್ಮನಾಭ ಕೆದಿಲಾಯ ಬಿ.ಎ. ಬಿ.ಎಲ್.

ಸರ್ಕಾರಿ ವಿಚಾರಣಾಧಿಕಾರಿ ಹಾಗೂ ನಿವೃತ್ತ ನ್ಯಾಯಾಧೀಶರ ಮುಂದೆ,

ನಿರ್ದೇಶಕರು,
ಕರ್ನಾಟಕ ಸರ್ಕಾರ,
ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ,
ಬಹುಮಹಡಿ ಕಟ್ಟಡ,
ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-1 } **ಶಿಸ್ತು ಪ್ರಾಧಿಕಾರಿ**

(ಶ್ರೀ ಎಂ.ಎನ್. ಚಾಕರಿ, ಸಹಾಯಕ ನಿರ್ದೇಶಕರು ಮತ್ತು ಮಂಡನಾಧಿಕಾರಿ)

ಶ್ರೀ ಆದಿಕುಮಾರ್
ತಂದೆ ಹೆಸರು: ಹೆಚ್.ವಿ. ರತ್ನೇಶ್ವರಯ್ಯ
ವಯಸ್ಸು: 49 ವರ್ಷಗಳು
ಪ್ರಥಮ ದರ್ಜೆ ಸಹಾಯಕರು.

ಮನೆ ವಿಳಾಸ:
23/24 ಟೀಚರ್ಸ್ ಕಾಲೋನಿ,
ವಿ.ವಿ. ಬಡಾವಣೆ,
ಓಂ ಶ್ರೀ ಸರ್ಕಲ್ ಹತ್ತಿರ,
ಹೊಸಕೋಟೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ. } ಆಪಾದಿತ ನೌಕರ

ಶ್ರೀ ಶಿವಾನಂದ ಮೂರ್ತಿ
ಆಪಾದಿತ ನೌಕರರ ಸಹಾಯಕರು.

ವಿಚಾರಣಾ ವರದಿ

1. ಮೇಲಿನ ಶಿಸ್ತು ಪ್ರಾಧಿಕಾರಿಯು ದಿನಾಂಕ 11-02-2009 ರಂದು ಕಛೇರಿ ಆದೇಶದ ಸಂಖ್ಯೆ:ಆಡಳಿತ/580/2008-09 ರಲ್ಲಿ ಶ್ರೀ ಆದಿಕುಮಾರ್ ಮೇಲೆ ಹೊರಿಸಿದ ಈ ಕೆಳಗಿನ 12 ದೋಷಾರೋಪಣೆ ಕುರಿತು ವಿಚಾರಣೆ ಮಾಡಿ ವರದಿ ಕೊಡಲು ಕೇಳಿಕೊಂಡಿದ್ದಾರೆ.

ಆರೋಪ : 1

2. ಶ್ರೀ ಆದಿಕುಮಾರ್, ಈ ನಿರ್ದೇಶನಾಲಯದ ಪ್ರಥಮ ದರ್ಜೆ ಸಹಾಯಕರಾದ (ಪ್ರಸ್ತುತ ಅಮಾನತ್ತಿನಲ್ಲಿ) ಹಾಗೂ ಆಪಾದಿತ ದುರ್ನಡತೆ (alleged misconduct) ಹೊಂದಿದ ನೀವು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಗೆ ಸಂಬಂಧಿಸಿದಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ದಿನಾಂಕ 21.05.2007ರ ಪತ್ರದಲ್ಲಿ ಇನ್ನಿತರ ವಿಷಯಗಳೊಂದಿಗೆ ನಿಮ್ಮ ಅನಧಿಕೃತ ಹೈರುಹಾಜರಾತಿ ಕಾರಣದಿಂದ ಅವರ ಕಛೇರಿ ಸಿಬ್ಬಂದಿಗಳ ಸೇವಾ ವಿಷಯ ನಿರ್ವಹಣೆ, ವೇತನ ಬಿಲ್ಲು ತಯಾರಿಕೆ, ಇತ್ಯಾದಿ ಕರ್ತವ್ಯ ನಿರ್ವಹಣೆಗೆ ತೊಂದರೆಯಾಗುತ್ತಿದ್ದು, ನಿಮ್ಮ ಸೇವೆಯನ್ನು ಅವರ ಕಛೇರಿಯಿಂದ ಹಿಂದಕ್ಕೆ ಪಡೆಯಬೇಕೆಂದು ಕೋರಿದ್ದರು. ಈ ಪ್ರಸ್ತಾವನೆಯನ್ನು ಪರಿಶೀಲಿಸುವ ಹಂತದಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪ್ರಸ್ತುತ ಇಲಾಖಾ ವಿಚಾರಣೆ ಪ್ರಕರಣದಲ್ಲಿ ಆಪಾದಿತ ದುರ್ನಡತೆ ಹೊಂದಿದ ಸರ್ಕಾರಿ ನೌಕರರಾದ ನಿಮ್ಮ ಸ್ವಂತ ಕೈಬರಹದಿಂದ ಬರೆಯಲಾದ ಪತ್ರದ ಸಂಖ್ಯೆ: ಜಿಸಂಸಂ ಬೆಂಗ್ರಾ/ಆಡಳಿತ/06–07, ದಿನಾಂಕ 13.07.2007 ರಲ್ಲಿ "ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು, ಈ ಕಛೇರಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದರಿಂದ ಇವರನ್ನು ವರ್ಗಾವಣೆ ಮಾಡಬಾರದಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ" ಎಂದು ಮರು ಪ್ರಸ್ತಾವನೆ ಸಲ್ಲಿಸಿದ್ದನ್ನು ಕೇಂದ್ರ ಕಛೇರಿಯು ತೀಕ್ಷ್ಣವಾಗಿ ಪ್ರತಿಕ್ರಿಯಿಸಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ದ್ವಂದ ಹೇಳಿಕೆ (duel statement) ಕುರಿತು ಅವರ ವಿವರಣೆ ಕೇಳಲಾಗಿ, ಆಪಾದಿತ ಸರ್ಕಾರಿ ನೌಕರರಾದ ನೀವು "ನಿರ್ದೇಶಕರಿಗೆ ಒಂದು ಮನವಿ ಪತ್ರವನ್ನು ತುರ್ತಾಗಿ ಕಳುಹಿಸಬೇಕಾಗಿದೆ" ಎಂದು ಅದು ನಿಮ್ಮ ವೈಯಕ್ತಿಕ ವರ್ಗಾವಣೆ ವಿಷಯವೆಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಮಾಹಿತಿ ನೀಡದೆ, ಆತುರವಾಗಿ ಸಹಿ ಮಾಡುವಂತೆ ತಿಳಿಸಿದ್ದರಿಂದ "ನಿಮ್ಮ ಮೇಲೆ ನಂಬಿಕೆ ಇಟ್ಟು ಸಹಿ ಮಾಡಿದ್ದಾಗಿ" ಹಾಗೂ ಆಪಾದಿತನ ಸರ್ಕಾರಿ ನೌಕರರಾದ ನೀವು "ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆಂದು" ಎಂದು ಬರೆದಿದ್ದನ್ನು ಅವರು ಗಮನಿಸಿರಲಿಲ್ಲವೆಂದು ತಿಳಿಸಿರುತ್ತಾರೆ.

3. ಆದ್ದರಿಂದ, ಈ ಪ್ರಕರಣದಲ್ಲಿ ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮವನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗೂ ಕಛೇರಿ ಮುಖ್ಯಸ್ಥರಿಗೆ/ಇಲಾಖಾ ಮುಖ್ಯಸ್ಥರಿಗೆ "ನಂಬಿಕೆ ದ್ರೋಹ" ಎಸಗಿರುತ್ತೀರಿ.

ಆರೋಪ : 2

4. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಆದೇಶದ ಸಂಖ್ಯೆ:ಆಡಳಿತ/661/2007–08, ದಿನಾಂಕ 11.01.2008 ರಲ್ಲಿ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನಿಮ್ಮನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ, ಇಲ್ಲಿಗೆ ವರ್ಗಾವಣೆ ಮಾಡಿದ್ದರಿಂದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರ ಕಛೇರಿ ಆದೇಶದ ಸಂಖ್ಯೆ:ಆಡಳಿತ/51/2007–08 ದಿನಾಂಕ 29.01.2008 ರಲ್ಲಿ ದಿನಾಂಕ 31.01.2008 ರಿಂದ ಅನ್ವಯವಾಗುವಂತೆ ನಿಮ್ಮನ್ನು ಬಿಡುಗಡೆಗೊಳಿಸಿ ಪ್ರಭಾರವನ್ನು ವಹಿಸಿಕೊಳ್ಳುವಂತೆ ಸೂಚಿಸಲಾಗಿತ್ತು. ಆದರೆ ನಿಮ್ಮ ಕೆಲವು ಪತ್ರ ವ್ಯವಹಾರಗಳನ್ನು ಮಾತ್ರ ಅವರಿಗೆ ನೀಡಿ, ಸಂಬಂಧಿಸಿದ ಕಡತಗಳನ್ನಾಗಲಿ, ಸೇವಾ ಪುಸ್ತಕಗಳನ್ನಾಗಲಿ ಮತ್ತು ಕಾರ್ಯನಿರ್ವಹಣಾ ವರದಿಗಳನ್ನಾಗಲಿ ಹಾಗೂ ಇನ್ನಿತರ ಯಾವುದೇ ದಾಖಲಾತಿಗಳನ್ನು ನೀಡದೆ ಇದ್ದುದರಿಂದ ನಿಮಗೆ ಅನೇಕ ಸಾರಿ ಮೌಖಿಕವಾಗಿ ತಿಳಿಸಲಾಗಿತ್ತು ಹಾಗೂ ಅಂತಿಮವಾಗಿ ದಿನಾಂಕ 09.05.2008 ರಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರು ಹೊರಡಿಸಿದ ಜ್ಞಾಪನಕ್ಕೂ ನೀವು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ. ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಆಡಳಿತ ಮತ್ತು ಲೆಕ್ಕ ವಿಭಾಗಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ವಹಿಸತಕ್ಕದ್ದು ನಿಮ್ಮ ಜವಾಬ್ದಾರಿಯಾಗಿದ್ದರೂ ಪ್ರಭಾರವನ್ನು ವಹಿಸದೆ ಆ ವಿಭಾಗಕ್ಕೆ ಸಂಬಂಧಿಸಿದ ಕರ್ತವ್ಯ ನಿರ್ವಹಣೆಯಲ್ಲಿ ಅಡೆತಡೆಯನ್ನುಂಟು ಮಾಡಿ ಅತ್ಯಂತ ಬೇಜವಾಬ್ದಾರಿ ರೀತಿಯಲ್ಲಿ ವರ್ತಿಸಿ ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿದ್ದರಿಂದ ನಿಮಗೆ ನೀಡಲಾದ ಕಪಾಟಿನ ಬೀಗವನ್ನು ದಿನಾಂಕ 23.05.2008 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಮತ್ತು ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ಬಲವಂತವಾಗಿ ತೆರೆಯಿಸಿ ನೀವು ನಿರ್ವಹಿಸಿದ್ದ/ಬಾಕಿ ಇರಿಸಿಕೊಂಡಿದ್ದ ಪತ್ರ ವ್ಯವಹಾರ, ಸಿಬ್ಬಂದಿಗಳ ಸೇವಾ ಪುಸ್ತಕಗಳು, ಕಡತಗಳನ್ನು ಹಾಗೂ ಇನ್ನಿತರ ದಾಖಲಾತಿಗಳನ್ನು (ಒಟ್ಟು 141) ಆ ಕಛೇರಿ ವಶಕ್ಕೆ ಪಡೆದುಕೊಂಡಿದ್ದರಿಂದ ಈ ಪ್ರಕರಣದಲ್ಲಿ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3 ಅನ್ನು ಸ್ಪಷ್ಟವಾಗಿ ಉಲ್ಲಂಘಿಸಿ ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿರುತ್ತೀರಿ.

ಆರೋಪ : 3

5. ಪ್ರಸ್ತುತ ಅಮಾನತ್ತಿನಲ್ಲಿರುವ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ಹಾಗೂ ಆಪಾದಿತ ಸರ್ಕಾರಿ ನೌಕರರಾದ ನೀವು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಅನ್ಯ ಕರ್ತವ್ಯದ ಮೇಲೆ ನಂತರ ದಿನಾಂಕ 31.01.2008 ರಿಂದ ಅದೇ ಕಛೇರಿಗೆ ವರ್ಗಾವಣೆ ಹೊಂದಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ನಂತರ ಕೂಡ ನಿಮ್ಮ "ಅನಧಿಕೃತ ಗೈರುಹಾಜರಾಗಿ" ಬೇಜವಾಬ್ದಾರಿತನ, ಕರ್ತವ್ಯಲೋಪ ಮತ್ತು ದುರ್ನಡತೆ ಪ್ರವೃತ್ತಿಯನ್ನು ನಿರಂತರವಾಗಿ ಮುಂದುವರೆಸಿದ್ದರಿಂದ ನಿಮ್ಮ ಮನೆ ವಿಳಾಸಕ್ಕೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ರಾಮನಗರ ಜಿಲ್ಲೆ, ಇವರು ನೀಡಲಾದ ಜ್ಞಾಪನದ ಸಂಖ್ಯೆ:ಜಿಸಂಸಂ/ರಾಮ/ಆಡಳಿತ/30/07–08 ದಿನಾಂಕ 15.05.2008 ರಲ್ಲಿ ನಿಮ್ಮ ಅನಧಿಕೃತ ಗೈರುಹಾಜರಾತಿಯಿಂದ ಅವರ ಕಛೇರಿಯ ಸಿಬ್ಬಂದಿಗಳ ಮಾಸಿಕ ವೇತನ ಬಿಲ್ಲು ತಯಾರಿಕೆ ಸಹಿತವಾಗಿ ಆಡಳಿತ ಮತ್ತು ಲೆಕ್ಕ ವಿಭಾಗದ ಕರ್ತವ್ಯ ನಿರ್ವಹಣೆ ಸಂಪೂರ್ಣವಾಗಿ ಸ್ಥಗಿತಗೊಂಡಿರುವುದನ್ನು ವಿವರಿಸಿ, ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಲಾಗಿದ್ದರೂ, ನೀವು ಸರ್ಕಾರದ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾತಿಯನ್ನು

ಮುಂದುವರೆಸಿದ್ದರಿಂದ, ಕಛೇರಿ ಕಾರ್ಯಗಳ ನಿರ್ವಹಣೆಗಾಗಿ ನಿಮಗೆ ಕಛೇರಿಯಲ್ಲಿ ನೀಡಲಾದ ಕಪಾಟಿನ ಬೀಗವನ್ನು ದಿನಾಂಕ 15.05.2008 ರಂದು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಮತ್ತು ಆ ಕಛೇರಿಯ ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ತೆರೆಯಿಸಿ, ನೀವು ನಿರ್ವಹಿಸುತ್ತಿದ್ದ/ಬಾಕಿ ಇಟ್ಟುಕೊಂಡಿದ್ದ ಪತ್ರವ್ಯವಹಾರ, ಸೇವಾ ಪುಸ್ತಕಗಳು, ಕಡತಗಳನ್ನು ಮತ್ತು ಇನ್ನಿತರ ದಾಖಲಾತಿಗಳನ್ನು ಆ ಕಛೇರಿ ವಶಕ್ಕೆ ಪಡೆದುಕೊಂಡು, ಆ ವಿಭಾಗದ ಕರ್ತವ್ಯ ನಿರ್ವಹಣೆ ಮುಂದುವರೆಸಲಾಗಿದೆಯಾದರೂ, ಜವಾಬ್ದಾರಿಯುತವಾದ ಪ್ರಥಮ ದರ್ಜೆ ಸಹಾಯಕರಾದ ಹುದ್ದೆಯಲ್ಲಿದ್ದ ಸರ್ಕಾರಿ ನೌಕರರಾದ ನೀವು ಅತ್ಯಂತ ಬೇಜವಾಬ್ದಾರಿ ರೀತಿಯ ದುರ್ನಡತೆ ಪ್ರದರ್ಶಿಸಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 3 ಅನ್ನು ಸಂಪೂರ್ಣವಾಗಿ ಉಲ್ಲಂಘಿಸಿರುತ್ತೀರಿ.

ಆರೋಪ : 4

6. ಆಪಾದಿತ ಸರ್ಕಾರಿ ನೌಕರರಾದ (accused Government Official) ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಅದೇ ಕಛೇರಿಯ ದ್ವಿತೀಯ ದರ್ಜೆ ಸಹಾಯಕರಾದ ಶ್ರೀಮತಿ ಆರ್. ಜ್ಯೋತಿ, ಇವರ ಅಕ್ಟೋಬರ್ 2007 ರಿಂದ ಫೆಬ್ರವರಿ 2008ರ ವರೆಗಿನ ವೇತನಕ್ಕೆ ಸಂಬಂಧಿಸಿದಂತೆ ಒಟ್ಟು ರೂ.34,774/- ರ ಬಿಲ್ಲನ್ನು ತಯಾರಿಸಿ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಂದ ರುಜು ಪಡೆದುಕೊಂಡು ಖಜಾನೆಯಿಂದ ರೂ.34,774/- ರ ಚೆಕ್ ಸ್ವೀಕೃತಿಯಾದ ನಂತರ, ನಿಯಮಾನುಸಾರ ನಗದೀಕರಿಸಿ ಸದರಿ ದ್ವಿತೀಯ ದರ್ಜೆ ಸಹಾಯಕರಿಗೆ ರೂ.32,774/- ಗಳನ್ನು ಮಾತ್ರ ವಿತರಿಸಿ, ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ರೂ.2,000/- ಗಳನ್ನು ಸರ್ಕಾರದ ಹಣವನ್ನು ಸ್ವಂತಕ್ಕಾಗಿ ದುರ್ಬಳಕೆ ಮಾಡಿಕೊಂಡಿದ್ದಲ್ಲದೆ ವೇತನ ಬಟವಾಡೆ ಪುಸ್ತಕದಲ್ಲಿ ರೂ.34,774/- ಎಂದು ಇದ್ದ ಮೊತ್ತವನ್ನು ರೂ.32,774/- ಎಂದು ತಿದ್ದಿ, ಮೇಲಾಧಿಕಾರಿಗಳಿಗೆ ದಾರಿ ತಪ್ಪಿಸುವ ಹಾಗೂ ಕಛೇರಿ ಮುಖ್ಯಸ್ಥರಿಗೆ ಮತ್ತು ಸರ್ಕಾರಕ್ಕೆ ಮೋಸ ಮಾಡುವ ದುರುದ್ದೇಶದಿಂದ ಹಣಕಾಸಿನ ವಿಷಯಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನಿಮ್ಮ ಸ್ವಹಿತದೃಷ್ಟಿಯಿಂದ ಬದಲಾಯಿಸಿ ದಂಡಾರ್ಹ ದುರ್ನಡತೆ (criminal misconduct) ಪ್ರದರ್ಶಿಸಿ ನಂಬಿಕೆ ದ್ರೋಹ ಎಸಗಿರುತ್ತೀರಿ.

ಆರೋಪ : 5

7. ಆಪಾದಿತ ಸರ್ಕಾರಿ ನೌಕರರಾದ (accused Government Official) ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಅನ್ಯ ಕರ್ತವ್ಯದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ 01.12.2006 ರಿಂದ ಹೊಸಕೋಟೆ ತಾಲ್ಲೂಕು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕು: ವೀಣಾ ಕುಲಕರ್ಣಿ, ಗಣತಿದಾರರಿಂದ ರೂ.5,600/- (ರೂ.ಐದು ಸಾವಿರದ ಆರು ನೂರುಗಳು ಮಾತ್ರ) ಗಳನ್ನು ಸರ್ಕಾರದ ಕಛೇರಿಯಲ್ಲಿ ಅನುಷ್ಠಾನಗೊಳಿಸದೆ ಇದ್ದ ಉದ್ದೇಶಕ್ಕಾಗಿ ಪಡೆದುಕೊಂಡಿರುತ್ತೀರೆಂದು, ಸದರಿ ಗಣತಿದಾರರು ದಿನಾಂಕ 14.05.2008 ರಂದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರಿಗೆ ನಿಮ್ಮ ವಿರುದ್ಧ ದೂರು ನೀಡಿರುತ್ತಾರೆ.

8. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಜವಾಬ್ದಾರಿಯುತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೀವು ಆಡಳಿತ ಮತ್ತು ಲೆಕ್ಕ ವಿಷಯಕ್ಕೆ ಸಂಬಂಧಿಸಿದಂತೆ ಸಹೋದ್ಯೋಗಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಬದಲಾಗಿ ಸರ್ಕಾರದ ಕಛೇರಿಗಳಲ್ಲಿ ಇನ್ನು ಅನುಷ್ಠಾನಗೊಳಿಸದೇ ಉದ್ದೇಶಕ್ಕಾಗಿ ಎಂದು ಸಹೋದ್ಯೋಗಿಗಳಿಗೆ ತಪ್ಪು ಮಾಹಿತಿ ನೀಡಿ, ಅವರಿಂದ ಹಣ ವಸೂಲು ಮಾಡಿ ಸಹೋದ್ಯೋಗಿಗಳಿಗೆ ಮತ್ತು ಕಛೇರಿ ಮುಖ್ಯಸ್ಥರಿಗೆ ನಂಬಿಕೆ ದ್ರೋಹ ಎಸಗಿ, ಗಂಭೀರ ಸ್ವರೂಪದ ದುರ್ನಡತೆ ಎಸಗಿರುತ್ತೀರೆಂದು ಸ್ಪಷ್ಟವಾಗಿ ಕಂಡು ಬರುತ್ತದೆ.

ಆರೋಪ : 6

9. ಸದರಿ ಆಪಾದಿತ ಸರ್ಕಾರಿ ನೌಕರರಾದ (accused Government Official) ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ, ಇಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾಗ 4ನೇ ಆರೋಪದಲ್ಲಿ ವಿವರಿಸಲಾದ ಆ ಕ್ರಮದ ವಿಧಾನದಂತೆ ಮತ್ತೊಂದು ವಂಚನೆ ಪ್ರಕರಣವನ್ನು ಎಸಗಿರುವ ಕುರಿತು ಕುಮಾರಿ ಪಿ. ಮಂಜು, ಗಣತಿದಾರರು, ತಾಲ್ಲೂಕು ಕಛೇರಿ, ರಾಮನಗರ ಜಿಲ್ಲೆ, ಇವರು ದಿನಾಂಕ 26.06.2008 ರಂದು ನಿಮ್ಮ ವಿರುದ್ಧ ನೀಡಿದ ದೂರಿನಲ್ಲಿ ವಿವರಿಸುತ್ತಾ, "ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು, ಇವರು ಡಿ.ಸಿ.ಪಿ.ಎಸ್. ಹಣ ರೂ.2,500/-ಗಳನ್ನು ಪಡೆದು ಖಜಾನೆಗೆ ಸಂದಾಯ ಮಾಡಬೇಕೆಂದು ತಿಳಿಸಿದ್ದು, ಅವರಿಗೆ ನಾನು ನವೆಂಬರ್ 2007ರ ಕೊನೆ ದಿನದಂದು ರೂ.2,500/- ಗಳನ್ನು ಕೊಟ್ಟಿರುವುದಾಗಿ, ಅದಕ್ಕೆ ಅವರು ನನಗೆ ಯಾವುದೇ ರೀತಿಯ ಸ್ವೀಕೃತಿಯನ್ನು ನೀಡಿರುವುದಿಲ್ಲ" ಎಂದು ಗಂಭೀರ ಸ್ವರೂಪದ ಆರೋಪ ಮಾಡಿದ್ದನ್ನು ಪರಿಗಣಿಸಲಾಗಿ ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿ ನಿಮ್ಮ ಸಹೋದ್ಯೋಗಿಗಳಿಗೆ ಹಾಗೂ ಕಛೇರಿ ಮುಖ್ಯಸ್ಥರಿಗೆ ಹಾಗೂ ಸರ್ಕಾರಕ್ಕೆ ನಂಬಿಕೆ ದ್ರೋಹ ಎಸಗಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 1966 ರ ನಿಯಮ 3 ಅನ್ನು ಉಲ್ಲಂಘಿಸಿರುತ್ತೀರಿ.

ಆರೋಪ : 7

10. ಸದರಿ ಆಪಾದಿತ ಸರ್ಕಾರಿ ನೌಕರರಾದ ಹಾಗೂ ಪ್ರಸ್ತುತ ಅಮಾನತ್ತಿನಲ್ಲಿರುವ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ದಿನಾಂಕ 11.02.2008 ರಂದು ಸಲ್ಲಿಸಿದ ಮನವಿಯಲ್ಲಿ "ದಿನಾಂಕ 31.01.2008 ರಂದು ಕೇಂದ್ರ ಕಛೇರಿಯಿಂದ ಬಿಡುಗಡೆ ಹೊಂದಿ ಸೇರಿಕೆ ಕಾಲವನ್ನು ಉಪಯೋಗಿಸಿಕೊಂಡು ದಿನಾಂಕ 11.02.2008 ರಂದು ಪೂರ್ವಾಹ್ನ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ,

ಇಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಿದ್ದೇನೆ" ಎಂದು ನಮೂದಿಸಿ ವರದಿ ಮಾಡಿಕೊಂಡಿದ್ದು, ನಂತರ ಈ ಕೆಳಗೆ ತಿಳಿಸಲಾದ ದಿನಾಂಕಗಳಂ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತೀರಿ:

1. ದಿನಾಂಕ 01.05.2008 ರಿಂದ 31.05.2008
2. ದಿನಾಂಕ 01.06.2008 ರಿಂದ 31.06.2008

11. ದಿನಾಂಕ 01.07.2008 ರಂದು ನೀವು ಕರ್ತವ್ಯಕ್ಕೆ ನಿಗಧಿತ ಸಮಯಕ್ಕೆ ಹಾಜರಾಗದೆ ಇದ್ದುದ್ದಕ್ಕಾಗಿ ಅಥವಾ ಅನಧಿಕೃ ಗೈರುಹಾಜರಾಗಿದ್ದುದ್ದನ್ನು ಪರಿಗಣಿಸಿ, ಆ ದಿನದ ನಿಮ್ಮ ಹಾಜರಾತಿಯನ್ನು (X) ಎಂದು ಹಾಜರಾತಿ ಪುಸ್ತಕದಲ್ಲಿ ಗುರುತಿಸಲಾಗಿದ್ದರೂ, ಕಛೇ ಮುಖ್ಯಸ್ಥರ ಅನುಮತಿ ಪಡೆಯದೆ ಅಥವಾ ಅವರಿಂದ ದೃಢೀಕರಿಸದೆ ದಿನಾಂಕ 01.07.2008 ರಂದು (X) ಎಂದು ಗುರುತಿಸಲಾಗಿದ್ದರೂ, ಅದರ ಕೆಳ ಸಹಿ ಮಾಡಿ ಗಂಭೀರ ಸ್ವರೂಪದ ಲೋಪದೋಷ ಎಸಗಿ ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿರುತ್ತೀರಿ. ದಿನಾಂಕ 08.03.198 ರಂದು ದ್ವಿತೀಯ ದರ್ಜೆ ಸಹಾಯಕರಾಗಿ ಸರ್ಕಾರಿ ಸೇವೆಗೆ ಸೇರಿದ ನೀವು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಮೈಸೂರು, ನಂತರ ಕೇಂ ಕಛೇರಿಯಲ್ಲಿ ಹಲವಾರು ವರ್ಷಗಳ ಸೇವೆ ಸಲ್ಲಿಸಿದ್ದರೂ ಹಾಗೂ ಹೊಸದಾಗಿ ಸರ್ಕಾರಿ ಸೇವೆಗೆ ಸೇರಿದ ಸಿಬ್ಬಂದಿಗಳಿಗೆ ಮಾದರಿಯಾಗಿ (exemplar ವರ್ತಿಸಿ ಅಂತಹವರಿಗೆ ಸರ್ಕಾರದ ಸೇವೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡಬಹುದಾದ ನೀವು 24 ವರ್ಷಗಳ ಸೇವೆಯ ನಂತರವೂ ಅನಧಿಕ ಗೈರುಹಾಜರಾಗುವ ಪ್ರವೃತ್ತಿಯನ್ನು ನಿರಂತರವಾಗಿ ಮುಂದುವರೆಸಿ, ಅತ್ಯಂತ ಬೇಜವಾಬ್ದಾರಿಯ ನಡತೆಯನ್ನು ಪ್ರದರ್ಶಿಸಿ ಕರ್ನಾಟಕ ನಾಗರೀಕ ಸೇವ (ನಡತೆ) ನಿಯಮಗಳು 1966 ನಿಯಮ 3ಕ್ಕೆ ವಿರುದ್ಧವಾಗಿ ವರ್ತಿಸಿರುತ್ತೀರಿ.

ಆರೋಪ : 8

12. ಪ್ರಸ್ತುತ ಅಮಾನತ್ತಿನಲ್ಲಿರುವ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರಾದ ನೀವು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಅನ್ಯ ಕರ್ತವ್ಯದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಈ ಕೆಳಗೆ ತಿಳಿಸಲಾದ ಅವಧಿಯಲ್ಲಿ ಕರ್ತವ್ ಅನಧಿಕೃತ ಗೈರುಹಾಜರಾಗಿರುತ್ತೀರಿ:–

1. ದಿನಾಂಕ 14.05.2007 ರಿಂದ 24.05.2007 – ಈ ಬಗ್ಗೆ ನಿಮಗೆ ದಿನಾಂಕ 18.05.2007 ರಂದು ಜ್ಞಾಪನ ನೀಡಲಾಗಿದ್ದರೂ ಅದಕ್ಕೆ ವಿವರಣೆ ಸಲ್ಲಿಸಿರುವುದಿಲ್ಲ. ಸ್ವತ: ನೀವೆ ಕಾರ್ಯನಿರ್ವಾಹಕರಾಗಿದ್ದರಿಂದ ಅನ್ಯ ಕರ್ತವ್ಯದ ಮೇಲಿದ್ದ ನಿಮ್ಮ "ಹಾಜರಾತಿ ಕುರಿತು" ಪ್ರತಿ ತಿಂಗಳು ಕೇಂದ್ರ ಕಛೇರಿಗೆ ವೇತನ ನೀಡುವುದಕ್ಕಾಗಿ ಮಾಹಿತಿ ನೀಡಬೇಕಾಗಿದ್ದರೂ, ಉದ್ದೇಶಪೂರ್ವಕವಾಗಿ ಸಲ್ಲಿಸಿರುವುದಿಲ್ಲ. ಅದೇ ಅವಧಿಯಲ್ಲಿ ನಿಮ್ಮನ್ನು ನಂಜನಗೂಡು "ಪೋಲೀಸ್‌ಠಾಣೆ" ಯಲ್ಲಿ ಇಟ್ಟಿರುವುದಾಗಿ ಮೌಖಿಕವಾಗಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಗೆ ತಿಳಿಸಿದ್ದರಿಂದ ಕರ್ತವ್ಯಕ್ಕೆ ಗೈರುಹಾಜರಾಗಿ ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿರುತ್ತೀರಿ.

ಆರೋಪ : 9

13. ಆಗಸ್ಟ್ 2007 ರಲ್ಲಿನ ನಿಮ್ಮ ಅನಧಿಕೃತ ಗೈರುಹಾಜರಾತಿಯನ್ನು ಮುಚ್ಚಿ ಹಾಕಲು, ಸ್ವತ: ಜವಾಬ್ದಾರಿಯುತ ಪ್ರಥಮ ದರ್ಜೆ ಸಹಾಯ ಹುದ್ದೆಯಲ್ಲಿದ್ದ ನೀವು ನಿಮಗೆ ವಹಿಸಲಾದ ಸರ್ಕಾರದ ದಾಖಲಾತಿಗಳನ್ನು ಸುರಕ್ಷಿತವಾಗಿಡುವ ಬದಲಾಗಿ ಆಗಸ್ಟ್ 2007ರ "ಹಾಜರಾತಿ ಮಸ್ತಕ ಭಾಗವನ್ನು" ಹರಿದುಹಾಕಿ ಸರ್ಕಾರಿ ನೌಕರರೊಬ್ಬರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿರುತ್ತೀರಿ.

ಆರೋಪ : 10

14. ಪ್ರಸ್ತುತ ಅಮಾನತ್ತಿನಲ್ಲಿರುವ ಸರ್ಕಾರಿ ನೌಕರರಾದ ನೀವು ದಿನಾಂಕ 14.05.2007 ರಿಂದ 24.05.2007 ರ ವರೆಗೆ ಅನಧಿಕೃತ ಗೈ ಹಾಜರಾಗಿದ್ದರಿಂದ ನಿಮಗೆ ವಹಿಸಲಾದ ಆಡಳಿತ ಮತ್ತು ಲೆಕ್ಕ ವಿಭಾಗದ ಕರ್ತವ್ಯಗಳ ನಿರ್ವಾಹಕರು/ಸಿಬ್ಬಂದಿಗಳ ವೈಯಕ್ತಿಕ ಸೇವಾ ವಿಷಯದಲ್ಲಿ ತ ಉಂಟು ಮಾಡಿ, ಅತ್ಯಂತ ಬೇಜವಾಬ್ದಾರಿಯಾಗಿ ವರ್ತಿಸಿರುತ್ತೀರಿ.

ಆರೋಪ : 11

15. ಪ್ರಸ್ತುತ ಅಮಾನತ್ತಿನಲ್ಲಿದ್ದ ಸರ್ಕಾರಿ ನೌಕರರಾದ ನೀವು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ ಇಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಈ ಕೆಳಗೆ ತಿಳಿಸಲಾದ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತೀರಿ:–

1) ಶ್ರೀ ಕೆ. ಸಿದ್ದರಾಜು, ಸಹಾಯಕ ನಿರ್ದೇಶಕರು, ಇವರ ಪ್ರವಾಸದ ಬಿಲ್ಲು ಹಣ:

(ಅ) ಮೇ 2007	:	ರೂ. 374.00
(ಆ) ಜೂನ್ 2007	:	ರೂ. 246.00
(ಇ) ಜುಲೈ 2007	:	ರೂ. 164.00
(ಈ) ಆಗಸ್ಟ್ 2007	:	ರೂ. 741.00

2) ತಾಲ್ಲೂಕು ಯೋಜನಾ ಘಟಕಕ್ಕೆ ವರ್ಗಾವಣೆ ಆದೇಶದಲ್ಲಿದ್ದ ಶ್ರೀ ಕೆ. ಸಿದ್ದರಾಜು, ಸಹಾಯಕ ನಿರ್ದೇಶಕರು, ಇವರಿಗೆ ಮಂಜೂರಾದ ಹಬ್ಬ ಮುಂಗಡ ರೂ. 2,000/– ಗಳನ್ನು ಸರ್ಕಾರಕ್ಕೆ ಜಮಾ ಮಾಡುವಂತೆ ಜವಾಬ್ದಾರಿಯುತ ಪ್ರಥಮ ದರ್ಜೆ ಸಹಾಯಕರಾದ ಹಾಗೂ ಆಡಳಿತ ಮತ ಲೆಕ್ಕ ವಿಭಾಗದ ಕಾರ್ಯನಿರ್ವಾಹಕರಾದ ನಿಮಗೆ ಅವರು ನೀಡಿದ್ದನ್ನು ಸರ್ಕಾರಕ್ಕೆ ಜಮಾ ಮಾಡದೆ, ಈ ಹಣವನ್ನು ದುರುಪಯೋ ಪಡಿಸಿಕೊಂಡಿರುತ್ತೀರಿ.

3) ಈ ನಿರ್ದೇಶನಾಲಯದ ಆದೇಶದ ದಿನಾಂಕ 29.06.2006 ರನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸರ್ಕಾರದ ಆದೇಶದ ಸಂಖ್ಯೆ: ಪಿಡಿ/25/ಎಸ್‌ಆರ್‌ಪಿ/2006, ದಿನಾಂಕ 27.07.2006ರಲ್ಲಿ ಮಂಜೂರಾದ ತುಟ್ಟಿಭತ್ಯೆ ಬಾಕಿಯನ್ನು ಈ ಕೆಳಗೆ ತಿಳಿಸಲಾದ ಅಧಿಕಾರಿಗಳಿಗೆ ವಿತರಿಸದೇ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ.

1. ಸಹಾಯಕ ನಿರ್ದೇಶಕರಾಗಿದ್ದ ಶ್ರೀ ಕೆ. ಸಿದ್ದರಾಜು	:	ರೂ. 879.00
2. ಸ್ವತ: ಕಛೇರಿ ಮುಖ್ಯಸ್ಥರಾಗಿದ್ದ ಶ್ರೀ ಬಿ. ಶ್ರೀನಿವಾಸಾಚಾರ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಇವರ ನವೆಂಬರ್ ತಿಂಗಳಿನ ವೇತನ ವ್ಯತ್ಯಾಸ (ಈ ಹಣವನ್ನು ದುರುಪಯೋಗ ಪಡಿಸಿಕೊಳ್ಳುವ ಉದ್ದೇಶದಿಂದ ನೀವು ಸ್ವತ: ತಯಾರಿಸಿದ ಬಿಲ್ಲಿನಲ್ಲಿ ಯಾವ ವಿಷಯ ಎಂದು ನಮೂದಿಸಿರುವುದಿಲ್ಲ).	:	ರೂ. 505.00

ಆರೋಪ : 12

16. ಪ್ರಸ್ತುತ ಅಮಾನತ್ತಿನಲ್ಲಿರುವ ಪ್ರಥಮ ದರ್ಜೆ ಸಹಾಯಕರಾದ ಶ್ರೀ ಆದಿಕುಮಾರ್, ಆದ ನೀವು 2004ನೇ ಸಾಲಿನಲ್ಲಿ ಕೇಂದ್ರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀಮತಿ ಗಿರಿಯಮ್ಮ, ಗಣತಿದಾರರಿಗೆ ಸಂಬಂಧಿಸಿದ ಕಡತವನ್ನು ಪರಿಶೀಲಿಸುವಲ್ಲಿ ಎಸಗಿದ್ದ ಲೋಪದೋಷಗಳ ಕುರಿತು ನಿಮಗೆ ನೀಡಲಾದ ಜ್ಞಾಪನದ ದಿನಾಂಕ 05.10.2007ಕ್ಕೆ ಸಂಬಂಧಿಸಿದಂತೆ, ದಿನಾಂಕ 29.10.2007 ರಂದು ನೀಡಿದ ನಿಮ್ಮ ವಿವರಣೆಯಲ್ಲಿ ನೀವು ಯಾವುದೇ ಲೋಪದೋಷಗಳನ್ನು ಎಸಗದೆ ಇದ್ದಾಗಲೂ, ನಿಮ್ಮ ಮೇಲಿನ "ವೈಯಕ್ತಿಕ ದ್ವೇಷ" ಮತ್ತು "ಸೇಡಿನಿಂದ" ಆ ಜ್ಞಾಪನವನ್ನು ನಿಮಗೆ ನೀಡುವಂತೆ ಮಾಡಿದ್ದರಿಂದ ನಿಮಗೆ "ಮಾನಸಿಕ ಹಿಂಸೆ" ಯಾಗಿದ್ದು ನಿಮ್ಮ ಕುಟುಂಬದವರೆಲ್ಲದೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆಂದು ಹಾಗೂ ಸದರಿ ಅವರಿಗೆ "ಮಾನಸಿಕ ಹಿಂಸೆ" ನೀಡುತ್ತಿರುವವರೇ ನಿಮ್ಮ ಆತ್ಮಹತ್ಯೆಗೆ ಕಾರಣರಾಗುತ್ತಿರೆಂದು ನಿಮಗೆ ಜ್ಞಾಪನ ನೀಡಿದ ಇಲಾಖಾ ಮುಖ್ಯಸ್ಥರಿಗೆ ಹೆದರಿಸಿರುವ (block mail) ನಿಮ್ಮ ವರ್ತನೆಯು ಸರ್ಕಾರಿ ನೌಕರರೊಬ್ಬನಿಗೆ ಸಲ್ಲದ ರೀತಿಯಲ್ಲಿರುತ್ತದೆ.

17. ಕೇಂದ್ರ ಕಛೇರಿಯಿಂದ ನಿಮ್ಮನ್ನು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಗೆ ನಿಯೋಜಿಸಿದ/ ವರ್ಗಾವಣೆ ನಂತರವೂ ನಿಮ್ಮ ಅನಧಿಕೃತ ಹೈರುಹಾಜರಾತಿ, ಕರ್ತವ್ಯಲೋಪ, ದುರ್ನಡತೆ, ಸರ್ಕಾರದ ಹಣದ ದುರುಪಯೋಗ ನಿರಂತರವಾಗಿ ಆ ಕಛೇರಿಯಲ್ಲಿಯೂ ಮುಂದುವರೆದಿದ್ದರಿಂದ ನಿಮಗೆ ಹಲವಾರು ಜ್ಞಾಪನಗಳನ್ನು ನೀಡುವ, ನಿಮ್ಮನ್ನು ಸೇವೆಯಿಂದ ಅಮಾನತ್ತುಗೊಳಿಸುವಂತಹ ಪರಿಸ್ಥಿತಿಗೆ ಸ್ವತ: ನೀವೇ ಕಾರಣರಾಗಿದ್ದರಿಂದ, ಈ ಎಲ್ಲಾ ಕಾರಣಗಳಿಂದಾಗಿ "ಮಾನಸಿಕ ಹಿಂಸೆ" ಎಂದು ಪರಿಗಣಿಸಿಕೊಂಡು "ಆತ್ಮಹತ್ಯೆ" ಮಾಡಿಕೊಂಡಲ್ಲಿ ಅದು ನಿಮ್ಮ "Congnizable Offence" ಎಂದು (ತಕ್ಷಣ ಪೋಲೀಸಿನವರು ದಸ್ತಗಿರಿ ಮಾಡಬಹುದಾದ ಅಪರಾಧ) ಪರಿಗಣಿಸುವಂತೆ ಸೂಚಿಸಲಾಗಿತ್ತು ಹಾಗೂ ಶ್ರೀಮತಿ ಗಿರಿಯಮ್ಮ, ಗಣತಿದಾರರು, ಇವರ ಖಾಯಂಪೂರ್ವ ಅವಧಿಯನ್ನು ಘೋಷಿಸುವ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಮಗೆ ನೀಡಲಾದ ಜ್ಞಾಪನಕ್ಕೆ ವಿವರಣೆ ನೀಡುವಂತೆ ಸೂಚಿಸಲಾಗಿದ್ದರೂ, ನಿಮ್ಮ ವಿವರಣೆ ನೀಡಿರುವುದಿಲ್ಲ.

18. ಆಪಾದಿತ ಸರ್ಕಾರಿ ನೌಕರರಾದ ಶ್ರೀ ಆದಿಕುಮಾರ್, ಪ್ರಥಮ ದರ್ಜೆ ಸಹಾಯಕರು (ಪ್ರಸ್ತುತ ಅಮಾನತ್ತಿನಲ್ಲಿ) ಆದ ನಿಮ್ಮ ವಿರುದ್ಧದ ಮೇಲೆ ತಿಳಿಸಲಾದ ಎಲ್ಲಾ ಆರೋಪಗಳಿಗೆ ಸಂಬಂಧಿಸಿದಂತೆ, ವಿಶೇಷವಾಗಿ ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಕುಮಾರಿ ಆರ್. ಜ್ಯೋತಿ, ದ್ವಿತೀಯ ದರ್ಜೆ ಸಹಾಯಕರಿಗೆ ವೇತನ ನೀಡುವ ವಿಷಯದಲ್ಲಿ ದಾಖಲಾತಿಗಳನ್ನು ನಿಮ್ಮ ಸ್ವಹಿತದೃಷ್ಟಿಯಿಂದ ದುರುದ್ದೇಶಪೂರಕವಾಗಿ ಬದಲಾಯಿಸಿ (tampering of government records) ಗಂಭೀರ ಸ್ವರೂಪದ ದುರ್ನಡತೆ ಪ್ರದರ್ಶಿಸಿ (Criminal misconduct) ಸರ್ಕಾರಕ್ಕೆ ನಂಬಿಕೆ ದ್ರೋಹ ಎಸಗಿರುವುದರಿಂದ ಹಾಗೂ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿ ನಿರಂತರವಾಗಿ ಅಧಿಕೃತ ಗೈರುಹಾಜರಾಗಿ, ಕರ್ತವ್ಯಲೋಪ, ಬೇಜವಾಬ್ದಾರಿತನ ಮತ್ತು ದುರ್ನಡತೆ ಪ್ರದರ್ಶಿಸಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3 ಅನ್ನು ಉಲ್ಲಂಘಿಸಿದ್ದರಿಂದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಏರ್ಪಡಿಸಲು ಉದ್ದೇಶಿಸಲಾಗಿದೆ.

19. ಶ್ರೀಯುತ ಎಂ.ಎನ್. ಚಾಕರಿ ರವರು ಶಿಸ್ತು ಪ್ರಾಧಿಕಾರಿ ಪರವಾಗಿ 10 ಸಾಕ್ಷಿಗಳನ್ನು ನನ್ನ ಮುಂದೆ ವಿಚಾರಿಸಿದರು. ನಿ.ಪಿ.1 ರಿಂದ ನಿ.ಪಿ.30 ದಾಖಲೆಗಳ ಮೇಲೆ ಅವಲಂಬಿಸಿದರು. ಆಪಾದಿತ ನೌಕರ ನಿ.ಡಿ.1 ಮತ್ತು ಡಿ2 ಹಾಗೂ ತನ್ನ ಲಿಖಿತ ವಾದದ ಮೇಲೆ ಅವಲಂಬಿಸಿದರು. ತಾನು ಸಾಕ್ಷಿಯಾಗಿ ಪ್ರತ್ಯೇಕ ಹೇಳಿಕೆ ನೀಡಿಲ್ಲ. ನನ್ನ ಮುಂದೆ ಹಾಜರುಪಡಿಸಿದ ಸಾಕ್ಷಿ ಹೇಳಿಕೆ ಹಾಗೂ ದಾಖಲೆಗಳ ಮೇಲೆ ಆಧರಿಸಿ ನಾನು ಕೇಳಿದ 21 ಪ್ರಶ್ನೆಗಳಿಗೆ ದಿನಾಂಕ 04-01-2010 ರಂದು ಉತ್ತರ ನೀಡಿದ್ದಾರೆ.

20. ಈ ಇಲಾಖಾ ವಿಚಾರಣೆಯಲ್ಲಿ ಉದ್ಭವಿಸುವ ಮುಖ್ಯ ಅಂಶಗಳು.

ಆಪಾದಿತರು ದಿ. 13-07-2007 ರಂದು ನಿ.ಪಿ.4 ಕ್ಕೆ ಶ್ರೀ ಸಿದ್ದರಾಜು, ಸಹಾಯಕ ಸಾಂಖ್ಯಿಕ ಅಧಿಕಾರಿ ಮೇಲಾಧಿಕಾರಿಗೆ ಸರಿಯಾಗಿ ತಿಳಿಸದೆ ಸಹಿ ತೆಗೆದುಕೊಂಡಿದ್ದಾರೆಯೇ?

ಆಪಾದಿತರು ತನ್ನ ಕೆಲಸದ ಪ್ರಭಾರೆಯನ್ನು ವರ್ಗವಾದ ಮೇಲೆ ಕೊಡಲಿಲ್ಲವೇ ?

ಆಪಾದಿತರು ದಿ. 01-12-2006 ರಂದು ರೂ. 5600/- ಗಳನ್ನು ಶ್ರೀಮತಿ ವೀಣಾ ಕುಲಕರ್ಣಿ ಯವರಿಂದ ಅಕ್ರಮವಾಗಿ ತೆಗೆದುಕೊಂಡಿದ್ದಾರೆಯೇ ?

ಆಪಾದಿತರು ರೂ. 2000/- ಗಳ ಸರ್ಕಾರಿ ಹಣ ದುರುಪಯೋಗ ಮಾಡಿದ್ದಾರೆಯೇ ?

ಆಪಾದಿತರು ತನ್ನ ಕರ್ತವ್ಯಕ್ಕೆ ಗೈರು ಹಾಜರಾದರೇ ಮತ್ತು ಬೇಜವಾಬ್ದಾರಿಯಿಂದ ವರ್ತಿಸಿದರೇ ?

ಆಪಾದಿತರು ದಿ. 01-05-2008 ರಿಂದ 30-06-2008 ರ ವರೆಗೆ ಅನಧಿಕೃತ ಗೈರು ಹಾಜರಾಗಿದ್ದಾರೆಯೇ?

ಆಪಾದಿತರು ಶ್ರೀಮತಿ ಪಿ. ಮಂಜು ಅವರಿಂದ ರೂ. 2500/- ಗಳನ್ನು ಅನಧೀಕೃತವಾಗಿ ಪಡೆದಿದ್ದಾರೆಯೇ?

ದಿನಾಂಕ 14-05-2007 ರಿಂದ 24-05-2007 ರ ವರೆಗೆ ಆಪಾದಿತರು ಗೈರು ಹಾಜರಾಗಿದ್ದಾರೆಯೇ ?

ಆಪಾದಿತರು 2007ರ ಆಗಸ್ಟ್ ತಿಂಗಳ ಹಾಜರಾತಿ ಪುಸ್ತಕದ ಹಾಳೆಯನ್ನು ಹರಿದು ಹಾಕಿದ್ದಾರೆಯೇ?

ಆಪಾದಿತರು ದಿ. 14-05-2007 ರಿಂದ 24-05-2007ರ ವರೆಗೆ ಗೈರು ಹಾಜರಾಗಿ ತನ್ನ ಕಛೇರಿ ಕರ್ತವ್ಯ ಪಾಲಿಸುವುದರಲ್ಲಿ ಬೇಜವಾಬ್ದಾರಿತನಯಿಂದ ವರ್ತಿಸಿದ್ದಾರೆಯೇ?

ಆಪಾದಿತರು 11ನೇ ಆರೋಪದ 1ನೇ ಭಾಗದಲ್ಲಿದ್ದಂತೆ ರೂ.374/-, ರೂ. 246/-, ರೂ. 164/-, ರೂ. 741/-, 2ನೇ ಭಾಗದಲ್ಲಿದಂತೆ ರೂ. 2,000/- ಗಳು ಮತ್ತು 3ನೇ ಭಾಗದಲ್ಲಿದಂತೆ ರೂ. 879/-, ರೂ. 505/- ಗಳ ಮೊತ್ತವನ್ನು ಸಂಬಂಧಪಟ್ಟ ತನ್ನ ಸಹೋದ್ಯೋಗಿ ಸರ್ಕಾರಿ ನೌಕರರಿಗೆ ನೀಡದೆ ದುರುಪಯೋಗ ಮಾಡಿದ್ದಾರೆಯೇ ?

ಆಪಾದಿತರು ಕಛೇರಿಯ ನಿರ್ದೇಶಕರಿಗೆ ತನ್ನ ಕಾಗದದಲ್ಲಿ ತಾನು ಆತ್ಮಹತ್ಯೆ ಮಾಡಿಕೊಳ್ಳುವೆನೆಂದು ಬರೆದು ಹೆದರಿಸಿದ್ದಾರೆಯೇ?

21. ಉತ್ತರ

1 ರಿಂದ 8 ಹಾಗೂ 10 ರಿಂದ 12 ಮುಖ್ಯಾಂಶಗಳಿಗೆ ನನ್ನ ಉತ್ತರ ಸಕಾರಾತ್ಮಕವಾಗಿದೆ. 9ನೇ ಆರೋಪಕ್ಕೆ ನಕಾರಾತ್ಮಕ ಅಭಿಪ್ರಾಯ ವ್ಯಕ್ತಪಡಿಸುತ್ತೇನೆ.

ಕಾರಣಗಳು :

22. 1ನೇ ಸಾಕ್ಷಿ ಬಿ. ಶ್ರೀನಿವಾಸಾಚಾರ್ ದಿನಾಂಕ 30-05-2009 ರಂದು ಪ್ರಮಾಣ ಮಾಡಿ ನನ್ನ ಮುಂದೆ ಆಪಾದಿತ ನೌಕರರು 2006 ಜುಲೈ ಮೊದಲನೇ ವಾರದಲ್ಲಿ ಅವರ ಬೆಂಗಳೂರು ಗ್ರಾಮಾಂತರ ಜಿಲ್ಲೆ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯ ನಿರ್ವಹಿಸಿದರು ಮತ್ತು ಸಿಬ್ಬಂದಿಯ ವೇತನ ಬಿಲ್ಲು ಮತ್ತು ಇತರ ಆಡಳಿತಾತ್ಮಕ ಕೆಲಸವನ್ನು ಅವರಿಗೆ ವಹಿಸಿಕೊಟ್ಟೆ, ಆಪಾದಿತರು ದಿ. 14-5-2007 ರಿಂದ 24-5-2007 ರ ತನಕ ಗೈರುಹಾಜರಾಗಿದ್ದರು. ಆ ಬಗ್ಗೆ ನಾನು ನಿರ್ದೇಶಕರಿಗೆ ನಿ.ಪಿ.1 ರಂತೆ ವರದಿ ನೀಡಿದೆ ಮತ್ತು ಬೇರೆಯವರನ್ನು ಆಪಾದಿತರ ಬದಲಿಗೆ ನೇಮಕಮಾಡಲು ಕೇಳಿಕೊಂಡೆ, ದಿ. 18-5-2007 ರಂದು ಆಪಾದಿತರಿಗೆ ನಿ.ಪಿ.2 ರಂತೆ ಜ್ಞಾಪನ ನೀಡಿದ್ದೆ. ಆಪಾದಿತರು 25-5-2007 ರಂದು ಕಛೇರಿಗೆ ಹಾಜರಾದರು. ಆಪಾದಿತರ ಗೈರು ಹಾಜರಿಯಲ್ಲಿ ನೌಕರರ ವೇತನ ಬಿಲ್ಲುಗಳನ್ನು ತಯಾರು ಮಾಡಲಾಗಲಿಲ್ಲ. ಶ್ರೀ ಚಂದ್ರಶೇಖರ್, ಸಾಂಖ್ಯಿಕ ನಿರೀಕ್ಷಕರು ನಿವೃತ್ತಿ ಹೊಂದಿದ್ದರು. ಅವರ ನಿವೃತ್ತಿ ವೇತನಕ್ಕೆ ಸಂಬಂಧಪಟ್ಟ ಕ್ರಮ ಜರುಗಿಸಲಾಗಲಿಲ್ಲ ಹಾಗೂ ಆಪಾದಿತರಿಗೆ ರಜೆ ಅರ್ಜಿ ಕೊಡಲು ಕೇಳಿಕೊಂಡಿದ್ದೆ. ಸಹಾಯಕ ನಿರ್ದೇಶಕರ ತುಟ್ಟಿ ಭತ್ಯೆ ಬಿಲ್ಲುಗಳನ್ನು ತಯಾರಿಸಿ ಆಪಾದಿತರು ಖಜಾನೆಗೆ ಕಳುಹಿಸಿದ್ದರು. ಖಜಾನೆಯಿಂದ ಹಣ ಬಂದಿರುವುದಿಲ್ಲ ಹಾಗೂ ಈ ತನಕ ತನ್ನ ತುಟ್ಟಿ ಭತ್ಯೆ ಬಂದಿರಲಿಲ್ಲ. ಆದರೆ ಖಜಾನೆಯಲ್ಲಿ ಅವರ ತುಟ್ಟಿ ಭತ್ಯೆ ಬಿಲ್ಲು ಕಾಣೆಯಾಗಿದೆ ಎಂದು ಸಮೂಹ 'ಡಿ' ನೌಕರ ಬಾಲಕೃಷ್ಣ ತಿಳಿಸಿದರು. ಬಸವ ಜಯಂತಿಗೆ ಶ್ರೀ ಸಿದ್ದರಾಜು ಸ.ನಿ. ಇವರಿಗೆ ರೂ. 2,000/- ಗಳನ್ನು ಹಬ್ಬದ ಮುಂಗಡ ಮಂಜೂರು ಮಾಡಿದ್ದೆ. ಅವರು ಆ ಹಣವನ್ನು ಪಡೆದಿದ್ದರು ಮತ್ತು ಆ ಹಣವನ್ನು ಕಟ್ಟಲು ಆಪಾದಿತರ ಕೈಗೆ ಕೊಟ್ಟಿದ್ದರು ಮತ್ತು ಆ ಹಣ ರೂ. 2,000/- ಗಳನ್ನು ತಾನು ಗ್ರಾಮಾಂತರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಅವಧಿಯಲ್ಲಿ ಖಜಾನೆಗೆ ಜಮೆ ಆಗಿರುವುದಿಲ್ಲ. ನಿ.ಪಿ.4 ದಿ. 13-7-2007 ರಂದು ಆಪಾದಿತರು ಈ ಸಾಕ್ಷಿ ಹೆಸರಲ್ಲಿ ಬರೆದ ಪತ್ರ ಅದಕ್ಕೆ ನಾನು ಆ ದಿನ ಗ್ರಾಮ ಲೆಕ್ಕಿಗರ ತರಬೇತಿಗೆ ಹೋಗುವ ಆತುರದಲ್ಲಿದ್ದಾಗ ಬೆಳಿಗ್ಗೆ 9-45ಕ್ಕೆ ಬೇರೆ 2-3 ಪತ್ರಗಳೊಂದಿಗೆ ತನ್ನ ಸಹಿಯನ್ನು ಆಪಾದಿತರು ತೆಗೆದುಕೊಂಡರು. ಆದರೆ ನಾನು ಆ ಪತ್ರದ ವಿಷಯ ಓದಿರಲಿಲ್ಲ. ನಾನು ಆಮೇಲೆ ನಿರ್ದೇಶಕರಿಗೆ ಈ ವಿಷಯ ನಿ.ಪಿ.5 ನ್ನು ಅವರ ಕಛೇರಿಗೆ ಹೋಗಿ ಬರೆದುಕೊಟ್ಟೆ. ಆದ್ದರಿಂದ ಅದರಲ್ಲಿ ತನ್ನ ಕಛೇರಿಯ ರವಾನೆ ಸಂಖ್ಯೆ ಇರುವುದಿಲ್ಲ. ದಿ. 15-7-2009 ರಂದು ಪಾಟೀ ಸವಾಲು ಸಮಯ ಇದೇ ಸಾಕ್ಷಿ ತನ್ನ ಹೇಳಿಕೆಯಲ್ಲಿ ಕಛೇರಿ ಕಪಾಟುಗಳ ದ್ವಿತೀಯ ಕೀಲಿಗಳನ್ನು ಕಛೇರಿಯ ಅಧೀಕ್ಷಕರು ಅಥವಾ ಕಛೇರಿ ಮುಖ್ಯಸ್ಥರು ಇಟ್ಟುಕೊಳ್ಳುತ್ತಿರಲಿಲ್ಲ. ಆಪಾದಿತರು ಗೈರು ಹಾಜರಿ ಅವಧಿಗೆ ರಜೆ ಅರ್ಜಿ ಸಲ್ಲಿಸಿಲ್ಲ. ನಾಯಿ ಕಚ್ಚಿದೆ ವೈದ್ಯರ ಪ್ರಮಾಣ ಪತ್ರ ತಂದುಕೊಡುತ್ತೇನೆಂದು ಹೇಳುತ್ತಾ ಬಂದರು ಮತ್ತು ಮುಂದುವರಿಸಿ 2007 ಮೇ ತಿಂಗಳ ವೇತನ ಖಜಾನೆಯಿಂದ ತೆಗೆದುಕೊಳ್ಳಲಾದ ಮತ್ತು ಆ ಬಿಲ್ಲನ್ನು ಈ ಆಪಾದಿತರೇ ತಯಾರು ಮಾಡಿದ್ದರು ಎಂದು ಒಪ್ಪಿಕೊಂಡರು. ತುಟ್ಟಿ ಭತ್ಯೆ ಬಿಲ್ಲು ಖಜಾನೆಯಲ್ಲಿ ಕಾಣೆಯಾಗಿರುವುದು ತಿಳಿದ ಮೇಲೆ ಖಜಾನೆಗೆ ತಾನು ಪತ್ರ ಬರೆದಿಲ್ಲ. ಶ್ರೀ ಸಿದ್ದರಾಜು ರವರು ರೂ. 2000/- ಗಳ ಮುಂಗಡ ಹಣ ಪಡೆದಿರುವುದಕ್ಕೆ ಅಕ್ವಿಟೆನ್ಸ್ ರಿಜಿಸ್ಟರ್‌ನಲ್ಲಿ ಸಹಿ ಮಾಡಿದ್ದಾರೆ. ನಿ.ಪಿ.4 ಕ್ಕೆ ತಾನು ಪೂರ್ಣ ಓದಿ ಸಹಿ ಮಾಡಿದ್ದೇನೆ ಎಂಬ ಸೂಚನೆಯನ್ನು ಈ ಸಾಕ್ಷಿ ಅಲ್ಲಗಳೆದಿದ್ದಾರೆ. ಆಪಾದಿತರ 2007 ಮೇ ತಿಂಗಳ ವೇತನವನ್ನು ನಾನು ಖಜಾನೆಯಿಂದ ತೆಗೆಯಲಿಲ್ಲವೆಂದು ಮರು ಸವಾಲಿನಲ್ಲಿ ಹೇಳಿಕೊಂಡಿದ್ದಾರೆ.

23. ಸರ್ಕಾರಿ ಸಾಕ್ಷಿ ಸಂಖ್ಯೆ 2 ಶ್ರೀಮತಿ ಡಿ.ಆರ್. ಸವಿತಾ ದಿ. 30-05-2009 ರಂದು ಆಪಾದಿತರು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದಾಗ ತಾನು ಆ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕಳಾಗಿದ್ದು ಪ್ರವಾಸ ಭತ್ಯೆ ಬಿಲ್ಲು, ರವಾನೆ, ಸ್ವೀಕೃತಿ ಹಾಗೂ ಲೇಖನ ಸಾಮಗ್ರಿಗಳ ದಾಸ್ತಾನು ನೋಡಿಕೊಳ್ಳುತ್ತಿದ್ದೆನು. ಆಪಾದಿತರು ಬಿಲ್ಲು ತಯಾರು ಮಾಡಿ ಖಜಾನೆಗೆ ಕಳುಹಿಸಿದ ಮೇಲೆ ಅಕ್ವಿಟೆನ್ಸ್ ರಿಜಿಸ್ಟರ್ ಇತ್ಯಾದಿಗಳನ್ನು ಆಪಾದಿತರಿಗೆ ಕೊಡುತ್ತಿದ್ದೆ. ಆಪಾದಿತರು ನಗದು ಪುಸ್ತಕ ಚೆಕ್ ರಿಜಿಸ್ಟರ್‌ಗಳನ್ನು ಇಟ್ಟುಕೊಳ್ಳುತ್ತಿದ್ದರು ಮತ್ತು ನಗದನ್ನು ಆಪಾದಿತರೇ ವಿತರಣೆ ಮಾಡುತ್ತಿದ್ದರು. ಹಾಜರಾತಿ ಪುಸ್ತಕವನ್ನು ಆಪಾದಿತರೇ ನೋಡಿಕೊಳ್ಳುತ್ತಿದ್ದರು. ಈ ಸಾಕ್ಷಿಯು ದಿ. 29-06-2009 ರಂದು ಪಾಟೀ ಸವಾಲಿಗೆ ಉತ್ತರಿಸುತ್ತಾ ಕೆಲಸದ ಹಂಚಿಕೆ ಪಟ್ಟಿ ಆ ಕಛೇರಿಯಲ್ಲಿ ನಾನು ನೋಡಿಲ್ಲ. ಆಪಾದಿತರು ಗೈರು ಹಾಜರಿಯಲ್ಲಿದ್ದಾಗ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಹಾಜರಾತಿ ಪುಸ್ತಕವನ್ನು ಇಟ್ಟುಕೊಳ್ಳುತ್ತಿದ್ದರೆಂದು ಹೇಳಿದರು.

24. ಸರ್ಕಾರಿ ಸಾಕ್ಷಿ ಸಂಖ್ಯೆ 3 ಕೆ. ಸಿದ್ದರಾಜು ತಾನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಹಾಯಕ ನಿರ್ದೇಶಕನಾಗಿ ದಿ. 18-.7-2006 ರಿಂದ 31-08-2007 ರ ವರೆಗೆ ಕೆಲಸ ಮಾಡುತ್ತಿದ್ದೆ. ಆಪಾದಿತರು ಪ್ರಥಮ ದರ್ಜೆ ಸಹಾಯಕರು ಆಗಿದ್ದರು. ತಾನು ಆ ಹುದ್ದೆಯಿಂದ ವರ್ಗಾವಣೆಯಾಗುವ ಸಮಯದಲ್ಲಿ ಎಲ್.ಪಿ.ಸಿ. ತೆಗೆದುಕೊಳ್ಳುವ ಮುನ್ನ ರೂ. 2000/- ಗಳನ್ನು ಬಸವ ಜಯಂತಿಗೆ ಹಬ್ಬದ ಮುಂಗಡವಾಗಿ

ತೆಗೆದುಕೊಂಡಿದ್ದೆ. ಆದರೆ ವೇತನ ಬಿಲ್ಲಿನಲ್ಲಿ ಯಾವುದೇ ಕಂತು ಕಟಾವು ಆಗಿರಲಿಲ್ಲ. ಅದೇ ಸಮಯ ಮೇ ತಿಂಗಳಿಂದ ಆಗಸ್ಟ್ ವರೆಗೆ ಪ್ರಯಾಣ ಭತ್ಯೆ ಹಣ ಸುಮಾರು ರೂ. 1400/- ಬಂದಿತ್ತು, ಅದರ ಜೊತೆಗೆ ಉಳಿದ ರೂ. 600/- ಗಳನ್ನು ಆಪಾದಿತರಿಗೆ ಒಟ್ಟು 2000/- ರೂ. ಗಳನ್ನು ಶ್ರೀ ರಾಮಯ್ಯ ಸಹಾಯಕ ಸಾಂಖ್ಯಿಕ ಅಧಿಕಾರಿ ಅವರ ಸಮ್ಮುಖದಲ್ಲಿ ಕೊಟ್ಟು ಖಜಾನೆಗೆ ಜಮೆ ಮಾಡಲು ಕೇಳಿಕೊಂಡೆ ಎಂದು ಹೇಳಿದರು. ಅವರ ಬಿಲ್ಲುಗಳ ನಕಲು ನಿ.ಪಿ.6 ರಿಂದ ನಿ.ಪಿ.9 ಇರುತ್ತವೆ. ಆದರೆ ಅದರಲ್ಲಿ ತನ್ನ ಸಹಿ ಇರುವುದಿಲ್ಲ. ಆಗ ಆಪಾದಿತರು ತನಗೆ ಅಕ್ವಿಟೆನ್ಸ್ ಪುಸ್ತಕ ಸಿಕ್ಕಿಲ್ಲ ನಾಳೆ ಬಂದು ಸಹಿ ಮಾಡಿ ಎಂದು ಹೇಳಿದರು. ಆದರೆ ಮರುದಿನದಿಂದ ಆಪಾದಿತರು ತನಗೆ ಸಿಗಲಿಲ್ಲ. ಆದುದರಿಂದ ಅಕ್ವಿಟೆನ್ಸ್ ಪುಸ್ತಕದಲ್ಲಿ ರೂ. 1400/- ಬಂದುದಕ್ಕೆ ತಾನು ಸಹಿ ಮಾಡಲು ಆಗಲಿಲ್ಲವೆಂದು ಹೇಳಿದರು ಮತ್ತು ಮುಂದುವರಿಸಿ ನಿ.ಪಿ.3ರ ಮಾಹಿತಿ ಸರಿ ಇದೆ. ತನಗೆ ಆಮೇಲೆ ಆಪಾದಿತರು ತಾನು ಕೊಟ್ಟ ರೂ. 2000/- ಗಳನ್ನು ಖಜಾನೆಗೆ ಕಟ್ಟಿಲ್ಲವೆಂದು ತಿಳಿಯಿತು ಎಂದರು. ನಿ.ಪಿ.10 ರಲ್ಲಿ ನಮೂದಿಸಿದ ತುಟ್ಟಿ ಭತ್ಯೆ ರೂ. 879/- ಆಪಾದಿತರು ತನ್ನ ಕೈಗೆ ಕೊಟ್ಟಿಲ್ಲವೆಂದರು. ನಿ.ಪಿ.11 ಬಸವ ಜಯಂತಿಗೆ ಹಬ್ಬದ ಮುಂಗಡ ಹಣಕ್ಕೆ ತಯಾರಿಸಿದ ಬಿಲ್ಲಿನ ನಕಲು ಎಂದು ಹೇಳಿದರು. ಆಪಾದಿತರ ಮೇಲೆ ಈ ಇಲಾಖಾ ವಿಚಾರಣೆ ಬಾಕಿ ಇದ್ದುದರಿಂದ ಆ ರೂ. 2000/- ಗಳನ್ನು ತನ್ನಿಂದ ಪಡೆಯಲಾಗುವುದಿಲ್ಲವೆಂದು ಹೇಳಿಕೊಂಡರು. ತಾನು ಆ ರೂ. 2000/- ಗಳನ್ನು ಈಗ ಖಜಾನೆಗೆ ಕಟ್ಟಲು ತಯಾರಿದ್ದೇನೆಂದು ನನ್ನ ಮುಂದೆ ಹೇಳಿಕೊಂಡರು. ಪಾಟೀ ಸವಾಲಿಗೆ ಉತ್ತರಿಸುತ್ತಾ ದಿ. 15-07-2009 ರಂದು ನಿ.ಪಿ.3 ರಲ್ಲಿ ಆ ರೂ. 2000/- ಗಳನ್ನು ಆಪಾದಿತರಿಗೆ ಯಾವಾಗ ಕೊಟ್ಟಿದ್ದೇನೆಂದು ನಮೂದಿಸಿಲ್ಲವೆಂದು ಒಪ್ಪಿಕೊಂಡರು. ಮತ್ತು ನಿ.ಪಿ.3 ಕಛೇರಿಗೆ ಕೊಟ್ಟಿದ್ದಕ್ಕೆ ಪಾವತಿ ಪಡೆಯಲಿಲ್ಲವೆಂದು ಹೇಳಿದರು. ಸರ್ಕಾರಕ್ಕೆ ವಾಪಸ್ ಯಾವುದೇ ಹಣವನ್ನು ಕೊಡುವಾಗ ಬರೆದುಕೊಡಬೇಕೆಂದು ತನಗೆ ಗೊತ್ತುಂಟು ಎಂದು ಒಪ್ಪಿಕೊಂಡರು.

25. **ಸರ್ಕಾರಿ ಸಾಕ್ಷಿ ಸಂಖ್ಯೆ 4 ಶ್ರೀಮತಿ ವೀಣಾ ಕುಲಕರ್ಣಿ** ದಿ. 29-06-2009 ರಂದು ಪ್ರಮಾಣೀಕರಿಸಿ ನಾನು ದಿ. 01-12-2006 ರಿಂದ ಹೊಸಕೋಟೆ ತಾಲ್ಲೂಕು ಕಛೇರಿಯಲ್ಲಿ ಗಣತಿದಾರಳಾಗಿ ಕೆಲಸ ಮಾಡುತ್ತಿದ್ದೇನೆ. ದಿ. 14-05-2008 ರಂದು ನಿ.ಪಿ.12 ಬರೆದುಕೊಟ್ಟಿದ್ದೇನೆ, ಅದರಲ್ಲಿ ಆಪಾದಿತರು ತನ್ನಿಂದ 2007 ನೇ ನವೆಂಬರ್‌ದಲ್ಲಿ ರೂ. 5600/- ಗಳನ್ನು ಪಡೆದಿರುವುದಾಗಿ ಬರೆದಿದ್ದೇನೆ ಮತ್ತು ಆ ಹಣ ಕೊಟ್ಟಿದ್ದಕ್ಕೆ ಆಪಾದಿತರು ಯಾವುದೇ ರಸೀದಿ ತನಗೆ ನೀಡಿಲ್ಲ ಮತ್ತು ಹಣವನ್ನು ಆಪಾದಿತರು ಡಿ.ಸಿ.ಪಿ.ಎಸ್. ಗೆ ತನ್ನ ವೇತನದ ಭತ್ಯೆಯ ಶೇ.10 ನೀಡಬೇಕಾಗಿದೆ ಎಂದು ಹೇಳಿರುವುದರಿಂದ ಆಪಾದಿತರಿಗೆ ಕೊಟ್ಟಿದ್ದೇನೆ. ಆ ಬಗ್ಗೆ ಯಾವುದೇ ಸರ್ಕಾರಿ ಆಜ್ಞೆ ತಾನು ನೋಡಿಲ್ಲ ಮತ್ತು ತನಗೆ ಆಪಾದಿತರು ತೋರಿಸಿಲ್ಲ. ಪಾಟೀ ಸವಾಲಿಗೆ ಉತ್ತರಿಸುತ್ತಾ ಯಾವುದೇ ಹಣವನ್ನು ಸರ್ಕಾರಕ್ಕೆ ಕೊಡಬೇಕಾದಾಗ ಮನವಿ ಜೊತೆಗೆ ಕೊಡಬೇಕೆಂದು ತನಗೆ ಗೊತ್ತಿದೆ ಎಂದು ಒಪ್ಪಿಕೊಂಡರು. ಆಪಾದಿತರು ಸೂಚಿಸಿದಂತೆ ತಾನು ರೂ. 5600/- ಗಳನ್ನು ಅವರಿಗೆ ಕೊಟ್ಟಿಲ್ಲ ಎನ್ನುವುದನ್ನು ನಿರಾಕರಿಸಿದರು. ಆಪಾದಿತರು ರೂ. 5600/- ಗಳನ್ನು ತನ್ನಿಂದ ಪಡೆದ ಬಗ್ಗೆ ತಾನು ರಸೀದಿ ಕೇಳುತ್ತಿದ್ದೆ. ಆಪಾದಿತರ ಮೇಲೆ ಅಸಮಧಾನದಿಂದ ನಿ.ಪಿ.12 ಬರೆದುಕೊಟ್ಟಿರುವುದನ್ನು ಈ ಸಾಕ್ಷಿ ಪಾಟೀ ಸವಾಲು ಸಮಯ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಮರು ವಿಚಾರಣೆ ಸಮಯ ತಾನು ಅಲ್ಲಿಂದ ವರ್ಗಾವಣೆಯಾಗುವ ತನಕ ಖಜಾನೆಗೆ ಕಟ್ಟಿದ್ದ ಹಣಕ್ಕೆ ಆಪಾದಿತರು ಚಲನ್ ನೀಡದಿದ್ದುದರಿಂದ ತಾನು ನಿ.ಪಿ.12 ಬರೆದುಕೊಡಬೇಕಾಯಿತೆಂದು ತಿಳಿಸಿದರು.

26. **ಸರ್ಕಾರಿ ಸಾಕ್ಷಿ ಸಂಖ್ಯೆ 5 ಶ್ರೀಮತಿ ಮಂಜುಳ** ದಿ. 28-07-2009 ರಂದು ತಾನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದಿ. 09-03-2006 ರಿಂದ ಬೆರಳಚ್ಚುಗಾರಳಾಗಿ ಕೆಲಸ ಮಾಡುತ್ತಿದ್ದೆ. ದಿ: 29-01-2008ರ ಆಜ್ಞೆಯಂತೆ ಆಪಾದಿತರಿಂದ ಅವರ ಕೆಲಸದ ಪ್ರಭಾರೆ ತೆಗೆದುಕೊಂಡೆ ಮತ್ತು ಮೂರು ತಿಂಗಳು ಅವರ ಕೆಲಸವನ್ನು ತಾನು ಮಾಡಿದೆ ಮತ್ತು ತಾನು ಆಪಾದಿತರಿಂದ ಪಡೆದ ಕಡತದ ವಿವರ ನಿಪಿ14 ರಲ್ಲಿದೆ. ಅದರಲ್ಲಿ ಆಪಾದಿತರು ಮತ್ತು ತಾನು ಸಹಿ ಮಾಡಿದ್ದೇವೆ ಮತ್ತು ನಿ.ಪಿ.14 ನ್ನು ಆಪಾದಿತರೇ ಬರೆದಿರುತ್ತಾರೆ ಮತ್ತು ಬೇರೆ ಯಾವುದೇ ಪ್ರಭಾರವನ್ನು ತಾನು ಆಪಾದಿತರಿಂದ ತೆಗೆದುಕೊಳ್ಳಲಿಲ್ಲವೆಂದರು. ತನ್ನ ನೇಮಕಾತಿ ಆದೇಶದಲ್ಲಿ ತಾನು ಕಛೇರಿಯ ಸಹಾಯಕಳೆಂದು ನಮೂದಿಸಿಲ್ಲವೆಂದು ಹೇಳಿದರು ಮತ್ತು ಆ ಕಛೇರಿಯಲ್ಲಿ ಗುಮಾಸ್ತ ಮತ್ತು ಬೆರಳಚ್ಚುಗಾರರ ಹುದ್ದೆ ಇಲ್ಲವೆಂದು ಹೇಳಿದರು. ವರ್ಗವಾದಾಗ ಸಂಪೂರ್ಣ ಪ್ರಭಾರೆ ಕೊಟ್ಟ ಮೇಲೆ ವರ್ಗವಾದ ಸಹಾಯಕರನ್ನು ಬಿಡುಗಡೆ ಮಾಡಬೇಕೆಂದು ಕಛೇರಿ ನಿಯಮಾವಳಿಯಲ್ಲಿ ಇರುವುದನ್ನು ಒಪ್ಪಿಕೊಂಡರು. ತಾನು ಕಛೇರಿಯಲ್ಲಿ ದಿನಚರಿ ಇಟ್ಟಿಲ್ಲ. ಆದರೂ ಆಪಾದಿತರು ಕೊಟ್ಟ ಕಡತದಲ್ಲಿ ಮುಂದಿನ ಕಾರ್ಯಾಚರಣೆ ತಾನು ಮಾಡಿದ್ದೇನೆ. ಮರು ಸವಾಲಿಗೆ ಉತ್ತರಿಸುತ್ತಾ ತನಗೆ 12 ವರ್ಷ ಕಛೇರಿ ಕೆಲಸದ ಅನುಭವವಿದೆ ಎಂದು ಹೇಳಿದರು.

27. **ಸರ್ಕಾರಿ ಸಾಕ್ಷಿ ಸಂಖ್ಯೆ 6 ಡಾ. ವಿ. ಮುನಿರಾಜು** ನಿ.ಪಿ.12 ನ್ನು ಶ್ರೀಮತಿ ವೀಣಾ ಕುಲಕರ್ಣಿ ದಿ: 14-05-2008 ರಂದು ನೀಡಿದರು ಮತ್ತು ತಾನು ಅದನ್ನು ನಿ.ಪಿ.15 ರಂತೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಟ್ಟೆ. ಆಪಾದಿತರು ತಾನು ಆ ಕಛೇರಿಯಲ್ಲಿದ್ದ ಅವಧಿಯಲ್ಲಿ ಅಂದರೆ 07-11-2007 ರಿಂದ 12-06-2008ರ ವರೆಗೆ ಆಪಾದಿತರು ಕೆಲಸ ಮಾಡುತ್ತಿದ್ದರು ಮತ್ತು ಆಡಳಿತ ಶಾಖೆಯ ನಗದು, ಬಿಲ್ಲು ತಯಾರಿಕೆ ಮತ್ತು ವಾರ್ಷಿಕ ವೇತನ ಬಡ್ತಿ, ಸೇವಾ ಪುಸ್ತಕ ಬರೆಯುವುದು, ನಗದು ಪುಸ್ತಕ ಬರೆಯುವುದು, ರಜೆಗೆ ಸಂಬಂಧಿಸಿದ ಕೆಲಸ ಇತ್ಯಾದಿ ಮಾಡುತ್ತಿದ್ದರು ಮತ್ತು ನಿ.ಪಿ.13 ರಲ್ಲಿ ತನ್ನ ಸಹಿ ಇದೆ. ಆಪಾದಿತ ನೌಕರರು ಪೂರ್ತಿ ಪ್ರಭಾರೆಯನ್ನು ಶ್ರೀಮತಿ ಮಂಜುಳರವರಿಗೆ ಕೊಟ್ಟಿರಲಿಲ್ಲ. ನಿ.ಪಿ.16 ರಲ್ಲಿ 2 ದಿನಗಳೊಳಗೆ ಆಪಾದಿತರು ತನ್ನ ಕೆಲಸದ ಪ್ರಭಾರೆಯನ್ನು ಕೊಡಬೇಕೆಂದು ಆಜ್ಞೆ ಮಾಡಿದ್ದೆ, ಆದರೆ ಆಪಾದಿತರು ಆ ಆಜ್ಞೆಯನ್ನು ಪಾಲಿಸಲಿಲ್ಲ. ಆದುದರಿಂದ 23-05-2008 ರಂದು ನಿಪಿ17 ಮಹಜರ್‌ನಲ್ಲಿ ಬರೆದಂತೆ ಪ್ರಭಾರೆ ತೆಗೆದುಕೊಳ್ಳಬೇಕಾಯಿತು. ದಿ. 11-02-2008 ರಿಂದ ಆಪಾದಿತರು ಕೆಲಸ ಮಾಡಿದರು ಮತ್ತು ದಿ. 15-05-2008 ರಂದು ಆಪಾದಿತರು ಗೈರು ಹಾಜರಿ ಬಗ್ಗೆ ನಿಪಿ18 ರಂತೆ ಆಜ್ಞೆ ಮಾಡಿದೆ ಮತ್ತು ಆಪಾದಿತರಿಂದ ಅವರ ಕೆಲಸ ವೈಫಲ್ಯದ ಬಗ್ಗೆ ನೋಟಿಸ್ ನೀಡಿದೆ. ಅಲ್ಲದೆ 01-05-2008 ರಿಂದ 22-06-2008 ರ ವರೆಗೆ ಆಪಾದಿತರು ಗೈರು ಹಾಜರಿದ್ದರು ಮತ್ತು ಹಾಜರಿ ಪುಸ್ತಕದಲ್ಲಿ ಅಂದರೆ ನಿಪಿ19 ರಲ್ಲಿ ಆಪಾದಿತರು ಗೈರು ಹಾಜರಾದ ಬಗ್ಗೆ ನಮೂದಿಸಿದ್ದೇನೆ. ಆ ಅವಧಿಗೆ ಆಪಾದಿತರು ರಜೆ ಅರ್ಜಿ ಬರೆದಿಲ್ಲ ಮತ್ತು ತನ್ನ ಪರವಾನಗಿ ತೆಗೆದುಕೊಂಡಿಲ್ಲ ಮತ್ತು ಅವರ ಗೈರು ಹಾಜರಿಯಿಂದ ಕಛೇರಿ ಕೆಲಸಕ್ಕೆ ತೊಂದರೆಯಾಯಿತು. ನಿಪಿ20 ಆಪಾದಿತರು ಕೊಡದಿರುವ ದಾಖಲೆಗಳನ್ನು ಮಹಜರ್ ಮಾಡಿ ಸ್ವಾಧೀನ ಪಡಿಸಿದ್ದನ್ನು ನಮೂದಿಸಲಾಗಿದೆ ಎಂದು ಹೇಳಿದರು. ದಿ. 04-10-2007

ರಿಂದ ತನ್ನ ಕಛೇರಿಯಲ್ಲಿ ಕುಮಾರಿ ಆರ್.ಜ್ಯೋತಿ ಕೆಲಸ ಮಾಡುತ್ತಿದ್ದರೆಂದು ಹೇಳಿದರು. ಅವರ ವೇತನವನ್ನು ಸ್ವಲ್ಪ ತಡವಾಗಿ ಕೊಡಲಾಯಿತೆಂದು ಹೇಳಿದರು. ದಿ. 04-10-2007 ರಿಂದ 28-02-2008 ರ ತನಕದ ಅವರ ವೇತನ ಬಿಲ್ಲು ರೂ. 34,774/- ಗಳನ್ನು ಆಪಾದಿತರೇ ತಯಾರು ಮಾಡಿದರು ಮತ್ತು 17-03-2008 ರಂದು ಆ ಚೆಕ್ ತರಿಸಲಾಯಿತು ಮತ್ತು ಚೆಕ್ ಪುಸ್ತಕದಲ್ಲಿ ನಿಪಿ21 ರಂತೆ ಆ ವಿಷಯ ಆಪಾದಿತರು ನಮೂದಿಸಿದ್ದಾರೆ ಮತ್ತು ತಾನು ಅದಕ್ಕೆ ಸಹಿ ಮಾಡಿದ್ದೇನೆ. ಕಛೇರಿ ನಗದು ಪುಸ್ತಕ ನಿಪಿ23 ರಲ್ಲಿ ಆ ಹಣ ರೂ. 34,774/- ಗಳು ಬಂದಿರುವುದನ್ನು ಬರೆಯಲಾಗಿದೆ ಮತ್ತು ಆ ಸಮಯ ನಗದು ಪುಸ್ತಕ ಮತ್ತು ಅಕ್ವಿಟೆನ್ಸ್ ಪುಸ್ತಕವನ್ನು ಆಪಾದಿತರೇ ಬರೆಯುತ್ತಿದ್ದರೆಂದು ಈ ಸಾಕ್ಷಿ ಹೇಳಿದರು. ನಿಪಿ22 ರಲ್ಲಿ ಆಪಾದಿತರೇ ತನ್ನ ಕೈಯಲ್ಲಿ ತಿದ್ದುಪಡಿ ಮಾಡಿದ್ದನ್ನು ತೋರಿಸಿಕೊಟ್ಟರು. ದಿ. 18-10-2009 ರಂದು ಪಾಟೀ ಸವಾಲಿಗೆ ಉತ್ತರಿಸುತ್ತಾ ತಾನು ವಾರದ ಯಾವ ದಿನಗಳಲ್ಲಿ ಬೆಂಗಳೂರು ಗ್ರಾಮಾಂತರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೆ ಮತ್ತು ರಾಮನಗರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೆನೆಂದು ಹೇಳಲಾರೆನೆಂದರು. ಪ್ರಭಾರೆಯಲ್ಲಿ ಇದ್ದುದರಿಂದ ರಾಮನಗರದಲ್ಲಿ ತಾನು ಎಲ್ಲಾ ದಿನಗಳಲ್ಲಿ ಇರುತ್ತಿರಲಿಲ್ಲವೆಂದು ಒಪ್ಪಿಕೊಂಡರು. ರಾಮನಗರದಲ್ಲಿ ತಾನು ಇಲ್ಲದಿದ್ದಾಗ ತನ್ನ ಕೆಲಸವನ್ನು ನಿರ್ವಹಿಸಲು ಬೇರೆ ಯಾರಿಗೂ ವಹಿಸಿಕೊಟ್ಟಿಲ್ಲವೆಂದು ಒಪ್ಪಿಕೊಂಡರು. ನಿ.ಪಿ.12 ಪಡೆದ ಮೇಲೆ ಪೂರ್ವಭಾವಿ ತನಿಖೆ ತಾನೇನು ಮಾಡಿಲ್ಲ. ದಿ. 22-05-2008 ರಂದು ತಯಾರಿಸಿದ ನಿಪಿ16 ಆಪಾದಿತರಿಗೆ ದಿ. 23-05-2008 ರಂದು ತಲುಪಿಲ್ಲ ಎಂಬುದನ್ನು ಒಪ್ಪಿಕೊಂಡರು. ನಿ.ಪಿ.17 ನ್ನು ತನ್ನ ಕಛೇರಿಯ ಸಿಬ್ಬಂಧಿಯವರು ತಯಾರಿಸಿ ಸಹಿ ಮಾಡಿದ್ದಾರೆ ಮತ್ತು ಅದರ ಅನುಬಂಧದಲ್ಲಿ ಕೊನೆಗೆ ತನ್ನ ಸಹಿ ಮಾತ್ರ ಇದೆ. ಆಪಾದಿತರ ಸ್ವಾಧೀನವಿದ್ದ ಅಲ್ಮೇರಾಗಳ ಬೀಗದ ಕೈ ತನ್ನ ಸ್ವಾಧೀನ ಇರಲಿಲ್ಲವೆಂದು ಹೇಳಿಕೊಂಡರು. ನಿ.ಪಿ.17ರ ಪುಟ 2, 27ನೇ ಕ್ರಮ ಸಂಖ್ಯೆಯಲ್ಲಿ ಶ್ರೀಮತಿ ಶಕುಂತಲಾ ಚರಂತಿಮಠ ಸೇವಾ ಪುಸ್ತಕಗಳ ಪಟ್ಟಿ ಇರುತ್ತದೆಂದು ಹೇಳಿದರು. ನಿ.ಪಿ.17 ರಲ್ಲಿ ತನ್ನ ಸಹಿ 20-05-2008 ರಂದು ಇದೆ ಎಂದು ಒಪ್ಪಿಕೊಂಡರು. ನಿ.ಪಿ.18 ತಾನು ಆಮೇಲೆ ತಯಾರುಮಾಡಿದೆ ಅನ್ನುವ ಸೂಚನೆಯನ್ನು ಈ ಸಾಕ್ಷಿ ನಿರಾಕರಿಸಿದ್ದಾರೆ. ನಿ.ಪಿ.19 ರಲ್ಲಿ ಆಪಾದಿತರ ಗೈರು ಹಾಜರಿಯನ್ನು ತಾನೇ ನಮೂದಿಸಿದ್ದೇನೆ ಎನ್ನುವುದಕ್ಕೆ ತಾನು ಬೇರೆ ಸಹಿ ಮಾಡಿಲ್ಲವೆಂದು ಹೇಳಿಕೊಂಡರು. ಈ ಸಾಕ್ಷಿಯ ಸಹಿ ಆ ಹಾಜರಾತಿ ಪುಸ್ತಕದ ಕೊನೆಯಲ್ಲಿ ಇದೆಯೆಂದು ಹೇಳಿದರು. ಆಪಾದಿತರು ಕೆಲಸದ ಒತ್ತಡ ಇದೆ ಎಂದು ರಜೆ ಕೇಳಿಕೊಂಡರು ಅನ್ನುವ ಸೂಚನೆಯನ್ನು ಪಾಟೀ ಸವಾಲು ಸಮಯ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ನಿಪಿ 20 ಕ್ಕೆ ತನ್ನ ಸಿಬ್ಬಂಧಿಯವರು ಮಾತ್ರ ಸಹಿ ಮಾಡಿದ್ದಾರೆ ಎಂದು ಒಪ್ಪಿಕೊಂಡರು ನಿಪಿ22 ನಕಲಿನಲ್ಲಿ ತನ್ನ ಸಹಿ ಕಾಣುವುದಿಲ್ಲವೆಂದು ಒಪ್ಪಿಕೊಂಡರು. ನಿ.ಪಿ.21 ಮತ್ತು 23 ಕ್ಕೆ ತಾನೇ ಸಹಿ ಮಾಡಿದ್ದೇನೆ ಎಂದು ಒಪ್ಪಿಕೊಂಡರು. ನಿ.ಪಿ.23 ರಲ್ಲಿ ಕು. ಜ್ಯೋತಿಗೆ ರೂ. 34,774/- ಗಳನ್ನು ಕೊಡಲಾಗಿದೆಯೆಂದು ತಾನು ದೃಢೀಕರಿಸಿದ್ದೇನೆ ಎಂದು ಅದನ್ನು ನೋಡಿ ಹೇಳಿದರು. ರೂ. 34774/- ಗಳು ಖರ್ಚಾದ ಬಗ್ಗೆ ಖಜಾನೆಗೆ ಮತ್ತು ಮೇಲಾಧಿಕಾರಿಗಳಿಗೆ ತ:ಖ್ತೆ ಕಳುಹಿಸಿದ್ದೇನೆಂದು ಒಪ್ಪಿಕೊಂಡರು. ಮರು ಸವಾಲಿನ ಸಮಯ ಬಟವಾಡೆ ಪುಸ್ತಕದಲ್ಲಿ ತನ್ನ ಸಹಿ ಹಸಿರು ಬಣ್ಣದಲ್ಲಿದೆ ಎಂದು ಹೇಳಿದರು.

28. ಸರ್ಕಾರಿ ಸಾಕ್ಷಿ ಸಂಖ್ಯೆ 7 ಕು. ಆರ್. ಜ್ಯೋತಿ ದಿ. 18-08-2009 ರಂದು ನನ್ನ ಮುಂದೆ ಸಾಕ್ಷಿ ನೀಡಿ ಆಪಾದಿತರು ಅವರಿಗೆ ಬರಬೇಕಾದ ವೇತನ ಅಕ್ಟೋಬರ್ 2007 ರಿಂದ ಫೆಬ್ರವರಿ 2008ರ ವರೆಗೆ ಒಟ್ಟು ಮೊತ್ತ ರೂ. 34774/- ರಲ್ಲಿ ಆಪಾದಿತರು ರೂ. 32774/- ನೀಡಿದರು ಮತ್ತು ಅದೇ ರೀತಿ ಅಕ್ವಿಟೆನ್ಸ್ ರಿಜಿಸ್ಟರ್‌ನಲ್ಲಿ ತಿದ್ದುಪಡಿ ಮಾಡಿದ್ದಾರೆ ಮತ್ತು ತಾನು ನಿ.ಪಿ.24 ರಂತೆ ದೂರು ನೀಡಿದೆ ಎಂದು ಹೇಳಿದರು.

29. ಸರ್ಕಾರಿ ಸಾಕ್ಷಿ ಸಂಖ್ಯೆ 8 ಶ್ರೀ ಎಸ್. ಸುದರ್ಶನ್ ದಿ. 18-08-2009 ರಂದು ನನ್ನ ಮುಂದೆ ಸಾಕ್ಷಿ ನೀಡಿ ದಿ. 24-06-2008 ರಂದು ನಿ.ಪಿ.22 ಮತ್ತು 24ರ ಜೊತೆಗೆ ಸಹಿ ಮಾಡಿ ನಿ.ಪಿ.25 ನ್ನು ಕೇಂದ್ರ ಕಛೇರಿಗೆ ರವಾನೆ ಮಾಡಿದೆ. ಒಟ್ಟಿಗೆ ನಿ.ಪಿ.26 ಮತ್ತು 27 ಕಳುಹಿಸಿದೆ ಎಂದು ಹೇಳಿದರು.

30. ಸರ್ಕಾರಿ ಸಾಕ್ಷಿ ಸಂಖ್ಯೆ 9 ಶ್ರೀ ಪಿ. ಮಂಜು ದಿ. 18-08-2009 ರಂದು ಆಪಾದಿತರು ಹೆದರಿಸಿದ ಕಾರಣ ಡಿ.ಸಿ.ಪಿ.ಎಸ್.ಗೆ ಎಂದು ರೂ. 2500/- ಗಳನ್ನು ಆಪಾದಿತರಿಗೆ ಕೊಟ್ಟೆ. ಅವರು ರಸೀದಿ ಕೊಡಲಿಲ್ಲ. ಆದ್ದರಿಂದ ನಿ.ಪಿ.26 ರಂತೆ ಆಪಾದಿತರ ಮೇಲೆ ಜೂನ್ 2008 ರಂದು ದೂರು ನೀಡಿದೆ ಎಂದರು.

31. ಸರ್ಕಾರಿ ಸಾಕ್ಷಿ ಸಂಖ್ಯೆ 10 ಶ್ರೀಮತಿ ಬಿ.ಎನ್. ಜಯಶ್ರೀ ದಿ. 03-09-2009 ರಂದು ನನ್ನ ಮುಂದೆ ಪ್ರಮಾಣ ಮಾಡಿ ನನ್ನ ಮುಂದೆ ದಿ. 05-10-2007 ರಂದು ಆಪಾದಿತರಿಗೆ ನಿ.ಪಿ.28 ರಂತೆ ಜ್ಞಾಪನ ನೀಡಿದೆ ಮತ್ತು ಆಪಾದಿತರು ದಿ. 29-10-2007 ರಂದು ನೀಡಿದ ಉತ್ತರದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಬರೆದಿದ್ದರು. ಆದ್ದರಿಂದ ನಿ.ಪಿ.30 ರಂತೆ ಆಪಾದಿತರಿಗೆ ಪತ್ರ ಬರೆದರು ಮತ್ತು ಆತ್ಮಹತ್ಯೆ ಮಾಡಿಕೊಂಡರೆ ಆಪಾದಿತ ನೌಕರನೇ ಜವಾಬ್ದಾರಿ ಎಂದು ಬರೆದು ಉತ್ತರ ಕಳುಹಿಸಿದೆ ಎಂದರು. ಕಛೇರಿ ಕಡತದಲ್ಲಿ ಕಡತದ ಟಿಪ್ಪಣಿ ಸಂಖ್ಯೆ 29 ರಿಂದ 34 ನೋಡಿಕೊಂಡು ಇತರ ಪ್ರಶ್ನೆಗಳಿಗೆ ಸಾಕ್ಷಿ ಉತ್ತರಿಸಿದರು. ಆಪಾದಿತರು ಟಿಪ್ಪಣಿ ಪುಟ ಸಂಖ್ಯೆ 1 ರಿಂದ 5 ಅವಲಂಬಿಸಿ ನಿ.ಡಿ.2 ಎಂದು ಗುರುತಿಸಲಾಯಿತು.

ಶಿಸ್ತು ಪ್ರಾಧಿಕಾರಿಯ ಅವಲಂಬಿಸಿದ ದಾಖಲೆಗಳನ್ನು ಪರಿಶೀಲಿಸುವ

32. ನಿ.ಪಿ.1 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ದಿ: 21-05-2007 ರಂದು ಇಲ್ಲಿಯ ಇಲಾಖಾ ನಿರ್ದೇಶಕರಿಗೆ ಬರೆದ ಪತ್ರ, ಅದರಲ್ಲಿ ಆಪಾದಿತರು ರಜೆಯಲ್ಲಿ ಹೋಗಿದ್ದರಿಂದ ಕಛೇರಿ ಕೆಲಸಕ್ಕೆ ತೊಂದರೆ ಆಗಿದೆ. ಅವರ ಬೇಜವಾಬ್ದಾರಿಯಿಂದ ಸಮಸ್ಯೆಗಳು ಪುನರಾವರ್ತನೆಯಾಗುತ್ತಿವೆ, ಕಪಾಟಿನ ಕೀ ಕೊಡದೇ ಹೋಗಿದ್ದಾರೆ, ಆದ್ದರಿಂದ ಕಪಾಟಿನ ಬೀಗ ಒಡೆದು ಕೆಲಸಕಾರ್ಯವನ್ನು ಸಮರ್ಪಕ ರೀತಿಯಲ್ಲಿ ನಿರ್ವಹಿಸಲು ಅನುಮತಿ ಕೋರಿದ್ದಾರೆ ಮತ್ತು ಬದಲಿಗೆ ನೇಮಕ ಮಾಡಲು ಕೇಳಿಕೊಂಡಿದ್ದಾರೆ.

33. ನಿ.ಪಿ.2 ರಲ್ಲಿ ಆಪಾದಿತರಿಗೆ ಜ್ಞಾಪನ ಪತ್ರ ದಿ. 18-05-2007 ರಂದು ಬರೆದು ಆಪಾದಿತರು ಕಛೇರಿಯಲ್ಲಿ ಇಲ್ಲದೆ ತೊಂದರೆ ಆಗಿದ್ದಕ್ಕೆ, ಬೇರೆ ಬೇರೆ ಕೆಲಸ ಬಾಕಿ ಆದ ಬಗ್ಗೆ ಬರೆದು ಅವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುವುದಾಗಿ ಸೂಚಿಸಿದ್ದಾರೆ.

34. ನಿ.ಪಿ.3 ರಲ್ಲಿ ದಿ. 05-09-2007 ರಂದು ಶ್ರೀ ಕೆ. ಸಿದ್ದರಾಜು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಆಪಾದಿತರು ಮುಂಗಡ ಹಣ ರೂ. 2000/- ಗಳನ್ನು ಕಛೇರಿಯ ಖಾತೆಗೆ ಕಟ್ಟುವಂತೆ ಆಪಾದಿತರಿಗೆ ಕೊಟ್ಟಿದ್ದೇನೆ. ತಾನು ಮುಂಗಡ ಹಣ ಪಡೆದಿದ್ದೆ. ಆ ಹಣದ ಬಾಬ್ತು ಆ ಹಣ ರೂ. 2000/- ಗಳನ್ನು ಕೊಟ್ಟಿದ್ದೆ ಎಂದು ಬರೆದುಕೊಟ್ಟಿದ್ದಾರೆ.

35. ನಿ.ಪಿ.4 ರಲ್ಲಿ ದಿ. 13-03-2007 ರಂದು ಅದೇ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಬೆಂಗಳೂರು ಇಲಾಖಾ ನಿರ್ದೇಶಕರಿಗೆ ಬರೆದ ಪತ್ರವಲ್ಲಿ ಆಪಾದಿತರು ಉತ್ತಮವಾಗಿ ಕಾರ್ಯನಿರ್ವಹಿಸುವುದರಿಂದ ಇವರನ್ನು ವರ್ಗಾವಣೆ ಮಾಡಬಾರದೆಂದು ತಮ್ಮಲ್ಲಿ ವಿನಂತಿಸಿಕೊಂಡಿರುವುದು ಪತ್ರದಲ್ಲಿ ಕಂಡುಬರುತ್ತದೆ.

36. ನಿ.ಪಿ.5 ರಲ್ಲಿ ಅದೇ ಅಧಿಕಾರಿ ನಿ.ಪಿ.4 ನ್ನು ಯಾವ ಸಂದರ್ಭದಲ್ಲಿ ಬರೆದುಕೊಡಲಾಯಿತೆಂದು ದಿ:08-08-2007 ರಂದು ನಿರ್ದೇಶಕರಿಗೆ ನಿ.ಪಿ.5 ರಲ್ಲಿ ಕ್ಷಮಾಪಣೆ ಕೋರಿ ತಾನು ಅದನ್ನು ಗಮನಿಸದೇ ಸಹಿ ಹಾಕಿ ಕಳುಹಿಸಿದ್ದೇನೆ. ಬೇರೆ ಕಡೆಗೆ ಬೆಳಿಗ್ಗೆ 9-45 ಕ್ಕೆ ಹೋಗುವ ಸಮಯದಲ್ಲಿ ಬೇರೆ ಪತ್ರಗಳೊಂದಿಗೆ ಆ ಪತ್ರವನ್ನು ಇಟ್ಟಿರುವುದರಿಂದ ವಿಷಯವನ್ನು ಗಮನಿಸದೆ ಆಪಾದಿತರು ಆ ರೀತಿ ಮಾಡುವ ಸಂಶಯ ಇಲ್ಲದೇ ಇದ್ದುದರಿಂದ, ಸಹಿ ಮಾಡಿದೆ ಎಂದು ವಿವರಿಸಿ ಬರೆದುಕೊಟ್ಟಿದ್ದಾರೆ.

37. ನಿ.ಪಿ.6 ರಿಂದ ನಿ.ಪಿ.10 ರವರೆಗೆ ಪ್ರತಿ ತಿಂಗಳು ಇಲಾಖೆಯಿಂದ ಗ್ರಾಮಾಂತರ ಜಿಲ್ಲೆಯಿಂದ ಪಡೆದ ಪ್ರವಾಸ ಭತ್ಯೆ ಹಾಗೂ ಹಬ್ಬದ ಮುಂಗಡ ವಿಷಯ ಇಲಾಖೆಗೆ ಕಳುಹಿಸಿದ ಬೇರೆ ಬೇರೆ ತ:ಖ್ತೆಗಳ ನಕಲು. ನಿಪಿ10ರಲ್ಲಿ ರೂ. 879/- ಗಳ ವ್ಯತ್ಯಾಸ ಆದುದನ್ನು ಬರೆಯಲಾಗಿದೆ. ಆ ತ:ಖ್ತೆಗಳು ಮೇ 2007 ರಿಂದ ಜುಲೈ 2007ರ ವರೆಗೆ ಸಂಬಂಧಪಟ್ಟ ತ:ಖ್ತೆಗಳು.

38. ನಿ.ಪಿ.11 ರಲ್ಲಿ ಶ್ರೀ ಕೆ. ಸಿದ್ದರಾಜು ರವರಿಗೆ ರೂ. 2000/- ಗಳ ಹಬ್ಬದ ಮುಂಗಡ ಮಾರ್ಚ್ 2007 ರಲ್ಲಿ ತೆಗೆದಿರುವುದನ್ನು ಕಾಣಿಸಲಾಗಿದೆ. ಬೆಂಗಳೂರು ನಿರ್ದೇಶಕರು ದಿ. 30-03-2007 ರಂದು ಮಂಜೂರಾತಿ ನೀಡಿದ ವೈದ್ಯಕೀಯ ವೆಚ್ಚ ಹಾಗೂ ಮುಂಗಡ ಹಣ ರೂ. 2000/- ಮಂಜೂರು ಆಗಿರುವುದು ನಮೂದಿಸಲಾಗಿದೆ.

39. ನಿ.ಪಿ.12 ರಲ್ಲಿ ಶ್ರೀಮತಿ ವೀಣಾ ಕುಲಕರ್ಣಿ ಆಪಾದಿತರ ಮೇಲೆ ಡಿಸೆಂಬರ್ 2007 ರಲ್ಲಿ ರೂ. 5600/- ಗಳನ್ನು ಅವರು ಕೇಳಿದಂತೆ ಡಿ.ಸಿ.ಪಿ.ಎಸ್.ಗೆ ಎಂದು ಆಪಾದಿತರು ವಸೂಲು ಮಾಡಿರುವುದನ್ನು ದಿ. 14-05-2008 ರಂದು ಬರೆದುಕೊಟ್ಟಿದ್ದಾರೆ.

40. ನಿ.ಪಿ.13 ರಲ್ಲಿ ದಿ. 29-01-2008 ರಂದು ಆಪಾದಿತರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಗೆ ವರ್ಗ ಮಾಡಿರುವುದಾಗಿ ದಿ. 31-01-2008 ರಂದು ಅವರನ್ನು ಕಛೇರಿಯಿಂದ ಬಿಡುಗಡೆ ಮಾಡಲಾಗಿದೆ. ಅವರ ಪ್ರಭಾರೆಯನ್ನು ಶ್ರೀಮತಿ ಸಿ. ಮಂಜುಳ, ಬೆರಳಚ್ಚುಗಾರರು ತೆಗೆದುಕೊಳ್ಳಬೇಕೆಂದು ಆಜ್ಞಾಪಿಸಲಾಗಿದೆ.

41. ನಿ.ಪಿ.14 ರಲ್ಲಿ ಆಪಾದಿತರು ಶ್ರೀಮತಿ ಸಿ. ಮಂಜುಳ ರವರಿಗೆ 167 ಕಡತಗಳನ್ನು ಕೊಟ್ಟಿರುವುದನ್ನು ನಮೂದಿಸಲಾಗಿದೆ.

42. ನಿ.ಪಿ.15 ರಲ್ಲಿ ದಿ. 23-06-2008 ರಂದು ಶ್ರೀಮತಿ ವೀಣಾ ಕುಲಕರ್ಣಿ ದಿ. 14-05-2008 ರಂದು ನೀಡಿದ ಮನವಿಯನ್ನು ಮುಂದಿನ ಕ್ರಮಕ್ಕಾಗಿ ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಗೆ ಕಳುಹಿಸಿದ್ದು ಕಂಡುಬರುತ್ತದೆ.

43. ನಿ.ಪಿ.16 ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಆಪಾದಿತರಿಗೆ ಪತ್ರ ಬರೆದು ಅದು ತಲುಪಿದ 2 ದಿನಗಳೊಳಗಾಗಿ ಖುದ್ದಾಗಿ ಕಛೇರಿಗೆ ಬಂದು ದಾಖಲಾತಿ ಮತ್ತು ಕಡತಗಳನ್ನು ನೀಡಲು ಆಜ್ಞೆ ನೀಡಿದ್ದಾರೆ.

44. ನಿ.ಪಿ.17 ರಲ್ಲಿ ದಿ. 23-05-2008 ರಂದು ಬೆಂಗಳೂರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಆಪಾದಿತರ ಕಪಾಟನ್ನು ಒಡೆದಾಗ ಸಿಕ್ಕಿದ 170 ದಾಖಲೆಗಳ ಪಟ್ಟಿ ಹಾಗೂ ಕಛೇರಿ ಸಿಬ್ಬಂದಿಗಳ ಸಹಿ, ಕೊನೆಗೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಸಹಿಯು ಇರುತ್ತದೆ.

45. ನಿ.ಪಿ.18 ರಲ್ಲಿ ದಿ. 15-05-2008 ರಂದು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಆಪಾದಿತರಿಗೆ ಜ್ಞಾಪನ ಪತ್ರ ನೀಡಿ ಶಿಸ್ತಿನ ಕ್ರಮ ಏಕೆ ತೆಗೆದುಕೊಳ್ಳಬಾರದೆಂದು ಸಮಜಾಯಿಸಿ ನೀಡಲು ಅವರ ಗೈರು ಹಾಜರಿ ಬಗ್ಗೆ ಅಂದರೆ ದಿ. 23-04-2008 ಹಾಗೂ 1-5-2008 ರಿಂದ 15-5-2008ರ ವರೆಗೆ ಗೈರು ಹಾಜರಾದ ಬಗ್ಗೆ ವಿವರಣೆ ಕೇಳಲಾಗಿತ್ತು.

46. ನಿ.ಪಿ.19 ರಲ್ಲಿ ಆಪಾದಿತರ ಗೈರು ಹಾಜರಿಯನ್ನು ಹಾಜರಾತಿ ಪುಸ್ತಕದ ನಕಲಿನಲ್ಲಿ ಕಾಣಬಹುದು. ಕಛೇರಿಯ ಮುಖ್ಯಸ್ಥರು ಗೈರು ಹಾಜರಿ ಗುರುತು ಹಾಕಿದ್ದಾರೆ.

47. ನಿ.ಪಿ.20 ದಿ. 20-05-2008 ರಂದು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಕೇಂದ್ರದ ನಿರ್ದೇಶಕರಿಗೆ ಕಛೇರಿಯ ಅಲಮೇರಾ ಮತ್ತು ಮೇಜಿನ ಒಳಗಡೆ ಆಪಾದಿತರ ಸ್ವಾಧೀನವಿದ್ದ ದಾಖಲೆಗಳನ್ನು ಸ್ವಾಧೀನಪಡಿಸಿಕೊಂಡ ಬಗ್ಗೆ ವರದಿಮಾಡಿದ್ದಾರೆ. ಅದಕ್ಕೆ ಕಛೇರಿಯವರು ಸಹಿ ಮಾಡಿದ್ದನ್ನು ತೋರಿಸಿದ್ದಾರೆ.

48. ನಿ.ಪಿ.21 ರಲ್ಲಿ ಚೆಕ್ ಪುಸ್ತಕದ ನಕಲಿನಲ್ಲಿ ದಿ. 15-03-2008 ರ ಚೆಕ್ ಸಂಖ್ಯೆ 185493 ರಲ್ಲಿ ಕು. ಆರ್. ಜ್ಯೋತಿಗೆ ಬಿಲ್ಲಿನ ಪ್ರಕಾರ ರೂ. 34774/- ಗಳನ್ನು ಕೊಟ್ಟಿರುವುದಾಗಿ ನಮೂದು ಮಾಡಲಾಗಿದೆ.

49. ನಿ.ಪಿ.22 ರಲ್ಲಿ ಅಂದರೆ 22ಎ ರಲ್ಲಿ ರೂ. 34,774/- ಇದ್ದುದ್ದನ್ನು ತಿದ್ದುಪಡಿ ಮಾಡಿ ರೂ. 32774/- ಗಳು ಎಂದು ಬರೆದಿರುವುದನ್ನು ಗುರುತಿಸಲಾಗಿದೆ ಮತ್ತು ರೂ. 32,774/- ರ ಎದುರು ಕು. ಆರ್. ಜ್ಯೋತಿಯ ಸಹಿ ಇದೆ. ಕೆಳಗಡೆ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಸಹಿ ನಿ.ಪಿ.22ರ ಮೂಲ ಪ್ರತಿಯಲ್ಲಿ ಹಸಿರು ಬಣ್ಣದಲ್ಲಿ ಕಾಣುತ್ತಿದೆ, ಆದರೆ ಈ ಜೆರಾಕ್ಸ್ ಪ್ರತಿಯಲ್ಲಿ ಅವರ ಸಹಿ ಕಾಣಿಸುತ್ತಿಲ್ಲ.

50. ನಿ.ಪಿ.23 ರಲ್ಲಿ ನಗದು ಪುಸ್ತಕದಲ್ಲಿ ದಿ. 17-03-2008 ರಂದು ರೂ. 34774/- ಗಳನ್ನು ಖಜಾನೆಯಿಂದ ಪಡೆದು ಬಟವಾಡೆ ಆಗಿರುವುದನ್ನು ನಮೂದಿಸಲಾಗಿದೆ.

51. ನಿ.ಪಿ.24 ರಲ್ಲಿ ದಿ. 27-05-2008 ರಂದು ಕು. ಆರ್. ಜ್ಯೋತಿಯು ತನಗೆ ರೂ. 34774/- ರಲ್ಲಿ ಬರೀ ರೂ. 32774/- ಗಳು ಮಾತ್ರ ಬಂದಿರುವುದಾಗಿ ಹಾಗೂ ತನಗೆ ರೂ. 2000/- ಗಳನ್ನು ದೊರಕಿಸಿಕೊಡಬೇಕು ಎಂದು ಬರೆದುಕೊಟ್ಟಿದ್ದಾರೆ.

52. ನಿ.ಪಿ.25 ರಲ್ಲಿ ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಆಪಾದಿತರಿಂದ ಕು. ಆರ್. ಜ್ಯೋತಿರವರಿಗೆ ರೂ. 34774/- ಗಳು ಕೊಡುವ ಬದಲು ಬರೀ ರೂ. 32774/- ಗಳನ್ನು ಯಾವ ಕಾರಣದಿಂದ ಕೊಡಲಾಯಿತೆಂದು ವಿವರಣೆ ನೀಡಲು ಕೇಳಿಕೊಂಡಿದ್ದಾರೆ. ಅದರ ಜೊತೆಗೆ ಅಕ್ವಿಟೆನ್ಸ್ ರಿಜಿಸ್ಟರ್‌ನ ನಕಲು ಸಹಿತ ಆಪಾದಿತರಿಗೆ ತಿಳಿಸಲಾಗಿತ್ತು.

53. ನಿ.ಪಿ.26 ಮಂಜು ಪಿ. ರವರು ದಿ. 26-06-2008 ರಂದು ಆಪಾದಿತರು ತನ್ನ ಸಂಬಳದಲ್ಲಿ ರೂ. 2500/- ಗಳನ್ನು ಡಿ.ಪಿ.ಪಿ.ಎಸ್.ಗೆಂದು ಅನಧೀಕೃತವಾಗಿ ಪಡೆದುದನ್ನು ಅವರ ಕೈಯಿಂದ ವಸೂಲು ಮಾಡಿ ಕೊಡಿಸಬೇಕಾಗಿ ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಬರೆದುಕೊಂಡಿದ್ದಾರೆ.

54. ನಿ.ಪಿ.27 ರಲ್ಲಿ ದಿ. 30-06-2008 ರಂದು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಆಪಾದಿತರಿಗೆ ಅಕ್ರಮವಾಗಿ ಪಡೆದುಕೊಂಡ ರೂ. 5600/- ಹಾಗೂ 2500/- ಗಳ ಬಗ್ಗೆ ವಿವರಣೆ ಕೇಳಿದ ಪತ್ರದ ನಕಲನ್ನು ಕೇಂದ್ರ ನಿರ್ದೇಶನಾಲಯಕ್ಕೆ ಕಳುಹಿಸಿದ್ದಾರೆ. ಜೊತೆಗೆ ಶ್ರೀಮತಿ ವೀಣಾ ಕುಲಕರ್ಣಿ ಬರೆದುಕೊಟ್ಟ ಕಾಗದ ಕುರಿತು ಆಪಾದಿತರಿಗೆ ತಿಳಿಸಲಾಗಿದೆ.

55. ನಿ.ಪಿ.28 ರಲ್ಲಿ ದಿ. 05-10-2007 ರಂದು ನಿರ್ದೇಶಕರು ಆಪಾದಿತರಿಗೆ ಅವರು ಮಾಡಿದ ಬೇರೆ ಬೇರೆ ತಪ್ಪನ್ನು ತೋರಿಸಿಕೊಟ್ಟು ಅವರ ಮೇಲೆ ಶಿಸ್ತು ಕ್ರಮ ಏಕೆ ತೆಗೆದುಕೊಳ್ಳಬಾರದೆಂದು ಕಾರಣ ಕೇಳಿಕೊಂಡಿದ್ದಾರೆ.

56. ನಿ.ಪಿ.29 ದಿ. 27-10-2007 ರಂದು ಆಪಾದಿತರು ನಿ.ಪಿ.28 ಕ್ಕೆ ನೀಡಿದ ಉತ್ತರದ ನಕಲು.

57. ನಿ.ಪಿ.30 ರಲ್ಲಿ ದಿ. 22-11-2007 ರಂದು ನಿರ್ದೇಶಕರು ಆಪಾದಿತರು ತನ್ನ ಪತ್ರದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಬರೆದ ವಿಷಯದಲ್ಲಿ ಆಪಾದಿತರು ದಸ್ತಗಿರಿ ಮಾಡಬಹುದಾದ ಅಪರಾಧ ಎಸಗಿರುವರೆಂದು ತಿಳಿಸಿರುತ್ತಾರೆ.

58. ಮೊದಲಿನ ಆರೋಪ ಅಂದರೆ ನಿ.ಪಿ.4 ಆಪಾದಿತರು ತಾನು ಬೆಳಿಗ್ಗೆ 9.45ಕ್ಕೆ ಬಂದಾಗ ಬೇರೆ ಪತ್ರಗಳೊಂದಿಗೆ ನಿ.ಪಿ.4 ನೋಡದೆ ಸಹಿ ಮಾಡಿದ್ದೇನೆ ಎಂದು ಆಪಾದಿತರ ಮೇಲಾಧಿಕಾರಿ ನನ್ನ ಮುಂದೆ ಸ್ಪಷ್ಟವಾಗಿ ಹೇಳಿರುತ್ತಾರೆ.

59. ಮಂಡನಾಧಿಕಾರಿಯು ವಿಚಾರಣೆ ಪ್ರಾರಂಭಿಸುವ ಮೊದಲು ಆರೋಪಣಾ ಪಟ್ಟಿಯ 3ನೇ ಅನುಬಂಧದಲ್ಲಿರುವ ದಾಖಲೆಗಳನ್ನು ಅಪಾದಿತರಿಗೆ ಕೊಟ್ಟು ಸ್ವೀಕೃತಿ ಪಡೆದಿದ್ದಾರೆ ಅಲ್ಲದೆ ಪ್ರಾಥಮಿಕ ಹೇಳಿಕೆಯಲ್ಲಿ ನನ್ನ ಮುಂದೆ ಎಲ್ಲಾ ದಾಖಲೆಗಳು ಬಂದಿರುತ್ತದೆ ಎಂದು ದಿನಾಂಕ:18.04.2009ರಂದು ಒಪ್ಪಿಕೊಂಡಿದ್ದಾರೆ. ಆಮೇಲೆ ಸಾಕ್ಷಿ ವಿಚಾರಣೆ ಪ್ರಾರಂಭವಾಗಿದೆ. ಆ ದಾಖಲೆಗಳಲ್ಲದೆ ಬೇರೆ ಯಾವುದೇ ದಾಖಲೆಗಳನ್ನು ಸ್ಪಷ್ಟವಾಗಿ ತಾರೀಖು ಮತ್ತು ವಿವರ ನೀಡಿ ಆಪಾದಿತರು ಕೇಳಿಕೊಂಡಿಲ್ಲ. ಆದ್ದರಿಂದ ಆಪಾದಿತರಿಗೆ ಎಲ್ಲಾ ದಾಖಲೆಗಳನ್ನು ಒದಗಿಸಿಲ್ಲ ಎನ್ನುವುದು ವಸ್ತು ಸ್ಥಿತಿ ಅಲ್ಲ. ತನ್ನ ಜವಾಬ್ದಾರಿಯನ್ನು ತಪ್ಪಿಸಲು ಹಾಗೂ ಇಲಾಖಾ ವಿಚಾರಣೆಯನ್ನು ಮುಂದುವರಿಸಲು ಉಪಯೋಗಿಸಿದ ನೆವನವಾಗಿರುತ್ತದೆ ಎಂಬುದು ನನ್ನ ಅಭಿಪ್ರಾಯ.

60. ಆರೋಪ 1 – ಸರ್ಕಾರಿ ಸಾಕ್ಷಿ ಸಂಖ್ಯೆ 1 ಶ್ರೀ ಬಿ. ಶ್ರೀನಿವಾಸಾಚಾರ್ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಅವರು ಆಪಾದಿತರ ವಿರುದ್ಧವಾಗಿ ಸುಳ್ಳು ಸಾಕ್ಷಿ ಹೇಳುವ ದ್ವೇಷ ಅಥವಾ ವೈಯಕ್ತಿಕ ಕಾರಣಗಳನ್ನು ಪಾಟೀ ಸವಾಲು ಸಮಯ ತೋರಿಸಿಕೊಟ್ಟಿಲ್ಲ. ಆಪಾದಿತರ ಮೇಲೆ ಬೇರೆ ಬೇರೆ ಅವರ ತಪ್ಪುಗಳನ್ನು ತೋರಿಸಿ ಗೈರು ಹಾಜರಾಗಿ ಕಛೇರಿಯ ಕೆಲಸಕಾರ್ಯಗಳಿಗೆ ತೊಂದರೆ ಆಗಿರುವುದನ್ನು ಬರೆದಿರುವಾಗ ಅವರೇ ನಿಪಿ4 ತಿಳಿದು ಸಹಿ ಮಾಡುವ ಸಂದರ್ಭ ಇರಲಾರದು ಎಂದು ನಾನು ಹೇಳುತ್ತೇನೆ. ಮೊದಲಿನಿಂದಲೇ ಕೆಲಸ ಮಾಡುತ್ತಿದ್ದ ಕೆಳದರ್ಜೆ ನೌಕರನನ್ನು ನಂಬಿ ದಿನಾಲು ಸಹಿ ಹಾಕುವಂತೆ, ಅದಲ್ಲದೆ ಬೇರೆ ಪತ್ರಗಳೊಂದಿಗೆ ಅದನ್ನು ಇಟ್ಟು ಮೋಸದಿಂದ ಸಹಿ ತೆಗೆದುಕೊಂಡಿರುವುದು 1ನೇ ಸಾಕ್ಷಿ ಹೇಳಿಕೆಯಿಂದ ವ್ಯಕ್ತವಾಗಿದೆ. ಆಪಾದಿತರ ಬಗ್ಗೆ ಶಿಫಾರಸ್ಸು ಮಾಡಿ ಅವರನ್ನು ತಮ್ಮ ಕಛೇರಿಯಿಂದ ವರ್ಗ ಮಾಡಬಾರದೆಂದು ಸಾಮಾನ್ಯ ಅಧಿಕಾರಿ ಯಾರೂ ಬರೆಯುವಷ್ಟು ನಂಬಿಕೆಯನ್ನು ಆಪಾದಿತರು ತನ್ನ ಕೆಲಸಕಾರ್ಯಗಳಲ್ಲಿ ತೋರಿಸಿಕೊಟ್ಟಿಲ್ಲ. ಶ್ರೀ ಬಿ. ಶ್ರೀನಿವಾಸಾಚಾರ್ ನನ್ನ ಮುಂದೆ ತಾನು ನಿರ್ದೇಶಕರಿಗೂ ಕ್ಷಮಾಪಣೆ ಕೇಳಿ ಪತ್ರ ಬರೆದಿರುವುದನ್ನು ಹೇಳಿಕೊಂಡಿದ್ದಾರೆ. ಆ ಪತ್ರವನ್ನು ಈ ಇಲಾಖಾ ವಿಚಾರಣೆಯಲ್ಲಿ ಗುರುತಿಸಲಾಗಿದೆ. ಆದ್ದರಿಂದ ಆಪಾದಿತರು ಹೇಳುವಂತೆ 1ನೇ ಆರೋಪ ಸಾಬೀತು ಆಗಿಲ್ಲವೆಂದು ಹೇಳುವುದು ಸಮಂಜಸವಲ್ಲ.

61. ಸರ್ಕಾರಿ ನೌಕರನು 1966ನೇ ಇಸವಿಯ ಸರ್ಕಾರಿ ನೌಕರರ ನಡತೆಯ ನಿಯಮಾವಳಿ 3 ರಂತೆ ನಂಬಿಕೆಯನ್ನು ಇಟ್ಟುಕೊಳ್ಳುವುದು ಮುಖ್ಯ ಕರ್ತವ್ಯ. ಜುಲೈ ತಿಂಗಳಲ್ಲಿ ಆ ರೀತಿ ಬರೆಯಬೇಕಾದರೆ ಸರ್ಕಾರದ ಸಾಮಾನ್ಯ ಅಧಿಕಾರಿ ಆ ರೀತಿ ಬರೆಯುವ ಸಂದರ್ಭ ರಹಸ್ಯ ವರದಿಯಲ್ಲಿ ಮಾತ್ರ ಬರೆಯುವುದಾಗಿದೆ. ಆಪಾದಿತರ ಮೇಲೆ ಹಲವಾರು ಆರೋಪಗಳು ಇರುವ ಸಂದರ್ಭದಲ್ಲಿ ಯಾವುದೇ ಅಧಿಕಾರಿಯು ಆರೋಪ 1 ರಲ್ಲಿ ಬರೆದಂತೆ ಶಿಫಾರಸ್ಸು ಮಾಡುವುದು ಅಸಾಧ್ಯವಾಗಿರುತ್ತದೆ. ಆದ್ದರಿಂದ ಆಪಾದಿತ ನಂಬಿಕೆಗೆ ದ್ರೋಹ ಮಾಡಿರುವುದು ಸಾಬೀತಾಗಿದೆ. ಆಪಾದಿತರು ತನ್ನ ಕೆಲಸದಲ್ಲಿ ದಕ್ಷತೆಯನ್ನು ತೋರಿಸಿಲ್ಲ. ಆ ಪತ್ರಕ್ಕೆ ಸಹಿ ತೆಗೆದುಕೊಳ್ಳುವ ಮೊದಲು ಒಂದು ಕಡತ ಪ್ರಾರಂಭ ಮಾಡಿ ಕರಡು ಪ್ರತಿಗೆ ಸಹಿ ತೆಗೆದುಕೊಳ್ಳಲಿಲ್ಲ. ಆದ್ದರಿಂದ ಆಪಾದಿತರು ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ಕಾರ್ಯವೆಸಗಿದ್ದು ಸಾಬೀತಾಗಿದೆ ಎಂದು ನನ್ನ ಅಭಿಪ್ರಾಯ.

62. ಆರೋಪ 2 ಮತ್ತು 3 – ದಿ. 31-1-2008 ರಂದು ಆಪಾದಿತರು ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಗೆ ವರ್ಗವಾಗಿ ಬಿಡುಗಡೆಗೊಳಿಸಿಟ್ಟರೂ ತನ್ನ ಸ್ವಾಧೀನವಿದ್ದ ಕಪಾಟಿನ ಬೀಗದ ಕೈ ಕೊಡದೆ ನಿರ್ಲಕ್ಷತೆ ತೋರಿಸಿದ್ದು ದಾಖಲೆಗಳಿಂದ ಮತ್ತು ಸಾಕ್ಷಿಗಳ ಹೇಳಿಕೆಗಳಿಂದ ಸಾಬೀತಾಗಿದೆ. ಸುಮಾರು 4 ತಿಂಗಳು ಕಳೆದರೂ ಪೂರ್ತಿ ಪ್ರಭಾರೆ ನೀಡದೆ ಆಪಾದಿತರು

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಲ್ಲಿ ಅಧಿಕಾರಿಗಳಿಗೂ, ಉಳಿದ ನೌಕರರಿಗೂ ಸಾಕಷ್ಟು ತೊಂದರೆಗಳನ್ನು ಮಾಡಿದ್ದು ಕಂಡುಬರುತ್ತದೆ. ದಿ. 23-5-2008 ರಂದು ಕಪಾಟು ಒಡೆದಾಗ 141 ದಾಖಲೆಗಳು ಅದರಲ್ಲಿಯೂ ಸೇವಾ ಪುಸ್ತಕಗಳು ಮತ್ತಿತರ ಮುಖ್ಯ ದಾಖಲೆಗಳು ಸಿಕ್ಕಿರುವುದು ಆ ದಿನ ತಯಾರಿಸಿದ ಪಟ್ಟಿಯಿಂದ ವ್ಯಕ್ತವಾಗುತ್ತದೆ. ಆದ್ದರಿಂದ ಆರೋಪದಲ್ಲಿ ತೋರಿಸಿದಂತೆ ಆಪಾದಿತರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3 ನ್ನು ಸ್ಪಷ್ಟವಾಗಿ ಉಲ್ಲಂಘಿಸಿ ಸರ್ಕಾರಿ ನೌಕರನಿಗೆ ಸಲ್ಲದ ರೀತಿಯಲ್ಲಿ ವರ್ತಿಸಿರುವುದು ದಾಖಲೆಗಳಿಂದ ಮತ್ತು ಸಾಕ್ಷಿಗಳ ಹೇಳಿಕೆಯಿಂದ ಸಾಬೀತಾಗಿದೆ.

63. ನಿ.ಪಿ.16 ಆಪಾದಿತರಿಗೆ 19-05-2008 ರಂದು ನೀಡಿದ ಆಜ್ಞೆ ತನಗೆ ತಲುಪಿಲ್ಲ ಮತ್ತು ಅದು ದಿ. 02-06-2008 ರಂದು ಮಾತ್ರ ರಿಜಿಷ್ಟರ್ ಅಂಚೆ ಮೂಲಕವಾಗಿ ತನಗೆ ಜಾರಿಗೊಳಿಸಲಾಗಿದೆ. ಈ ಬಗ್ಗೆ ಆಪಾದಿತ ಯಾವುದೇ ದಾಖಲೆ ಹಾಜರು ಮಾಡಿಲ್ಲ ಮತ್ತು ಲಿಖಿತವಾದದಲ್ಲಿ ಮಾತ್ರ ಬರೆದಿರುವುದು ಕಂಡುಬರುತ್ತದೆ. ಸರ್ಕಾರಿ ದಾಖಲೆಗಳ ಯಾವುದೇ ಪತ್ರ ಯಾ ಸ್ವೀಕೃತದ ಮೇಲೆ ಅವಲಂಬಿಸಿದ್ದು ಕಂಡುಬರುವುದಿಲ್ಲ. ನಿ.ಪಿ.16 ಆಪಾದಿತರಿಗೆ ಜಾರಿ ಆಗದಿದ್ದರೂ ಆಪಾದಿತರು 2008 ಜನವರಿಯಲ್ಲೇ ಪೂರ್ತಿ ಪ್ರಭಾರೆಯನ್ನು ಕೊಡುವುದು ಅವರ ಆದ್ಯ ಕರ್ತವ್ಯವಾಗಿತ್ತು. ಇಲಾಖೆಯ ಮುಖ್ಯಸ್ಥರು ಕೀಲಿ ಕೈಗಳ 2ನೇ ಪ್ರತಿ ಉಪಯೋಗಿಸಿ ಕಪಾಟು ತೆರೆಯಬಹುದಿತ್ತು ಎಂಬ ವಾದದಲ್ಲಿ ಹುರುಳಿಲ್ಲ. ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಆ ರೀತಿ ತನ್ನ ಸ್ವಾಧೀನ ಕೀಲಿ ಕೈಗಳ 2ನೇ ಪ್ರತಿ ಇರುವುದಾಗಿ ಒಪ್ಪಿಕೊಂಡಿಲ್ಲ ಮತ್ತು ಅವರ ಸ್ವಾಧೀನ ಆಪಾದಿತರು ಅವರ ಜಾಗದಲ್ಲಿ ಮೊದಲು ಕೆಲಸ ಮಾಡುತ್ತಿದ್ದ ಅಧಿಕಾರಿಯು ಕೊಟ್ಟಿರುವುದನ್ನು ತೋರಿಸುವ ದಾಖಲೆ ಇರುವುದಿಲ್ಲ. ಆಪಾದಿತರು ಮತ್ತೂ ಮುಂದುವರಿಸಿ ತನಗೆ ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಗೆ ಬಂದಾಗ ಯಾರೂ ಪ್ರಭಾರೆ ನೀಡಿಲ್ಲ. ಆದ್ದರಿಂದ ನಾನು ಆ ಕಛೇರಿಯಿಂದ ವರ್ಗವಾಗಿ ರಾಮನಗರ ಜಿಲ್ಲೆಗೆ ಹೋಗುವಾಗ ಪ್ರಭಾರೆ ನೀಡುವ ಸಂದರ್ಭ ಇಲ್ಲವೆಂದು ವಾದಿಸಿದರು. ಮೊದಲಿನವರು ಮಾಡಿದ ತಪ್ಪನ್ನು ಕಛೇರಿಯಲ್ಲಿ ಪುನ: ಪುನ: ಮಾಡುತ್ತಿರುವುದರಿಂದ ಆಪಾದಿತರು ಬೆಂಗಳೂರು ಗ್ರಾಮಾಂತರ ಜಿಲ್ಲೆಯಿಂದ ರಾಮನಗರ ಜಿಲ್ಲೆಗೆ ಹೋದಾಗ ಪ್ರಭಾರೆ ಕೊಡದಿರುವುದು ಸರಿಯೆಂದು ಸಾಧಿಸುವುದು ಸಮಂಜಸವಲ್ಲ. ಇದು ಆಪಾದಿತರ ಬೇಜವಾಬ್ದಾರಿಯನ್ನು ಮತ್ತು ಕೆಲಸದಲ್ಲಿರುವ ನಿರ್ಲಕ್ಷತೆಯನ್ನು ತೋರಿಸುತ್ತದೆ. ಆದ್ದರಿಂದ ಆಪಾದಿತರು ನನ್ನ ಮುಂದೆ ಆರೋಪವನ್ನು ನಿರಾಕರಿಸಲು ಪ್ರಯತ್ನಿಸಿದ್ದು ಸಫಲವಾಗಿಲ್ಲ. ಅದು ಅವರ ಬೇಜವಾಬ್ದಾರಿಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ತನ್ನ ತಪ್ಪನ್ನು ಮರೆಮಾಚಲು ಯಾವುದೇ ತರಹದ ಕುಂಟುನೆಪ ನೀಡಲು ತಯಾರು ಇರುವವರೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಆರೋಪಗಳು 2 ಮತ್ತು 3 ಸಾಬೀತಾಗಿರುತ್ತದೆ.

64. ಆರೋಪ 4 – ಸರ್ಕಾರಿ ಸಾಕ್ಷಿ 6, 7 ಮತ್ತು 8 ರ ಹೇಳಿಕೆಯಿಂದ ಮತ್ತು ದಾಖಲೆಗಳಿಂದ ಆಪಾದಿತರು ಕು. ಆರ್. ಜ್ಯೋತಿ ರವರಿಗೆ ಅವರಿಗೆ ಫೆಬ್ರವರಿಯಿಂದ ಮೇ ವರೆಗೆ ಸಲ್ಲಬೇಕಾದ ರೂ. 34774/- ಗಳ ವೇತನದಲ್ಲಿ ರೂ. 2000/- ಗಳನ್ನು ಕಡಿಮೆ ಕೊಟ್ಟಿದ್ದು ಸ್ಪಷ್ಟವಾಗಿ ನನ್ನ ಮುಂದೆ ಸಾಬೀತಾಗಿದೆ. ಆಪಾದಿತರಿಗೆ ವೇತನ ಹಂಚುವ ಕೆಲಸ ನಿರ್ವಹಿಸಿದ ದಾಖಲೆಗಳು ಹಂಚಿಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ, ಆದಕಾರಣ ಅದು ಸಾಬೀತಾಗಿಲ್ಲ ಎಂಬುದು ನಂಬುವಂತ ವಿಷಯವಲ್ಲ. ಬಿಲ್ಲು ಕಳುಹಿಸುವುದು ಮತ್ತು ನಗದು ಪುಸ್ತಕ ಹಾಗೂ ನಗದನ್ನು ಅವರೇ ಇಟ್ಟುಕೊಂಡಿರುವುದು ಸಾಬೀತಾಗಿರುವುದರಿಂದ ಕೆಲಸದ ಹಂಚಿಕೆಯ ದಾಖಲೆಗಳು ಇಲ್ಲದಿದ್ದರೂ ಸಾಕ್ಷಿಗಳ ಹೇಳಿದ ಮಾತನ್ನು ನಂಬದಿರಲು ಸಾಧ್ಯವಿಲ್ಲ. ನಿಪಿ 23 ನಗದು ಪುಸ್ತಕದಲ್ಲಿ ರೂ. 34774/- ಗಳು ಪಾವತಿಯಾಗಿರುವುದು ಕಂಡುಬಂದರೂ ನಿ.ಪಿ.22ರ ವೇತನ ಪುಸ್ತಕದಲ್ಲಿ ಆಪಾದಿತರ ಕೈ ಬರಹದಲ್ಲಿ ರೂ. 32774/- ಮಾತ್ರ ಕು. ಆರ್. ಜ್ಯೋತಿಗೆ ಕೊಟ್ಟಿರುವುದು ಕಂಡುಬರುವುದರಿಂದ ನಗದು ಪುಸ್ತಕದ ನಿ.ಪಿ.23 ಆಧಾರದ ಮೇಲೆ ಮಾತ್ರ ನಂಬಲು ಸಾಧ್ಯವಿಲ್ಲ. ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ನೋಡುವಾಗ ಆಪಾದಿತರು ತಪ್ಪು ಎಸಗಿದ್ದು ಸಾಬೀತಾಗಿದೆ. ಸತ್ಯ ಹೊರಗೆ ಬಂದಿದೆ. ಮತ್ತು ವಾದ ಮಾಡಿ ಮೂರು ತಿಂಗಳು ಕಳೆದು ದೂರು ನೀಡಿದ್ದಾರೆ ಆದ್ದರಿಂದ ಸಾಕ್ಷಿಯನ್ನು ನಂಬಬಾರದೆಂದು ವಾದಿಸಿದರು. 3 ತಿಂಗಳೂ ಕಳೆದು ದೂರು ನೀಡಿದ ಕಾರಣದಿಂದ ಸಾಕ್ಷಿಯನ್ನು ನಂಬದಿರಲು ಆಗುವುದಿಲ್ಲ. ಆ ಸಾಕ್ಷಿಯು ಬೇರೆಯವರ ಪ್ರಚೋದನೆಯಿಂದ ಆಪಾದಿತರ ಮೇಲೆ ಸುಳ್ಳು ಹೇಳಿರುವುದು ಅಸಾಧ್ಯ. ಆಪಾದಿತರು ಮತ್ತೂ ಮುಂದುವರಿಸಿ ಎಷ್ಟು ರೂಪಾಯಿಯ ಎಷ್ಟು ನೋಟುಗಳನ್ನು ನೀಡಿದ ವಿವರ ಸಾಕ್ಷಿಗೆ ಹೇಳಲಾಗದ ಕಾರಣ 2010 ರಲ್ಲಿ ನೀಡಿದ ಸಾಕ್ಷಿಯನ್ನು ನಂಬದಿರಲು ಆಗುವುದಿಲ್ಲ. ಕಡಿಮೆ ನೋಟುಗಳನ್ನು ಕೊಟ್ಟಿರುವಾಗ ಮತ್ತು ವೇತನ ಪುಸ್ತಕದಲ್ಲಿ ಆಪಾದಿತರೇ ಬರೆದಿರುವಾಗ ಈ ವಿಷಯಕ್ಕೆ ಯಾವುದೇ ಬೆಲೆ ಕೊಡಲಾಗುವುದಿಲ್ಲ. ನಿ.ಪಿ.22 ರಲ್ಲಿ ತಾನು ಗ್ರಾಮಾಂತರ ಜಿಲ್ಲೆಯಿಂದ ಬಿಟ್ಟು ಹೋದ ಮೇಲೆ ತಿದ್ದುಪಡಿ ಮಾಡಿದ್ದು ಕಂಡುಬರುತ್ತದೆ ಎಂದು ವಾದಿಸಿದರು. ಈ ವಿಷಯ ಸಾಕ್ಷಿಯ ಪಾಟೀ ಸವಾಲು ಸಮಯ ತೋರಿಸಿಕೊಟ್ಟಿಲ್ಲ. ಆದ್ದರಿಂದ ಆ ವಿಷಯ ಸುಳ್ಳು ಸಾಧಿಸಲು ಉಪಯೋಗಿಸಿದ ನೆಪವಾಗಿರುತ್ತದೆ.

65. ಕರ್ನಾಟಕ ಆರ್ಥಿಕ ವಿಧಿಯ 327 ಮತ್ತು 348ಎ ರಲ್ಲಿದ್ದಂತೆ ದೃಢೀಕರಿಸುವ ಜವಾಬ್ದಾರಿ ಕಛೇರಿ ಅಧಿಕಾರಿಗಳಿಗೆ ಇದ್ದರೂ ಮೂಲ ದಾಖಲೆಗಳಿಂದ ಮತ್ತು ಸಾಕ್ಷಿ ಹೇಳಿಕೆಗಳಿಂದ ಆಪಾದಿತರು ತಪ್ಪು ಮಾಡಿರುವುದು ನನ್ನ ಮುಂದೆ ಸ್ಪಷ್ಟವಾಗಿದೆ. ಆಪಾದಿತರ ವಾದ ನಿರಾಧಾರ ಮತ್ತು ಅವರೇ ಸೃಷ್ಟಿ ಮಾಡಿದ ವಾದವಾಗಿರುತ್ತದೆ. ಇದನ್ನು ಒಪ್ಪಲು ನಾನು ತಯಾರಿಲ್ಲ. ಆದ್ದರಿಂದ ಆರೋಪ 4 ನನ್ನ ಮುಂದೆ ಸಾಬೀತಾಗಿದೆ.

66. ಆರೋಪ 5 – ಆಪಾದಿತರು ದಿ. 01-12-2006 ರಿಂದ ಹೊಸಕೋಟೆ ತಾಲ್ಲೂಕು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುವಾಗ ಶ್ರೀಮತಿ ವೀಣಾ ಕುಲಕರ್ಣಿ, ಗಣತಿದಾರರಿಂದ ರೂ. 5600/- ಗಳನ್ನು ಮೋಸದಿಂದ ಪಡೆದಿರುವುದು ಮತ್ತು ಸಹೋದ್ಯೋಗಿಗೆ ಅನ್ಯಾಯ ಮಾಡಿರುವುದು ಸ್ಪಷ್ಟವಾಗಿದೆ. ಆಪಾದಿತರ ದುರ್ನಡತೆಯು ಆರೋಪದಲ್ಲಿ ಬರೆದಂತೆ ಸಾಬೀತಾಗಿದೆ.

67. ಈ ಆರೋಪ ಸ್ಪಷ್ಟವಾಗಿಲ್ಲ ಎಂದು ಆಪಾದಿತರಿಂದ ದೂರಲಾಗಿದೆ. ಆರೋಪಣಾ ವಿವರಣೆಯನ್ನು (2ನೇ ಅನುಬಂಧ) ಹಾಗೂ ಈ ಆರೋಪಣೆಯನ್ನು ನೋಡುವಾಗ ಆಪಾದಿತರು ಮೋಸದಿಂದ ಶ್ರೀಮತಿ ವೀಣಾ ಕುಲಕರ್ಣಿಯಿಂದ ರೂ. 5600/- ಗಳನ್ನು ಪಡೆದಿರುವುದು ಸ್ಪಷ್ಟವಾಗಿದೆ

ಮತ್ತು ಆಪಾದಿತರು ಆಪಾದನೆಯ ಒಕ್ಕಣೆಯಿಂದ ಅರ್ಥವಾಗದೇ ಇರುವ ಸಂದರ್ಭ ಆಗಿಲ್ಲ. ರೂ. 5600/– ಗಳನ್ನು ಕೆಳಗಿನ ತರಗತಿಯ ಸರ್ಕಾರಿ ನೌಕರನಿಗೆ ಚಿಕ್ಕ ಹಣವಲ್ಲ. 2 ತಿಂಗಳ ನಂತರ ದೂರು ನೀಡಿದರೂ ಸುಳ್ಳು ದೂರು ಎಂದು ಶ್ರೀಮತಿ ವೀಣಾ ಕುಲಕರ್ಣಿಯವರ ಹೇಳಿಕೆಯನ್ನು ಕಡೆಗಣಿಸುವುದು ಸಮಂಜಸವಲ್ಲ. ಆಪಾದಿತರು ಡಿ.ಸಿ.ಪಿ.ಎಸ್. ಬಗ್ಗೆ ಎಂದು ಸುಳ್ಳು ಹೇಳಿ ಶ್ರೀಮತಿ ವೀಣಾ ಕುಲಕರ್ಣಿಯವರಿಂದ ಹಣ ಪಡೆದಿರುವುದು ದಾಖಲೆಗಳಿಂದ ಮತ್ತು ಪ್ರಮಾಣ ಪೂರ್ವಕ ನೀಡಿದ ಹೇಳಿಕೆಗಳಿಂದ ಸ್ಪಷ್ಟವಾಗಿದೆ. ಆಪಾದಿತರು ಹೇಳುವಂತೆ ಕುರುವಿಲ್ಲದ ಆಪಾದನೆಯೂ ಅಲ್ಲ. ಕಡೆಗಣಿಸುವ ವಿಷಯವೂ ಅಲ್ಲ. ಶ್ರೀಮತಿ ವೀಣಾ ಕುಲಕರ್ಣಿ ಆಪಾದಿತರ ಮೇಲೆ ಸುಳ್ಳು ದೂರು ನೀಡುವ ಮಹಿಳೆ ಎಂಬುದನ್ನು ಪಾಟೀ ಸವಾಲು ಯಾ ಆಪಾದಿತರು ತನ್ನ ಲಿಖಿತ ವಾದದಲ್ಲಿ ತೋರಿಸಿಕೊಟ್ಟಿಲ್ಲ. ಆದ್ದರಿಂದ ಈ ಆರೋಪವು ಸಂಪೂರ್ಣವಾಗಿ ಸಾಬೀತಾಗಿದೆ.

68. ಆರೋಪ 6 – ಈ ಆರೋಪದಲ್ಲಿ ರೂ. 2500/– ಗಳನ್ನು ಆಪಾದಿತರು ಕು. ಪಿ. ಮಂಜು, ಗಣತಿದಾರಳಿಗೆ ಕೊಡದಿರುವುದು ದಾಖಲೆಗಳಿಂದ ಮತ್ತು ಬಾಯಿದೆರೆ ಹೇಳಿಕೆಯಿಂದ ಸ್ಪಷ್ಟವಾಗಿ ನನ್ನ ಮುಂದೆ ಸಾಕ್ಷಿ ಸಂಖ್ಯೆ 9 ಮತ್ತು ನಿಪಿ 26 ಮತ್ತು ನಿಪಿ 27 ರಿಂದ ಸಾಬೀತಾಗಿದೆ. ಆಮೇಲೆ ಆಪಾದಿತರು ರೂ. 2200/– ಗಳನ್ನು ಸಾಕ್ಷಿಗೆ ಕೊಟ್ಟಿದ್ದರೂ ಅದು ಆರೋಪ ಹೊರಿಸಿದ ಮೇಲೆ ಇರಬೇಕು. 2 ವರ್ಷಗಳ ನಂತರ ರೂ. 2500/– ಆಪಾದಿತರು ಸಾಕ್ಷಿ ಕು. ಪಿ. ಮಂಜುಗೆ ಕೊಟ್ಟಿದ್ದರೂ ಆಪಾದಿತರು 2008 ರಲ್ಲಿ ತಪ್ಪು ಮಾಡಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಆ ಸಾಕ್ಷಿಯು ಜೀರೆಯವರ ಪ್ರಚೋದನೆಗೆ ಬಿದ್ದು ಸುಳ್ಳು ದೂರು ಯಾ ಸುಳ್ಳು ಹೇಳಿಕೆ ನೀಡಿರುವುದು ಯಾವುದೇ ರೀತಿಯಲ್ಲಿ ಕಂಡುಬರುವುದಿಲ್ಲ.

69. ಆರೋಪ 7 – ಸರ್ಕಾರಿ ಸಾಕ್ಷಿ ಸಂಖ್ಯೆ 8 ಶ್ರೀ ಎಸ್. ಸುದರ್ಶನ್ ರವರು ನನ್ನ ಮುಂದೆ ಆಪಾದಿತರು ದಿ. 01–05–2008 ರಿಂದ 30–06–2008ರ ವರೆಗೆ ಕಛೇರಿಗೆ ಬಂದಿಲ್ಲ ಮತ್ತು ಹಾಜರಿ ಪುಸ್ತಕದಲ್ಲಿ ಆ 2 ತಿಂಗಳಲ್ಲಿ ಆಪಾದಿತರ ಹೆಸರಿನ ಎದುರಲ್ಲಿ ತಪ್ಪು ಗುರುತು ಹಾಕಿ ಆಪಾದಿತರು ಬಾರದಿರುವುದನ್ನು ಹಾಜರಿ ಪುಸ್ತಕ ಹಾಗೂ ತನ್ನ ಹೇಳಿಕೆಯಿಂದ ಸಾಬೀತುಪಡಿಸಿದ್ದಾರೆ. ಹಾಜರಿ ಪುಸ್ತಕದಲ್ಲಿ ಬೇರೆ ಯಾವುದೇ ರೀತಿಯ ಬರಹ ಅಗತ್ಯವಿಲ್ಲ. ಕಛೇರಿಯ ಅಧಿಕಾರಿ ಹಾಜರಿ ಪುಸ್ತಕದಲ್ಲಿ ಗುರುತಿಸಿರುವುದು ಸಾಕು. ಆಪಾದಿತರ ಆ ಸಮಯದಲ್ಲಿ ಆ 2 ತಿಂಗಳ ಅವಧಿಯಲ್ಲಿ ಯಾವ ಕಛೇರಿಯಲ್ಲಿ ಏನು ಕೆಲಸ ಮಾಡುತ್ತಿದ್ದನೆಂದು ತೋರಿಸಿಕೊಟ್ಟಿಲ್ಲ ಮತ್ತು ರಜೆ ಅರ್ಜಿ ಬರೆದುಕೊಟ್ಟಿಲ್ಲ. ಯಾವುದೇ ತರಹದ ಪರವಾನಗಿ ಪಡೆದಿಲ್ಲ. ಆದ್ದರಿಂದ ಸಾಕ್ಷಿ ಸಂ. 8 ಆಪಾದಿತ ದಿ. 01–05–2008 ರಿಂದ 30–06–2008ರ ವರೆಗೆ ಗೈರು ಹಾಜರಾಗಿರುವುದನ್ನು ಸ್ಪಷ್ಟವಾಗಿ ಸಾಬೀತುಪಡಿಸಿದ್ದಾರೆ.

70. ಆರೋಪ 8 – ದಿ. 14–05–2007 ರಿಂದ 24–05–2007ರ ವರೆಗೆ ಗೈರು ಹಾಜರಾಗಿರುವುದು ಸಾಕ್ಷಿಯ ಹೇಳಿಕೆಯಿಂದ ಮತ್ತು ಇತರ ದಾಖಲೆಗಳಿಂದ ಸಾಬೀತಾಗಿದೆ. ಕಛೇರಿಯಿಂದ ಕಳುಹಿಸಿದ ನೋಟಿಸ್‌ಗೆ ಯಾವುದೇ ಉತ್ತರ ನೀಡಿಲ್ಲ. ಆಪಾದಿತರನ್ನು ಇ.ಸಿ.ಎಸ್. ಮಾಡಿಸಲು ಕೆ.ಜಿ.ಸಿ.ಸಿ.ಗೆ ಕಳುಹಿಸಿದರು. ನಿ.ಪಿ.2 ಆಪಾದಿತರಿಗೆ ಜಾರಿ ಆಗಿರುವುದನ್ನು ಹಾಜರುಪಡಿಸಿಲ್ಲ ಎಂದು ವಾದಿಸಿದರು. ಹಾಜರಾತಿ ಪುಸ್ತಕ ಆ ಅವಧಿಗೆ ಹಾಜರಿ ಮಾಡದಿದ್ದರೂ ಆಪಾದಿತರು ಕಛೇರಿಗೆ ಸಂಬಂಧಿಸಿದ ಯಾವ ಕೆಲಸವನ್ನೂ ಮಾಡಿರುವುದನ್ನು ತನ್ನ ಸ್ವಂತ ಹೇಳಿಕೆಯಿಂದ ಯಾ ದಾಖಲೆಗಳಿಂದ ಸಾಬೀತುಪಡಿಸಿಲ್ಲ. ಯಾವುದೋ ಅಪರಾಧಕ್ಕೆ ನಂಜನಗೂಡು ಪೋಲಿಸ್ ಠಾಣೆಯಲ್ಲಿ ಇರುವುದಾಗಿ ತಿಳಿಸಿದ್ದೆ ಎಂದು ಹೇಳುವುದು ಆಪಾದಿತ ಕಛೇರಿ ಕೆಲಸ ಮಾಡದೆ ತನ್ನ ಪಾಡಿಗೆ ಪೋಲಿಸ್ ಠಾಣೆಯಲ್ಲಿ ಇದ್ದರೆ ಅದನ್ನು ಕರ್ತವ್ಯ ಮೇಲಿದ್ದರೆಂದು ಮತ್ತು ಅವನ ಗೈರು ಹಾಜರಿಯನ್ನು ಕಛೇರಿಯಲ್ಲಿ ಮನ್ನಿಸುವುದು ಸಮರ್ಪಕವಲ್ಲ. ಆದ್ದರಿಂದ ಆರೋಪ 8 ಸಾಬೀತಾಗಿರುತ್ತದೆ.

71. ಆರೋಪ 9 – ಈ ಆರೋಪಣೆ ಸಾಬೀತು ಮಾಡಲು ಮಂಡನಾಧಿಕಾರಿಯು ಯಾವುದೇ ದಾಖಲೆಗಳ ಮೇಲೆ ಯಾ ಬಾಯ್ದೆರೆ ಸಾಕ್ಷಿ ಮೇಲೆ ಅವಲಂಬಿಸಿಲ್ಲ ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ಸಂದರ್ಭ ಅವಕಾಶಗಳನ್ನು ತೋರಿಸಿಕೊಡಲಿಲ್ಲ. ಆದ್ದರಿಂದ ಈ ಆರೋಪ ಸಾಬೀತಾಗಿಲ್ಲ.

72. ಆರೋಪ 10 – ಆಪಾದಿತರು ಕಛೇರಿಗೆ ಗೈರು ಹಾಜರಾಗಿ ಆತ ಮಾಡಬೇಕಾದ ಆಡಳಿತ ಮತ್ತು ಲೆಕ್ಕ ವಿಭಾಗದ ಕರ್ತವ್ಯಗಳನ್ನು ಮಾಡದಿರುವುದು ಸಾಕ್ಷಿಗಳ ಹೇಳಿಕೆಯಿಂದ ಸಾಬೀತಾಗಿರುತ್ತದೆ.

73. ಸಾಕ್ಷಿ ಸಂಖ್ಯೆ 1 ಈ ವಿಷಯ ವಿವರಿಸಿದ್ದಾರೆ. ನಿವೃತ್ತಿ ವೇತನದ ದಾಖಲೆಗಳನ್ನು ಸಮಯಕ್ಕೆ ಸರಿಯಾಗಿ ಮೇಲಾಧಿಕಾರಿಗಳು ಕಳುಹಿಸದೇ ಇರುವುದುನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಈ ಆಪಾದನೆಯನ್ನು ಆಪಾದಿತರು ಹೇಳುವಂತೆ ಯಾವುದೇ ತರಹದ ಸುಳ್ಳು ಆಪಾದನೆಯಾಗಿಲ್ಲ. ಕಛೇರಿಯಲ್ಲಿ ಬೇರೆ ಒಂದನೇ ದರ್ಜೆಯ ಗುಮಾಸ್ತ ಇರಲಿಲ್ಲ. ಆ ಕಛೇರಿ ಕೆಲಸವನ್ನು 10 ದಿವಸ ಬೇರೆ ಯಾರೂ ಮಾಡದೆ ತೊಂದರೆ ಆಗಿರಲೇ ಬೇಕು. ಕಛೇರಿಯ ಅಧಿಕಾರಿಯು ಆವಾಗ ಆಗಬೇಕಾದ ಕೆಲಸವನ್ನು ಮುಂದೆ ಯಾವಗ ಆಯಿತೆಂದು ವಿವರಣೆ ನೀಡಬೇಕಾಗಿಲ್ಲ. ಬೇಕಾದ ವಿವರ 2ನೇ ಅನುಬಂಧದಲ್ಲಿ ಸೇರಿರುತ್ತದೆ. ಇದು ಕ್ಷುಲ್ಲಕ ಅಪರಾಧ ಅಲ್ಲ. ಕಛೇರಿ ಯಾವುದನ್ನು ಮರೆಮಾಚಿಲ್ಲ. ಇದ್ದುದನ್ನು ಸ್ಪಷ್ಟವಾಗಿ ಹೇಳಿರುತ್ತದೆ. ಶಿಸ್ತು ಪ್ರಾಧಿಕಾರಿ ಆಪಾದಿತರ ಮೇಲೆ ಮನಬಂದಂತೆ ಸುಳ್ಳು ಅಪವಾದ ಮಾಡಿಲ್ಲ.

74. ಆರೋಪ 11 – ಆಪಾದನೆಯಲ್ಲಿ ಕಾಣುವ ಎಲ್ಲಾ ವಿವರಗಳು, ದಾಖಲೆಗಳಿಂದ ಮತ್ತು ಶ್ರೀ ಸಿದ್ದರಾಜು ರವರ ಹೇಳಿಕೆಯಿಂದ ಸ್ಪಷ್ಟವಾಗಿ ಸಾಬೀತಾಗಿದೆ. ಅವರು ಹೇಳಿದಂತೆ ದಾಖಲೆಗಳಲ್ಲಿಯೂ ಆಪಾದಿತರು ಮಾಡಿದ ತಪ್ಪು ವೇದ್ಯವಾಗುತ್ತದೆ. ಆಪಾದಿತರು ಸಾಕ್ಷಿಗಳಿಂದ ತೆಗೆದುಕೊಂಡ ಹಣಕ್ಕೆ ರಸೀದಿ ಕೊಡದಿರುವಾಗ ಮತ್ತು ಅವುಗಳು ಸ್ವಂತ ಹೇಳಿಕೆಯಿಂದ ಸ್ಪಷ್ಟವಾದಾಗ ಬೇರೆ ವಿವರ ಯಾ ದಾಖಲೆಗಳು ಅಗತ್ಯವಿರುವುದಿಲ್ಲ. ಕಛೇರಿಯ ಪುಸ್ತಕದ ನಕಲುಗಳಿಂದ ಸ್ಪಷ್ಟವಾಗಿ ಎಲ್ಲಾ ವಿವರಗಳು ಕಂಡುಬರುತ್ತವೆ. ಹಣ ದುರುಪಯೋಗ ಮಾಡಿದ್ದು ಕಂಡುಬರುತ್ತದೆ. ಯಾವುದೇ ಹಣ ತೆಗೆದುಕೊಳ್ಳುವಾಗ ಅದರ ವಿವರ ತೆಗೆದುಕೊಳ್ಳುವ ಅಧಿಕಾರಿಯು ಬರೆದುಕೊಳ್ಳಬೇಕು. ಯಾವುದೇ ಸಾಕ್ಷಿಯು ಆಪಾದಿತರ ಮೇಲೆ ವೈಷಮ್ಯದಿಂದ ಅಥವಾ ಅನಾವಶ್ಯಕ ಕಿರುಕುಳ ಕೊಡಲು ಆಪಾದನೆ ಮಾಡಿದ್ದು ಕಂಡುಬಂದಿಲ್ಲ. ಆಪಾದಿತರು ಈ ಯಾವುದೇ

ಸಾಕ್ಷಿಗಳು ಸುಳ್ಳು ಹೇಳಿ ಆಪಾದಿತರ ಮೇಲೆ ಇಲ್ಲದ ತಪ್ಪನ್ನು ಹೊರಿಸಿದ್ದು ಯಾ ದೂರು ನೀಡಿದ್ದು ಕಂಡುಬರುವುದಿಲ್ಲ. ಆದ್ದರಿಂದ ಈ ಆಪಾದನೆಯು ನನ್ನ ಮುಂದೆ ಸಾಕ್ಷಿಗಳಿಂದ ಮತ್ತು ದಾಖಲೆಗಳಿಂದ ಸಾಬೀತಾಗಿದೆ.

75. ಆರೋಪ 12 – ಕಛೇರಿ ನೀಡಿದ ನೋಟಿಸ್‌ಗೆ ಆಪಾದಿತರು ಮಾನಸಿಕ ಹಿಂಸೆ ನೀಡುತ್ತಾರೆ ಮತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಬರೆಯುವುದು ಇಲಾಖೆಯ ಮುಖ್ಯಸ್ಥರನ್ನು ಹೆದರಿಸುವ ವಿಧಾನವಾಗಿರುತ್ತದೆ. ವೈಯಕ್ತಿಕ ದ್ವೇಷದಿಂದ ಅಥವಾ ಸೇಡಿನಿಂದ ನೋಟಿಸ್ ನೀಡಿರುವುದು ಯಾ ಸಾಕ್ಷಿ ಹೇಳಿರುವುದು ಸಾಬೀತಾಗಿಲ್ಲ. ಕಛೇರಿಯ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳುವಾಗ ಎಲ್ಲರಿಗೂ ಒಂದೇ ರೀತಿಯ ಕ್ರಮವನ್ನು ಕಛೇರಿಯ ಅಧಿಕಾರಿ ತೆಗೆದುಕೊಳ್ಳಬೇಕೆಂದಿಲ್ಲ. ವ್ಯಕ್ತಿಯ ಮೇಲೆ ಹೊಂದಿಕೊಂಡು ಅವರ ನಡತೆಯನ್ನು ನೋಡಿಕೊಂಡು ಸೂಕ್ತವಾಗಿ ತನ್ನ ವಿವೇಚನೆಗೆ ಅನುಗುಣವಾಗಿ ತಕ್ಕ ಕ್ರಮ ತೆಗೆದುಕೊಳ್ಳುವುದರಲ್ಲಿ ಯಾವುದೇ ದುರ್ನಡತೆ ಅಧಿಕಾರಿಗೆ ಇತ್ತೆಂದು ಯಾವುದೇ ರೀತಿಯಲ್ಲಿ ಯೋಚನೆ ಮಾಡಿದರೂ ಒಪ್ಪಲು ಸಾಧ್ಯವಿಲ್ಲ. ಆಪಾದಿತರು ಕಛೇರಿಯಲ್ಲಿ ಮಾಡಿದ ದುರ್ನಡತೆಗಳು ಆರೋಪಣ ಪಟ್ಟಿಗಳಿಂದ 9ನೇ ಆರೋಪ ಹೊರತುಪಡಿಸಿ ಮತ್ತು ಸಾಕ್ಷಿಗಳ ಹೇಳಿಕೆಯಿಂದ ಹಾಗೂ ದಾಖಲೆಗಳಿಂದ ಸ್ಪಷ್ಟವಾಗಿ ಸಾಬೀತಾಗಿವೆ.

ಬೆಂಗಳೂರು

ದಿನಾಂಕ:21.04.2010

ವಿ. ಪದ್ಮನಾಭ ಕೆದಿಲಾಯ
ವಿಚಾರಣಾಧಿಕಾರಿ,
ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ನಂ. 45, 4ನೇ ಅಡ್ಡರಸ್ತೆ,
ಜುಡಿಷಿಯಲ್ ಆಫೀಸರ್ ಲೇಔಟ್, ಸಂಜಯನಗರ,
ಬೆಂಗಳೂರು-560 094.

ಸರ್ಕಾರಿ ಸಾಕ್ಷಿಗಳು :

1. ಶ್ರೀ ಬಿ. ಶ್ರೀನಿವಾಸಾಚಾರ್
2. ಶ್ರೀಮತಿ ಡಿ.ಆರ್. ಸವಿತಾ
3. ಶ್ರೀ ಸಿದ್ದರಾಜು
4. ಶ್ರೀಮತಿ ವೀಣಾ ಕುಲಕರ್ಣಿ
5. ಶ್ರೀಮತಿ ಸಿ. ಮಂಜುಳಾ
6. ಡಾ॥ ವಿ. ಮುನಿರಾಜು
7. ಕು. ಆರ್. ಜ್ಯೋತಿ
8. ಶ್ರೀ ಎಸ್. ಸುದರ್ಶನ್
9. ಶ್ರೀ ಪಿ. ಮಂಜು
10. ಶ್ರೀಮತಿ ಬಿ.ಎನ್. ಜಯಶ್ರೀ

ಸರ್ಕಾರದ ಪರವಾಗಿ ಗುರುತಿಸಲಾದ ದಾಖಲೆಗಳು

ನಿ.ಪಿ.1 – ದಿನಾಂಕ 21-05-2007 ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಕೇಂದ್ರ ನಿರ್ದೇಶಕರಿಗೆ ಪತ್ರ ಬರೆದು ಕಪಾಟಿನ ಬೀಗ ಒಡೆಯಲು ಪರವಾನಗಿ ಕೇಳಿದರು.

ನಿ.ಪಿ.2 – ದಿನಾಂಕ 18-05-2007 ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಶಿಸ್ತಿನ ಕ್ರಮ ಏಕೆ ತೆಗೆದುಕೊಳ್ಳಬಾರದೆಂದು ಆಪಾದಿತರಿಗೆ ನೀಡಿದ ನೋಟಿಸ್.

ನಿ.ಪಿ.3 – ದಿನಾಂಕ 05-09-2007 ಶ್ರೀ ಕೆ. ಸಿದ್ದರಾಜು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಆಪಾದಿತರು ರೂ. 2000/- ಗಳನ್ನು ತನ್ನಿಂದ ಪಡೆದಿರುವ ಬಗ್ಗೆ ಬರೆದ ಪತ್ರ.

ನಿ.ಪಿ.4 – ದಿನಾಂಕ 13-07-2007 ಆಪಾದಿತರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಂದ ತನ್ನನ್ನು ವರ್ಗಾವಣೆ ಮಾಡಬಾರದೆಂದು ಕೇಂದ್ರ ನಿರ್ದೇಶಕರಿಗೆ ಬರೆದು ಸಹಿ ತೆಗೆದುಕೊಂಡ ಪತ್ರ.

ನಿ.ಪಿ.5 – ದಿನಾಂಕ 08-08-2007 ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ತಾನು ಯಾವ ಸಂದರ್ಭದಲ್ಲಿ ನಿಪಿ4 ಕ್ಕೆ ಸಹಿ ಹಾಕಿದೆ ಎಂದು ಬರೆದ ಪತ್ರ.

ನಿ.ಪಿ.6 ರಿಂದ 11 – ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಬೇರೆ ಬೇರೆ ತಿಂಗಳಿನಲ್ಲಿ ಯಾವ ಯಾವ ಹಣ ಯಾವುದರ ಬಗ್ಗೆ ಖಜಾನೆಯಿಂದ ತೆಗೆಯಲಾಯಿತೆಂದು ತೋರಿಸುವ ಮಾಸಿಕ ತ:ಖ್ತೆಗಳು.

ನಿ.ಪಿ.12 – ದಿನಾಂಕ 14-05-2008 ಶ್ರೀಮತಿ ವೀಣಾ ಕುಲಕರ್ಣಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಕಾಗದ ಬರೆದು ರೂ. 5600/- ಗಳನ್ನು ತನ್ನ ವೇತನದಿಂದ ಆಪಾದಿತರು ಸ್ವೀಕೃತಿ ನೀಡದೆ ಡಿ.ಸಿ.ಪಿ.ಎಸ್.ಗೆ ಎಂದು ಪಡೆದಿದ್ದಾರೆ ಎಂದು ಬರೆದ ಪತ್ರ.

ನಿ.ಪಿ.13 – ದಿನಾಂಕ 29-01-2008 ಆಪಾದಿತರನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಿಂದ ವರ್ಗ ಮಾಡಿದಾಗ ಅವರು ಶ್ರೀಮತಿ ಸಿ. ಮಂಜುಳಾ, ಬೆರಳಚ್ಚುಗಾರರಿಗೆ ತನ್ನ ಪ್ರಭಾರವನ್ನು ನೀಡಲು ಆಜ್ಞಾಪಿಸಿದ ಆಜ್ಞೆ.

ನಿ.ಪಿ.14 – ಆಪಾದಿತರು ತನ್ನ ಸ್ವಾಧೀನವಿದ್ದ 167 ಕಡತಗಳನ್ನು ಶ್ರೀಮತಿ ಸಿ. ಮಂಜುಳಾ ರವರಿಗೆ ನೀಡಿದ ಕಡತಗಳ ಪಟ್ಟಿ.

ನಿ.ಪಿ.15 – ದಿನಾಂಕ 23-06-2008 ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಶ್ರೀಮತಿ ವೀಣಾ ಕುಲಕರ್ಣಿ ಬರೆದುಕೊಟ್ಟ ಪತ್ರವನ್ನು ರಾಮನಗರ ಜಿಲ್ಲೆಗೆ ಕಳುಹಿಸಿಕೊಟ್ಟ ಹಿಂಬರಹ.

ನಿ.ಪಿ.16 – ದಿನಾಂಕ 09-05-2008 ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು 2 ದಿನಗಳೊಳಗಾಗಿ ಆಪಾದಿತರು ತನ್ನಲ್ಲಿದ್ದ ಇತರ ಕಡತಗಳ ಪ್ರಭಾರ ನೀಡದಿದ್ದಲ್ಲಿ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ಆಪಾದಿತರಿಗೆ ನೀಡಿದ ಕಡೆಯ ಎಚ್ಚರಿಕೆ ನೋಟಿಸ್.

ನಿ.ಪಿ.17 – ದಿನಾಂಕ 23-05-2008 ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಆದಿಕುಮಾರ್‌ರವರ ಕಪಾಟನ್ನು ಸಿಬ್ಬಂದಿಗಳ ಸಮಕ್ಷಮ ಒಡೆದಾಗ ಸಿಕ್ಕಿದ 170 ದಾಖಲೆ ಮತ್ತು ಪುಸ್ತಕಗಳ ಪಟ್ಟಿ.

ನಿ.ಪಿ.18 – ದಿನಾಂಕ 15-05-2008 ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಆಪಾದಿತರಿಗೆ ನೋಟಿಸ್ ನೀಡಿ ದಿನಾಂಕ 01-05-2008 ರಿಂದ 15-05-2008 ರವರೆಗೆ ಹಾಗೂ ದಿನಾಂಕ 23-04-2008 ರಿಂದ 24-04-2008 ರವರೆಗೆ ಗೈರು ಹಾಜರಾಗಿ ತೊಂದರೆಯಾದುದರ ಬಗ್ಗೆ ಅವರಿಂದ ಸಮಜಾಯಿಷಿ ಕೇಳಿರುವ ನೋಟಿಸ್.

ನಿ.ಪಿ.19 – ಅಪಾದಿತರು ಗೈರು ಹಾಜರಾದದ್ದನ್ನು ತೋರಿಸುವ ಹಾಜರಿ ಪಟ್ಟಿ.

ನಿ.ಪಿ.20 – ದಿನಾಂಕ 20-05-2008 ಆಪಾದಿತರ ಕಪಾಟು, ಅಲಮೇರಾ ಮತ್ತು ಮೇಜಿನಲ್ಲಿದ್ದ ಕಡತ ಹಾಗೂ ರಿಜಿಸ್ಟರ್‌ಗಳ ಪಟ್ಟಿ ನಿರ್ದೇಶಕರಿಗೆ ಕಳುಹಿಸಲಾದ ಪತ್ರ.

ನಿ.ಪಿ.21 – ಚೆಕ್ ಸಂಖ್ಯೆ 185493 ನ್ನು ದಿನಾಂಕ 17-03-2008 ರಂದು ಕು. ಆರ್.ಜ್ಯೋತಿಗೆ ನೀಡುವುದಕ್ಕಾಗಿ ರೂ. 34774/- ಗಳನ್ನು ಖಜಾನೆಯಿಂದ ತರಿಸಿಕೊಂಡ ವಿವರ ತೋರಿಸುವ ಚೆಕ್ ಪುಸ್ತಕದ ನಕಲು.

ನಿ.ಪಿ.22 – ಆಪಾದಿತರು ಕು. ಆರ್. ಜ್ಯೋತಿಗೆ ರೂ. 34774/- ಗಳ ಬದಲಿಗೆ ರೂ. 32774/- ಗಳನ್ನು ಮಾತ್ರ ಕೊಟ್ಟು ತಿದ್ದುಪಡಿ ಮಾಡಿದ ವೇತನ ಪುಸ್ತಕದ ನಕಲು.

ನಿ.ಪಿ.23 – ದಿನಾಂಕ 15-05-2008ರ ನಗದು ಪುಸ್ತಕದ ನಕಲು.

ನಿ.ಪಿ.24 – ದಿನಾಂಕ 27-05-2008 ಕು. ಆರ್. ಜ್ಯೋತಿ ಆಪಾದಿತರು ತನಗೆ ದಿನಾಂಕ 04-10-2007 ರಿಂದ ಬರಬೇಕಾದ ರೂ. 34774/- ರ ಬದಲಿಗೆ ರೂ. 32774/- ನ್ನು ಮಾತ್ರ ಕೊಟ್ಟು ರೂ. 2000/- ಗಳನ್ನು ಕಡಿಮೆ ನೀಡಿದ ದೂರು.

ನಿ.ಪಿ.25 – ದಿನಾಂಕ 24-06-2008 ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಆಪಾದಿತರಿಗೆ ನೋಟಿಸ್ ನೀಡಿ ವಿವರಣೆ ಕೇಳಿದ ಪತ್ರದ ನಕಲು.

ನಿ.ಪಿ.26 – ದಿನಾಂಕ 26-06-2008 ಶ್ರೀ ಮಂಜು ಪಿ. ರವರು ಆಪಾದಿತರು ಡಿ.ಸಿ.ಪಿ.ಎಸ್. ಗಾಗಿ ರೂ. 2000/- ಗಳನ್ನು ತನಗೆ ಕಡಿಮೆ ನೀಡಿರುವ ಕುರಿತು ಬರೆದುಕೊಟ್ಟ ದೂರು.

ನಿ.ಪಿ.27 – ದಿನಾಂಕ 30-06-2008 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ರಾಮನಗರ ಆಪಾದಿತರಿಂದ 3 ದಿನದಲ್ಲಿ ಉತ್ತರ ನೀಡುವಂತೆ ಆಪಾದಿತರಿಂದ ಶ್ರೀಮತಿ ವೀಣಾ ಕುಲಕರ್ಣಿ ನೀಡಿದ ದೂರಿಗೆ ವಿವರಣೆ ಕೇಳಿದ ಪತ್ರ.

ನಿ.ಪಿ.28 – ದಿನಾಂಕ 05-10-2007 ರಂದು ನಿರ್ದೇಶಕರು ಆಪಾದಿತರಿಗೆ ನೀಡಿದ ಕೊನೆಯ ನೋಟಿಸ್.

ನಿ.ಪಿ.29 – ದಿನಾಂಕ 27-10-2007 ರಂದು ಆಪಾದಿತರು ಕೇಂದ್ರ ನಿರ್ದೇಶಕರಿಗೆ ನೀಡಿದ ಉತ್ತರದ ನಕಲು.

ನಿ.ಪಿ.30 – ದಿನಾಂಕ 22-11-2007 ರಂದು ನಿರ್ದೇಶಕರು ಆಪಾದಿತರು ಬರೆದ ಪತ್ರದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬರೆದಿರುವುದನ್ನು ಖಂಡಿಸಿ ಅವರು ಮಾಡಿದ ಅಪರಾಧವನ್ನು ತೋರಿಸಿದ ಪತ್ರದ ನಕಲು.

ಆಪಾದಿತರ ಪರ ಗುರುತಿಸಲಾದ ದಾಖಲೆಗಳು

ನಿ.ಡಿ.1 – ದಿನಾಂಕ 20-05-2008 ಬೆಂಗಳೂರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯು ರಾಮನಗರ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗೆ 7 ಮಂದಿ ನೌಕರರ ಸೇವಾ ಪುಸ್ತಕವನ್ನು ಲಗತ್ತಿಸಿ ಕಳುಹಿಸಿದ ಪತ್ರ.

ನಿ.ಡಿ.2 – ದಿನಾಂಕ 09-09-2003 ರಿಂದ 15-07-2004 ರವರೆಗಿನ ಕಛೇರಿಯ ಟಿಪ್ಪಣಿ ಮತ್ತು ಆದೇಶಗಳು. ಪ್ಯಾರಾ 1 ರಿಂದ 34.

ಆಪಾದಿತರು ದೋಷಾರೋಪಣೆಯಲ್ಲಿ ನಮೂದಿಸಿದಂತೆ 1966ರ ಸರ್ಕಾರಿ ನೌಕರರ ನಡತೆ ನಿಯಮಾವಳಿ 3 ರಂತೆ ಗಂಭೀರದ ತಪ್ಪು ಮಾಡಿರುವುದು ಸ್ಪಷ್ಟವಾಗಿ ಸಾಬೀತಾಗಿದೆ. ತನ್ನ ಕೆಲಸದಲ್ಲಿ ನಿರ್ಲಕ್ಷತೆ, ಇತರರಿಗೆ ಮೋಸ, ವಂಚನೆ, ಹಣದ ದುರುಪಯೋಗ ಇತ್ಯಾದಿ ತಪ್ಪು ಮಾಡಿರುವುದು ಸ್ಪಷ್ಟವಾಗಿ ನನ್ನ ಮುಂದೆ ಕಂಡುಬಂದಿದೆ. ಆದ್ದರಿಂದ 9ನೇ ಆರೋಪ ಹೊರತುಪಡಿಸಿ ಉಳಿದ ಆರೋಪಗಳ ಮೇಲೆ ನನ್ನ ಉತ್ತರ ಸಕಾರಾತ್ಮಕವಾಗಿದೆ.

ಬೆಂಗಳೂರು

ದಿನಾಂಕ:

ಪಿ.ಆರ್.1529

ವಿ. ಪದ್ಮನಾಭ ಕೆದಿಲಾಯ
ವಿಚಾರಣಾಧಿಕಾರಿ,
ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ನಂ. 45, 4ನೇ ಅಡ್ಡರಸ್ತೆ,
ಜುಡಿಷಿಯಲ್ ಆಫೀಸರ್ ಲೇಔಟ್, ಸಂಜಯನಗರ,
ಬೆಂಗಳೂರು-560 094.

OFFICE OF THE COMMISSIONER BANGALORE DEVELOPMENT AUTHORITY , BANGALORE NOTIFICATION

UNDER SECTION 17(1)&(3)OF BDA ACT 1976

No: BDA/COMMR/LAO/ 283/2010-11 , Bangalore Dated:24th September, 2010

Whereas it appears to the Bangalore Development Authority that the land specified in the Schedule hereto likely to be needed for the public purpose i.e., for the formation of "Providing left turn from Mysore Road ORR to Magadi Road Junction " in this regard development scheme has been prepared.

Notice to the effect is hereby given to all whom it may concern in accordance with the provisions of Sub-Section (1) & (3) of section 17 of the Bangalore Development Authority Act 1976 (Karnataka Act No:12 of 1976).

In accordance with section 36 of BDA Act, the land Acquisition Officer, Bangalore Development Authority, Bangalore his staff and workmen are hereby authorised to exercise the Power conferred under Section 4(2) of LA Act 1894. Any person/s interested in the land may prefer his/her objections with in 30 days from the date of publication of this notification to the Land Acquisition Officer. Bangalore Development Authority, T.Chowdaiah Road, Bangalore-560 020.

All persons interested in the said lands are hereby warned not to abstract or interfere with any Surveyor or any persons employed upon to the said lands for the purpose of said Acquisition. Any contracts for the disposal of the said lands by Sale, lease, Mortgage, Assignment, Exchange or otherwise or any other out-lay or Improvements made there in without sanction of the Deputy Commissioner(Land Acquisition).Bangalore Development Authority, Bangalore-560 020, after the date of publication of this Notification shall under section 24 of the Land Acquisiton Act 1894, be dis-regarded by the officer assessing compensation for such parts of the said lands as may be finall acquired.

The particulars of the scheme, the Maps of the area comprised therein and the statement specifying the lands which it is proposed to be acquired may be seen in the Office of the Land Acquisition Officer, Bangalore Development Authority, Bangalore during the office hours on all working days.

SCHEDULE

District: Bangalore **Taluk:**Bangalore South Taluk **Hobli:**Kengeri **Village:**Nayandahally

Sl. No.	Name of the Khathedars/ Anubhavadars	Sy. No.	Whether Dry/Wet/ Garden	Extent	Kharab Land	Remaining Extent	Assesment	Extent proposed for acquisition	Boundaries			
				A- G	A- G	A- G	A- G	A- G	East	West	North	South
1	2	3	4	5	6	7	8	9	10	11	12	13
1	C.N.Satyanarayanashetty	50/8B2 (50/8B as per RTC)	Dry	1-13	0-01	1-12	1-35	0-04	Road	50/8B1	50/9	Road

Commissioner

Bangalore Development Authority, Bangalore.

PD-127

URBAN DEVELOPMENT DEPARTMENT

NOTIFICATION

No.UDD/456/MNX/2010, Bangalore, Dated:20th August, 2010

In exercise of the powers conferred by sub-section(1) of Section-48 of the Land Acquisition Act-1894 (Central Act-1894) the Government of Karnataka hereby withdraw from the acquisition the lands specified below in respect of which the Preliminary Notification was published in the Karnataka Gazette Dated:03.02.2003 in Part-III at pages from 1 to 179 vide Notification No.BDA/COMMR/ALAO/LA9/104/2002-03 Dated:03.02.2003 and Final Notification No.UDD 193 MNX 2004 Dated:23.02.2004 was published in the Karnataka Gazette Dated:23.02.2004 in Part-III under Sub-section(1) of Section-19 of BDA Act-1976 (Karnataka Act-12 of 1976) for formation of layout Called "ARKAVATHI LAYOUT".

SCHEDULE

DISTRICT:BANGALORE TALUK: BANGALORE-EAST HOBLI:K.R.PURAM VILLAGE:DASARAHALLI

Sl. No.	Name of the Khatedar/ Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No	North Sy.No	South Sy.No
				A-G	A-G	A-G	Rs.Ps.	A.G.	A-G				
1	2	3	4	5	6	7	8	9	10	11	12	13	14
1.	Nanjamma Kom Dodda munivenkatappa, Narayanappa bin Munivenkatappa, Sreenivas, Thimmarayappa, Muniyappa, A. Ramaraju	60/1	Garden	0-38	0-1/2	0-37 ½	3-45	0-38	0-06	61	A.H. Boundary	Jakkar boundary	60/2
		Total Extent With drawn							0-06				

TOTAL EXTENT WITH DRAWN 06 GUNTAS (Six Guntas Only)

(In favour of Sri. L.N. Belavanaki S/o. Neelappa)

By Order and in the name of the Governor of Karnataka,

M.S.PREMACHANDRA

Under Secretary to Government,

Urban Development Department.

PR-1316

URBAN DEVELOPMENT DEPARTMENT

NOTIFICATION

No.UDD/380/MNX/2010, Bangalore, Dated:26th August, 2010

In exercise of the powers conferred by sub-section(1) of Section-48 of the Land Acquisition Act-1894 (Central Act-1894) the Government of Karnataka hereby withdraw from the acquisition the lands specified below in respect of which the Preliminary Notification was published in the Karnataka Gazette Dated:24.02.1977 in Part-III-3 at pages from 19 to 44 vide Notification No.ASPR/511/SLAO/76-77, Dated:03.01.1977 and Final Notification No.HUD 39 MNJ 1978 Dated:02.08.1978 was published in the Karnataka Gazette Dated:31.08.1978 under Sub-section(1) of Section-19 of BDA Act-1976 (Karnataka Act-12 of 1976) for formation of layout Called "RAJAMAHAL VILAS EXTENSION II STAGE LAYOUT".

SCHEDULE

DISTRICT:BANGALORE TALUK: BANGALORE-NORTH HOBLI: KASABA VILLAGE:LOTTEGOLLAHALLI

Sl. No.	Name of the Khatedar/ Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	Boundaries			
										East Sy.No	West Sy. No	North Sy.No	South Sy.No
				A-G	A-G	A-G	Rs.Ps.	A.G.	A-G				
1	2	3	4	5	6	7	8	9	10	11	12	13	14
1.	Motappa bin Subbaiah, Utnalappa, Muniswamappa, Narasimhaiah, Narasimhaiah, Hammaiah	8	Dry	4-39	0-08	4-31	4-50	4-39	6850 Sq.ft.	Nagasetty hally Gadi	7	9	6
		Total Extent With drawn							6850 Sq.ft.				

TOTAL EXTENT WITH DRAWN 6850 Sq.ft. (Six Thousand Eight Hundred and Fifty Square fit Only)

By Order and in the name of the Governor of Karnataka,

M.S.PREMACHANDRA

Under Secretary to Government,

Urban Development Department.

PR-1337

URBAN DEVELOPMENT DEPARTMENT

NOTIFICATION

No.UDD/06/MNX/2009, Bangalore, Dated:29th September, 2010

In exercise of the powers conferred by sub-section(1) of Section-48 of the Land Acquisition Act-1894 (Central Act-1894) the Government of Karnataka hereby withdraw from the acquisition the lands specified below in respect of which the Preliminary Notification was published in the Karnataka Gazette Dated:22.05.2008 in Part-III at pages from 1 to 75 vide Notification No.BDA/COMMR/DC(LA)/ALAO/158/2008-09, Dated:21.05.2008 and Final Notification No.UDD 51 MNX 2010 Dated:18.02.2010 was published in the Karnataka Gazette (Special) Dated:18.02.2010 in Part-III under Sub-section (1) of Section-19 of BDA Act-1976 (Karnataka Act-12 of 1976) for formation of the layout Called "NADAPRABHU KEMPEGOWDA LAYOUT".

SCHEDULE

DISTRICT:BANGALORE **TALUK: BANGALORE-SOUTH** **HOBLI: KENGERI** **VILLAGE: CHALLAGHATTA**

Sl. No.	Name of the Khatedar/ Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No	North Sy.No	South Sy.No
				A-G	A-G	A-G	Rs.Ps.	A.G.	A-G				
1	2	3	4	5	6	7	8	9	10	11	12	13	14
1.	H. Subramanya Joisa S/o Late Heriyanna Joisa, Saroja W/o Shivaraj, B.K. Anand S/o Krishnareddy	45/2	Dry	2-10	-	2-10	2-61	2-10	**2-10**	44	48	45/1	46
2.	Krishna Reddy S/o Late Subbareddy, B.K. Anand S/o Krishnareddy, B.K. Raju S/o Krishnareddy	48/1	Dry	3-02	0-01	2-33	3-29	3-02	**2-33**	46, 45	49	48/2	47
		Total Extent With drawn							5-03				

TOTAL EXTENT WITH DRAWN 05 ACRES 03 GUNTAS ONLY (Five Acres and Three Guntas Only)

By Order and in the name of the Governor of Karnataka,

M.S.PREMACHANDRA

Under Secretary to Government,

Urban Development Department.

PR-1494

URBAN DEVELOPMENT DEPARTMENT

NOTIFICATION

No.UDD/99/MNX/2008, Bangalore, Dated:29th September, 2010

In exercise of the powers conferred by sub-section(1) of Section-48 of the Land Acquisition Act-1894 (Central Act-1894) the Government of Karnataka hereby withdraw from the acquisition the lands specified below in respect of which the Preliminary Notification was published in the Karnataka Gazette Dated:03.02.2003 in Part-III at pages from 1 to 179 vide Notification No.BDA/COMMR/ALAO/LA9/104/2002-03 Dated:03.02.2003 and Final Notification No.UDD 193 MNX 2004 Dated:23.02.2004 which was published in the Karnataka Gazette (special) Dated:23.02.2004 in Part-III under Sub-section(1) of Section-19 of BDA Act-1976 (Karnataka Act-12 of 1976) for formation of the layout Called "ARKAVATHI LAYOUT".

SCHEDULE

DISTRICT:BANGALORE TALUK: BANGALORE-EAST HOBLI: K.R.PURAM VILLAGE: THANISANDRA

Sl. No.	Name of the Khatedar/ Anubhavadar Sri/Smt.	Sy. No.	Dry/ Wet/ Garden	Total Extent	Kharab	Remaining Extent	Assessment	Extent Acquired	Extent with drawn	East Sy.No	West Sy. No	North Sy.No	South Sy.No
				A-G	A-G	A-G	Rs.Ps.	A.G.	A-G				
1	2	3	4	5	6	7	8	9	10	11	12	13	14
1.	A.V. Sriraman, A.V. Raviprakash bin Dr. Venkataraman	80/2B	Dry	3-16	-	3-16	5-00	3-16	3-16	Road	78	80/1	80/2A
2.	A.V. RamPrakash bin Dr. Venkataraman, A.V. Sriraman bin Dr. Venkataraman	81/3B	Dry	1-12	0-04	1-08	1-52	0-24	0-24	101	81/1	84	81/3A
		Total Extent With drawn							4-00				

TOTAL EXTENT WITH DRAWN 04 ACRES ONLY (Four Acres Only)

By Order and in the name of the Governor of Karnataka,

M.S.PREMACHANDRA

Under Secretary to Government,

Urban Development Department.

PR-1495

OFFICE OF THE COMMISSIONER BANGALORE DEVELOPMENT AUTHORITY BANGALORE

Preliminary Notification No. BDA/Commr/LA(ALAO) 371 /2010-2011 Date:25th October, 2010

NOTIFICATION UNDER SECTION 17(1) & (3) OF BDA ACT 1976

Where it appears to the Bangalore Development Authority,that the land specified in the Schedule here to likely to be needed for the purpose of formation of "Grade Separator at Hennur Junction in Hennur Village" Kasaba Hobli, Bangalore North Taluk.

In accordance with section 36 of BDA Act, the Additional Land Acquisition office, Bangalore Development Authority, Bangalore his staff and workmen are hereby authorised to exercise the power conferred U/S 4(2) of Land Acquisition Act 1984. Any person's interested in the land may prefer his/her objections within 30 days from the date of publication of this Notification to the Additional Land Acquisition Officer, Bangalore Development Authority, T. Chowdaiah Road, Bangalore – 560 020.

All the persons interested in the said lands are hereby warned not to obstruct or interfere with any persons employed upon to the said lands for the purpose of said Acquisition. Any contracts for the disposal of the said lands by Sale, Mortgage, Assignment, Exchange or otherwise or any out-lay of improvements made there-in without sanction of the Deputy Commissioner (Land Acquisition), Bangalore Development Authority, Bangalore-560 020, after the date of publication of this Notification shall under Section 24 (Clause Seventy) of the Land Acquisition Act 1894, be disregarded by the officer assessing compensation or such parts of the said lands as may be finally acquired.

The particulars of the scheme and the statement specifying the lands which it is proposed to be acquired may be seen in the Office of the Additional Land Acquisition Officer, Bangalore Development Authority, Bangalore, during the office hours on all working days.

District : Bangalore **Taluk : Bangalore North** **Hobli: Kasaba** **Villages : Hennur**

SCHEDULE

Sl. No.	Name of the Kathedars/Anubhavadars. Smts/Sriyuthas	Sy. No.	Hissa	Whether/ Dry/Wet/ Garden	Total Extent		Kharab Land		Remaining Extent		Assess ment	Extent Proposed for Acquisition		Bounded By			
					A	G	A	G	A	G	Rs.Ps	A	G	East	West	North	South
1	2	3	4	5	6		7		8		9	10		11	12	13	14
Village: Hennur					Hobli: Kasaba									Taluk: Bangalore North			
1	C.P. Pherina	34	2	Dry	0	6	-	-	0	6	-	0	2.3	34/2	Ring Road	34/2	34/9A
2	Phelomina Sherin	34	2	Dry	0	6	-	-	0	6	-	0	0.15	34/2	Ring Road	34/2	34/9A
3	T.H. Muniswamppa	34	9	Dry	3	0	-	-	3	0	3.91	0	0.53	34/9A	Ring Road	34/2	34/9A
4	T.H. Muniswamppa	34	9	Dry	3	0	-	-	3	0	3.91	0	0.64	34/9A	Ring Road	34/2	Road
5	T.H. Muniswamppa	34	9	Dry	3	0	-	-	3	0	3.91	0	0.52	34/9A	Ring Road	Road	34/9A
6	T.H. Muniswamppa	34	9	Dry	3	0	-	-	3	0	3.91	0	0.47	34/9A	Ring Road	34/9A	Road
7	T.H. Muniswamppa	34	9	Dry	3	0	-	-	3	0	3.91	0	0.86	34/9A	Ring Road	Road	34/9A
8	T.H. Muniswamppa	34	9	Dry	3	0	-	-	3	0	3.91	0	0.75	34/9A	Ring Road	34/9A	36/1

Sl.No.	Name of the village	Extent Notified	
		A	G
1	Hennur	0	6.22
	Total	**0**	**6.22**

Commissioner,
Bangalore Development Authority, Bangalore.

PD-133

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ಉಪನಿಬಂಧಕರು-1 ರವರ ಕಛೇರಿ, ಬೆಂಗಳೂರು ನಗರ ಜಿಲ್ಲೆ, ನಂ.146, 8ನೇ ಕ್ರಾಸ್, 3ನೇ ಮುಖ್ಯರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು -560 003

ಅಧಿಸೂಚನೆ ಕ್ರಸಂ.ಡಿಆರ್‌ಬಿ1/. ಇಎಸ್‌ಟಿ/ಎಸ್1/ಆರ್‌ಟಿಐ/149/2010-11, ದಿನಾಂಕ:16ನೇ ಆಗಸ್ಟ್, 2010

4(1)(1)ಅ ಸಹಕಾರ ಇಲಾಖೆಯ ಬೆಂಗಳೂರು ನಗರ ಜಿಲ್ಲೆ, ಉಪನಿಬಂಧಕರು-1 ಇದರ ಕಛೇರಿಯ ರಚನೆ ಕಾರ್ಯಗಳು, ಕರ್ತವ್ಯಗಳು

1.01 ಸಹಕಾರ ಇಲಾಖೆಯು ಕರ್ನಾಟಕ ಸರ್ಕಾರದ ಪ್ರಮುಖ ಇಲಾಖೆಗಳಲ್ಲಿ ಒಂದಾಗಿದೆ. ಸಹಕಾರ ಇಲಾಖೆಯು ಸರ್ವವ್ಯಾಪಿಯಾಗಿದ್ದು, ರಾಜ್ಯದ ರ್ಥಿಕ ಬೆಳವಣಿಗೆಗೆ ಅದ್ವಿತೀಯ ಕಾಣಿಕೆ ಸಲ್ಲಿಸುತ್ತಿದೆ. ಸಹಕಾರ ಇಲಾಖೆಯು ಬೆಂಗಳೂರು ನಗರ ಜಿಲ್ಲೆ-01ರ ವ್ಯಾಪ್ತಿಯಲ್ಲಿ ಸಹಕಾರ ಚಳುವಳಿಯ ತ್ವಲೆಯ ಅನುಸಾರ, ಸಹಕಾರ ಸಂಘಗಳ ಸ್ಥಾಪನೆ, ಅವುಗಳ ಬೆಳವಣಿಗೆ, ಪ್ರಗತಿ, ಅಭಿವೃದ್ಧಿಗೆ ಇಲಾಖೆಯು ಅಗತ್ಯವಿರುವ ಸಲಹೆ ಸೂಚನೆಗಳನ್ನು ಡುತ್ತಿದೆ. ರೈತರು ಸಣ್ಣ, ಅತಿ ಸಣ್ಣ ರೈತರು, ಕುಶಲಕರ್ಮಿಗಳು, ಕೃಷಿ ಕಾರ್ಮಿಕರು, ನೇಕಾರರು, ಮೀನುಗಾರರು, ಪರಿಶಿಷ್ಟ ಜಾತಿ: ಪಂಗಡ ಹಿಂದುಳಿದ ರ್ಗ, ಮಹಿಳೆಯರು, ಕೂಲಿ ಕಾರ್ಮಿಕರು, ನಾಗರೀಕರು, ಇವರುಗಳ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ ಸಂಘಗಳ ಮೂಲಕ ಇಲಾಖೆಯು ವಿರತವಾಗಿ ಶ್ರಮಿಸುತ್ತಿದೆ. ಕಛೇರಿಯಿಂದ ಕೇವಲ ನಿಯಂತ್ರಣ ಕಾರ್ಯಗಳನ್ನಷ್ಟೇ ನಿರ್ವಹಿಸದೇ, ಸಲಹೆ ಸೂಚನೆ, ಅಭಿಪ್ರಾಯಗಳನ್ನು ನೀಡಿ, ಕಛೇರಿ ್ಯಾಪ್ತಿಯ ಜನರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ತನ್ನ ಗುರಿಯನ್ನಾಗಿಸಿಕೊಂಡಿದೆ. ಈ ನಿಟ್ಟಿನಲ್ಲಿ ಸರ್ಕಾರದ ವಿವಿಧ ಇಲಾಖೆಗಳೊಂದಿಗೆ ಮನ್ವಯತೆಯನ್ನು ಸಾಧಿಸಿದೆ.

ಬೆಂಗಳೂರು ನಗರ ಜಿಲ್ಲೆ-01 ರ ವ್ಯಾಪ್ತಿಯಲ್ಲಿರುವ ವಿವಿಧ ರೀತಿಯ ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯವನ್ನು ನೀಡುವುದರ ಜೊತೆಗೆ ಂತ್ರಿಕ ಮಾರ್ಗದರ್ಶನವನ್ನು ಸಹ ನೀಡುತ್ತಿದೆ. ಈ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಸಹಕಾರ ಸಂಘಗಳ ಕಾರ್ಯಚಟುವಟಿಕೆಗಳ ೇಲ್ವಿಚಾರಣೆ, ಆಡಳಿತಾತ್ಮಕ ನಿರ್ವಹಣೆ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ಈ ಕಛೇರಿಯ ಕೆಲಸ ಕಾರ್ಯಗಳೆಂದರೆ:

1) ಸಹಕಾರ ಸಂಘಗಳ ನೋಂದಣಿ
2) ಸಹಕಾರ ಸಂಘಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆ
3) ಸಲಹೆ ಮತ್ತು ಮಾರ್ಗದರ್ಶನ
4) ಆಡಳಿತ ಮಂಡಳಿಗಳ ಚುನಾವಣಾ ಕಾರ್ಯಗಳು
5) ವ್ಯಾಜ್ಯದಾವೆಗಳ ಇತ್ಯರ್ಥಪಡಿಸುವಿಕೆ
6) ಸಹಕಾರ ಸಂಘಗಳ ಏಳ್ಗೆಗೆ ಸರ್ಕಾರದ ವತಿಯಿಂದ ಕೊಡಮಾಡುವ ಆರ್ಥಿಕ ನೆರವು ಇತ್ಯಾದಿ.

ಜಿಲ್ಲೆಯಲ್ಲಿನ ಸಹಕಾರ ಸಂಘಗಳು ಸಮರ್ಥ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ ತನ್ಮೂಲಕ ಸಹಕಾರ ಸಂಘಗಳ ದಸ್ಯರುಗಳ ಅಭಿವೃದ್ಧಿಗೆ ಉತ್ತಮ ಪರಿಸರವನ್ನು ನಿರ್ಮಿಸುವ ಆಶಯ ಈ ಕಛೇರಿಯದ್ದಾಗಿರುತ್ತದೆ. ಸಹಕಾರ ತತ್ವಗಳ ಆಧಾರದ ಮೇಲೆ ಸಹಕಾರ ಂಘಗಳನ್ನು ಸಂಘಟಿಸಿ, ಸಹಕಾರ ಚಳುವಳಿಗೆ ಭದ್ರಬುನಾದಿಯನ್ನು ನಿರ್ಮಿಸಿ, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಅವಿರತವಾಗಿ ಶ್ರಮಿಸುತ್ತಿದೆ.

2. ಸಹಕಾರ ಇಲಾಖೆಯ ಜಿಲ್ಲಾ ಕಛೇರಿಯಲ್ಲಿ ಅನುಷ್ಠಾನ:ಜಾರಿಗೊಳಿಸುತ್ತಿರುವ ಶಾಸನಗಳು

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960.
2. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997, ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು
3. ಕರ್ನಾಟಕ ಲೇವಾದೇವಿಗಾರರ ಕಾಯ್ದೆ 1961 ಹಾಗೂ ಕರ್ನಾಟಕ ಲೇವಾದೇವಿಗಾರರ ನಿಯಮಗಳು 1965.
4. ಗಿರವಿದಾರರ ಕಾಯ್ದೆ 1961. ಗಿರವಿದಾರರ ನಿಯಮಗಳು 1966.
5. ಚೀಟಿನಿಧಿ ಕಾಯ್ದೆ 1982 ಹಾಗೂ ಚೀಟಿ ನಿಧಿ ನಿಯಮಾವಳಿಗಳು 1983
6. ಕರ್ನಾಟಕ ದುಬಾರಿ ಬಡ್ಡಿ ನಿಷೇಧ ಕಾಯ್ದೆ 2004

3. ಸಹಕಾರ ಇಲಾಖೆಯು ತನ್ನ ಗುರಿಸಾಧನೆಗೆ ನಿರ್ವಹಿಸುತ್ತಿರುವ ಪ್ರಮುಖ ಕರ್ತವ್ಯಗಳು

1. ಸಹಕಾರ ತತ್ವಗಳ ಪರಿವಿಧಿಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ರೀತ್ಯಾ ವಿವಿಧ ಸ್ವರೂಪದ ಸಹಕಾರ ಂಘಗಳ ಸಂಘಟನೆ ಮತ್ತು ನೋಂದಣಿ ಮಾಡುವುದು

2. ಸಹಕಾರ ಕಾಯ್ದೆ ನಿಯಮಗಳ ರೀತ್ಯಾ ವಿವಿಧ ಆಡಳಿತಾತ್ಮಕ, ಶಾಸನಾತ್ಮಕ ಅರೆ ನ್ಯಾಯಿಕ ಕಾರ್ಯಗಳ ನಿರ್ವಹಣೆ.

3. ವಿವಿಧ ರೀತಿಯ ಸಹಕಾರ ಸಂಘಗಳಿಗೆ ವಾರ್ಷಿಕ ಯೋಜನೆಗಳಡಿಯಲ್ಲಿ ಪಾಲು ಬಂಡವಾಳ, ಸಾಲ ಸಹಾಯಧನವನ್ನು ಅನುದಾನದ ೂಪದಲ್ಲಿ, ಸರ್ಕಾರದ ಪರವಾಗಿ ಧನಸಹಾಯ ನೀಡುವಿಕೆಗೆ ಕ್ರಮ.

4. ದೀನ, ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಜಾತಿ:ಪಂಗಡದ ಜನರು ಸಹಕಾರ ಚಳುವಳಿಯ ುಖ್ಯವಾಹಿನಿಗೆ ತರಲು ಅವಶ್ಯ ಕ್ರಮ ಕೈಗೊಳ್ಳುವುದು.

5. ಸಹಕಾರ ಸಂಘಗಳ ಕಾಯ್ದೆಯಲ್ಲಿರುವ ಅವಕಾಶಗಳ ರೀತ್ಯಾ ಸಹಕಾರ ಸಂಘಗಳ ಪರಿವೀಕ್ಷಣೆ, ಮೇಲ್ವಿಚಾರಣೆ ತಪ್ಪು ಎಸಗುವ ಸಹಕಾರ ಂಘಗಳ ವಿರುದ್ಧ ಕ್ರಮ ಜರುಗಿಸುವುದು.

6. ಸಹಕಾರ ಸಂಘಗಳ ಕಾಯ್ದೆಯು ಅವಕಾಶಗಳ ರೀತ್ಯಾ ವಿನಿಮಯದ (ರೆಗ್ಯುಲೇಷನ್) ಕಾರ್ಯಗಳ ನಿರ್ವಹಣೆ.

7. ಸಹಕಾರ ಸಂಘಗಳ ಸಿಬ್ಬಂದಿ, ಸದಸ್ಯರ ನಡುವಿನ ವ್ಯಾಜ್ಯ, ಆಡಳಿತ ಮಂಡಳಿಯ ವಿರುದ್ಧ ದಾವೆಗಳನ್ನು ನ್ಯಾಯಿಕ ಕಲಾಪಗಳ ಮೂಲಕ ಇತ್ಯರ್ಥಪಡಿಸುವುದು.

8. ಸಹಕಾರ ಕಾಯ್ದೆಯಡಿ ನೀಡಲ್ಪಟ್ಟ ಐತೀರ್ಪು, ಆದೇಶ, ನಿರ್ದೇಶನಗಳನ್ನು ಅನುಷ್ಠಾನಗೊಳಿಸುವುದು.

9. ತೃಪ್ತಿಕರ ಕಾರ್ಯನಿರ್ವಹಣೆ, ಸಹಕಾರಿ ಧ್ಯೇಯೋದ್ದೇಶಗಳನ್ನು ಜಾರಿಗೊಳಿಸುವ ಮೂಲಕ ಕಾರ್ಯೋನ್ಮುಖವಾಗಲು ವಿಫಲವಾದ ಸಹಕಾರ ಸಂಘಗಳನ್ನು ಸಮಾಪನೆಗೊಳಿಸುವುದು.

10. ಸಹಕಾರ ಕಾಯ್ದೆ, ನಿಯಮಗಳ ಉಲ್ಲಂಘನೆಯಾದ ಸಂದರ್ಭದಲ್ಲಿ ಇಲಾಖಾಧಿಕಾರಿಗಳನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸುವುದು ಹಾಗೂ ಆಡಳಿತ ಮಂಡಳಿಯ ಸ್ಥಾನದಲ್ಲಿ ಉನ್ನತಾಧಿಕಾರಿಗಳ ಆದೇಶದ ರೀತ್ಯಾ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು.

11. ಸಹಕಾರ ಸಂಘಗಳಿಗೆ ಹಾಗೂ ಸಹಕಾರಿ ಸದಸ್ಯರುಗಳಿಗೆ ಇಲಾಖಾಧಿಕಾರಿಗಳು ಸ್ನೇಹಿತ, ಹಾಗೂ ಮಾರ್ಗದರ್ಶಕನಂತೆ (ಫ್ರೆಂಡ್, ಫಿಲಾಸಫರ್ ಅಂಡ್ ಗೈಡ್) ತತ್ವಜ್ಞಾನಿಯಂತೆ ಸಲಹೆ, ಸೂಚನೆಗಳನ್ನು ನೀಡುವುದು ಹಾಗೂ ಕಾರ್ಯನಿರ್ವಹಿಸುವುದು.

12. ಸಹಕಾರ ರಂಗದ ಅಭಿವೃದ್ಧಿಗೆ ಸರ್ಕಾರವು ಮಾಡಿರುವ ನೀತಿ, ಯೋಜನೆ ಇತ್ಯಾದಿಗಳಿಗೆ ಸಹಾಯ ಸಹಕಾರ ನೀಡಿ, ಕಾರ್ಯಗತಗೊಳಿಸುವಲ್ಲಿ ಕ್ರಮ.

13. ಈ ಜಿಲ್ಲೆಯ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪ್ರಾಸಂಗಿಕವಾಗಿ ಅಗತ್ಯವಿರುವ, ಅವಶ್ಯವಿರುವ ಇತರೆ ಎಲ್ಲಾ ಕಾರ್ಯಗಳನ್ನು ಕರ್ತವ್ಯಗಳನ್ನು ನಿರ್ವಹಿಸುವುದು.

14. ಸರ್ಕಾರದ ಅತ್ಯಂತ ಮುಖ್ಯ ಯೋಜನೆಯಾದ ಯಶಸ್ವಿನಿ ರೈತರ ಆರೋಗ್ಯ ವಿಮಾ ರಕ್ಷಣಾ ಯೋಜನೆಯನ್ನು ಅನುಷ್ಠಾನಗೊಳಿಸುವುದು.

ಬೆಂಗಳೂರು ನಗರ ಜಿಲ್ಲೆ-1 ರ ವ್ಯಾಪ್ತಿಯಲ್ಲಿ ಪ್ರಸಕ್ತ ಅವಧಿಯವರೆಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 558 ಸಹಕಾರ ಸಂಘಗಳಿವೆ. ವಿವರ ಈ ಕೆಳಕಂಡಂತಿವೆ. 'ಎಲ್ಲರಿಗಾಗಿ ಒಬ್ಬರು ಒಬ್ಬರಿಗಾಗಿ ಎಲ್ಲರೂ' ಎಂಬ ಮಹತ್ವಾಕಾಂಕ್ಷೆಯ ಧ್ಯೇಯೋದ್ದೇಶಗಳೊಂದಿಗೆ ಸಹಕಾರ ಚಳುವಳಿಯನ್ನು ಜಿಲ್ಲೆಯ ಜನತೆಯಲ್ಲಿ ಹಾಸುಹೊಕ್ಕಾಗಿಸಲು ಕಛೇರಿಯು ಅವಿರತವಾಗಿ ಶ್ರಮಿಸುತ್ತಿದೆ.

ಕ್ರ.ಸಂ.	ವಿವಿಧ ಸಹಕಾರ ಸಂಘಗಳು	ದಿ.31.03.2010 ಕ್ಕೆ ಇರುವ ಸಹಕಾರ ಸಂಘಗಳು
01	ರಾಜ್ಯಮಟ್ಟದ ಸಹಕಾರ ಸಂಘಗಳು	04
02	ಪ್ರಾಥಮಿಕ ಕೃಷಿ ಗ್ರಾಮೀಣಾಭಿವೃದ್ಧಿ ಬ್ಯಾಂಕ್	01
03	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು	07
04	ಹಾಲು ಉತ್ಪಾದಕರ ಸಹಕಾರ ಸಂಘಗಳು	34
05	ಕೃಷಿಯೇತರ ಪತ್ತಿನ ಸಹಕಾರ ಸಂಘಗಳು	160
06	ಸಾರ್ವಜನಿಕ ಗೃಹ ನಿರ್ಮಾಣ ಸಹಕಾರ ಸಂಘಗಳು	136
07	ಲೈವ್ ಸ್ಟಾಕ್ ಸಹಕಾರ ಸಂಘಗಳು	04
08	ಪಟ್ಟಣ ಸಹಕಾರ ಬ್ಯಾಂಕುಗಳು	16
09	ನೌಕರರ ಪತ್ತಿನ ಸಹಕಾರ ಸಂಘಗಳು	52
10	ಕೂಲಿಕಾರರ ಸಹಕಾರ ಸಂಘಗಳು	2
11	ಮಹಿಳಾ ವಿವಿದೋದ್ದೇಶ ಸಹಕಾರ ಸಂಘಗಳು	27
12	ವಿವಿದೊದ್ಧೇಶ ಸಹಕಾರ ಸಂಘಗಳು	8
13	ಬಳಕೆದಾರರ ಸಹಕಾರ ಸಂಘಗಳು	64
14	ದರ್ಜಿಗಳ ಸಹಕಾರ ಸಂಘ ನಿ.	2
15	ಮಡಿವಾಳ ಸಹಕಾರ ಸಂಘ ನಿ.,	3
16	ಸಹಕಾರ ಮುದ್ರಣಾಲಯದ ಸಹಕಾರ ಸಂಘ ನಿ.,	2
17	ನೀರು ಬಳಕೆದಾರರ ಸಹಕಾರ ಸಂಘ ನಿ.,	2
18	ಮೀನುಗಾರರ ಸಹಕಾರ ಸಂಘ ನಿ.,	3
19	ನೇಕಾರರ ಸಹಕಾರ ಸಂಘ ನಿ.,	14
20	ಕೇಂದ್ರ ಸಹಕಾರ ಮಾರಾಟ ಸಹಕಾರ ಸಂಘ ನಿ.,	3

ಕ್ರ.ಸಂ.	ವಿವಿಧ ಸಹಕಾರ ಸಂಘಗಳು	ದಿ.31.03.2010 ಕ್ಕೆ ಇರುವ ಸಹಕಾರ ಸಂಘಗಳು
21	ಕೈಗಾರಿಕಾ ಸಹಕಾರ ಸಂಘ ನಿ.,	12
22	ಇತ್ಯಾದಿ ಸಹಕಾರ ಸಂಘಗಳು.	2
	ಒಟ್ಟು ಸಹಕಾರ ಸಂಘಗಳು	**558**

03. ಜಿಲ್ಲೆಯಲ್ಲಿ ಸಹಕಾರ ಇಲಾಖಾ ಕಚೇರಿಗಳ ಸಂರಚನೆ, ಆಡಳಿತದ ವಿವಿಧ ಹಂತಗಳು

01. ಸಹಕಾರ ಸಂಘಗಳ ಉಪನಿಬಂಧಕರು-01 ಬೆಂಗಳೂರು ನಗರಜಿಲ್ಲೆ, ಬೆಂಗಳೂರು
02. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇವಲಯ, ಬೆಂಗಳೂರು
03. ಲೇವಾದೇವಿ ಸಹಾಯಕ ನಿಬಂಧಕರು, ಬೆಂಗಳೂರು ನಗರಜಿಲ್ಲೆ, ಬೆಂಗಳೂರು
04. ಸಹಕಾರ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು.

05. 01 ಈ ಮೇಲ್ಕಂಡ ಅದಿಕಾರಿಗಳಲ್ಲದೇ ಈ ಕೆಳಕಂಡ ವೃಂದದ ಸಿಬ್ಬಂದಿ ವರ್ಗವು ಸಹ ಕಾರ್ಯನಿರ್ವಹಿಸುತ್ತಿರುತ್ತಾರೆ.

1. ಸಹಕಾರ ಅಭಿವೃದ್ಧಿ ಅಧಿಕಾರಿ
2. ಅಧೀಕ್ಷಕರು
3. ಮಾರಾಟಾಧಿಕಾರಿ
4. ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು
5. ಸಹಕಾರ ಸಂಘಗಳ ನಿರೀಕ್ಷಕರು
6. ಪ್ರಥಮ ದರ್ಜೆ ಸಹಾಯಕರು
7. ಶೀಘ್ರಲಿಪಿಗಾರರು,
8. ಹಿರಿಯ ಬೆರಳಚ್ಚುಗಾರರು
9. ದ್ವಿತೀಯ ದರ್ಜೆ ಸಹಾಯಕರು
10. ಬೆರಳಚ್ಚುಗಾರರು
11. ವಾಹನ ಚಾಲಕರು
12. ಜಾರಿಗಾರರು: ಡಿ ದರ್ಜೆ ನೌಕರರು

ಒಟ್ಟಾರೆ ಬೆಂಗಳೂರು ನಗರ ಜಿಲ್ಲೆ-1ರ ವ್ಯಾಪ್ತಿಯು ಇಲಾಖಾ ಕೇಂದ್ರ ಕಛೇರಿಯಿಂದ ತಹಲ್‌ವರೆಗೆ ಮಂಜೂರಾಗಿರುವ ಹುದ್ದೆಗಳು ಹಾಗೂ ಕಾರ್ಯನಿರತ ಸಿಬ್ಬಂದಿ ಸಂಖ್ಯೆ, ಖಾಲಿ ಇರುವ ಹುದ್ದೆಗಳ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಮಂಜೂರಾದ ಹುದ್ದೆ	ಕಾರ್ಯನಿರತ ಹುದ್ದೆ	ಖಾಲಿಹುದ್ದೆ
1. ಸಹಕಾರ ಸಂಘಗಳ ಉಪನಿಬಂಧಕರು-1 ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಕಛೇರಿ				
01	ಸಹಕಾರ ಸಂಘಗಳ ಉಪನಿಬಂಧಕರು	01	01	–
02	ಸಹಕಾರ ಅಭಿವೃದ್ಧಿ ಅಧಿಕಾರಿ	01	01	–
03	ಅಧೀಕ್ಷಕರು	01	01	–
04	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	02	02	–
05	ಸಹಕಾರ ಸಂಘಗಳ ನಿರೀಕ್ಷಕರು	01	–	01
06	ಪ್ರಥಮ ದರ್ಜೆ ಸಹಾಯಕರು	03	02	01
07	ಶೀಘ್ರಲಿಪಿಗಾರರು	01	–	01
08	ಹಿರಿಯ ಬೆರಳಚ್ಚುಗಾರರು	01	01	–
09	ದ್ವಿತೀಯ ದರ್ಜೆ ಸಹಾಯಕರು	01	01	–
10	ವಾಹನ ಚಾಲಕರು	01	01	–
11	ಡಿ. ದರ್ಜೆ ನೌಕರರು	02	–	02
	ಒಟ್ಟು	**15**	**10**	**05**
2. ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು ಇವರ ಕಛೇರಿ				
01	ಸಹಕಾರ ಸಂಘಗಳ ಸಹಾಯಕ ನಿಬಂಧಕರು	01	01	–

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಮಂಜೂರಾದ ಹುದ್ದೆ	ಕಾರ್ಯನಿರತ ಹುದ್ದೆ	ಖಾಲಿಹುದ್ದೆ
02	ಮಾರಾಟಾಧಿಕಾರಿ	01	01	–
03	ಅಧೀಕ್ಷಕರು	01	01	–
04	ಸಹಕಾರ ಸಂಘಗಳ ನಿರೀಕ್ಷಕರು	04	03	01
05	ದ್ವಿತೀಯ ದರ್ಜೆ ಸಹಾಯಕರು	03	02	01
06	ಬೆರಳಚ್ಚುಗಾರರು	01	01	–
07	ವಾಹನಚಾಲಕರು	01	–	01
08	ಜಾರಿಗಾರರು	01	01	–
09	ಡಿ ದರ್ಜೆ ನೌಕರರು	03	01	2
	ಒಟ್ಟು	**16**	**11**	**05**
03	**ಲೇವಾದೇವಿಗಾರರ ಸಹಾಯಕ ನಿಬಂಧಕರ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಇವರ ಕಛೇರಿ**			
01	ಲೇವಾದೇವಿಗಾರರ ಸಹಾಯಕ ನಿಬಂಧಕರು	01	01	–
02	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	01	01	–
03	ದ್ವಿತೀಯ ದರ್ಜೆ ಸಹಾಯಕರು	01	01	–
04	ಬೆರಳಚ್ಚುಗಾರರು	01	01	–
05	ಡಿ.ದರ್ಜೆ ನೌಕರರು	01	–	01
	ಒಟ್ಟು	**05**	**04**	**01**
04. ಸಹಕಾರ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು				
01	ಸಹಕಾರ ಅಭಿವೃದ್ಧಿ ಅಧಿಕಾರಿ	01	01	–
02	ಸಹಕಾರ ಸಂಘಗಳ ನಿರೀಕ್ಷಕರು	01	01	–
	ಒಟ್ಟು	**02**	**02**	–
	ಜಿಲ್ಲೆಯ ಒಟ್ಟು ಹುದ್ದೆಗಳ ಸಂಖ್ಯೆ	**38**	**27**	**11**

ಈ ಮೇಲಿನಂತೆ ಸಹಕಾರ ಇಲಾಖೆಯ ಬೆಂಗಳೂರು ನಗರಜಿಲ್ಲೆ-01ರ ವ್ಯಾಪ್ತಿಯಲ್ಲಿ ಇಲಾಖಾ ಕಛೇರಿಗಳ ವ್ಯವಸ್ಥೆಯಲ್ಲಿ ಸಂರಚನೆಯ ನಕ್ಷೆಯು ಸಮಷ್ಟಿಯಾಗಿ ಆಡಳಿತಾತ್ಮಕ ರಚನೆಯನ್ನು ಸ್ಪಷ್ಟಪಡಿಸುತ್ತದೆ.

6. ಜಿಲ್ಲೆಯಲ್ಲಿ ಒಟ್ಟು 3 ಹಂತಗಳಲ್ಲಿ ಸಂಘಟಿತವಾಗಿದೆ. ಈ ಹಂತಗಳು ಯಾವುವೆಂದರೆ ಜಿಲ್ಲಾ ಮಟ್ಟ, ಉಪವಿಭಾಗೀಯ ಮಟ್ಟ, ತಾಲ್ಲೂಕು ಮಟ್ಟದ ಇಲಾಖೆಯ ಆಡಳಿತಾತ್ಮಕ ಕಾರ್ಯಗಳನ್ನು ಜಾರಿಗೆ ತರುವ ಮೂಲಕ ಆಡಳಿತಾತ್ಮಕ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

6.01 ಸಹಕಾರ ಸಂಘಗಳ ಉಪನಿಬಂದಕರು, ಬೆಂಗಳೂರು ನಗರ ಜಿಲ್ಲೆ-01ರ ಜಿಲ್ಲಾ ಮಟ್ಟದ ಅಧಿಕಾರಿಯಾಗಿದ್ದು, ಇವರು ಲೇವಾದೇವಿ, ಗಿರ ಹಾಗೂ ಚೀಟಿನಿಧಿಗಳ ನಿಬಂಧಕರೂ ಸಹ ಆಗಿರುತ್ತಾರೆ. ಇವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಕರ್ನಾಟಕ ಲೇವಾದೇವಿದಾರ ಕಾಯ್ದೆ, ಗಿರವಿದಾರರ ಕಾಯ್ದೆ, ಚೀಟಿನಿಧಿಗಳ ಕಾಯ್ದೆಯ ಶಾಸನಾತ್ಮಕ ಅಧಿಕಾರಗಳನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ಸಹಕಾ ಸಂಘಗಳಲ್ಲಿನ ಆಡಳಿತ ಮಂಡಳಿಗಳಲ್ಲಿ ಸರ್ಕಾರದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

6.02. ಸಹಕಾರ ಸಂಘಗಳ ಉಪನಿಬಂಧಕರು-01 ಬೆಂಗಳೂರು ನಗರ ಜಿಲ್ಲೆ ಇವರ ಅಧೀನದಲ್ಲಿ ಬೆಂಗಳೂರು 1ನೇ ವಲಯಕ್ಕೆ ಉಪವಿಭಾಗೀಯ ಮಟ್ಟದ ಅಧಿಕಾರಿಗಳಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ಲೇವಾದೇವಿಗಾರರ ಸಹಾಯಕ ನಿಬಂಧಕರು, ಬೆಂಗಳೂರು ಉತ್ತ ತಾಲ್ಲೂಕಿಗೆ ಒಬ್ಬ ಸಹಕಾರ ಅಭಿವೃದ್ಧಿ ಅಧಿಕಾರಿ ಇದ್ದು, ಇವರುಗಳಿಗೆ ಸರ್ಕಾರದ ಆದೇಶಗಳನ್ವಯ ಅವರವರಿಗೆ ಅಧಿಕಾರ ಪ್ರತ್ಯಯೋಜನೆಯಾಗಿ ಅವರವರ ಅಧಿಕಾರ ವ್ಯಾಪ್ತಿಗೆ ಒಳಪಡುವ ಸಹಕಾರ ಸಂಘಗಳ ಮೇಲೆ ಹಾಗೂ ಗಿರವಿ/ ಹಣಕಾಸು ಸಂಸ್ಥೆಗಳ ಶಾಸನಾತ್ಮಕ ಹಾಗೂ ಆಡಳಿತಾತ್ ನಿಯಂತ್ರಣ ಹೊಂದಿರುತ್ತಾರೆ. ಅದೇ ರೀತಿ ಸಂಘಗಳ ಸಂಯೋಜನೆ, ಸಮಾಪನೆ, ಉಪನಿಯಮಗಳ ತಿದ್ದುಪಡಿ, ಪರಿವೀಕ್ಷಣೆ, ನಿರೀಕ್ಷಣೆಗಳ ಜೊತೆ ಅರೆ ನ್ಯಾಯಕಲಾಪ, ಹಾಗೂ ಶಾಸನಗಳು ನೀಡಿರುವ ಆದೇಶದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

6.03 ರಾಜ್ಯ ಯೋಜನೆಗಳು ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜೊತೆಗೆ ಜಿಲ್ಲಾ ಪಂಚಾಯ್ತಿಯ ಯೋಜನೆಗಳನ ಜಾರಿಗೊಳಿಸುವ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರು-01 ರವರು ಜಿಲ್ಲಾ ಪಂಚಾಯತ್ ನಿಯಂತ್ರಣದ ಕಾರ್ಯನಿರ್ವಹಿಸುತ್ತಾರೆ. ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ ರವರು ರಾಜ್ಯ ಸರ್ಕಾರದ ಮತ್ತು ಜಿಲ

ಪಂಚಾಯತ್ ತಾಲ್ಲೂಕು ಪಂಚಾಯತ್ ಯೋಜನೆಗಳ ಅನುಷ್ಠಾನದ ಹೊಣೆಯನ್ನು ಹೊಂದಿರುತ್ತಾರೆ. ಅಲ್ಲದೇ ಇಲಾಖಾ ಮುಖ್ಯಸ್ಥರು ಹಾಗೂ ಪ್ರಾಂತೀಯ ಅಧಿಕಾರಿಗಳ ಅಧೀನದಲ್ಲಿ ಜಿಲ್ಲಾ, ಉಪವಿಭಾಗದ ಹಂತದಲ್ಲಿ ಕ್ಷೇತ್ರಿಯ ಸಿಬ್ಬಂದಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ.

6.04 ಈ ಸಂರಚನೆಯು ಇಲಾಖೆಯ ಧ್ಯೇಯೋದ್ದೇಶಗಳನ್ನು ಗುರಿಸಾಧಿಸಲು ಮಾರ್ಗೋಪಾಯವಾಗಿದೆ. ಇಲಾಖೆಯ ಜಿಲ್ಲಾಡಳಿತ ಯಂತ್ರವು ತಂಡದ ಸ್ವರೂಪದಲ್ಲಿ ಕಾರ್ಯನಿರ್ವಹಿಸುತ್ತದೆ. ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ, ಇಲಾಖೆಯ ಧ್ಯೇಯ-ಉದ್ದೇಶಗಳನ್ನು ಜಾರಿಗೊಳಿಸಲು ಕೆಲಸಗಳನ್ನು ವಿಂಗಡಣೆ ಮಾಡಿಕೊಂಡು ತಂಡದೋಪಾದಿಯಲ್ಲಿ ನಿರ್ವಹಿಸುತ್ತಿದೆ.

ಕಛೇರಿಯ ಪ್ರತಿಯೊಬ್ಬ ಸದಸ್ಯರು (ನೌಕರರು-ಅಧಿಕಾರಿಗಳು) ತನ್ನ ನಿರ್ಧಿಷ್ಟ ಪಾತ್ರವನ್ನು ಅರಿತು ತಮ್ಮ ತಮ್ಮ ಕರ್ತವ್ಯಗಳು, ವಹಿಸಿರುವ ಜವಾಬ್ದಾರಿಗಳು, ಅಧಿಕಾರ ಪ್ರತ್ಯಾಯೋಜನೆಯ ರೀತ್ಯಾ ಪರಸ್ಪರ ಪೂರಕವಾಗಿ ನಿರ್ವಹಿಸುವ ಮೂಲಕ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

6.05. ಜಿಲ್ಲಾ ಮುಖ್ಯಸ್ಥರಾದ ಸಹಕಾರ ಸಂಘಗಳ ಉಪನಿಬಂಧಕರು ಇಲಾಖಾ ಮುಖ್ಯಸ್ಥರು ಹಾಗೂ ಮೇಲಧಿಕಾರಿಗಳ ಮಾರ್ಗದರ್ಶನ ಹಾಗೂ ನಿರ್ದೇಶನಗಳಿಗನುಗುಣವಾಗಿ ಇಲಾಖೆಯ ಸಿಬ್ಬಂದಿಯೊಂದಿಗೆ ಸಮನ್ವಯತೆಯನ್ನು ಸಾಧಿಸಿ ಸುಲಲಿತ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತದೆ.

7. ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಅವರ ಕಛೇರಿಯ ಅಧಿಕಾರಿ, ನೌಕರರ ಅಧಿಕಾರಿ ಮತ್ತು ಕರ್ತವ್ಯಗಳು :

ಇಲಾಖೆಯ ಸಂರಚನೆಯ ನಕ್ಷೆಯಲ್ಲಿ ಅಧಿಕಾರದ ಶ್ರೇಣಿಕೃತ ವ್ಯವಸ್ಥೆಯನ್ನು ವೀಕ್ಷಿಸಬಹುದು. ಆ ಪ್ರಕಾರ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯಲ್ಲಿ ಅಧಿಕಾರಿಗಳು ನೌಕರರ ಆಡಳಿತಾತ್ಮಕ ಸ್ಥಾನ ಮತ್ತು ಅಧಿಕಾರ ಮತ್ತು ಕರ್ತವ್ಯಗಳನ್ನು ಈ ಕೆಳಕಂಡಂತೆ ಇರುತ್ತದೆ.

7.01 ಸಹಕಾರ ಸಂಘಗಳ ಉಪನಿಬಂಧಕರು-01 ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

ಸಹಕಾರ ಸಂಘಗಳ ಉಪನಿಬಂಧಕರು-01, ಇವರು ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಜಿಲ್ಲಾ ಮಟ್ಟದ 'ಎ' ವರ್ಗದ ಅಧಿಕಾರಿಗಳಾಗಿದ್ದು, ಇಲಾಖಾ ಮುಖ್ಯಸ್ಥರಾದ ಸಹಕಾರ ಸಂಘಗಳ ನಿಬಂಧಕರು, ಹಾಗೂ ಕೇಂದ್ರ ಕಛೇರಿಯ ಉನ್ನತ ಅಧಿಕಾರಿಗಳು ಮತ್ತು ಪ್ರಾಂತ ಮಟ್ಟದ ಅಧಿಕಾರಿಗಳಾದ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರ ಮಾರ್ಗದರ್ಶನ ಹಾಗೂ ನಿರ್ದೇಶನಗಳಿಗನುಗುಣವಾಗಿ, ಸರ್ಕಾರದ ಸಹಕಾರ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುವುದು, ಮತ್ತು ಈ ಮೇಲಿನ ಕಾಯ್ದೆಗಳಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರ ಮತ್ತು ಕರ್ತವ್ಯಗಳನ್ನು ನಿರ್ವಹಣೆ ಮಾಡುತ್ತಾರೆ.

7.02 ಸಹಕಾರ ಇಲಾಖೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಾಗಿದ್ದು, ಜಿಲ್ಲಾ ಮಟ್ಟದ ಅಧಿಕಾರವನ್ನು ಹೊಂದಿರುತ್ತಾರೆ. ಇವರು ಆಡಳಿತಾತ್ಮಕ, ಶಾಸನಾತ್ಮಕ ಮತ್ತು ಅರೆ ನ್ಯಾಯಾಲಯಗಳ ಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ ಅಭಿವೃದ್ಧಿಗೆ ಅಗತ್ಯವಿರುವ ಪೂರಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ.

ಇವರು ಈ ಕೆಳಕಂಡ ಕಾಯ್ದೆಗಳಲ್ಲಿ ಹಂಚಿಕೆ ಮಾಡಿರುವ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಮತ್ತು ಸಹಕಾರ ಸಂಘಗಳ ನಿಯಮಗಳು 1960.

2. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997, ಹಾಗೂ ಕರ್ನಾಟಕ ಸೌಹಾರ್ದ ಸಹಕಾರ ನಿಯಮಾವಳಿಗಳು

3 ಕರ್ನಾಟಕ ಲೇವಾದೇವಿ ಕಾಯ್ದೆ 1969 ಮತ್ತು ಕರ್ನಾಟಕ ಲೇವಾದೇವಿ ನಿಯಮಾವಳಿಗಳು

4. ಕರ್ನಾಟಕ ಗಿರವಿದಾರರ ಕಾಯ್ದೆ 1961 ಮತ್ತು ಕರ್ನಾಟಕ ಗಿರವಿ ನಿಯಮಾವಳಿಗಳು

5. ಚೀಟಿ ನಿಧಿ ಕಾಯ್ದೆ 1982 ಮತ್ತು ಚೀಟಿ ನಿಧಿ ನಿಯಮಾವಳಿಗಳು

6. ಜಿಲ್ಲೆಯ ಎಲ್ಲಾ ನೌಕರರ ಸೇವಾ ವಿಷಯಗಳಾದ, ಬಡ್ತಿ, ರಜೆ, ನಿವೃತ್ತಿ, ನಿಯಂತ್ರಣ, ನಿರ್ದೇಶನ ಹಾಗೂ ಶಿಸ್ತು ಕ್ರಮದ ಬಗ್ಗೆ ಪ್ರತ್ಯಾಯೋಜಿತವಾದ ಅಧಿಕಾರದಂತೆ ಕ್ರಮ.

7. ಜಿಲ್ಲೆಯ ಸಹಕಾರ ಇಲಾಖೆಯ ಸಾಮಾನ್ಯ ಆಡಳಿತದ ಮೇಲ್ವಿಚಾರಣೆ

8 ವಿವಿಧ ಯೋಜನೆಗಳ ಅನುಷ್ಠಾನ, ಇಲಾಖಾ ಮುಖ್ಯಸ್ಥರು ನೀಡುವ ಅನುದಾನಗಳನ್ನು ಸಮರ್ಪಕವಾಗಿ ಸದ್ಬಳಕೆ ಬಗ್ಗೆ, ನೀಡಿದ ಭೌತಿಕ ಗುರಿಗೆ ಅನುಗುಣವಾಗಿ ಸಾಧನೆಗೆ ಕ್ರಮ.

9. ಜಿಲ್ಲೆಯ ಅಂಕಿ ಅಂಶಗಳ ನಿರ್ವಹಣೆ, ಸರ್ಕಾರವು ಸಹಕಾರ ಸಂಘಗಳಿಗೆ ನೀಡುವ ಷೇರು, ಸಾಲ, ಸಹಾಯಧನದ ಸದ್ಬಳಕೆ ಬಗ್ಗೆ ಮೇಲ್ವಿಚಾರಣೆ ಹಾಗೂ ರೀಡಿಮೆಬಲ್ ಷೇರು ಮತ್ತು ಸರ್ಕಾರಿ ಸಾಲದ ವಸೂಲಾತಿಯ ಮೇಲ್ವಿಚಾರಣೆ.

10. ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದ ಒಳಪಟ್ಟಿರುವ ಜಿಲ್ಲಾ ವ್ಯಾಪ್ತಿಯಲ್ಲಿರುವ ಎಲ್ಲಾ ವಿಧದ ಸಹಕಾರ ಸಂಘಗಳ ಮೇಲ್ವಿಚಾರಣೆ, ವ್ಯಾಜ್ಯಗಳ ವಿಚಾರಣೆ ಹಾಗೂ ಇತ್ಯರ್ಥ.

11. ತಾಲ್ಲೂಕು ಮಟ್ಟ ಹಾಗೂ ಬಿ.ಬಿ.ಎಂ.ಪಿ.ವ್ಯಾಪ್ತಿಗೆ ಒಳಪಟ್ಟಿರುವ ಅಧಿಕಾರ ಪ್ರತ್ಯಾಯೋಜಿತ ವಿವಿಧ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಸಹಕಾರ ಸಂಘಗಳ ಕಾಯ್ದೆ ಹಾಗೂ ಸೌಹಾರ್ದ ಕಾಯ್ದೆಯಡಿ ಸಹಕಾರ ಸಂಘಗಳು ಹಾಗೂ ಸೌಹಾರ್ದ ಸಹಕಾರಿಗಳ ನೋಂದಣಿ ಕಾರ್ಯಗಳು, ಮತ್ತು ಸಂಬಂಧಪಟ್ಟ ಸಂಘಗಳ ಉಪನಿಯಮಗಳ ತಿದ್ದುಪಡಿ ನೋಂದಣಿ ಕಾರ್ಯ.

12. ಯಶಸ್ವಿನಿ ರೈತರ ಆರೋಗ್ಯ ರಕ್ಷಣಾ ವಿಮಾ ಯೋಜನೆಯ ಅನುಷ್ಠಾನ ಹಾಗೂ ಆ ಮೂಲಕ ರೈತ ಫಲಾನುಭವಿ ಸದಸ್ಯರುಗಳಿಗೆ ಪ್ರಾಯೋಜಕತ್ವದ ಬಗ್ಗೆ ಮೇಲ್ವಿಚಾರಣೆ.

ಕಾರ್ಯರಚನೆಯ ವಿವರಗಳು

ಸಹಕಾರ ಸಂಘಗಳ ಉಪನಿಬಂಧಕರು-1, ಬೆಂಗಳೂರು ನಗರ ಜಿಲ್ಲೆ ಹಾಗೂ ಲೇವಾದೇವಿಗಾರರ ನಿಬಂಧಕರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಸೌಹಾರ್ದ ಸಹಕಾರಿಗಳ ಉಪನಿಬಂಧಕರು ಹಾಗೂ ಲೇವಾದೇವಿಗಾರರ ನಿಬಂಧಕರು, ಗಿರವಿದಾರರ ನಿಬಂಧಕರು, ಚೀಟಿ ನಿಧಿಗಳ ನಿಬಂಧಕರು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಲೇವಾದೇವಿಗಾರರ ಸಹಾಯಕ ನಿಬಂಧಕರು ಬೆಂಗಳೂರು ನಗರ ಜಿಲ್ಲೆ.

1ನೇ ವಲಯ, ಬೆಂಗಳೂರು.

:

ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಬೆಂಗಳೂರು ಉತ್ತರ,

:

ಸಹಕಾರ ಅಭಿವೃದ್ಧಿ ಅಧಿಕಾರಿ, ಉಪನಿಬಂಧಕರ ಕಛೇರಿ

:

ಅಧೀಕ್ಷಕರು

:

ಅ) ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು

:

ಆ) ಸಹಕಾರ ಸಂಘಗಳ ನಿರೀಕ್ಷಕರು

:

ಇ) ವಿಷಯ ನಿರ್ವಾಹಕರು

7.04. ಸಹಕಾರ ಸಂಘಗಳ ಉಪನಿಬಂಧಕರು-01, ಬೆಂಗಳೂರು ನಗರ ಜಿಲ್ಲೆ. ಬೆಂಗಳೂರು ಇವರ ಕಛೇರಿಯಲ್ಲಿ ಈ ಕೆಳಕಂಡಂತೆ ಸಿಬ್ಬಂದಿ ವರ್ಗದವರುಗಳಿರುತ್ತಾರೆ.

1. ಅಧೀಕ್ಷಕರು
2 ಸಹಕಾರ ಅಭಿವೃದ್ಧಿ ಅಧಿಕಾರಿ
3.ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು
4. ಸಹಕಾರ ಸಂಘಗಳ ನಿರೀಕ್ಷಕರು
5. ಪ್ರಥಮ ದರ್ಜೆ ಸಹಾಯಕರು
6. ದ್ವಿತೀಯ ದರ್ಜೆ ಸಹಾಯಕರು
7. ಶೀಘ್ರಲಿಪಿಗಾರರು
8. ಹಿರಿಯ ಬೆರಳಚ್ಚುಗಾರರು
9. ವಾಹನ ಚಾಲಕರು
10. ಡಿ ದರ್ಜೆ ನೌಕರರು

7.04.01 ಈ ಸಿಬ್ಬಂದಿಗಳ ವಿವರ, ಕಾರ್ಯನಿರ್ವಹಣೆ, ವಿವರ (ಅನುಬಂಧ-1, ಅನುಬಂಧ 2(ಎ) ರಂತೆ ಇವೆ.

7.05 ಕ್ಷೇತ್ರೀಯ ಮಟ್ಟದಲ್ಲಿ

1. ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು ಹಾಗೂ ಚೀಟಿ ನಿಧಿಗಳ ಸಹಾಯಕ ನಿಬಂಧಕರು, ಬೆಂಗಳೂರು ಒಂದನೇ ವಲಯ, ಬೆಂಗಳೂರು.
2. ಲೇವಾದೇವಿ ಸಹಾಯಕ ನಿಬಂಧಕರು, ಬೆಂಗಳೂರು
3. ಸಹಕಾರ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು

7.06 ಈ ಕಛೇರಿಗಳಲ್ಲಿ ಆಡಳಿತಾತ್ಮಕ ಕಾರ್ಯರಚನೆ ಈ ಕೆಳಕಂಡಂತಿದೆ.

(1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು 1ನೇ ವಲಯ, ಬೆಂಗಳೂರು

1. ಅಧೀಕ್ಷಕರು
2 ಮಾರಾಟಾಧಿಕಾರಿ (ಸರ್ಕಾರಿ)
3. ಸಹಕಾರ ಸಂಘಗಳ ನಿರೀಕ್ಷಕರು
4. ದ್ವಿತೀಯ ದರ್ಜೆ ಸಹಾಯಕರು
5 ಬೆರಳಚ್ಚುಗಾರರು
6 ವಾಹನ ಚಾಲಕರು
7. ಜಾರಿಗಾರರು: ಡಿ ದರ್ಜೆ ನೌಕರರು (ಅನುಬಂಧ-2 (ಬಿ)

(2) ಲೇವಾದೇವಿಗಾರರ ಸಹಾಯಕ ನಿಬಂಧಕರು, ಬೆಂಗಳೂರು

1. ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು
2. ದ್ವಿತೀಯ ದರ್ಜೆ ಸಹಾಯಕರು

3 ಬೆರಳಚ್ಚುಗಾರರು

4. ಡಿ ದರ್ಜೆ ನೌಕರರು (ಅನುಬಂಧ-2ಸಿ)

(3) ಸಹಕಾರ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು

1. ಸಹಕಾರ ಸಂಘಗಳ ನಿರೀಕ್ಷಕರು

8. ಮೇಲ್ವಿಚಾರಣೆಯ ಅಂತಗಳು ಮತ್ತು ಜವಾಬ್ದಾರಿಯು ಸೇರಿದಂತೆ ತೀರ್ಮಾನ ಕೈಗೊಳ್ಳುವ ನಡವಳಿಯಲ್ಲಿ ಅನುಸರಿಸುವ ವಿಧಾನ:

8.01.(1) ಸಹಕಾರ ಸಂಘಗಳ ಉಪನಿಬಂಧಕರು-01, ಇವರು ಬೆಂಗಳೂರು ನಗರ ಜಿಲ್ಲೆ-01 ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಆದೇಶ ಸಂ.ಸಿಓ/201/ಸಿಎಲ್ಎಂ/2008 ದಿನಾಂಕ:27-05-2010ರ ಕ್ರಮ ಸಂಖ್ಯೆ: V,ರಲ್ಲಿ ದತ್ತವಾದ ಅಧಿಕಾರದನ್ವಯ

(i) ತಾಲ್ಲೂಕು ಮಟ್ಟಕ್ಕೆ ಕಡಿಮೆಯಲ್ಲದ ಜಿಲ್ಲಾ ಉಪನಿಬಂಧಕರ ವ್ಯಾಪ್ತಿಯಲ್ಲಿ ನೆಲೆಸಿರುವ ಎಲ್ಲಾ ಸಹಕಾರ ಸಂಘಗಳು ಕಲಂ 14,14ಬಿ, 30,72,72ಎ,73,74,75,98ಪಿ(2) &118 ನಿಯಮ 18,22(1)(ಎ), &33.

(ii) ತಾಲ್ಲೂಕು ಮಟ್ಟಮೀರಿದ ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಇರುವ ಕಾರ್ಯವ್ಯಾಪ್ತಿಯಲ್ಲಿ ನೆಲೆಸಿರುವ ಎಲ್ಲಾ ಸಹಕಾರ ಸಂಘಗಳ: ಕಲಂ 6,7,8 10,12,14,14ಬಿ,16,17,27,28,28ಎ(5),29ಸಿ,29ಎಫ್(1)&(8)29ಜಿ(6),31,31ಎ,58(ಇ),64(4ಎ)(5)&(7)64,65,65ಎ,67,68,69,70,70ಎ,71,103,104, 105ಎ,110ಎ,111,113,117,125,&128ಬಿ, ನಿಯಮ 3,6, 14(1), 14(ಬಿ) 14(ಡಿ), 14ಇ, 23, 26, 31, 50, 52, 53& 56 (ಸಕ್ಕರೆ ಮತ್ತು ನೀರು ಬಳಕೆದಾರರ ಸಹಕಾರ ಸಂಘ ಹೊರತುಪಡಿಸಿ)

(iii) ಜಿಲ್ಲಾ ಉಪನಿಬಂಧಕರು ಕಾರ್ಯವ್ಯಾಪ್ತಿಯಲ್ಲಿ ನೊಂದಣಿಯಾದ ಪ್ರಧಾನ ಕಛೇರಿಯುಳ್ಳ ಎಲ್ಲಾ ಬಗೆಯ ಪಟ್ಟಣ ಬ್ಯಾಂಕುಗಳು (ಅಮಾನತ್ ಸಹಕಾರ ಬ್ಯಾಂಕ್ ಹೊರತುಪಡಿಸಿ) ಕಲಂ 69, 70, 70ಎ, 71, 103 & 117 ನಿಯಮ 31 & 56.

ದತ್ತವಾದ ಅಧಿಕಾರದನ್ವಯ ತೀರ್ಮಾನ ಕೈಗೊಳ್ಳುವುದು, ಕ್ಷೇತ್ರ ಸಿಬ್ಬಂದಿಗಳಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹಿರಿಯ ನಿರೀಕ್ಷಕರು, ನಿರೀಕ್ಷಕರು, ಕಛೇರಿ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಸಹಾಯಕರಾಗಿರುತ್ತಾರೆ. ಪತ್ರಗಳ ವಿಲೇವಾರಿಯು ವಿಷಯ ನಿರ್ವಾಹಕರಿಂದ ಪ್ರಾರಂಭವಾಗಿ, ಉಪ ನಿಬಂಧಕರ ತೀರ್ಮಾನಕ್ಕೆ ಸಲ್ಲಿಸಲ್ಪಡುತ್ತದೆ. ಕಡತಗಳ ನಿರ್ವಹಣೆ ಮಾಡುವ ಎಲ್ಲಾ ಸಿಬ್ಬಂದಿಗಳು ಅದರ ಚಾಲನೆಯಲ್ಲಿನ ಕ್ರಮಬದ್ಧತೆ ಮತ್ತು ಜವಾಬ್ದಾರಿಯಿಂದ ಹೊರಬರುವ ಫಲಿತಾಂಶವು ನಿರ್ವಹಿಸುವ ಕರ್ತವ್ಯಕ್ಕೆ ಅನುಗುಣವಾಗಿರುತ್ತದೆ.

8.02 ಉಪವಿಭಾಗದ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು

ಇವರ ಕಛೇರಿಯಲ್ಲಿ ಇಲಾಖೆಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಜವಾಬ್ದಾರರಾಗಿರುತ್ತಾರೆ. ಮತ್ತು ಇವರು ಅವರ ಕಛೇರಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಸಹಾಯಕ ನಿಬಂಧಕರು ತೆಗೆದುಕೊಳ್ಳುವ ಎಲ್ಲಾ ತೀರ್ಮಾನಗಳಿಗೆ ಅವರೇ ಜವಾಬ್ದಾರರಾಗಿರುತ್ತಾರೆ. ಜಿಲ್ಲಾ ಮಟ್ಟದ ಕಛೇರಿಯಂತೆಯೇ ಇವರ ಕಾರ್ಯನಿರ್ವಹಣೆಗೆ ಕ್ಷೇತ್ರ ಸಿಬ್ಬಂದಿಗಳು ಹಾಗೂ ಲಿಪಿಕ ಸಿಬ್ಬಂದಿಗಳು ಹಾಗೂ ಮಾರಾಟಾಧಿಕಾರಿ(ಸರ್ಕಾರಿ) ಇವರು ಸಹಾಯಕರಾಗಿರುತ್ತಾರೆ. ಸಹಾಯಕ ನಿಬಂಧಕರು, 1ನೇ ವಲಯದ ಹಂತದಲ್ಲಿ ಕರ್ತವ್ಯಗಳನ್ನು ನಿರ್ವಹಿಸಲು ಕ್ಷೇತ್ರ ಸಿಬ್ಬಂದಿಗಳು ಮತ್ತು ಕಛೇರಿ ಸಿಬ್ಬಂದಿಗಳು ಸಹಾಯಕರಾಗಿರುತ್ತಾರೆ. ವಿಷಯ ನಿರ್ವಾಹಕರು ಮತ್ತು ಮೇಲ್ವಿಚಾರಕ ಸಿಬ್ಬಂದಿಗಳು ಅವರುಗಳು ಕರ್ತವ್ಯ ನಿರ್ವಹಣೆಯ ಫಲಿತಾಂಶಕ್ಕೆ ಜವಾಬ್ದಾರರಾಗಿರುತ್ತಾರೆ. ಮತ್ತು ಮೇಲಧಿಕಾರಿಗಳಿಗೂ ಇದಕ್ಕೆ ಸಂಬಂಧಪಟ್ಟಂತೆ ಜವಾಬ್ದಾರಿ ಹೊಂದಿರುತ್ತಾರೆ.

9.01 ಇಲಾಖೆಯಲ್ಲಿ ಜಿಲ್ಲಾ ಮಟ್ಟದ ಕಛೇರಿಯಲ್ಲಿ ತನ್ನ ಕಾರ್ಯಗಳನ್ನು ನಿರ್ವಹಿಸಲು ರೂಪಿತವಾಗಿರುವ ಮಾರ್ಗಸೂಚಿಗಳು:

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಲ್ಲಿ ಇಲಾಖೆಯ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ವಿವಿಧ ಹಂತಗಳನ್ನು ರೂಪಿಸಿದೆ. ಸಾಮಾನ್ಯವಾಗಿ ವ್ಯವಹಾರದ ಜರೂರು ವಿಲೇವಾರಿಗೆ ಅಂದರೆ ಕಾಲವಿಳಂಭಕ್ಕೆ ಯಾವುದೇ ಅವಕಾಶ ನೀಡದೇ ಆದ್ಯತೆಯ ಮೇಲೆ ಪತ್ರಗಳನ್ನು , ಕಡತಗಳನ್ನು ಮಂಡಿಸುವುದು, ತುರ್ತು ಮತ್ತು ಮುಖ್ಯವಾದ ಆದ್ಯತೆಯ ವಿಷಯವನ್ನು ಸಾಮಾನ್ಯವಾಗಿ ಅಂದಂದೇ ನಿರ್ವಹಿಸಲು ಅಗತ್ಯವಾದ ಕ್ರಮಗಳನ್ನು ಅನುಸರಿಸಲಾಗುವುದು.

9.02 ಪತ್ರಗಳ ಮತ್ತು ಕಡತಗಳ ವಿಲೇವಾರಿಗೆ, ಕಛೇರಿ ಕಾರ್ಯವಿಧಾನ ಕೈಪಿಡಿಯಲ್ಲಿ ರೂಪಿಸಿದ ಮಾರ್ಗಸೂಚಿಯಂತೆ ಪರಿಣಾಮಕಾರಿಯಾಗಿ ಪುನರ್ ವಿಲೋಕನ ಮತ್ತು ಶೀಘ್ರ ವಿಲೇವಾರಿಗೆ ಕಾರ್ಯನಿರ್ವಹಣೆಯನ್ನು ಗುರುತಿಸಲು ಅನುಪಾಲನಾ ಪದ್ದತಿ ಜಾರಿಯಲ್ಲಿದೆ. ಕಛೇರಿಯ ಮಾರ್ಗಸೂಚಿಗಳ ಪ್ರಕಾರ, ಅವರವರ ಕಾರ್ಯಗಳನ್ನು ನಿರ್ವಹಿಸಲು ಮತ್ತು ಕರ್ತವ್ಯಗಳನ್ನು ಚುರುಕಾಗಿ ಪರಿಣಾಮಕಾರಿಯಾಗಿ ಮತ್ತು ಪಾರದರ್ಶಕವಾಗಿರುವುದು ಕಡ್ಡಾಯವಾಗಿದೆ.

9.03 ಉಪನಿಬಂಧಕರು ಅರೆನ್ಯಾಯಿಕ ಪ್ರಾಧಿಕಾರಿಗಳಾಗಿ ಸಹಕಾರ ಸಂಘಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ, ಹಾಗೂ ಚೀಟಿನಿಧಿ ಕಾಯ್ದೆಯನ್ವಯ ಚೀಟಿಸಂಸ್ಥೆಗಳಲ್ಲಿ ಉದ್ಭವಿಸುವ ಮತ್ತು ದಾವೆಗೆ ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ನ್ಯಾಯಿಕ ಕಲಾಪದ ಮೂಲಕ ಮತ್ತು ಇತರೆ ಅರೆ ನ್ಯಾಯಿಕ ವಿಷಯಗಳಂತಿರುವುಗಳನ್ನು ನಿಯಮಾನುಸಾರ ಮತ್ತು ನಿಗದಿತ ಕ್ರಮಗಳನ್ನು ಅನುಸರಿಸಿ ವಿಲೇವಾರಿ ಮಾಡಲಾಗುವುದು.

9.04 ಉಪನಿಬಂಧಕರಿಗೆ ದತ್ತವಾದ ಅಧಿಕಾರವನ್ನು ಚಲಾಯಿಸಲು ಸಂಬಂಧಪಟ್ಟಂತೆ ಸರ್ಕಾರವು ರೂಪಿಸಿರುವ ಮಾರ್ಗಸೂಚಿಗಳನ್ನು ಮತ್ತು ಕಚೇರಿ ಕಾರ್ಯ ವಿಧಾನ ಕೈಪಿಡಿಯನ್ವಯ ನಿರ್ದಿಷ್ಟಪಡಿಸಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಲಾಗುವುದು.

9.05. ನಿರ್ವಹಣೆ, ಜವಾಬ್ದಾರಿ, ಪಾರದರ್ಶಕತೆ ಮತ್ತು ಪರಿಣಾಮಕಾರಿ ಆಡಳಿತ ಇವುಗಳನ್ನು ಇಲಾಖೆಯು ಪ್ರಮುಖ ಮಾರ್ಗಸೂಚಿಗಳಾಗಿದ್ದು, ಇವುಗಳನ್ನು ಕಾನೂನುಬದ್ದವಾಗಿ ನಿಗಧಿಪಡಿಸಿರುವ ಮಾರ್ಗಸೂಚಿಗಳ ಜೊತೆಯಲ್ಲಿ ಅನುಸರಿಸಲಾಗುವುದು.

10.1 ಕಛೇರಿ ಸಿಬ್ಬಂದಿಗಳು ತಮ್ಮ ಕಾರ್ಯನಿರ್ವಹಣೆಯಲ್ಲಿ ಉಪಯೋಗಿಸುವ ನಿಯಮಗಳು, ನಿಯಂತ್ರಣಗಳು, ಸೂಚನೆಗಳು, ಮ್ಯಾನ್ಯೂಯಲ್ ಮತ್ತು ದಾಖಲೆಗಳು ಅಥವಾ ಅವುಗಳ ನಿಯಂತ್ರಕಗಳು.

ಉಪನಿಬಂಧಕರ ಕಛೇರಿಯ ಅಧಿಕಾರಿಗಳು, ಸಿಬ್ಬಂದಿಗಳು ಅಗತ್ಯವಾದ ದಾಖಲೆಗಳನ್ನು ಕೈಪಿಡಿಗಳನ್ನು ನಿರ್ವಹಿಸುತ್ತಿದ್ದಾರೆ.

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959.
2. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960
3. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಮತ್ತು ನಿಯಮಗಳು 2004.
4. ಚೀಟಿ ನಿಧಿ ಕಾಯ್ದೆ, ಚೀಟಿ ನಿಧಿ(ಕರ್ನಾಟಕ)ನಿಯಮಗಳು 1983
5. ಗಿರವಿದಾರರ ಕಾಯ್ದೆ 1961
6. ಗಿರವಿದಾರರ ನಿಯಮಗಳು 1966
7. ಕರ್ನಾಟಕ ಲೇವಾದೇವಿಗಾರರ ಕಾಯ್ದೆ 1961
8. ಕರ್ನಾಟಕ ಲೇವಾದೇವಿಗಾರರ ನಿಯಮಗಳು 1965
9. ಕರ್ನಾಟಕ ಮೀತಿಮೀರಿದ ಬಡ್ಡಿ ವಿಧಿಸುವುದನ್ನು ನಿಷೇದಿಸುವ ಕಾಯ್ದೆ 2004
10. ಇತರೆ.

10.02 ನಿರ್ವಹಿಸುವ ಇತರೆ ಶಾಸನ ಬದ್ದ ಕಾಯ್ದೆಗಳು, ನಿಯಮಗಳು

1. ಕರ್ನಾಟಕ ನಾಗರಿಕ ಸೇವಾ ನಿಯಮಗಳು-1958
2. ಕರ್ನಾಟಕ ನಾಗರಿಕ (ವೈದ್ಯಕೀಯ ಹಾಜರಾತಿ) ನಿಯಮಗಳು 1963
3. ಕರ್ನಾಟಕ ನಾಗರಿಕ (ಕಾಲಮಿತಿ ಬಡ್ತಿ) ನಿಯಮಗಳು
4. ಕರ್ನಾಟಕ ಆಯವ್ಯಯ ಕೈಪಿಡಿ
5. ಸಾದಿಲ್ವಾರು ವೆಚ್ಚದ ಕೈಪಿಡಿ
6. ಕರ್ನಾಟಕ ಆರ್ಥಿಕ ಸಂಹಿತೆ ಸಂಪುಟ-1, ಸಂಪುಟ-2
7. ಕರ್ನಾಟಕ ಖಜಾನೆ ಸಂಹಿತೆ ಸಂಪುಟ-1, ಸಂಪುಟ-2
8. ಕರ್ನಾಟಕ ನಾಗರೀಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಬಡ್ತಿ)
9. ಸಿ.ಆ.ಸು.ಇಲಾಖೆಯು ಪ್ರಕಟಿಸಿರುವ ಸೇವಾ ನಿಯಮಗಳು
10. ಪ್ರಮುಖ ಸರ್ಕಾರಿ ಆದೇಶಗಳು, ಸರ್ಕಾರದ, ಸಿಆಸು ಮತ್ತು ಹಣಕಾಸು ಇಲಾಖೆಯು ಪ್ರಕಟಿತ ಮ್ಯಾನ್ಯುಯಲ್
11. ಕರ್ನಾಟಕ ಸರ್ಕಾರಿ ನೌಕರರ ಸಮೂಹ ವಿಮಾ ಯೋಜನೆ ನಿಯಮಗಳು ಮತ್ತು ಕರ್ನಾಟಕ ಸರ್ಕಾರಿ ನೌಕರರ ಕುಟುಂಬ ಕಲ್ಯಾಣ ಯೋಜನೆ ನಿಯಮಗಳು.
12. ಕರ್ನಾಟಕ ಸರ್ಕಾರಿ ನೌಕರರ (ಪರೀಕ್ಷಾರ್ಥ ಅವಧಿ) ನಿಯಮಗಳು
13. ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು
14. ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಗಳು
15. ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು.

10.03 ಕಛೇರಿಯಲ್ಲಿ ಕೆಳಕಂಡ ದಾಖಲಾತಿಗಳನ್ನು ನಿರ್ವಹಿಸಲಾಗುತ್ತಿದೆ

1. ಸ್ವೀಕೃತಿ ವಹಿ(ಯಿಂದ ವಹಿ)
2. ರವಾನೆ ವಹಿ (ಗೆ ವಹಿ)
3. ಸ್ಥಳೀಯ ಬಟವಾಡೆ ವಹಿ
4. ಸಿಬ್ಬಂದಿಗಳ ಸೇವಾ ಪುಸ್ತಕಗಳು
5. ಸಿಬ್ಬಂದಿಗಳ ಸೇವಾ ಪುಸ್ತಕದ ಚಲನವಲನ ವಹಿ, ಮುಕ್ತಾಯಗೊಂಡ ಸೇವಾಪುಸ್ತಕಗಳ ವಹಿ
6. ಸಿಬ್ಬಂದಿಗಳ ವಾರ್ಷಿಕ ವೇತನ ಬಡ್ತಿ ಪರಿಶೀಲನಾ ವಹಿ
7. ಸಿಬ್ಬಂದಿಗಳ ಕಾರ್ಯನಿರ್ವಹಣಾ ವರದಿಗಳ ಪರಿಶೀಲನಾವಹಿ
8. ಸಿಬ್ಬಂದಿಗಳ ಆಸ್ತಿ-ಜವಾಬ್ದಾರಿ ಪರಿಶೀಲನಾ ವಹಿ
9. ಸಾಂದರ್ಭಿಕ ರಜೆ ವಹಿ
10. ನಗದು ಪುಸ್ತಕ
11. ವೇತನ ಬಟವಾಡೆ ಪುಸ್ತಕ
12. ಸಾದಿಲ್ವಾರು ವೆಚ್ಚದ ಬಿಲ್ಲುಗಳ ವಹಿ
13. ಪ್ರಯಾಣ ಭತ್ಯೆ ಬಿಲ್ಲುಗಳ ವಹಿ
14. ಬಿಲ್ಲುಗಳ ನಗದು ಪರಿವರ್ತನೆ ವಹಿ(ಎನ್ ಕ್ಯಾಷ್‌ಮೆಂಟ್ ರಿಜಿಸ್ಟರ್)
15. ಚೆಕ್ಕುಗಳ ವಹಿ

16. ವಿಷಯ ವಹಿಗಳು
17. ವೈಯಕ್ತಿಕ ವಹಿಗಳು
18. ಸಿಬ್ಬಂದಿಗಳ ಚಲನ-ವಲನ ವಹಿ
19. ಕಛೇರಿ ಆದೇಶದ ವಹಿ
20. ವಾಹನ ಲಾಗ್ ಪುಸ್ತಕ
21. ದಾಖಲೆಗಳ ವಹಿ, ಇತ್ಯಾದಿ ಕಛೇರಿಯಲ್ಲಿ ಅವಶ್ಯಕವಾಗಿ ನಿರ್ವಹಿಸಬೇಕಾದ ವಹಿಗಳು.

10.04 ನಿರ್ವಹಿಸಲ್ಪಡುವ ಇತರೆ ಕಡತಗಳು/ದಾಖಲೆಗಳು

1. ನೋಂದಣಿ ವಹಿ
2. ಸಹಕಾರ ಸಂಘ ಸಂಸ್ಥೆಗಳ ನೋಂದಾಯಿಸಿರುವುದಕ್ಕೆ ನೋಂದಾವಣೆ ದೃಢೀಕರಣ ಪತ್ರ.
3. ನೋಂದಣಿಗೆ ಸಂಬಂಧಪಟ್ಟ ಕಡತಗಳು
4. ಉಪನಿಯಮಗಳ ತಿದ್ದುಪಡಿ ವಹಿ ಮತ್ತು ಸಂಬಂಧಿಸಿದ ಕಡತಗಳು
5. ಮಹಾಸಭೆ ನಡೆಸುವ ಬಗ್ಗೆ ಗಮನಿಸುವ ವಹಿ, ಕಡತಗಳು
6. ಹಣ ದುರುಪಯೋಗ ಪ್ರಕರಣಗಳ ತ:ಖ್ತೆ
7. ಸಹಕಾರ ಸಂಘಗಳ ಆಡಳಿತ ಮಂಡಳಿ ರದ್ದತಿ ವಹಿ, ಕಡತಗಳು, ತ:ಖ್ತೆಗಳು
8. ಯೋಜನಾ ಕಾರ್ಯಕ್ರಮಗಳ ಅನುಷ್ಠಾನದ ವಿವರಗಳ ಕಡತ.
9. ಪರಿವೀಕ್ಷಣೆ, ವಿಚಾರಣೆಗೆ ಆದೇಶಿಸಿರುವ ವಿವರಗಳ ಕಡತಗಳು.
10. ವಿವಿಧ ಆಡಳಿತಾತ್ಮಕ ಮತ್ತು ಶಾಸನಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ತೆರೆಯಲಾದ ಕಡತಗಳು, ವಹಿಗಳು
11. ಇತರೆ ಮತ್ತು ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದಂತೆ ತೆರೆಯಲಾದ ಕಡತಗಳು ಮತ್ತು ವಹಿಗಳು, ದಾಖಲಾತಿಗಳು
12. ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ವರದಿಗಳು
13. ಲೆಕ್ಕಪರಿಶೋಧನಾ ವರದಿಗಳ ಮೇಲೆ ಕಲಂ 68ರ ಪುನರ್ ವಿಲೋಕನ ಆದೇಶಗಳು
14. ಕಛೇರಿ ಸಿಬ್ಬಂದಿಗಳ ರಜೆ, ವೇತನ ಬಡ್ತಿ, ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ನೌಕರರ ವೈಯಕ್ತಿಕ ಕಡತಗಳು
15. ಕಡತ ವಿಲೇವಾರಿ ವಹಿ
16. ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿಗಳು
17. ಇತರೆ ವಿಷಯಗಳ ಬಗ್ಗೆ ಕಾಲಿಕ ಪ್ರಗತಿ ತ:ಖ್ತೆಗಳು , ಪುನರ್ ವಿಲೋಕನ ಮತ್ತು ಇತರೆ ವ್ಯವಹಾರಿಕ ಕಡತಗಳು
18. ಆಡಳಿತ, ವ್ಯಾಜ್ಯ, ಚೀಟಿ ನಿಧಿ, ಪತ್ತು, ಪತ್ತೇತರ, ಗೃಹ, ಬಳಕೆ ಇತರೆ ಸಹಕಾರ ಸಂಘಗಳ ಬಗ್ಗೆ ಪ್ರಗತಿ, ಕಾರ್ಯನಿರ್ವಹಣೆ ಇತರೆ ವಿಷಯಗಳ ಪತ್ರ ವ್ಯವಹಾರದ ಕಡತಗಳು ಮತ್ತು ಸಂಬಂಧಿಸಿದ ಕಡತಗಳು.

10.05 ಕಛೇರಿಯ ನಿಯಂತ್ರಣದಲ್ಲಿ ಹೊಂದಿರುವ ದಾಖಲೆಗಳ ವರ್ಗಗಳ ತ:ಖ್ತೆ

ಈ ಕಛೇರಿಯಲ್ಲಿ ನಿರ್ವಹಿಸಲ್ಪಟ್ಟಿರುವ ದಾಖಲೆಗಳ ವರ್ಗಗಳ ವಿವರಗಳನ್ನು ಈ ಕೈಪಿಡಿಯ ಕ್ರಮಾಂಕ (10.3 ಮತ್ತು 10.4)ರಲ್ಲಿ ವಿವರದಂತೆ ನಮೂದಿಸಿದೆ. ಸದರಿ ಪಟ್ಟಿಯಲ್ಲದೆ ಕಛೇರಿ ಕೈಪಿಡಿಯಲ್ಲಿ ನಮೂದಿಸಿರುವಂತೆ ನಿರ್ಧಿಷ್ಟಪಡಿಸಿರುವ ಅಗತ್ಯಗಳನ್ನು ನಿರ್ವಹಿಸಿರುವುದನ್ನು ಸಹ ನಮೂದಿಸಿದೆ. ನಿರ್ಣಯಗಳಿಗೆ ಸಂಬಂಧಿಸಿದ ದಾಖಲೆಗಳು ಅವುಗಳ ಕಾರ್ಯನಿರ್ವಹಣೆ ಆಡಳಿತಾತ್ಮಕ:ಶಾಸನಬದ್ಧ: ಅರೆ ನ್ಯಾಯಿಕ ರೂಪವಾಗಿರುತ್ತದೆ. ಈ ದಾಖಲೆಗಳನ್ನು ಕ್ರಮಬದ್ಧವಾಗಿ ವರ್ಗೀಕರಿಸಲಾಗಿದೆ. ಮತ್ತು ಆಡಳಿತ ನಿರ್ವಹಿಸಲ್ಪಟ್ಟಿದೆ.

10.06 ಕಛೇರಿಗೆ ಅರೆ ನ್ಯಾಯಿಕ ಜವಾಬ್ದಾರಿಯನ್ನು ವಹಿಸಿರುವುದರಿಂದ ಅದರ ಕಾರ್ಯನಿರ್ವಹಣೆಗೆ ಸೂಕ್ತ ಮತ್ತು ಅಗತ್ಯ ಶಾಸನಬದ್ಧ ಸೂಚನೆಗಳನ್ನು ಪಾಲಿಸಲಾಗುತ್ತಿದೆ. ನಿಯಮಗಳು, ನಿಯಂತ್ರಣಗಳು, ಮ್ಯಾನುಯಲ್ ಮತ್ತು ಸರ್ಕಾರದ ಅಧಿಸೂಚನೆಗಳ ಮೂಲಕ ಇಲಾಖೆಯ ಮುಖ್ಯಸ್ಥರು ಹಾಗೂ ಮೇಲಧಿಕಾರಿಗಳ ಮಾರ್ಗದರ್ಶನವಿದೆ. ಆದಾಗ್ಯೂ ಕಛೇರಿಯ ಕಡ್ಡಾಯವಾಗಿ ಕಾಯ್ದೆ, ನಿಯಮಗಳು ಮತ್ತು ನಿಯಂತ್ರಕಗಳನ್ನು ಅನುಸರಿಸಿರುವುದರಿಂದ ಸಾರ್ವಜನಿಕರೊಂದಿಗೆ ಸಮಾಲೋಚಿಸುವ ಪದ್ಧತಿ ಇರುವುದಿಲ್ಲ.

10.07. ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರೆ ಅಂಗ ರಚನೆಗಳು ಇಬ್ಬರು ಅಥವಾ ಹೆಚ್ಚು ಸದಸ್ಯರುಗಳನ್ನು ಅದರ ರಚನೆಯ ಭಾಗವಾಗಿ ಹೊಂದಿರುವುದು ಅಥವಾ ಅದಕ್ಕೆ ಮಾರ್ಗದರ್ಶನ ನೀಡುವ ಉದ್ದೇಶಕ್ಕಾಗಿ ಮತ್ತು ಅಂತಹ ಮಂಡಳಿಗಳು , ಪರಿಷತ್ತುಗಳ ಸಮಿತಿಗಳು ಮತ್ತು ಇತರೆ ಅಂಗ ರಚನೆಗಳ ಸಭೆಗಳಲ್ಲಿ ಸಾರ್ವಜನಿಕರಿಗೆ ಅವಕಾಶವಿದೆಯೇ? ಅಥವಾ ಅಂತಹ ಸಭೆಯ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಿದೆಯೇ? ಮಾರ್ಗದರ್ಶನ ನೀಡುವ ಉದ್ದೇಶಕ್ಕಾಗಿ ಇಲಾಖಾ ಕಛೇರಿಗಳಲ್ಲಿ ಅಂತಹ ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರೆ ಅಂಗ ರಚನೆಗಳು ಇರುವುದಿಲ್ಲ.

11. ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಪಟ್ಟಿ

ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಯಾದಿಯನ್ನು ಈ ಕೈಪಿಡಿಯೊಂದಿಗೆ ಲಗತ್ತಿಸಿದೆ ಅನುಬಂಧ '2ಎ' ರಂತಿದೆ.

12. ಕಛೇರಿಯ ಪ್ರತಿ ಅಧಿಕಾರಿ:ನೌಕರರ ಮಾಸಿಕ ಸಂಭಾವನೆ, ವಿವರಗಳು ಅದರ ನಿಯಂತ್ರಣದಲ್ಲಿನ ಅವಕಾಶದಂತೆ ಪರಿಹಾರದ ಪದ್ಧತಿಯಲ್ಲಿನ ಸಂಭಾವನೆಯೂ ಸೇರಿದಂತೆ:-

ಸರ್ಕಾರವು ನಿಗಧಿಪಡಿಸಿರುವಂತೆ, ಅಧಿಕಾರಿಗಳು, ನೌಕರರು ಮಾಸಿಕ ಸ್ವೀಕರಿಸುವ ಸಂಭಾವನೆ ವಿವರಗಳನ್ನು ಒಳಗೊಂಡಿರುವ ತ:ಖ್ತೆಯ ಈ ಕೈಪಿಡಿಯ ಜೊತೆಗೆ ಲಗತ್ತಿಸಿರುವ ಅನುಬಂಧ '3' ನಲ್ಲಿದೆ. ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಸರ್ಕಾರಿ ಆದೇಶಗಳು/ ಅಧಿಸೂಚನೆಗಳನ್ವ ಇರುವ ಸಂಭಾವನೆಯನ್ನು ಈ ಅಧಿಕಾರಿಗಳು ಮತ್ತು ನೌಕರರು ಪಡೆಯುತ್ತಿದ್ದಾರೆ.

13. ಪ್ರತಿಯೊಂದು ಏಜೆನ್ಸಿಗೆ ಆಯವ್ಯಯ ಹಂಚಿಕೆ ಎಲ್ಲಾ ಯೋಜನೆಗಳ ವಿವರಗಳನ್ನು ನಮೂದಿಸುವುದು, ಉದ್ದೇಶಿತ ಖರ್ಚುಗಳು ಮತ್ತು ವಿತರ ಬಗ್ಗೆ ವರದಿ.

2009–10ನೇ ಸಾಲಿನ ಆಯವ್ಯಯದ ಹಂಚಿಕೆ ಮತ್ತು ಖರ್ಚಿನ ವಿವರಗಳ ತ:ಖ್ತೆಗಳು ಲಗತ್ತಿಸಿರುವ ಅನುಬಂಧ–'4' ರಂತಿದೆ.

14. ಸಹಾಯಧನದ ಕಾರ್ಯಕ್ರಮಗಳ ಅನುಷ್ಠಾನದ ವಿಧಾನ, ಹಂಚಿಕೆಯಾದ ಮೊಬಲಗು ಸೇರಿದಂತೆ ಮತ್ತು ಅಂತಹ ಕಾರ್ಯಕ್ರಮದ ಫಲಾನುಭವಿ ವಿವರಗಳು:–

ವಿವಿಧ ಯೋಜನೆಗಳು, ಕಾರ್ಯಕ್ರಮಗಳು, ಹಂಚಿಕೆ ಮತ್ತು ವೆಚ್ಚದ ವಿವರಗಳನ್ನು ಅನುಬಂಧ '5ಎ' ಮತ್ತು '5ಬಿ' ನಲ್ಲಿ ವಿವರಿಸಿದಂತಿದೆ.

14.01 ಹಾಗೂ ಸಹಾಯಧನ ಹಂಚಿಕೆ ಮಾಡಿರುವ ಮೊಬಲಗು, ಸರ್ಕಾರ ಇಲಾಖಾ ಮುಖ್ಯಸ್ಥರು, ಹಾಗೂ ಜಿಲ್ಲಾ ಪಂಚಾಯತ್ ಮಂಜೂ ಮಾಡುತ್ತದೆ. ಅದನ್ನು ಡ್ರಾ ಮಾಡಿ ಫಲಾನುಭವಿ ಸಹಕಾರ ಸಂಘದ ಖಾತೆಗಳ ಮೂಲಕ ಜಮಾ ನೀಡಲಾಗುತ್ತಿದೆ.

15. ರಿಯಾಯಿತಿಗಳನ್ನು ಸ್ವೀಕರಿಸಿರುವ ವಿವರಗಳು, ಅನುಮತಿಗಳು ಅಥವಾ ಮಂಜೂರು ಮಾಡಿರುವುದು.

15.01 ಸಂಬಂಧಿಸಿದ ಯೋಜನೆಯ ಕಾರ್ಯಕ್ರಮದಲ್ಲಿ ನಿರ್ಧಿಷ್ಠಪಡಿಸಿರುವ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಸ್ವೀಕರಿಸಿರುವುದು ಸಹಕಾ ಸಂಘಗಳು/ ಸಹಕಾರಿ ರೈತ ಸದಸ್ಯರುಗಳು ಫಲಾನುಭವಿಗಳಾಗಿರುತ್ತಾರೆ. ಆದರೆ ಯಾವುದೇ ಅನುಮತಿ ನೀಡುವ ಯೋಜನೆಗಳಿರುವುದಿಲ್ಲ. ಇಲಾಖೆಯ ಕ್ರಿಯಾ ಯೋಜನೆಯ ಕಾರ್ಯಕ್ರಮದಲ್ಲಿ ಆರ್ಥಿಕ ನೆರವನ್ನು, ಷೇರು ಬಂಡವಾಳ ಸಾಲ ಮತ್ತು ಸಹಾಯಧನದ ರೂಪದಲ್ಲಿ ಅರ್ಹ ಸಹಕಾ ಸಂಘಗಳಿಗೆ ನೀಡಲಾಗುತ್ತಿದೆ.

15.02 ಯೋಜನೆ: ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದವರು, ಹಿಂದುಳಿದ ವರ್ಗದವರು ಮತ್ತು ಮಹಿಳೆಯವರು ಸಹಕಾ ಸಂಘಗಳಲ್ಲಿ ಸದಸ್ಯರಾಗಲು ಆರ್ಥಿಕ ನೆರವು ನೀಡಲಾಗುತ್ತಿದೆ.

15.03 ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದು, ಸಾಲ ಸೌಲಭ್ಯ ಪಡೆದಿರುವ ರೈತರುಗಳು ಬಡ್ಡಿ ಸಹಾಯಧನದ ರಿಯಾಯ್ತಿ ಪಡೆಯಲಿದ್ದಾ ರೈತರು , ಕೃಷಿ ಕಾರ್ಮಿಕರು ಇತರೆ ವರ್ಗದ ಸಹಕಾರ ಸಂಘಗಳಲ್ಲಿ ಸದಸ್ಯರಾಗಿದ್ದಲ್ಲಿ ಯಶಸ್ವಿನಿ ರೈತರ ಆರೋಗ್ಯ ವಿಮಾ ಯೋಜನೆಯಡಿಯ ಲಭ್ಯವಾಗುವ ಸೌಲಭ್ಯವನ್ನು ಪಡೆಯಲು ಅರ್ಹರಿದ್ದಾರೆ.

16. ಗ್ರಂಥಾಲಯದ ಕಾರ್ಯ ನಿರ್ವಹಣೆಯ ಅವಧಿಯು ಸೇರಿದಂತೆ ಮಾಹಿತಿ ಪಡೆಯಲು ನಾಗರೀಕರಿಗೆ ಸಿಗುವ ಸವಲತ್ತುಗಳ ವಿವರಗಳು ಮತ್ತು ಓದು ಕೊಠಡಿ ಸಾರ್ವಜನಿಕ ಉಪಯೋಗಕ್ಕೆ ನಿರ್ವಹಿಸಿದ್ದಲ್ಲಿ:–

16.01 ಕಛೇರಿಯಲ್ಲಿ ಗ್ರಂಥಾಲಯದ ಓದುವ ಕೊಠಡಿ ನಿರ್ವಹಿಸಿರುವುದಿಲ್ಲ. ಯಾವುದೇ ಸಾರ್ವಜನಿಕರು ಯಾವುದೇ ಮಾಹಿತಿಯನ್ನು ಪಡೆಯಲ ಕಾರ್ಯ ನಿರತ ದಿನಗಳಲ್ಲಿ ಕಛೇರಿಯ ಮುಖ್ಯಸ್ಥರನ್ನು ಅಥವಾ ಈ ಉದ್ದೇಶಕ್ಕೆ ನಿಯತಗೊಂಡ ಸಹಾಯಕ ಅಧಿಕಾರಿಯನ್ನು ಸಂಪರ್ಕಿಸಬಹುದು ಸಾರ್ವಜನಿಕರಿಗೆ ಅಗತ್ಯವಾದ ವಿಷಯಗಳನ್ನು ನಿರ್ವಹಿಸಲ್ಪಡುವ ಶಾಖೆಗಳ ಮಾಹಿತಿಗಳ ಬಗ್ಗೆ ಮಾರ್ಗದರ್ಶನ ನೀಡಲಾಗುವುದು ಮತ್ತು ಯಾವುದೆ ಅಗತ್ಯ ದಾಖಲೆ/ ಮಾಹಿತಿಗಳಿಗಾಗಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ದಾಖಲೆ/ಮಾಹಿತಿಗಳನ್ನು ನಿಗದಿತ ಅವಧಿಯೊಳಗೆ ಒದಗಿಸಲು ಕ್ರಮವಿಡಲಾಗುವುದು ಸಾರ್ವಜನಿಕರು, ಸಂದರ್ಶನಕ್ಕೆ ನಿಗಧಿಯಾಗಿರುವ ಸಮಯದಲ್ಲಿ ಕಾರ್ಯನಿರತ ದಿನಗಳಲ್ಲಿ ಅಧಿಕಾರಿಗಳು ಅಧಿಕೃತವಾಗಿ ಕೇಂದ್ರ ಸ್ಥಾನದಲ್ಲಿರುವಾ ಮುಕ್ತವಾಗಿ ಅಧಿಕಾರಿಗಳನ್ನು ಭೇಟಿ ಮಾಡಬಹುದು.

17. ಸಹಕಾರ ಸಂಘಗಳ ಉಪನಿಬಂಧಕರು–01 ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಕಛೇರಿಯಲ್ಲಿ ಮಾಹಿತಿ ಅಧಿಕಾರಿಗಳ ವಿವರ ಇಂತಿದೆ.

ಸಾರ್ವಜನಿಕ ಮಾಹಿತಿ ಅಧಿಕಾರಿ: ಸಹಕಾರ ಸಂಘಗಳ ಉಪನಿಬಂಧಕರು–1, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ: ಅಧೀಕ್ಷಕರು, ಸಹಕಾರ ಸಂಘಗಳ ಉಪನಿಬಂಧಕರು–1ರವರ ಕಛೇರಿ, ಬೆಂಗಳೂರು ನಗ ಜಿಲ್ಲೆ, ಬೆಂಗಳೂರು.

ಮೇಲ್ಮನವಿ ಪ್ರಾಧಿಕಾರ : ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು.

ಡಿ. ಪಾಂಡುರಂಗಪ್ಪ

ಸಹಕಾರ ಸಂಘಗಳ ಉಪನಿಬಂಧಕರು–0

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಕರ್ನಾಟಕ ಸರ್ಕಾರ

(ಸಹಕಾರ ಇಲಾಖೆ)

ಸಹಕಾರ ಸಂಘಗಳ ಉಪನಿಬಂಧಕರು–1 ರವರ ಕಛೇರಿ, ಬೆಂಗಳೂರು ನಗರ ಜಿಲ್ಲೆ, ನಂ.146, 8ನೇ ಕ್ರಾಸ್, 3ನೇ ಮುಖ್ಯರಸ್ತೆ,

ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು –560 003

ಅನುಬಂಧ–1

ಸಿಬ್ಬಂದಿಗಳ ಕರ್ತವ್ಯ ಹಂಚಿಕೆ ಪಟ್ಟಿ

ಎಸ್.–1 ಶ್ರೀ ಕೆ. ಗೋವಿಂದಸ್ವಾಮಿ, ಅಧೀಕ್ಷಕರು

1) ಕಛೇರಿಯ ಸಿಬ್ಬಂದಿಯ ಮೇಲ್ವಿಚಾರಣೆ

2) ಕಛೇರಿಯಲ್ಲಿ ಸ್ವೀಕೃತವಾದ ಟಪಾಲುಗಳನ್ನು (ಅರೆ ಸರ್ಕಾರಿ ಪತ್ರಗಳನ್ನು ಹೊರತುಪಡಿಸಿ) ತೆರೆಯುವುದು, ಶಾಖೆಗಳನ್ನು ಗುರುತಿಸುವುದು.

3) ಹಾಜರಾತಿ ಪುಸ್ತಕ, ಸಿಬ್ಬಂದಿ ಚಲನ ವಲನ ವಹಿ, ಸಾಂದರ್ಭಿಕ ರಜೆ, ಪುಸ್ತಕ ಇತ್ಯಾದಿ ಅವಶ್ಯಕ ವಹಿಗಳನ್ನು ನಿರ್ವಹಿಸುವುದು.

4) ಸಿಬ್ಬಂದಿ ಶಾಖೆಯ ಪೂರ್ಣ ನಿರ್ವಹಣೆ.

5) ಅಧಿಕಾರಿ ಮತ್ತು ನೌಕರರ ವೈಯಕ್ತಿಕ ಕಡತಗಳು ಹಾಗೂ ಸೇವಾ ಪುಸ್ತಕಗಳನ್ನು ನಿರ್ವಹಿಸುವುದು.

6) ಸಿಬ್ಬಂದಿಗಳ ವಾರ್ಷಿಕ ವೇತನ ಬಡ್ತಿ, ರಜೆಗಳ ಮಂಜೂರಾತಿ, ನಿವೃತ್ತಿ ವೇತನ ಪ್ರಕರಣಗಳ ಬಗ್ಗೆ ಕ್ರಮ.

7) ವಿಧಾನಸಭಾ, ವಿಧಾನ ಪರಿಷತ್ ಸದಸ್ಯರ ಪ್ರಶ್ನೆಗಳಿಗೆ ಸಂಬಂಧಪಟ್ಟ ವಹಿ ನಿರ್ವಹಿಸಿ, ಸಕಾಲದಲ್ಲಿ ಶಾಖೆಗಳಿಂದ ಶೀಘ್ರ ಉತ್ತರ ಸಲ್ಲಿಕೆಗೆ ಕ್ರಮ.

8) ಸಹಕಾರ ಸಂಘಗಳ ನೋಂದಣಿ ಮತ್ತು ಉಪನಿಯಮಗಳ ತಿದ್ದುಪಡಿ ನೋಂದಣಿ ಪ್ರಕರಣಗಳ ಕಡತಗಳ ಕ್ರಮ ಹಾಗೂ ಸಂಬಂಧಪಟ್ಟ ವಹಿ, ನಿರ್ವಹಣೆ ಹಾಗೂ ಕಡತಗಳ ನಿರ್ವಹಣೆ ಪತ್ರ ವ್ಯವಹಾರ.

9) ಜಿಲ್ಲಾ ವ್ಯಾಪ್ತಿಯ ಸಿಬ್ಬಂದಿಗಳ ಹಾಗು ಕಛೇರಿಯ ಸಿಬ್ಬಂದಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳ ಕಡತ ನಿರ್ವಹಣೆ ಹಾಗೂ ಕ್ರಮ.

10) ಕಛೇರಿ ಸಿಬ್ಬಂದಿಗಳ ಮೇಲ್ವಿಚಾರಣೆ ಕಛೇರಿ ಶಿಸ್ತು ಪಾಲನೆ ಹಾಗೂ ಕಡತಗಳ ಶೀಘ್ರವಿಲೇವಾರಿಗೆ ಮೇಲ್ವಿಚಾರಣೆ ನಡೆಸುವುದು.

11) ಅಧೀನಾಧಿಕಾರಿಗಳಿಗೆ ಸಂಬಂಧಪಟ್ಟ ಪತ್ರ ವ್ಯವಹಾರಗಳಿಗೆ ಉಪ ನಿಬಂಧಕರಿಂದ ಅನುಮೋದಿಸಲ್ಪಟ್ಟ ನಂತರ ಶುದ್ಧ ಪ್ರತಿಗಳಿಗೆ ಉಪನಿಬಂಧಕರ ಪರವಾಗಿ (ಕರಡು ಉಪನಿಬಂಧಕರು ರವರಿಂದ ಅನುಮೋದಿಸಲ್ಪಟ್ಟಿದೆ ಇಂದು ಷರಾದೊಂದಿಗೆ) ಸಹಿ ಮಾಡುವುದು.

12) ಮಾಹಿತಿ ಹಕ್ಕು ಕಾಯ್ದೆಯಡಿ, ಮಾಹಿತಿ ಹಕ್ಕು ನೀಡುವ ಅಧಿಕಾರಿಯಾಗಿ, ಕ್ರಮ ವಹಿಯ ನಿರ್ವಹಣೆ ಹಾಗೂ ಕಡತಗಳ ಶೀಘ್ರವಿಲೇವಾರಿಗೆ ಮೇಲುಸ್ತುವಾರಿ.

13) ನಿಯತಕಾಲಿಕ ವರದಿಗಳು ಸಕಾಲದಲ್ಲಿ ಸಕ್ಷಮ ಪ್ರಾಧಿಕಾರಿ ಕಛೇರಿಗಳಿಗೆ ಸಲ್ಲಿಸುವ ಕುರಿತು ಮೇಲ್ವಿಚಾರಣೆ.

14) ಉಪನಿಬಂಧಕರವರು ವಹಿಸುವ ಇನ್ನಿತರ ಕರ್ತವ್ಯ ನಿರ್ವಹಣೆಗಳು.

ಸ್-2 ಶ್ರೀ ಸಿದ್ದಗಂಗಪ್ಪ, ಸಹಕಾರ ಅಭಿವೃದ್ಧಿ ಅಧಿಕಾರಿ

1) ಸಹಕಾರ ಸಂಘಗಳ ಕಾಯ್ದೆ ಕಲಂ 69, 70ರಡಿ ದಾವೆಗಳು, ಕಲಂ 105 ಮತ್ತು 106ರ ಮೇಲ್ಮನವಿಗಳು ಹಾಗೂ ಕಲಂ 109ಕ್ಕೆ, ಸಂಬಂಧಿಸಿದ ಕಡತಗಳ ನಿರ್ವಹಣೆ, ಸಮಗ್ರ ವ್ಯಾಜ್ಯ ಕಡತಗಳ ನಿರ್ವಹಣೆ.

2) ಗೌರವ ಉಚ್ಚ ನ್ಯಾಯಾಲಯ, ಕರ್ನಾಟಕ ಅಪೀಲು ಪ್ರಾಧಿಕಾರ ಹಾಗೂ ಇತರೆ ನ್ಯಾಯಾಲಯಗಳ ಸಂಬಂಧಪಟ್ಟ ವ್ಯಾಜ್ಯಗಳ ಕಡತಗಳ ನಿರ್ವಹಣೆ ಹಾಗೂ ಕ್ರಮ.

3) ಕಲಂ 17, ಕಲಂ 29(ಸಿ)ಗೆ ಸಂಬಂಧಪಟ್ಟ ಕಡತಗಳ ನಿರ್ವಹಣೆ.

4) ಕಲಂ 30, 31, 28(ಎ)(5)ಗೆ ಸಂಬಂಧಪಟ್ಟ ಸಂಪೂರ್ಣ ಕಡತಗಳು, ತಪ್ಪಿತಸ್ಥ ಆಡಳಿತ ಮಂಡಳಿ ರದ್ಧತಿಗೆ ಆರೋಪಗಳನ್ನು ಸಿದ್ದಪಡಿಸಿ, ಆಡಳಿತ ಮಂಡಳಿ, ರದ್ಧತಿಗೆ ಕ್ರಮ, ಅವಧಿ ವಿಸ್ತರಣೆ ಮಂಡಳಿ ಹಾಗೂ ಆಡಳಿತ ಮಂಡಳಿ ಪುನರ್ ರಚನೆ ಬಗ್ಗೆ ಪತ್ರ ವ್ಯವಹಾರಗಳು.

5) ಅನ್ಯ ಕಾರ್ಯನಿಮಿತ್ತ ತೆರಳಿದಾಗ ಸಹಕಾರ ಸಂಘಗಳ ಉಪನಿಬಂಧಕರು ರವರ ಪರವಾಗಿ ಮೇಲಾಧಿಕಾರಿಗಳ ಸಭೆಗಳು ಹಾಗೂ ಇತರೆ ಸಭೆಗಳಿಗೆ ಹಾಜರಾಗಿ, ಸಭೆಯ ನಡವಳಿಗಳ ಬಗ್ಗೆ ವರದಿ ಸಲ್ಲಿಕೆ.

6) ಮೇಲಾಧಿಕಾರಿಗಳು ಕಛೇರಿಗೆ ಭೇಟಿ ನೀಡಿದಾಗ ಭೇಟಿ ಟಿಪ್ಪಣಿ ಹಾಗೂ ಜಿಲ್ಲೆಯ ಪ್ರೊಪೈಲ್ ತಯಾರಿಕೆಗೆ ವರದಿ ಸಲ್ಲಿಕೆಗೆ ಕ್ರಮ.

7) ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಸಮಗ್ರ ಕಡತಗಳ ನಿರ್ವಹಣೆ, ಸಮಗ್ರ ಮಾಹಿತಿ ಕ್ರೋಢೀಕರಣ ಅಂಕಿ ಅಂಶಗಳ ಕ್ರೋಢೀಕರಣ.

8) ಚೀಟಿ ನಿಧಿ ಸಂಸ್ಥೆಗಳ ಸಂಬಂಧಪಟ್ಟ ವಾರ್ಷಿಕ ಪರಿವೀಕ್ಷಣಾ ಪಟ್ಟಿ ತಯಾರಿಕೆ ಹಾಗು ಪರಿವೀಕ್ಷಣಾ ವರದಿ ತಯಾರಿಸಿ ಸಹಕಾರ ಸಂಘಗಳ ಉಪನಿಬಂಧಕರು ರವರು ಪರಿವೀಕ್ಷಣೆ ಕೈಗೊಳ್ಳಲು ವರದಿ ತಯಾರಿಸಿ ಸಲ್ಲಿಕೆ.

9) ವ್ಯಾಜ್ಯ ಶಾಖೆಯ ಸಂಬಂಧಪಟ್ಟಂತೆ ಉಪನಿಬಂಧಕರ ಹೆಸರಿನಲ್ಲಿ ತೆರೆಯಲಾದ ವೈಯಕ್ತಿಕ ಠೇವಣಿ (ಪಿಡಿ ಖಾತೆ ಯಾ ಉಳಿತಾಯ ಖಾತೆ) ಲೆಕ್ಕಗಳ ಮೈತ್ರೀಕರಣ (ರಿಕನ್ಸಿಲೇಷನ್) ಮಾಡಿ ತಾಳೆ ಮಾಡಿ ಮೇಲಾಧಿಕಾರಿಗಳಿಗೆ ಕಾಲಕಾಲಕ್ಕೆ ವರದಿ ಸಲ್ಲಿಕೆ.

10) ಕೃಷಿಯೇತರ ಪತ್ತಿನ ಸಂಘಗಳ ಆಡಳಿತ ನಿರ್ವಹಣೆಯ ಮೇಲ್ವಿಚಾರಣೆ, ಪರಿವೀಕ್ಷಣೆ

11) ಸಮಾಪನೆ ಸಹಕಾರ ಸಂಘಗಳ ಬಗ್ಗೆ ಸಮಗ್ರ ಕಡತಗಳ ನಿರ್ವಹಣೆ.

12) ಉಪನಿಬಂಧಕರು, ರವರು ವಹಿಸುವ ಇನ್ನಿತರ ಯಾವುದೇ ಕರ್ತವ್ಯ ನಿರ್ವಹಣೆಗಳು.

ಎಸ್.3 ಶ್ರೀ ಟಿ. ಜಯಶೇಖರ್, ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು

1) ಚೀಟಿ ನಿಧಿ ಸಂಸ್ಥೆಗಳ ಸಂಬಂಧಪಟ್ಟಂತೆ ಸಮಗ್ರ ಕಡತಗಳ ನಿರ್ವಹಣೆ ಹಾಗೂ ಮೇಲ್ವಿಚಾರಣೆ
2) ಚೀಟಿ ನಿಧಿ ವ್ಯಾಜ್ಯದ ಕಡತಗಳ ನಿರ್ವಹಣೆ, ಚೀಟಿ ನಿಧಿಗಳ ಪಿಡಿ ಖಾತೆಯ ನಿರ್ವಹಣೆ ಹಾಗೂ ಲೆಕ್ಕಗಳ ಮೈತ್ರೀಕರಣ (ರಿಕನ್ಸಿಲೇಷನ್)
3) ಕಲಂ 63ರ ಆಡಿಟ್, ಕಲಂ 64ರ ವಿಚಾರಣೆ, ಕಲಂ 65ರ ಪರಿವೀಕ್ಷಣೆಗೆ ಸಂಬಂಧಪಟ್ಟಂತೆ ಕಡತಗಳ ನಿರ್ವಹಣೆ ಹಾಗೂ ಸ್ವೀಕೃತವಾದ ವರದಿಗಳ ಸಂಬಂಧ ಕಲಂ 68ರ ಆದೇಶ ಹೊರಡಿಸಿ, ಅನುಪಾಲನಾ ಕ್ರಮವಿಡುವುದು.
4) ಶಾಖೆಗೆ ಸಂಬಂಧಪಟ್ಟಂತೆ ಅಂಕಿ ಅಂಶಗಳ ಕ್ರೋಡೀಕರಣ, ಮಾಸಿಕ, ತ್ರೈಮಾಸಿಕ ಹಾಗೂ ತೆರಿಗೇತರ ಆದಾಯ ಮಾಹಿತಿ, ಇತ್ಯಾದಿ ನಿಯತ ಕಾಲಿಕೆಗಳ ಸಲ್ಲಿಕೆ.
5) ಸಹಕಾರ ಸಂಘಗಳ ಹಣ ದುರುಪಯೋಗ ಪ್ರಕರಣಗಳ ಬಗ್ಗೆ ಕಡತಗಳ ನಿರ್ವಹಣೆ, ಸಿವಿಲ್ ಮತ್ತು ಕ್ರಿಮಿನಲ್ ಕ್ರಮದ ಬಗ್ಗೆ ಅವಶ್ಯಕ ಕ್ರಮ, ಮಾಹಿತಿ ಸಲ್ಲಿಕೆ.
6) ಉಪನಿಬಂಧಕರು ವಹಿಸುವ ಇನ್ನಿತರ ಕರ್ತವ್ಯ ನಿರ್ವಹಣೆಗಳು.

ಎಸ್.4 ಶ್ರೀ ಸೈಯದ್ ಮುಷ್ತಾಕ್ ಅಹಮದ್, ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು

1) ಸಹಕಾರ ಸಂಘಗಳ ಉಪನಿಬಂಧಕರು ಕೈಗೊಳ್ಳುವ ಪರಿವೀಕ್ಷಣೆಗಳಿಗೆ ವರದಿ ತಯಾರಿಸಿ ಸಲ್ಲಿಸುವುದು.
2) ಗೃಹ ನಿರ್ಮಾಣ ಸಹಕಾರ ಸಂಘಗಳ ಆಡಳಿತ ನಿರ್ವಹಣೆಯ ಮೇಲ್ವಿಚಾರಣೆ.
3) ಸಾರ್ವಜನಿಕ ಮತ್ತು ಸಾಮಾನ್ಯ ದೂರು ಅರ್ಜಿಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆ.
4) ಆಡಿಟ್ ವರದಿಗಳ ಪರಿಶೀಲನೆ ಮತ್ತು ಮೇಲ್ವಿಚಾರಣೆ.
5) ಸಹಕಾರ ಸಂಘಗಳ ಸಾಮಾನ್ಯ ಆಡಳಿತ ನಿರ್ವಹಣೆಯ ಮೇಲ್ವಿಚಾರಣೆ.
6) ಪಟ್ಟಣ ಬ್ಯಾಂಕುಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ.
7) ಶಾಖೆಗೆ ಸಂಬಂಧಪಟ್ಟ ನಿಯತ ಕಾಲಿಕೆಗಳ ಸಲ್ಲಿಕೆ.
8) ಉಪನಿಬಂಧಕರು ವಹಿಸಬಹುದಾದ ಇನ್ನಿತರೆ ಕರ್ತವ್ಯ ನಿರ್ವಹಣೆ.

ಎಸ್.5 ಶ್ರೀಮತಿ ಹೆಚ್.ಎಸ್. ಫರೀದಾ ಬೇಗಂ, ಪ್ರಥಮ ದರ್ಜೆ ಸಹಾಯಕರು

1) ಕಛೇರಿಯ ಅಧಿಕಾರಿ, ಕಛೇರಿಯ ಸಿಬ್ಬಂದಿಗಳ ವೇತನ ಬಿಲ್ಲುಗಳನ್ನು ತಯಾರಿಸಿ, ಕ್ಲುಪ್ತಕಾಲದೊಳಗೆ ಸಂಬಳ ಬಟವಾಡೆಗೆ ಕ್ರಮವಹಿಸುವುದು.
2) ನಗದು ಪುಸ್ತಕ, ನಗದೀಕರಣ ವಹಿ, ಸಾದಿಲ್ವಾರು ವಹಿ, ಬಳಸಲ್ಪಡುವ ಸಾಮಾಗ್ರಿಗಳ ವಹಿ, ರಸೀತಿ ದಾಸ್ತಾನು ವಹಿ, ಚೆಕ್ ವಹಿ, ಕೆಜಿಐಡಿ, ಜಿಪಿಎಫ್, ಹಬ್ಬದ ಮುಂಗಡಗಳು ಇತ್ಯಾದಿ ಸಾಲಗಳ ವಸೂಲಾತಿ ವಹಿ, ಹಣ ಬಟವಾಡೆಯಾದ ವಹಿ., ಇತ್ಯಾದಿ ಲೆಕ್ಕ ಶಾಖೆಯಲ್ಲಿ ನಿರ್ವಹಿಸಬೇಕಾದ ವಹಿಗಳನ್ನು ವ್ಯವಸ್ಥಿತವಾಗಿ ನಿರ್ವಹಣೆ.
3) ಕಛೇರಿಯ ವಾಹನ ಲಾಗ್ ಪುಸ್ತಕ ನಿರ್ವಹಿಸಿ, ಪೆಟ್ರೋಲ್ ಬಿಲ್ ತಯಾರಿಕೆ.
4) ಡಿ.ಸಿ. ಬಿಲ್ಲುಗಳು, ಪ್ರಯಾಣ ಭತ್ಯೆ ಬಿಲ್ಲುಗಳ ತಯಾರಿಕೆ ಹಾಗೂ ಅಧೀನ ಕಛೇರಿಗಳ ಡಿಸಿ ಬಿಲ್, ಪ್ರಯಾಣಭತ್ಯೆ ಬಿಲ್ಲುಗಳ ಮೇಲು ಸಹಿ ಮತ್ತು ಕಡತಗಳು, ಪರಿಶೀಲನಾ ವಹಿಗಳ ನಿರ್ವಹಣೆ.
5) ಕಛೇರಿ ಸಿಬ್ಬಂದಿಗಳ ವೈದ್ಯಕೀಯ ವೆಚ್ಚ ಮರುಪಾವತಿ ಕ್ಲೇಮುಗಳ ಕಡತ ಹಾಗೂ ಅಧೀನ ಕಛೇರಿಗಳಿಂದ ಸಲ್ಲಿಸಲ್ಪಡುವ ಕ್ಲೈಮುಗಳ ಪರಿಶೀಲನೆ ಹಾಗೂ ಮೇಲುಸಹಿಗೆ ಕ್ರಮ.
6) ಕಛೇರಿಯ ಪೀಠೋಪಕರಣಗಳನ್ನು ಹಾಗೂ ಗ್ರಂಥಾಲಯ ನಿರ್ವಹಣೆ ಮತ್ತು ವಹಿಗಳ ನಿರ್ವಹಣೆ
7) ಅನುಪಯುಕ್ತ ಪೀಠೋಪಕರಣಗಳು ವಿಲೇವಾರಿಗೆ ಕ್ರಮ.
8) ಜಿಲ್ಲೆಯ ಯೋಜನೇತರ ಸಿಬ್ಬಂದಿ ವೆಚ್ಚಗಳ ಲೆಕ್ಕಗಳು ಖಜಾನೆ ಷೆಡ್ಯೂಲ್ನೊಂದಿಗೆ ತಾಳೆ ಮಾಡಿ ವರದಿ ಸಲ್ಲಿಕೆ.
9) ಅನ್ಯ ಸೇವೆಯಲ್ಲಿರುವ ಹಾಗೂ ನಿಯಮ 441ರನ್ವಯ ಅಧಿಕಾರಿ ಸಿಬ್ಬಂದಿಗಳ ನಿವೃತ್ತಿ ಅಂಶದಾನ ರಜೆ ಸಂಬಳ ಹಾಗೂ ಸಿಬ್ಬಂದಿ ವೆಚ್ಚಗಳ ಸರ್ಕಾರಕ್ಕೆ ಜಮಾ ಹಾಗೂ ಪರಿಶೀಲನಾ ವಹಿ ನಿರ್ವಹಣೆ.
10) ಕಛೇರಿಯಲ್ಲಿರುವ ಯಂತ್ರೋಪಕರಣಗಳ ನಿರ್ವಹಣೆ ಸಂಬಂಧಪಟ್ಟ ಸಾಮಾಗ್ರಿ ಕಡತಗಳ ನಿರ್ವಹಣೆ.
11) ಸಂಬಳ ಮೂಲಕ ಆದಾಯ ತೆರಿಗೆ ವಸೂಲಾತಿ ಹಾಗೂ ಸಮಗ್ರ ಕಡತಗಳ ನಿರ್ವಹಣೆ ಹಾಗೂ ಆದಾಯತೆರಿಗೆ ವರದಿ ಸಲ್ಲಿಕೆ ಆದಾಯ ತೆರಿಗೆ ಕಛೇರಿಗೆ ಸಲ್ಲಿಕೆಗೆ ಕ್ರಮ.
12) ಶಾಖೆಗೆ ಸಂಬಂಧಪಟ್ಟಂತೆ ನಿಯತ ಕಾಲಿಕೆಗಳ ಸಲ್ಲಿಕೆ.
13) ಕಛೇರಿಯ ಮುಖ್ಯಸ್ಥರು ವಹಿಸುವ ಇನ್ನಿತರೆ ಕರ್ತವ್ಯಗಳು, ಜವಾಬ್ದಾರಿಗಳು.

ಎಸ್.6 ಶ್ರೀಮತಿ ಆರ್. ದಿವ್ಯಾ, ಸಹಕಾರ ಸಂಘಗಳ ನಿರೀಕ್ಷಕರು

1) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕ್, ಬಳಕೆದಾರರ ಸಹಕಾರ ಸಂಘಗಳು, ಇತ್ಯಾದಿ ಸಹಕಾರ ಸಂಘಗಳ ವ್ಯಾಪಾರ ಅಭಿವೃದ್ಧಿ ಯೋಜನೆ ಒಳಗೊಂಡಂತೆ ಪತ್ರ ವ್ಯವಹಾರ.

2) ಕೃಷಿ ಸಾಲ ವಿತರಣೆ, ವಸೂಲಾತಿ, ಡಿಸಿಬಿ ಸಂಬಂಧ ಡಿಸಿಸಿ, ಪಿಕಾರ್ಡ್, ಕ್ಯಾಸ್ಕಾರ್ಡ್ ಬ್ಯಾಂಕ್‌ಗಳೊಂದಿಗೆ ಪತ್ರ ವ್ಯವಹಾರ, ಅಂಕಿ-ಅಂಶಗಳ ಸಂಗ್ರಹಣೆ, ನಿಯತಕಾಲಿಕ ವರದಿಗಳ ಸಲ್ಲಿಕೆ.

3) ಕೆ.ಸಿ.ಸಿ. ಮತ್ತು ಸ್ವಸಹಾಯ ಸಂಘಗಳು, ವಿಫಲಬಾವಿ, ಸಾಲ ಮನ್ನಾ ಯೋಜನೆ, ಬಿ.ಡಿ.ಪಿ. ಪ್ರಗತಿಗೆ ಕಡತ ನಿರ್ವಹಣೆ ಹಾಗೂ ಅಂಕಿ-ಅಂಶಗಳ ಸಂಗ್ರಹಣೆ, ನಿರ್ವಹಣೆ.

4) ಕೆ.ಪಿ.ಎಂ.ಆರ್. ಕ್ಯಾಕಂಪ್ ಆಕ್ಟ್, ಮಾಹಿತಿ ಸಲ್ಲಿಕೆ, ಕಡತ ನಿರ್ವಹಣೆ.

5) ವಾರ್ಷಿಕ ಮುಂಗಡ ಅಂಕಿ-ಅಂಶಗಳು, ಹಾಗೂ ವಾರ್ಷಿಕ ಅಂಕಿ ಅಂಶಗಳ ಸಲ್ಲಿಕೆಗೆ ಕ್ರಮ, ಕಡತ ನಿರ್ವಹಣೆ.

6) ಪಟ್ಟಣ ಬ್ಯಾಂಕ್‌ಗಳ ಸಂಬಂಧಪಟ್ಟಂತೆ ಸಮಗ್ರ ಕಡತ ನಿರ್ವಹಣೆ.

7) ಪತ್ತು ಮತ್ತು ಪತ್ತೇತರ ವ್ಯವಹಾರಗಳ ಕಡತಗಳು ನಿರ್ವಹಣೆ ಹಾಗೂ ಮಾಹಿತಿ ಸಂಗ್ರಹಣೆ.

8) ಶಾಖೆಗೆ ಸಂಬಂಧಪಟ್ಟಂತೆ, ನಿಯತ ಕಾಲಿಕ ಕಡತಗಳ ಸಲ್ಲಿಕೆ.

9) ಕಛೇರಿಯ ಮುಖ್ಯಸ್ಥರು ವಹಿಸುವ ಇನ್ನಿತರೇ ಕೆಲಸಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

ಎಸ್.7 ಶ್ರೀ ಮಹೇಶ್, ಪ್ರಥಮ ದರ್ಜೆ ಸಹಾಯಕರು

1) ಸಹಕಾರ ಅಭಿವೃದ್ಧಿ ಅಧಿಕಾರಿ ರವರ ಸಹಾಯಕರಾಗಿ ಕಾರ್ಯನಿರ್ವಹಣೆ (ತರಬೇತಿ ಉದ್ದೇಶದಿಂದ)

2) ಸಹಕಾರ ಸಂಘಗಳ ಉಪನಿಬಂಧಕರು ರವರ ಹೆಸರಿನಲ್ಲಿ ಡಿ.ಸಿ.ಸಿ. ಬ್ಯಾಂಕಿನಲ್ಲಿ ನಿರ್ವಹಿಸುವ ಪಿ.ಡಿ. ಖಾತೆಗಳನ್ನು ಕಛೇರಿ ನಗದು ಪುಸ್ತಕಕ್ಕೆ ತಾಳೆ ನೋಡಿ "ಮೈತ್ರೀಕರಣ"ಗೊಳಿಸುವುದು. (ರಿಕನ್ಸಿ ಲೇಷನ್) ಮಾರ್ಗದರ್ಶನದಲ್ಲಿ.

3) ಕಲಂ 70ರ ಪಂಚನಿರ್ಣಯ ಪ್ರಕರಣಗಳ ಕಡತ ನಿರ್ವಹಣೆ, ಗೌರವ ಮಧ್ಯಸ್ಥದಾರರು, ಇಲಾಖಾ ಮಧ್ಯಸ್ಥದಾರರಿಗೆ ವ್ಯಾಜ್ಯ ಪ್ರಕರಣಗಳನ್ನು ವಹಿಸುವಿಕೆ, ನಗದು ಪುಸ್ತಕ ವ್ಯಾಜ್ಯಶಾಖೆಗೆ ಸಂಬಂಧಪಟ್ಟಂತೆ ನಿರ್ವಹಣೆ.

4) ತೆರಿಗೇತರ ಆದಾಯದ ಮಾಹಿತಿಗೆ ಅಗತ್ಯ ಮಾಹಿತಿ ಒದಗಿಸುವುದು ಶಾಖೆಗೆ ಸಂಬಂಧಪಟ್ಟಂತೆ,

5) ಕಛೇರಿಯ ಎಲ್ಲಾ ಶಾಖೆಗಳಿಂದ ಎಂ.ಎಂ.ಆರ್ ಮಾಹಿತಿಯನ್ನು ಉಪನಿಬಂಧಕರ ಸಹಿಯ ನಂತರ ಸಂಗ್ರಹಿಸಿ ಬುಕ್ ಲೆಟ್ ಅಣಿಗೊಳಿಸಿ, ಸಕ್ಷಮ ಪ್ರಾಧಿಕಾರಿ ಕಛೇರಿಗೆ ಸಲ್ಲಿಕೆ ಕ್ರಮ.

6) ಪ್ರಾಂತ ಮಟ್ಟದ ಸಭೆ, ರಾಜ್ಯ ಮಟ್ಟದ ಸಭೆ ಹಾಗೂ ಇತರೆ ಸಭೆಗಳಿಗೆ ಮಾಹಿತಿಯನ್ನು ಸಂಗ್ರಹಿಸಿ ಬುಕ್‌ಲೆಟ್ ತಯಾರಿಸಿ ಕ್ರಮ.

7) ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳ ದಿನಚರಿ ಕಾರ್ಯನಿರ್ವಹಣಾ ವರದಿಗಳ ಪುನರ್ ವಿಲೋಕ ಮತ್ತು ತಾಲ್ಲೂಕು ಪ್ರವಾಸ ಕಾರ್ಯಕ್ರಮಗಳ ಅನುಮೋದನೆ, ಕಡತ ನಿರ್ವಹಣೆ.

8) ಕಛೇರಿಯ ಮುಖ್ಯಸ್ಥರು ವಹಿಸುವ ಇನ್ನಿತರೇ ಕೆಲಸಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

ಎಸ್-8 ಶ್ರೀ ಸಿ.ಎಸ್. ರಮಾನಂದ, (ನಿಯೋಜನೆ) ನಿರೀಕ್ಷಕರ ಖಾಲಿ ಹುದ್ದೆ) ಸಹಕಾರ ಸಂಘಗಳ ನಿರೀಕ್ಷಕರು.

1) ಯೋಜನೆಗಳ ಅನುಷ್ಠಾನ, ವಿವಿಧ ಯೋಜನೆಗಳ ಪ್ರಸ್ತಾವವನ್ನು ಸಕ್ಷಮ ಪ್ರಾಧಿಕಾರಗಳಿಗೆ ಸಲ್ಲಿಕೆ, ವಿವಿಧ ಯೋಜನೆಯಡಿ ಮಂಜೂರಾದ ಆರ್ಥಿಕ ನೆರವು ಸೌಲಭ್ಯಗಳ ಬಿಡುಗಡೆ.

2) ರಾಜ್ಯ ಅನುದಾನ ಖಾತೆ ನಿರ್ವಹಣೆ.

3) ಸರ್ಕಾರದಿಂದ ಮಂಜೂರಾದ ಸಾಲ, ಷೇರು, ಸಹಾಯಧನದ ಸಂಬಂಧಪಟ್ಟ ಕಡತಗಳ ನಿರ್ವಹಣೆ ವಸೂಲಾತಿಯ ವಹಿಗಳ ನಿರ್ವಹಣೆ, ಯೋಜನೆಗಳ ಬಿಡುಗಡೆ ವಹಿ ನಿರ್ವಹಣೆ.

4) ದಾಸ್ತಾನು ಮಳಿಗೆ, ಸಹಕಾರ ಸಂಘಗಳ ಕಟ್ಟಡ ನಿರ್ಮಾಣಕ್ಕಾಗಿ ಆಡಳಿತಾತ್ಮಕ ಅನುಮೋದನೆ ಸಂಬಂಧಪಟ್ಟ ಕಡತಗಳ ನಿರ್ವಹಣೆ.

5) ಸರ್ಕಾರವು ವಿನಿಯೋಗಿಸಿರುವ ಷೇರು ಬಂಡವಾಳದ ಮೇಲೆ ಕಡ್ಡಾಯವಾಗಿ ಹಾಗೂ ಘೋಷಿಸಲ್ಪಟ್ಟ ಡಿವಿಡೆಂಡ್ ವಸೂಲಾತಿ ಹಾಗೂ ಸರ್ಕಾರಕ್ಕೆ ಜಮಾ ಮಾಡುವ ಕುರಿತು ಕ್ರಮ.

6) ತೆರಿಗೇತರ ಆದಾಯದ ಮಾಹಿತಿಗೆ ಸಲ್ಲಿಸುವಿಕೆಗೆ ಮಾಹಿತಿ ಸಲ್ಲಿಕೆ.

7) ಬರಪರಿಹಾರ, ಪ್ರಕೃತಿ ವಿಕೋಪ ಪರಿಹಾರ, ಇತ್ಯಾದಿ ವಿಶಿಷ್ಟ ಕಡತಗಳ ನಿರ್ವಹಣೆ.

8) ಯಶಸ್ವಿನಿ ಯೋಜನೆಗೆ ಸಂಬಂಧಪಟ್ಟಂತೆ ಸಮಗ್ರ ಕಡತ ನಿರ್ವಹಣೆ ಹಾಗೂ ಕ್ರಮ.

9) ಕಛೇರಿಯ ಮುಖ್ಯಸ್ಥರು ವಹಿಸುವ ಇನ್ನಿತರೇ ಕೆಲಸಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

ಎಸ್.-09 ಶ್ರೀ ಕೆ. ಚಂದ್ರಶೇಖರ್, ದ್ವಿತೀಯ ದರ್ಜೆ ಸಹಾಯಕರು

1) ಕಛೇರಿಯ ಸಾಮಾನ್ಯ ಸ್ವೀಕೃತಿ ಹಾಗೂ ರವಾನೆ ಕೆಲಸಗಳ ನಿರ್ವಹಣೆ.

2) ವಾರ್ಷಿಕ ಮಹಾಸಭೆ ಆಡಳಿತ ಮಂಡಳಿಗಳ ಚುನಾವಣೆ ಕಡತಗಳು ಹಾಗೂ ಪರಿಶೀಲನಾ ವಹಿಗಳ ನಿರ್ವಹಣೆ.
3) ಎಂ.ಎಂ.ಆರ್ ಮಾಹಿತಿ, ರಾಜ್ಯಮಟ್ಟದ ಸಭೆಗಳು, ಪ್ರಾಂತ ಮಟ್ಟದ ಸಭೆಗಳ ಮಾಹಿತಿಗಳ ತಃಖ್ತೆಗಳನ್ನು ಕಛೇರಿಯ ವಿಷಯ ನಿರ್ವಾಹಕರಿಂದ ಸಂಗ್ರಹಿಸಿ ಬುಕ್ ಲೆಟ್ ಮಾಡಿ ಸಲ್ಲಿಸಲು ಕ್ರಮ.
4) ಚೀಟಿ ಸಂಸ್ಥೆಗಳ ಪರಿವೀಕ್ಷಣೆಯ ಸಹಾಯಕರಾಗಿ ಕೆಲಸ ನಿರ್ವಹಿಸುವುದು.
5) ಸಹಕಾರ ಸಂಘಗಳ ನೋಂದಣಿ ಉಪನಿಯಮಗಳ ತಿದ್ದುಪಡಿ, ಸೇವಾ ನಿಯಮ ಇತ್ಯಾದಿ ವಿಷಯಗಳ ಸಹಾಯಕರಾಗಿ ಕೆಲಸ ನಿರ್ವಹಣೆ.
6) ವಾರ್ಷಿಕ ಮಹಾಸಭೆಗಳು, ಚುನಾವಣಾ ಕಡತಗಳ ನಿರ್ವಹಣೆ.
7) ಶಾಖೆಯಿಂದ ಸಲ್ಲಿಸಲ್ಪಡುವ ನಿಯತಕಾಲಿಕಗಳ ಸಲ್ಲಿಕೆ.
8) ಕಛೇರಿಯ ಮುಖ್ಯಸ್ಥರು ವಹಿಸುವ ಇನ್ನಿತರೇ ಕೆಲಸಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

ಎಸ್.10 ಶ್ರೀಮತಿ ಎಸ್.ಎ. ಶೈಲಜ, ಹಿರಿಯ ಬೆರಳಚ್ಚುಗಾರರು

1) ಕಛೇರಿಯ ಪತ್ರ ವ್ಯವಹಾರಗಳು, ಅಂಕಿ-ಅಂಶಗಳು ಹಾಗೂ ಮಾಹಿತಿ ತಃಖ್ತೆಗಳನ್ನು ಕಂಪ್ಯೂಟರ್‌ನಲ್ಲಿ ಹಾಗೂ ಬೆರಳಚ್ಚು ಮಾಡುವುದು.
2) ಕಛೇರಿಗೆ ಮಿಂಚಂಚೆ (ಇ-ಮೇಲ್) ಮೂಲಕ ಪ್ರತಿಗಳನ್ನು ಸ್ವೀಕರಿಸಿ ಸ್ವೀಕೃತವಾದ ಇ-ಮೇಲ್ ಸ್ವೀಕೃತಿ ವಹಿಯಲ್ಲಿ ದಾಖಲಿಸಿ ಕಛೇರಿಯ ಮುಖ್ಯಸ್ಥರ ಗಮನಕ್ಕೆ ಸಲ್ಲಿಸುವುದು.
3) ಕಛೇರಿಯಿಂದ ಇಲಾಖಾ ಕೇಂದ್ರ ಕಛೇರಿಗೆ ಹಾಗೂ ಸಂಯುಕ್ತ ನಿಬಂಧಕರ ಕಛೇರಿಗಳಿಗೆ ಇ-ಮೇಲ್ ಮುಖಾಂತರ ಮಾಹಿತಿಯನ್ನು ಕಳುಹಿಸುವುದು ಹಾಗೂ ಕಳುಹಿಸಲ್ಪಟ್ಟ ಮಾಹಿತಿಯನ್ನು ಮುದ್ರಿತ ಪ್ರತಿಯೊಂದಿಗೆ, ಅವಶ್ಯಕ ಸೂಚನೆಗಳಿದ್ದಲ್ಲಿ ಸಿಡಿ ಪ್ರತಿಯನ್ನು ಅಣಿಗೊಳಿಸುವುದು.
4) ಸಹಕಾರ ಸಂಘಗಳ ಉಪನಿಬಂಧಕರವರ ತಾತ್ಕಾಲಿಕ ಪ್ರವಾಸ ಕಾರ್ಯಕ್ರಮ ಹಾಗೂ ದಿನಚರಿ ಕಡತಗಳನ್ನು ನಿರ್ವಹಿಸುವುದು.
5) ಕಛೇರಿಯ ಲೇಖನ ಸಾಮಾಗ್ರಿಗಳ ಕಡತ ಹಾಗೂ ದಾಸ್ತಾನು ವಹಿ, ವಿತರಣೆ ವಹಿಗಳನ್ನು ನಿರ್ವಹಿಸುವುದು ಸಂಬಂಧಪಟ್ಟ ಪತ್ರ ವ್ಯವಹಾರ.
6) ಕಛೇರಿಯ ಫ್ಯಾಕ್ಸ್ ಯಂತ್ರ ನಿರ್ವಹಣೆ ಹಾಗೂ ಜೆರಾಕ್ಸ್ ಯಂತ್ರದ ಮೂಲಕ ಗಣಕ ಯಂತ್ರದಲ್ಲಿ ನಮೂದಿಸಿದ ಮಾಹಿತಿ, ಪತ್ರ ವ್ಯವಹಾರಗಳನ್ನು ಮುದ್ರಿಸುವುದು ಹಾಗೂ ಕಛೇರಿಯಲ್ಲಿರುವ ಫ್ಯಾಕ್ಸ್ ಲೇಸರ್ ಪ್ರಿಂಟರ್‌ಗಳು, ಗಣಕಯಂತ್ರಗಳು, ಹಾಗೂ ಬೆರಳಚ್ಚು ಯಂತ್ರಗಳನ್ನು ಸುಸ್ಥಿತಿಯಲ್ಲಿ ನಿರ್ವಹಿಸುವುದು ಹಾಗೂ ಪ್ರತಿ ಯಂತ್ರದ ಸಂಬಂಧ ವಹಿಯನ್ನು ನಿರ್ವಹಿಸಿ ಪ್ರತಿ ಮಾಹೆ ಸುಸ್ಥಿತಿಯಲ್ಲಿರುವ ಬಗ್ಗೆ ಕಛೇರಿಯ ಮುಖ್ಯಸ್ಥರ ಗಮನಕ್ಕೆ ತಂದು ದೃಢೀಕರಿಸುವುದು.
7) ಉಪನಿಬಂಧಕರ ಆಪ್ತ ಶಾಖೆಯ ಹೆಚ್ಚುವರಿ ಕೆಲಸಗಳ ನಿರ್ವಹಣೆ.
8) ನ್ಯಾಯಾಲಯದಲ್ಲಿ ಕಾರ್ಯಕಲಾಪಗಳ ನಡವಳಿಗಳನ್ನು, ಸಭೆಗಳ ನಡವಳಿಗಳನ್ನು ದಾಖಲಿಸುವುದು.
9) ಉಪನಿಬಂಧಕರು ನೀಡುವ ಉಕ್ತಲೇಖನವನ್ನು ಪಡೆದು ಶುದ್ಧಪ್ರತಿಗಳನ್ನು ತಯಾರಿಸುವುದು.
10) ಶುದ್ಧಪ್ರತಿ ವಹಿ (ಫೇರ್ ಕಾಪಿಯಿಂಗ್ ರಿಜಿಸ್ಟರ್) ನಿರ್ವಹಣೆ.
11) ಕಛೇರಿಯ ಮುಖ್ಯಸ್ಥರು ವಹಿಸುವ ಇತರೆ ಕರ್ತವ್ಯಗಳು ಹಾಗೂ ಜವಾಬ್ದಾರಿಗಳು.

ಶ್ರೀಮತಿ ಮುನಿಯಮ್ಮ "ಡಿ" ದರ್ಜೆ ನೌಕರರು (ನಿಯೋಜನೆ)

1) ಪ್ರತಿನಿತ್ಯ ಬೆಳಗ್ಗೆ 9-30ರ ಒಳಗೆ ಕಛೇರಿಗೆ ಹಾಜರಾಗಿ ಕಛೇರಿಯ ಆವರಣವನ್ನು ಶುದ್ಧವಾಗಿರಿಸುವುದು.
2) ಕಛೇರಿಯ ಪತ್ರ ವ್ಯವಹಾರದ ಸ್ಥಳೀಯ ಬಟವಾಡೆ ಕೆಲಸ ನಿರ್ವಹಣೆ.
3) ದಿನನಿತ್ಯದ ನಿಗದಿತ ಸಮವಸ್ತ್ರ ಧರಿಸಿ ಕಛೇರಿಯನ್ನು ಸ್ವಚ್ಛವಾಗಿರಿಸಿ ಸ್ವಚ್ಛ ವಾತಾವರಣವಿರುವಂತೆ ಕಾರ್ಯ ನಿರ್ವಹಿಸುವುದು.
4) ಕಛೇರಿಯ ಮುಖ್ಯಸ್ಥರು ವಹಿಸುವ ಇನ್ನಿತರೇ ಕೆಲಸಗಳು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

ಡಿ. ಪಾಂಡುರಂಗಪ್ಪ

ಸಹಕಾರ ಸಂಘಗಳ ಉಪನಿಬಂಧಕರು-01,

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಅನುಬಂಧ-2ಎ

ಕ್ರ. ಸಂ.	ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ನೌಕರರ ಹೆಸರು ಮತ್ತು ಪದನಾಮ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ವೃಂದಕ್ಕೆ ನೇಮಕವಾದ ದಿನಾಂಕ	ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ದಿನಾಂಕ	ಕಲಂ 6ರ ಹುದ್ದೆಯಿಂದ ಬಿಡುಗಡೆಯಾದ ದಿನಾಂಕ	ಹಾಲಿ ಕೇಂದ್ರಸ್ಥಾನದಲ್ಲಿ ಯಾವ ದಿನಾಂಕದಿಂದ ಇದ್ದಾರೆ.
1	2	3	4	5	6	7	8
1.	ಡಿ. ಪಾಂಡುರಂಗಪ್ಪ ಸಹಕಾರ ಸಂಘಗಳ ಉಪನಿಬಂಧಕರು	05.06.1961 ಚಿತ್ರದುರ್ಗ	10.03.1997	31.03.2005	ಸಹಕಾರ ಸಂಘಗಳ ಉಪನಿಬಂಧಕರು-1, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು, ದಿನಾಂಕ:12.06.2009	-	12.06.2009
2.	ಆರ್. ವೇಣುಗೋಪಾಲ್ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ನಿ.441	15.10.1952 ತುಮಕೂರು	08.12.1976	06.03.2008	ಕಾರ್ಯದರ್ಶಿ, ದಿ ಕರ್ನಾಟಕ ವೃತ್ತ ಅಂಚೆ ಪತ್ತಿನ ಸಹಕಾರ ಸಂಘ ನಿ., ಬೆಂಗಳೂರು ದಿನಾಂಕ:01.10.2009	-	01.10.2009
3.	ಸಿದ್ದಗಂಗಪ್ಪ, ಸಹಕಾರ ಅಭಿವೃದ್ಧಿ ಅಧಿಕಾರಿ	01.06.1958 ತುಮಕೂರು	11.01.1989	17.06.2010	ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, ಬೆಂಗಳೂರು-01 ರವರ ಕಛೇರಿ, ದಿನಾಂಕ:17.06.2010	-	01.01.1989
4.	ಹೆಚ್.ಎಸ್. ಸೋಮಶೇಖರ್, ಸಹಕಾರ ಅಭಿವೃದ್ಧಿ ಅಧಿಕಾರಿ ಬೆಂಗಳೂರು ಉತ್ತರ ತಾಲ್ಲೂಕು	03.04.1953 ಹಾಸನ	21.09.1977	02.06.2008	ಸಹಕಾರ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು, ದಿ:02.06.2008	-	05.07.1990
5.	ಕೆ. ಗೋವಿಂದಸ್ವಾಮಿ, ಅಧೀಕ್ಷಕರು	12.07.1958 ಮೈಸೂರು	23.03.1984	12.03.2010	ಅಧೀಕ್ಷಕರು 12.03.2010	-	12.03.2010
6.	ಟಿ. ಜಯಶೇಖರ್ ಸ.ಸಂ. ಹಿರಿಯ ನಿರೀಕ್ಷಕರು	10.07.1965 ಚಿತ್ರದುರ್ಗ	21.10.1988	27.12.2008	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ಉಪನಿಬಂಧಕರು-1 ರವರ ಕಛೇರಿ ದಿ:27.11.2009	-	09.07.2003
7.	ಸೈಯದ್‌ಮುಷ್ತಾಕ್ ಅಹಮದ್, ಸ.ಸಂ.ಹಿರಿಯ ನಿರೀಕ್ಷಕರು	01.01.1959 ತುಮಕೂರು	27.01.1986	03.12.2009	ಸಹಕಾರ ಸಂಘಗಳ ಹಿರಿಯನಿರೀಕ್ಷಕರು, ಉಪನಿಬಂಧಕರು-1 ರವರ ಕಛೇರಿ ದಿ:03.12.2009	-	09.12.2003
8.	ಹೆಚ್.ಎಸ್. ಫರೀದಾ ಬೇಗಂ, ಪ್ರ.ದ.ಸ.	16.06.1953 ಬೆಂಗಳೂರು	19.05.1983	30.03.2007	ಪ್ರ.ದ.ಸಹಾಯಕರು ಉಪನಿಬಂಧಕರು-1 ರವರ ಕಛೇರಿ, ದಿ:02.05.1992	-	19.05.1983

ಕ್ರ ಸಂ.	ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ನೌಕರರ ಹೆಸರು ಮತ್ತು ಪದನಾಮ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ವೃಂದಕ್ಕೆ ನೇಮಕವಾದ ದಿನಾಂಕ	ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ದಿನಾಂಕ	ಕಲಂ 6ರ ಹುದ್ದೆಯಿಂದ ಬಿಡುಗಡೆಯಾದ ದಿನಾಂಕ	ಹಾಲಿ ಕೇಂದ್ರಸ್ಥಾನದಲ್ಲಿ ಯಾವ ದಿನಾಂಕದಿಂದ ಇದ್ದಾರೆ.
1	2	3	4	5	6	7	8
9.	ಕೆ. ಮಹೇಶ್, ಪ್ರ.ದ.ಸ.	08.06.1982 ಚಿತ್ರದುರ್ಗ	14.10.2009	23.10.2009	ಪ್ರ.ದ. ಸಹಾಯಕರು ಉಪನಿಬಂಧಕರು-1ರವರ ಕಛೇರಿ, ದಿ:23.10.2009	–	23.10.2009
10.	ಆರ್. ದಿವ್ಯ ಸ.ಸಂ.ನಿರೀಕ್ಷಕರು	11.03.1978 ಬೆಂಗಳೂರು	03.05.2008	03.05.2008	ಸ.ಸಂ. ನಿರೀಕ್ಷಕರು ಉಪನಿಬಂಧಕರು-1 ರವರ ಕಛೇರಿ, ದಿ:03.05.2008	–	03.05.2008
11.	ಎಸ್.ಎ. ಶೈಲಜ, ಹಿರಿಯ ಬೆರಳಚ್ಚುಗಾರರು	03.05.1954 ಶಿವಮೊಗ್ಗ	25.07.1985	19.09.2005	ಹಿರಿಯ ಬೆರಳಚ್ಚುಗಾರರು, ಉಪನಿಬಂಧಕರು-1 ರವರ ಕಛೇರಿ, ಬೆಂಗಳೂರು ದಿ:03.09.2009	–	23.06.2003
12.	ಕೆ. ಚಂದ್ರಶೇಖರ್, ದ್ವಿ.ದ.ಸ.	16.02.1973 ಮಂಡ್ಯ	04.10.1997	12.11.2002	ದ್ವಿದಸ. ಉಪನಿಬಂಧಕರು-1 ರವರ ಕಛೇರಿ, ಬೆಂಗಳೂರು ದಿ:12.11.2007	–	04.10.1997
13.	ಎ. ಮುನಿಯಪ್ಪ, ಡ್ರೈವರ್	25.08.1957, ಬೆಂಗಳೂರು	01.11.1984	27.05.1993	ಡ್ರೈವರ್, ಉಪನಿಬಂಧಕರು-1 ರವರ ಕಛೇರಿ ಬೆಂಗಳೂರು ದಿ:05.07.1994	–	05.07.1994

ಸಹಕಾರ ಸಂಘಗಳ ಉಪನಿಬಂಧಕರು-01,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಅನುಬಂಧ-2ಬಿ

ಕ್ರ ಸಂ.	ಅಧಿಕಾರಿ/ ನೌಕರರ ಹೆಸರು ಮತ್ತು ಹುದ್ದೆ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ವೃಂದಕ್ಕೆ ನೇಮಕವಾದ ದಿನಾಂಕ	ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ	ಕಲಂ 6ರ ಹುದ್ದೆಯಿಂದ ಬಿಡುಗಡೆಯಾದ ದಿನಾಂಕ	ಹಾಲಿ ಕೇಂದ್ರ ಸ್ಥಳದಲ್ಲಿ ಯಾವ ದಿನಾಂಕದಿಂದ
1	2	3	4	5	6	7	8
1.	ಎಂ.ಚನ್ನಭೈರಯ್ಯ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು	ದಿ:21.05.1953 ರಾಮನಗರ	16.10.1974	–	ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು	–	14.06.2010
2.	ದೊಡ್ಡತಮ್ಮೇಗೌಡ, ಸಹಕಾರ ಅಭಿವೃದ್ಧಿ ಅಧಿಕಾರಿ	06.07.1956 ಹಾಸನ	17.02.1992	04.07.2002	ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು	–	14.02.2007
3.	ರಂಗಧಾಮಯ್ಯ, ಸಹಕಾರ ಅಭಿವೃದ್ಧಿ ಅಧಿಕಾರಿ	17.05.1954 ಬೆಂಗಳೂರು	24.06.1985	07.06.2010	ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್, ಬೆಂಗಳೂರು	–	09.06.2010

ಕ್ರ. ಸಂ.	ಅಧಿಕಾರಿ/ ನೌಕರರ ಹೆಸರು ಮತ್ತು ಹುದ್ದೆ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ವೃಂದಕ್ಕೆ ನೇಮಕವಾದ ದಿನಾಂಕ	ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ	ಕಲಂ 6ರ ಹುದ್ದೆಯಿಂದ ಬಿಡುಗಡೆಯಾದ ದಿನಾಂಕ	ಹಾಲಿ ಕೇಂದ್ರ ಸ್ಥಳದಲ್ಲಿ ಯಾವ ದಿನಾಂಕದಿಂದ
1	2	3	4	5	6	7	8
4.	ಬಸಮ್ಮ ಹೆಚ್.ದೊಡ್ಡಗೌಡ್ರ, ಅಧೀಕ್ಷಕರು	01.06.1981 ಹಾವೇರಿ	05.10.2004	24.11.2009	ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು	–	03.12.2009
5.	ಎಸ್.ರಮಾನಂದ ಸಹಕಾರ ಸಂಘಗಳ ನಿರೀಕ್ಷಕರು	23.01.1953 ಬೆಂಗಳೂರು	12.05.1983	23.02.2006	ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು	–	21.01.2005
6.	ಸುಂದರರಾಜು ಜಿ.ಟಿ. ಸಹಕಾರ ಸಂಘಗಳ ನಿರೀಕ್ಷಕರು	05.07.1973 ರಾಮನಗರ	30.11.2009	30.11.2009	ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು	–	30.11.2009
7.	ಗುರುಪ್ರಸಾದ್ ಸಹಕಾರ ಸಂಘಗಳ ನಿರೀಕ್ಷಕರು	27.10.1982 ಬೆಂಗಳೂರು	30.11.2009	30.11.2009	ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು	–	30.11.2009
8.	ಟಿ.ಡಿ. ಉಮೇಶ್ ದ್ವಿ.ದ.ಸ.	14.04.1961 ಬೆಂಗಳೂರು	12.07.1985	17.01.1997	ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು	–	04.07.1991
9.	ರಾಧಾಮಣಿ ಎನ್. ದ್ವಿ.ದ.ಸ.	05.04.1964 ಕೋಲಾರ	04.08.2006	04.08.2006	ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು	–	04.08.2006
10.	ಸುಮಂಗಲ ಶಿದ್ರಾಮಶೆಟ್ಟಿ, ಬೆರಳಚ್ಚುಗಾರರು	20.06.1968 ಹುಬ್ಬಳ್ಳಿ	22.11.2003	22.11.2003	ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು		01.07.2010
11.	ಪಿ.ಲೋಕೇಶ್, ಜಾರಿಗಾರರು	28.03.1976 ಬೆಂಗಳೂರು	13.03.1997	13.03.1997	ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು	–	13.03.1997

ಕ್ರ ಸಂ.	ಅಧಿಕಾರಿ/ ನೌಕರರ ಹೆಸರು ಮತ್ತು ಹುದ್ದೆ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ವೃಂದಕ್ಕೆ ನೇಮಕವಾದ ದಿನಾಂಕ	ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ	ಕಲಂ 6ರ ಹುದ್ದೆಯಿಂದ ಬಿಡುಗಡೆಯಾದ ದಿನಾಂಕ	ಹಾಲಿ ಕೇಂದ್ರ ಸ್ಥಳದಲ್ಲಿ ಯಾವ ದಿನಾಂಕದಿಂದ
1	2	3	4	5	6	7	8
12.	ಮಹಾದೇವಯ್ಯ ಡಿ. ಗ್ರೂಪ್	08.03.1966 ಮಂಡ್ಯ	07.07.1997	07.07.1997	ಸಹಕಾರ ಸಂಘಗಳ ಸಹಾಯಕ ನಿಬಂಧಕರು, 1ನೇ ವಲಯ, ಬೆಂಗಳೂರು	–	08.10.2001

ಸಹಕಾರ ಸಂಘಗಳ ಉಪನಿಬಂಧಕರು-01,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಅನುಬಂಧ-2ಸಿ

ಕ್ರ ಸಂ.	ಅಧಿಕಾರಿ/ ನೌಕರರ ಹೆಸರು ಮತ್ತು ಹುದ್ದೆ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ವೃಂದಕ್ಕೆ ನೇಮಕವಾದ ದಿನಾಂಕ	ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹುದ್ದೆ	ಕಲಂ 6ರ ಹುದ್ದೆಯಿಂದ ಬಿಡುಗಡೆಯಾದ ದಿನಾಂಕ	ಹಾಲಿ ಕೇಂದ್ರ ಸ್ಥಳದಲ್ಲಿ ಯಾವ ದಿನಾಂಕದಿಂದ
1	2	3	4	5	6	7	8
1.	ಎನ್. ವೆಂಕಟೇಶ್, ಲೇವಾದೇವಿಗಾರರ ಸಹಾಯಕ ನಿಬಂಧಕರು	16.05.1967 ಕೋಲಾರ	02.02.1999	24.02.2006	ಲೇವಾದೇವಿಗಾರರ ಸಹಾಯಕ ನಿಬಂಧಕರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು	–	15.06.2009
2.	ಹೆಚ್.ಪಿ. ಸದಾಶಿವ, ಹಿರಿಯ ನಿರೀಕ್ಷಕರು	16.03.1967 ಮಂಡ್ಯ	16.06.1986	26.11.2009	ಹಿರಿಯ ನಿರೀಕ್ಷಕರು	–	23.06.2003
3.	ಕೆ. ಹೇಮಚಂದ್ರ, ದ್ವಿ.ದ.ಸ.	15.06.1962 ಮಂಡ್ಯ	13.03.1986	06.10.2005	ದ್ವಿತೀಯ ದರ್ಜೆ ಸಹಾಯಕರು	–	12.08.2003
4.	ಎ.ಎನ್. ಸುವರ್ಣಾದೇವಿ, ಬೆರಳಚ್ಚುಗಾರರು	06.04.1974 ತುಮಕೂರು	22.11.2003	22.11.2003	ಬೆರಳಚ್ಚುಗಾರರು	–	22.11.2003

ಸಹಕಾರ ಸಂಘಗಳ ಉಪನಿಬಂಧಕರು-01,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಅನುಬಂಧ-3

ದಿನಾಂಕ:31.07.2010ಕ್ಕೆ ಅಧಿಕಾರಿ/ ಸಿಬ್ಬಂದಿಗಳ ವೇತನ ಭತ್ಯೆಗಳ ವಿವರಗಳು

ಕ್ರ ಸಂ.	ಅಧಿಕಾರಿ ನೌಕರರ ಹೆಸರು	ಪದನಾಮ	ಗ್ರೂಪ್	ಲಿಂಗ	ವೇತನ ಶ್ರೇಣಿ	ವೇತನ	ಒಟ್ಟು ಸಂಬಳ
1	2	3	4	5	6	7	8
1.	ಡಿ. ಪಾಂಡುರಂಗಪ್ಪ	ಸಹಕಾರ ಸಂಘಗಳ ಉಪನಿಬಂಧಕರು-1	ಎ	ಪುರುಷ	18150-26925	20025-00	33542-00

ಕ್ರ ಸಂ.	ಅಧಿಕಾರಿ ನೌಕರರ ಹೆಸರು	ಪದನಾಮ	ಗ್ರೂಪ್	ಲಿಂಗ	ವೇತನ ಶ್ರೇಣಿ	ವೇತನ	ಒಟ್ಟು ಸಂಬಳ
1	2	3	4	5	6	7	8
2.	ಸಿದ್ದಗಂಗಪ್ಪ	ಸಹಕಾರ ಅಭಿವೃದ್ಧಿ ಅಧಿಕಾರಿ	ಬಿ	ಪುರುಷ	10800–20825	12650	21299–00
3.	ಕೆ. ಗೋಪಿಂದಸ್ವಾಮಿ,	ಅಧೀಕ್ಷಕರು	ಸಿ	ಪುರುಷ	10000–18150	12000–00	20345–00
4.	ಟಿ. ಜಯಶೇಖರ್	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	ಸಿ	ಪುರುಷ	3825–16000	10000–00	16950–00
5.	ಸೈಯದ್‌ಮುಷ್ತಾಕ್ ಅಹಮದ್	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	ಸಿ	ಪುರುಷ	3825–16000	11100.00	18776–00
6.	ಆರ್. ದಿವ್ಯ	ನಿರೀಕ್ಷಕರು	ಸಿ	ಸ್ತ್ರೀ	7275–13350	7625.00	12858–00
7.	ಹೆಚ್.ಎಸ್. ಫರೀದಾ ಬೇಗಂ,	ಪ್ರಥಮ ದರ್ಜೆ ಸಹಾಯಕರು	ಸಿ	ಸ್ತ್ರೀ	7275–13350	11700.00	19772–00
8.	ಕೆ. ಮಹೇಶ್,	ಪ್ರಥಮ ದರ್ಜೆ ಸಹಾಯಕರು	ಸಿ	ಪುರುಷ	7275–13350	7275.00	12277–00
9.	ಕೆ. ಚಂದ್ರಶೇಖರ್	ದ್ವಿತೀಯ ದರ್ಜೆ ಸಹಾಯಕರು	ಸಿ	ಪುರುಷ	5800–6050	7275	12352–00
10.	ಎಸ್.ಎ. ಶೈಲಜ	ಹಿರಿಯ ಬೆರಳಚ್ಚುಗಾರರು	ಸಿ	ಸ್ತ್ರೀ	7275–13350	11100–00	18941–00
11.	ಮುನಿಯಪ್ಪ	ಡ್ರೈವರ್	ಸಿ	ಪುರುಷ	7275–13350	8825–00	15,340–00

ಸಹಕಾರ ಸಂಘಗಳ ಉಪನಿಬಂಧಕರು–01.
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಅನುಬಂಧ–4

2009–10ನೇ ಸಾಲಿನಲ್ಲಿ ಜಿಲ್ಲೆಗೆ ಕೊಡಮಾಡಿದ ಆಯವ್ಯಯ ಹಂಚಿಕೆ ವೆಚ್ಚ ಉಳಿಕೆ ವಿವರ

1. ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು ನಗರ ಜಿಲ್ಲೆ–2425–00–001–0–01 ಶೀರ್ಷಿಕೆಯಲ್ಲಿ

		ಹಂಚಿಕೆ	ವೆಚ್ಚ	ಉಳಿತಾಯ
1.	041–ಪ್ರಯಾಣ ವೆಚ್ಚ	60000–00	–	60,000–00
	051– ಸಾದಿಲ್ವಾರುವೆಚ್ಚ	34000–00	34000–00	–
	052–ದೂರವಾಣಿ ವೆಚ್ಚ	33000–00	15082–00	17918–00
	071–ಕಟ್ಟಡ ವೆಚ್ಚ	765000–00	763796–00	1204–00
	195–ಸಾರಿಗೆ ವೆಚ್ಚ	84000–00	41958–00	42042–00
	125–ಇತರೆವೆಚ್ಚ	12822–00	12822–00	ಇಲ್ಲ
2.	**ಯೋಜನೇತರ ಸಿಬ್ಬಂದಿ ವೆಚ್ಚ**	**2009–10ನೇ ಸಾಲಿನಲ್ಲಿ ಒಟ್ಟು**		
		002 ಅಧಿಕಾರಿಗಳ ವೇತನ		229593–00

		003-ಸಿಬ್ಬಂದಿ ವೇತನ	1225872-00
		011-ತುಟ್ಟಿಭತ್ಯೆ	515956-00
		014-ಇತರೆ ಭತ್ಯೆ	350284-00
		021 ವೈದ್ಯಕೀಯ ಹಿಂಭರ್ತಿ	8825-00
			2330530-00

ಸಹಕಾರ ಸಂಘಗಳ ಉಪನಿಬಂಧಕರು-01,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಅನುಬಂಧ-05ಎ

2009-10ನೇ ಸಾಲಿಗೆ ರಾಜ್ಯ ಯೋಜನೆಯಡಿ ಪ್ರಗತಿ

ಕ್ರಮ ಸಂಖ್ಯೆ	ವಿವರ	ಆಯವ್ಯಯ ಹಂಚಿಕೆ		ಪ್ರಗತಿ ಖರ್ಚು	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	2	3	4	5	6
1	2009-10ನೇ ಸಾಲಿನಲ್ಲಿ ಪರಿಶಿಷ್ಟಜಾತಿ /ಪಂಗಡದವರನ್ನು ಎಲ್ಲಾ ವಿಧವಾದ ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ನೋಂದಾಯಿಸಲು ಸಹಾಯಧನ	3000 ಜನ	3.00	1405 ಜನ	1.405
2	2009-10ನೇ ಸಾಲಿಗೆ ಹಿಂದುಳಿದ ವರ್ಗದವರನ್ನು ಅಲ್ಪಸಂಖ್ಯಾತರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿಸಲು ನೋಂದಣಿ	900 ಜನ	1.35	250	1.250
3	2009-10ನೇ ಸಾಲಿನಲ್ಲಿ ಪರಿಶಿಷ್ಟಜಾತಿ /ಪರಿಶಿಷ್ಟ ಪಂಗಡದ/ ವರ್ಗದ ಸಹಕಾರ ಸಂಘಗಳಿಗೆ ಆರ್ಥಿಕ ಹಣಕಾಸು ಸಹಾಯಧನ (ಯಂತ್ರೋಪಕರಣ, ಕಂಪ್ಯೂಟರ್ ಖರೀದಿಗಾಗಿ)	2	2.00	2	2.00

ಸಹಕಾರ ಸಂಘಗಳ ಉಪನಿಬಂಧಕರು-01,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಅನುಬಂಧ-05ಬಿ

2009-10ನೇ ಸಾಲಿಗೆ ರಾಜ್ಯ ಯೋಜನೆಯಡಿ ಪ್ರಗತಿ

ಕ್ರಮ ಸಂಖ್ಯೆ	ಯೋಜನೆ	ಗುರಿ		ಪ್ರಗತಿ	
		ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ
1	2	3	4	5	6
1	ಡಿ-1 ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯಗಳು	1	0.54	1	0.54
2	ಡಿ-2 ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನ (ಎನ್.ಸಿ.ಡಿ.ಸಿ.)	1	0.10	1	0.10
3	ಡಿ-5 ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಾಲದ ಆರ್ಥಿಕನೆರವು (ಸಾಮಾನ್ಯ ನಬಾರ್ಡ್) ಎನ್.ಸಿ.ಡಿ.ಸಿ.	2	1.00	2	1.00
	ಒಟ್ಟು	4	1.64	4	1.64

ಸಹಕಾರ ಸಂಘಗಳ ಉಪನಿಬಂಧಕರು-01,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಪಿ.ಆರ್.1401

KARNATAKA ELECTRICITY REGULATORY COMMISSION

6th & 7th Floor, Mahalaxmi Chambers, No.9/2, M.G. Road, Bangalore-560 001

Notification No.J/02/1/8916, Dated: 20th September, 2010

Sub: Appointment of Members of Advisory Committee of the Commission.

In exercise of the powers conferred by sub section (1) of section 87 of Electricity Act, 2003, read with Clause 3 of Karnataka Electricity Regulatory Commission (State Advisory Committee) Regulations 2004, the Karnataka Electricity Regulatory Commission is pleased to nominate Sri.S.J.Coelho, IAS (Retd.) as Member of the State Advisory Committee with immediate effect for a term of 3 years from the date of this notification.

BY ORDER OF THE COMMISSION

SHAIK AHMED

Secretary

PD-132

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಅಧಿಸೂಚನೆ

ಸಂಖ್ಯೆ: ಆಕುಕ 475 ಹೆಚ್ಎಸ್ಹೆಚ್ 2010, ಬೆಂಗಳೂರು, ದಿನಾಂಕ:25ನೇ ಸೆಪ್ಟೆಂಬರ್, 2010

